# ದ ಮೆಸೇಜ್

ಮುಹಮ್ಮದ್ ಫಾರೂಕ್ ಖಾನ್ ಎಂ.ಎ.

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಇಸ್ಲಾಮ್ ಮೂರು ಮೂಲಭೂತ ವಿಶ್ವಾಸದ ಆಧಾರದ ಮೇಲೆ ನಿಂತಿದೆ. ಏಕದೇವತ್ವ, ವಾದಿತ್ವ ಹಾಗೂ ಪರಲೋಕ. ಮೂರು ವಿಷಯಗಳು ಅತ್ಯಂತ ಮಹತ್ವವುಳ್ಳದ್ದಾಗಿದ್ದರೂ ಈ ಕಿ ಪ್ರವಾದಿತ್ವ ವಿಶ್ವಾಸಕ್ಕೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ಪ್ರವಾದಿಗಳಿಲ್ಲದಿರುತ್ತಿದ್ದರೆ ನಮಗೆ ೀವನನ್ನು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ದೇವನು ಮಾನವರಿಗೆ ಆತನ ಮಾರ್ಗವನ್ನು ೀರಿಸಿಕೊಟ್ಟಿರುವುದು ಪ್ರವಾದಿಗಳ ಮೂಲಕವೇ. ದೈವಿಕ ಮಾರ್ಗದರ್ಶನ ದಂತೆ ಸ್ವಯಂ ನುಕಿ ತೋರಿಸಿದ ಪ್ರವಾದಿಗಳು ನಮಗೆ ಮಾದರಿಯಾಗಿದ್ದಾರೆ. ಆದಿ ಮಾನವ ಹಾಗೂ ಾನವರ ಪಿತ ಆದಮ್(ಅ) ಅವರ ಮೂಲಕ ಈ ಲೋಕಕ್ಕೆ ಇಳಿಸಲಾದ ದೈವಿಕ ಾರ್ಗದರ್ಶನ(ಇಸ್ಲಾಮ್)ದಿಂದ ಯಾವಾಗೆಲ್ಲ ಮಾನವರು ವ್ಯತಿಚಲಿಸಿದರೋ ಆಗೆಲ್ಲ ವಾದಿಗಳು ಬಂದು ಅವರನ್ನು ಪುನಃ ದೇವಮಾರ್ಗದ ಕಡೆಗೆ ಕರೆದರು. ಈ ರೀತಿ ಲಕ್ಷಕ್ಕಿಂತಲೂ ಧಿಕ ಪ್ರವಾದಿಗಳು ಮತ್ತು ಸಂದೇಶವಾಹಕರು ಬಂದರು. ಈ ಪರಂಪರೆಯ ಕೊನೆಯ ಂಡಿಯೇ ಪ್ರವಾದಿ ಮುಹಮ್ಮದ್(ಸ) ಇನ್ನು ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ಕುರ್‌ಆನಿನ ಾರತು ಯಾವ ದೈವಿಕ ಗ್ರಂಥವೂ ಇಳಿಯಲಿಕ್ಕಿಲ್ಲ.

'ದ ಮೆಸೇಜ್' ಎಂಬ ಈ ಕೃತಿಯು 'ರಿಸಾಲತ್' ಎಂಬ ಮೌ। ಮುಹಮ್ಮದ್ ರೂಖ್ ಖಾನ್‌ರವರ ಹಿಂದಿ ಪುಸ್ತಕದ ಕನ್ನಡಾನುವಾದವಾಗಿದೆ. ಅರಫಾ ಮಂಚಿಯವರು ನನ್ನು ಅನುವಾದಿಸಿದ್ದಾರೆ. ಇದರಲ್ಲಿ ಪ್ರವಾದಿತ್ವವೆಂದರೇನು, ಅದರ ಅಗತ್ಯ ಮತ್ತು ಹತ್ವಗಳೇನು? ಪ್ರವಾದಿಗಳು ಎಂತಹ ಚಾರಿತ್ರ್ಯ ಹೊಂದಿದವರು. ಪ್ರವಾದಿಗಳ ದೌತ್ಯವೇನು? ಾನವರೊಂದಿಗೆ ಮತ್ತು ದೇವನೊಂದಿಗೆ ಅವರ ಸಂಬಂಧದ ಸ್ವರೂಪ ಇತ್ಯಾದಿ ವಿಷಯಗಳನ್ನು ಸ್ತಾರವಾಗಿ ಚರ್ಚಿಸಲಾಗಿದೆ. ಜೊತೆಗೆ ಅಂತಿಮ ಪ್ರವಾದಿ ಮುಹಮ್ಮದ್(ಸ) ಅವರ ೀವನದ ಕುರಿತು ಅವರ ಪರಿಶುದ್ಧ ಚಾರಿತ್ರ್ಯ ಮತ್ತು ಅವರು ಈ ಲೋಕದಲ್ಲಿ ವಹಿಸಿದ ತ್ರದ ಕುರಿತೂ ಪ್ರಸ್ತಾಪಿಸಲಾಗಿದೆ.

ಈ ಕೃತಿಯಲ್ಲಿ 13 ಅಧ್ಯಾಯಗಳಿದ್ದು, ಕೊನೆಗೆ ಎರಡು ಅಧ್ಯಾಯಗಳಲ್ಲಿ ಪ್ರವಾದಿ ುಹಮ್ಮದ್(ಸ) ಅವರ ಕುರಿತು ಪೂರ್ವ ಧರ್ಮಗ್ರಂಥಗಳಲ್ಲಿರುವ ಭವಿಷ್ಯವಾಣಿ ಹಾಗೂ ವರ ಕುರಿತು ಮುಸ್ಲಿಮೇತರ ಬುದ್ಧಿಜೀವಿಗಳು ಮತ್ತು ದಾರ್ಶನಿಕರ ಅನಿಸಿಕೆಗಳನ್ನೂ ವಡಿಸಲಾಗಿದೆ. ಈ ಗ್ರಂಥದ ಅಧ್ಯಯನದಿಂದ 'ಪ್ರವಾದಿತ್ವ' ವಿಶ್ವಾಸವನ್ನು ಸರಿಯಾದ ತಿಯಲ್ಲಿ ಗ್ರಹಿಸಲು ಸಹಾಯಕವಾಗಬಹುದು. ಜೊತೆಗೆ ಪ್ರವಾದಿ ಮುಹಮ್ಮದ್(ಸ) ಅವರು ಾವುದೇ ಒಂದು ನಿರ್ದಿಷ್ಟ ಸಮುದಾಯದ ಪ್ರವಾದಿಯಾಗಿರದೆ ಸಕಲ ಮಾನವ ಕುಲದ ವಾದಿಯಾಗಿದ್ದಾರೆಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಈ ಕೃತಿಯು ಅದರ ಉದ್ದೇಶದಲ್ಲಿ ಲವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ


- ಪೀಠಿಕೆ 0
- ಜಗತ್ತು ಮತ್ತು ಮಾನವ 0
- ಬುದ್ಧಿ ವಿವೇಕಗಳ ಮೇರೆಗಳು 1
- ಮಾನವ ಒಂದು ನಿಗೂಢ ಜೀವಿ 2
- ಮಾರ್ಗದರ್ಶನದ ಅಗೋಚರ ವಿಧಾನಗಳು 3
- ಪ್ರವಾದಿತ್ವ ಮತ್ತು ಅದರ ಮಹತ್ವಗಳು 3
- ಪ್ರವಾದಿಗಳ ಇತಿಹಾಸ 5
- ಆ ಚಾರಿತ್ರಿಕ ನಾಯಕ ಪ್ರವಾದಿ ಮುಹಮ್ಮದ್(ಸ) 6
- ಮುಹಮ್ಮದರ(ಸ) ಪ್ರವಾದಿತ್ವದ ಸ್ಪಷ್ಟ ಪ್ರಮಾಣಗಳು 7
- ಪ್ರವಾದಿ ಮುಹಮ್ಮದರ(ಸ) ವೈಶಿಷ್ಟ್ಯತೆಗಳು 8
- ಪವಿತ್ರ ಕುರ್‌ಆನಿನ ವೈಶಿಷ್ಟ್ಯಗಳು 9
- ಗ್ರಂಥದವರ ಕುಚೇಷ್ಟೆಗಳು ಮತ್ತು ಪವಿತ್ರ ಕುರ್‌ಆನಿನ ಪ್ರತಿಕ್ರಿಯೆಗಳು 10
- ಪ್ರವಾದಿ ಮುಹಮ್ಮದ್‌ರ(ಸ) ಕುರಿತು ಧರ್ಮ ಗ್ರಂಥಗಳ ಭವಿಷ್ಯವಾಣಿಗಳು 11
- ಪ್ರವಾದಿ ಮುಹಮ್ಮದರ(ಸ) ಕುರಿತು ಮುಸ್ಲಿಮೇತರರ ಹೇಳಿಕೆಗಳು 13
- ಪವಿತ್ರ ಕುರ್‌ಆನಿನ ಕುರಿತು ಮುಸ್ಲಿಮೇತರರ ವಿಶ್ಲೇಷಣೆಗಳು 13

# ಪೀಠಿಕೆ

ಏಕದೇವತ್ವ, ಪರಲೋಕಗಳಂತೆ ಇಸ್ಲಾಮಿನ ವಿಶ್ವಾಸಗಳಲ್ಲಿ ಪ್ರವಾದಿತ್ವವು ಕೂಡಾ ಒಂದು. ಮಾನವರ ಭೌತಿಕ ಆವಶ್ಯಕತೆಗಳಿಗೆ ಪ್ರಪಂಚದಲ್ಲಿ ದೇವನು ಸಕಲ ವ್ಯವಸ್ಥೆಗಳನ್ನು ಮಾಡಿದ್ದಾನೆ. ಮಳೆ ಬರುವುದರಿಂದ ಮಾನವನಿಗೆ ಆಹಾರೋತ್ಪನ್ನಗಳನ್ನು ಬೆಳೆಯಲು ಸಾಧ್ಯವಾಗಿದೆ. ದವಸ ಧಾನ್ಯಗಳು ಬೆಳೆಯುತ್ತಿವೆ. ಮಾನವರ ನೈತಿಕ ಮತ್ತು ಆಧ್ಯಾತ್ಮಿಕ ಆವಶ್ಯಕತೆಗಳ ಪೂರೈಕೆಯ ವ್ಯವಸ್ಥೆಯನ್ನೂ ದೇವನೇ ಮಾಡಿದ್ದಾನೆ. ಅದಕ್ಕಾಗಿ ಪ್ರವಾದಿತ್ವದ ವ್ಯವಸ್ಥೆಯಿದೆ.

ಇದನ್ನು ಇನ್ನೊಂದು ರೀತಿಯಲ್ಲಿಯೂ ನಾವು ವಿಶ್ಲೇಷಿಸಬಹುದು. ಜಗತ್ತಿನಲ್ಲಿ ಮಾನವನ ಸ್ಥಾನಮಾನಗಳೇನು? ಯಾವ ಕರ್ತವ್ಯಕ್ಕಾಗಿ ಅವನು ಭೂಮಿಯಲ್ಲಿ ಹುಟ್ಟಿದ್ದಾನೆ. ಅವನು ಈಡೇರಿಸಬೇಕಾದ ನಿಜವಾದ ಕರ್ತವ್ಯಗಳ್ಯಾವುವು? ಅವನು ಜೀವನದಲ್ಲಿ ಅಳವಡಿಸಿ ಕೊಳ್ಳಬೇಕಾದ ಸಿದ್ಧಾಂತಗಳೇನು? ನಿಯಮಗಳು ಯಾವುವು? ಇಂತಹ ಮಾರ್ಗದರ್ಶನವು ಪ್ರವಾದಿತ್ವದಿಂದ ಲಭಿಸುವುದು. ಆದಕ್ಕಾಗಿಯೇ ಪ್ರವಾದಿಗಳನ್ನು ಭೂಮಿಗೆ ನಿಯೋಜಿಸ ಲಾಗಿದೆ. ದೇವನು ಸೂಚಿಸುವ ದಾರಿಯಲ್ಲೇ ಮಾನವರು ಸಾಗಿ ಯಶಸ್ಸು ಪಡೆಯಲೆಂದು ಪ್ರವಾದಿಗಳು ಪರಿಶ್ರಮಿಸುತ್ತಾರೆ. ದೇವ ಮಾರ್ಗವನ್ನು ಉಲ್ಲಂಘಿಸಿದರೆ ಯಾವ ದುಷ್ಪರಿಣಾಮ ಏದೆ? ಅಂತಹವರು ಪರಲೋಕದಲ್ಲಿ ಎಂತಹ ಪರಿಣಾಮವನ್ನು ಅನುಭವಿಸಬೇಕು? ಅಲ್ಲಿರುವ ಭಯಾನಕ ಯಾತನೆಗಳೇನು ಎಂದು ಪ್ರವಾದಿಗಳು ಜನರಿಗೆ ವಿವರಿಸುತ್ತಾರೆ.

ಪ್ರವಾದಿತ್ವ ಪರಂಪರೆಯ ಕೊನೆಯ ಕೊಂಡಿ, ಅಂತಿಮ ಪ್ರವಾದಿ ಮುಹಮ್ಮದರು(ಸ) ಆಗಿದ್ದಾರೆ. 1 ಲಕ್ಷದ 25 ಸಾವಿರಕ್ಕೂ ಅಧಿಕ ಪ್ರವಾದಿಗಳು ಜಗತ್ತಿಗೆ ಆಗಮಿಸಿರುವರೆಂದು ಪ್ರವಾದಿ ಮುಹಮ್ಮದರು(ಸ) ಹೇಳಿದ್ದಾರೆ. (ಮುಸ್ನದ್ ಅಹ್ಮದ್)

ಪ್ರವಾದಿತ್ವ ಎಂಬುದು ಭೌತಿಕ ಮಾನದಂಡಗಳಿಗೆ ಸಂಪೂರ್ಣ ಭಿನ್ನ ನಂಬಿಕೆಯಾಗಿದೆ. ಪ್ರಕೃತಿ ಮತ್ತು ಭೌತಿಕ ನಿಯಮಗಳಿಂದ ಪ್ರಪಂಚ ಚಲಿಸುತ್ತದೆ ಎಂಬ ವಿಚಾರಕ್ಕಿಂತ ಇದು ಭಿನ್ನವಾದುದು.

ಭೌತಿಕವಾದಿಗಳು, ಪ್ರಪಂಚವು ಜೀವಂತ ಪ್ರಭುತ್ವದ ಅಧಿಕಾರದಿಂದ ನಡೆಯು ವುದಿಲ್ಲ ಎನ್ನುತ್ತಾರೆ. ಪ್ರಪಂಚದ ಚಲನೆಯಲ್ಲಿ ಜೀವಂತ ಪ್ರಭುತ್ವದ ನಿಯಮಕ್ಕೆ ಯಾವುದೇ ಪಾತ್ರವಿಲ್ಲ. ಜಗತ್ತಿನಲ್ಲಿರುವ ಸಕಲ ಸೃಷ್ಟಿಯು ಪದಾರ್ಥದ (ವಸ್ತು) ಚಮತ್ಕಾರವಾಗಿದೆ ಎಂದು

ವಾದಿಸುತ್ತಾರೆ. ಈ ವಾದವನ್ನು ಜಗತ್ತು ಮತ್ತು ಮಾನವ ಸೃಷ್ಟಿ ಕಾರ್ಯವು ಸುಳ್ಳಾಗಿಸಿದೆ.

ಸಕಲ ವಿಷಯಗಳ ಜ್ಞಾನಿಯಾದ ಶಕ್ತಿಯೊಂದು ಜಗತ್ತಿನ ಚಲನೆಗೆ ಕಾರಣವಾಗಿದೆ. ಜಗತ್ತಿನ ಚಲನೆ ಅದಕ್ಕನುಗುಣವಾಗಿದೆ ಎಂಬ ಕುರುಹುಗಳನ್ನು ನಾವು ಜಗತ್ತು ಮತ್ತು ಮಾನವರ ಅಸ್ತಿತ್ವದಿಂದ ಪಡೆಯುತ್ತೇವೆ. ಈ ರೀತಿ ಅರ್ಥೈಸಿದಾಗ ವಿಶಾಲ ಜಗತ್ತಿನ ಮೇಲೆ ಕರುಣೆಯ ದೃಷ್ಟಿಯಿರುವುದನ್ನು ಗಮನಿಸಲು ಸಾಧ್ಯವಾಗುವುದು.

ಯಾವುದೇ ಒಂದು ನಿರ್ಜೀವ ವಸ್ತು ಈ ಜಗತ್ತಿನ ಮೂಲವಾಗಲು ಸಾಧ್ಯವಿಲ್ಲ. ಮಾನವನ ನೈತಿಕ ಪ್ರಜ್ಞೆಯ ನಿಗೂಢ ರಹಸ್ಯ ಬಯಲಾಗಲಿ ಎಂದು ನಾವು ಬಯಸುತ್ತಿರುತ್ತೇವೆ. ಇಂತಹ ಬಯಕೆಗೂ ಒಂದು ಮೂಲ ಉಗಮವಿರಲೇಬೇಕು. ಹಾಗಿದ್ದರೆ ಆ ಮೂಲ ಯಾವುದು, ಎಲ್ಲಿದೆ? ಮಾನವರು ಅರಿಯಲೇಬೇಕಾದ ರಹಸ್ಯವಿದು.

ಬದುಕಿಗೆ ಸಂಬಂಧಿಸಿದ ಪ್ರತಿಯೊಂದು ರಹಸ್ಯವನ್ನು ಅವನು ಅರಿತಿರಬೇಕು. ಮಿಥ್ಯ ಯಾವುದು? ಸತ್ಯ ಯಾವುದು ಎಂಬ ಮಾರ್ಗದರ್ಶನವೂ ಮಾನವನಿಗೆ ದೊರೆಯಲೇಬೇಕು. ಪ್ರವಾದಿತ್ವದಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಲಭಿಸುತ್ತದೆ. ಪ್ರವಾದಿ(ಸ) ಈ ಸಮಸ್ಯೆಯನ್ನು ಬಗೆಹರಿಸುತ್ತಾರೆ.

ಪರಲೋಕ, ಏಕದೇವತ್ವ ಮತ್ತು ಪ್ರವಾದಿತ್ವದ ಕುರಿತು ಈಗಾಗಲೇ ಅನೇಕ ಗ್ರಂಥಗಳು ರಚಿಸಲ್ಪಟ್ಟಿವೆ. ಆದರೆ ಪ್ರವಾದಿತ್ವದ ಎಲ್ಲ ಆಯಾಮಗಳನ್ನು ಚರ್ಚಿಸುವ ಗ್ರಂಥವೊಂದರ ಆವಶ್ಯಕತೆ ಉಳಿದಿತ್ತು. ಅಂತಹ ಪ್ರಯತ್ನವಿದು. ಗ್ರಂಥ ರಚನೆಗೆ ಸಹಕರಿಸಿದ ಎಸ್. ಕೌಸರ್ ಲಾಯಿಫ್ ಸಾಹೇಬರು ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಪ್ರಯತ್ನವನ್ನು ದೇವನು ಸ್ವೀಕರಿಸಲಿ. ಮಾನವ ಜಗತ್ತು ಇದರ ಸದುಪಯೋಗ ಪಡೆಯಲಿ ಎಂದು ದೇವನಲ್ಲಿ ಪ್ರಾರ್ಥಿಸುತ್ತೇನೆ.

**ಮುಹಮ್ಮದ್ ಫಾರೂಕ್ ಖಾನ್ ಎಂ.ಎ.**

ಧ್ಯಾಯ-1

# ಜಗತ್ತು ಮತ್ತು ಮಾನವ

**ಈ** ಜಗತ್ತಿನಲ್ಲಿ ಮಾನವನಿಗೆ ಹಲವಾರು ವಸ್ತುಗಳು ಗೋಚರಿಸುತ್ತವೆ. ಅವನ ಕ್ಣೆದುರಿನಿಂದ ಹಲವಾರು ವಸ್ತುಗಳು ಹಾದು ಹೋಗುತ್ತಿವೆ. ಇವಿಷ್ಟು ಸಾಲದು. ಹೆಚ್ಚು ಚ್ಚು ಅರಿತುಕೊಳ್ಳಬೇಕೆಂದು ಅವನು ಬಯಸುತ್ತಾನೆ. ಅದು ಪ್ರಕೃತಿ ಸಹಜ ಬೇಡಿಕೆಯೂ ಾದು. ಒಂದು ಶಬ್ದ ಕೇಳಿಸಿದರೆ ಇಂಪಾದ ಹಾಡಾಗಲೆಂದು ಬಯಸುವಂತೆ ಜಗತ್ತಿನ ನೈಜ ುತ್ತು ಪರಿಪೂರ್ಣ ಸೌಂದರ್ಯದ ವರೆಗೂ ಅವನು ತಲುಪಬೇಕು. ಅದರ ಪರಿಚಯ ವನಿಗಿರಬೇಕು. ಮಾನವನಿಗೆ ಜಗತ್ತನ್ನು ಸರಿಯಾದ ದೃಷ್ಟಿಯಿಂದ ನೋಡಲು ಸಾಧ್ಯ ಾದಂದು, ಜಗತ್ತಿನ ಅಸ್ತಿತ್ವ ಗೋಚರಿಸುತ್ತದೆ. ಆಮೇಲೆ ಅದರ ಪ್ರಭಾವಕ್ಕೊಳಗಾಗುತ್ತಾನೆ. ಗತ್ತಿನಲ್ಲಿರುವ ಸಕಲ ವಸ್ತುಗಳಲ್ಲಿ ಅವನಿಗೆ ಹೊಸತನದ ದರ್ಶನವಾಗುವುದು. ಆಮೇಲೆ ವನೊಳಗಿನ ಸುಪ್ತ ಭಾವನೆಗಳನ್ನು ಅಗೋಚರ ಸ್ಪರ್ಶವೊಂದು ಮೀಟಲಾರಂಭಿಸುವುದು.

ಮಾನವನಿಗೆ ಇವಿಷ್ಟರಿಂದ ಜಗತ್ತಿನ ಅಸ್ತಿತ್ವವನ್ನು ಗುರುತಿಸಲು ಸಾಧ್ಯವಿಲ್ಲ. ಜಗತ್ತು ೇವಲ ಒಂದು ಮಂಪರಿನಂತೆ ಅವನಿಗೆ ಕಾಣಬಹುದು. ಜಗತ್ತಿನಲ್ಲಿರುವ ಯಾವ ವಸ್ತು ಳನ್ನೂ ಖಚಿತವಾಗಿ ತಿಳಿಯಲು ಅವನಿಂದ ಸಾಧ್ಯವಿಲ್ಲ. ಎಲ್ಲವೂ ಅಸ್ಪಷ್ಟ ಅನುಭವ ಂತೆ ಇರುವುದು.

ಅಂದ ಮೇಲೆ ಈ ನಿಗೂಢ ಜಗತ್ತನ್ನು ಮಾನವನಿಗೆ ಕೇವಲ ತನ್ನ ಬುದ್ಧಿ ಶಕ್ತಿಯಿಂದ ಿದುಕೊಳ್ಳಲು ಹೇಗೆ ಸಾಧ್ಯ? ಆದರೆ ಜಗತ್ತಿನ ಜೀವ ವೈವಿಧ್ಯಗಳು, ಗಿರಿಶಿಖರಗಳ ಸಾಲು, ಮಬೆಟ್ಟಗಳು, ಮರಗಿಡ, ಬಳ್ಳಿ ಹೂ ಪರಿಮಳಗಳೆಲ್ಲವೂ ವಿವೇಕಿಗಳಲ್ಲಿ ಉಜ್ವಲ ನಿರೀಕ್ಷೆ ುನ್ನು ಸೃಷ್ಟಿಸುತ್ತವೆ. ಮಾನವನೊಳಗೆ ಇಂತಹ ತಾಕಲಾಟ ಆರಂಭವಾದಂತೆ ಅವನು ಧ್ಯಾತ್ಮದ ಮಾತಿಗೆ ತೊಡಗುತ್ತಾನೆ. ನಾನು ಜೀವನದ ಆಳವನ್ನು ಪ್ರವೇಶಿಸಿದ್ದೇನೆ. ನನಗೆ ತ್ಯ ದರ್ಶನವಾಗಿದೆ ಎನ್ನುತ್ತಾನೆ. ನಾನು ಸತ್ಯಕ್ಕೆ ನಿಕಟವಾಗಿದ್ದೇನೆ. ನಾನು ತಪಸ್ವೀ ಸ್ಥಿತಿ ುಲ್ಲಿದ್ದೇನೆ ಎಂದು ಭಾವಿಸತೊಡಗುತ್ತಾನೆ.

ಆದರೆ ಅವನು ಅರಿತಿರುವುದು ಏನೇನೂ ಸಾಲದು. ಅವನು ಅರಿಯಲು ಇನ್ನಷ್ಟು ವೆ. ಸಾಕಷ್ಟು ವಿಚಾರಗಳು ಬುದ್ಧಿಗೆಟಕುವುದು ನಿಜವಾಗಿದೆ. ಆದರೆ ಈ ವಿಚಾರಗಳೆಷ್ಟು ಜ ಅಥವಾ ಇದು ಕೇವಲ ತನ್ನ ಊಹನೆಗಳೇ ಎಂಬುದನ್ನು ತಾಳೆ ಮಾಡಲು, ಒಂದು

ನಿರ್ಧಾರಕ್ಕೆ ತಲುಪಲು ಅವನಿಗೆ ಕೊನೆಗೂ ಸಾಧ್ಯವಿಲ್ಲ. ಎಷ್ಟೇ ಬುದ್ಧಿ ಖರ್ಚು ಮಾಡಿದರು ಸಂದೇಹ ಬಗೆಹರಿಯುವುದಿಲ್ಲ. ಪ್ರಕೃತಿಯ ಭಾಷೆಯೇ ಹಾಗೆ-ನಿಗೂಢ-ಮೌನ.

## ಪ್ರಕೃತಿಯ ಸಂಕೇತ

ಅಧ್ಯಯನ ನಿರತರು ಜಗತ್ತು ಒಂದು ನಿಗೂಢವೆಂಬ ವಿಶ್ವಾಸ ಹೊಂದಿರುವುದ ಅನಿವಾರ್ಯವಾಗಿದೆ. ಜಗತ್ತು ಮತ್ತು ಅದರಲ್ಲಿರುವ ಜೀವರಾಶಿಗಳ ಅಧ್ಯಯನಕ್ಕೆ ಈ ನಂಬಿಕೆಯು ಆವಶ್ಯಕವಾಗಿದೆ. ಪ್ರಕೃತಿ ವ್ಯವಸ್ಥೆಯಲ್ಲಿ ಕಾಣುವ ನಿಸರ್ಗ ನಿಯಮಗಳ (Laws of Nature) ನಮ್ಮನ್ನು ಚಿಂತಿಸುವಂತೆ ಪ್ರೇರೇಪಿಸುವುದು.

ಜಗತ್ತು ಹೇಗೆ ಅಸ್ತಿತ್ವಕ್ಕೆ ಬಂದಿದೆ? ಅದರಲ್ಲಿ ಜೀವಿಗಳು ಹೇಗೆ ಹುಟ್ಟಿಕೊಂಡವ ಎಂಬುದನ್ನು ಅರಿತುಕೊಳ್ಳಲು ಮಾನವರು ಪ್ರಯತ್ನಿಸಬೇಕಾಗಿದೆ. ಈ ಜಗತ್ತು ಮತ್ತು ಸೃ ಜಾಲಗಳಿಗೆ ಯಾವುದಾದರೂ ಉದ್ದೇಶವಿದೆಯೇ ಎಂಬ ಅಧ್ಯಯನಕ್ಕೆ ಹೊರಟಾಗ ನಮ್ಮ ನಿರೀಕ್ಷೆಯ ಚಿಹ್ನೆಗಳು ಖಂಡಿತಾ ಮೂಡುವುದು. ಅಧ್ಯಯನವನ್ನು ಮುಂದುವರಿಸಿದಾ ದೇವನೇ ಜಗತ್ತಿನ ಸೃಷ್ಟಿಕರ್ತ ಎಂದು ಸ್ಪಷ್ಟವಾಗಿ ಅರ್ಥವಾಗುವುದು. ಜೊತೆಗೆ ದೇವನಿಂದಲ್ಲ ಈ ಜಗತ್ತಿನ ಪರಿಪಾಲನೆ ಅಸಾಧ್ಯವೆಂಬ ಸತ್ಯ ಮನದಟ್ಟಾಗುವುದು. ಸತ್ಯದ ಹುಡುಕಾ ದಲ್ಲಿರುವವರಿಗೆ ಸತ್ಯದ ನಿದರ್ಶನಗಳು ಜಗತ್ತಿನಾದ್ಯಂತ ಹರಡಿಕೊಂಡಿರುವುದು ಅನುಭ ವಾಗುವುದು. ಆದರೆ ನಾವು ಪ್ರಜ್ಞಾಪೂರ್ವಕವಾಗಿ ಪರಿಶ್ರಮಿಸದೆ ಯಾವ ಪ್ರಯೋಜನವು ಸಿಗಲಾರದು.

ಸತ್ಯದ ಅಸ್ತಿತ್ವದ ಸಂಕೇತಗಳು ಭೂಮಿ ಆಕಾಶಗಳಲ್ಲಷ್ಟೇ ಅಲ್ಲ, ನಮ್ಮ ಅಸ್ತಿತ್ವದಲ್ಲಿಯೂ ಕಾಣಲು ಸಾಧ್ಯ. ನಾವು ಸೇವಿಸುವ ಆಹಾರದ ಎಷ್ಟೋ ರೀತಿಯ ವಸ್ತುಗಳನ್ನು ಭೂಮಿಯಿಂ ಪಡೆಯುತ್ತಿದ್ದೇವೆ. ಅನ್ನಾಹಾರ-ಪಾನೀಯಗಳು, ಹಣ್ಣು ಹಂಪಲು ಇತ್ಯಾದಿ ಜೀವನಾಧಾ ಗಳು ಜಗತ್ತಿನಲ್ಲಿ ನಮಗೆ ಲಭಿಸುತ್ತಿವೆ. ಇವೆಲ್ಲವೂ ಸತ್ಯದ ಅಸ್ತಿತ್ವದ ಸಂಕೇತಗಳಲ್ಲವೇ?

ಮಾನವರ ಮಾರ್ಗದರ್ಶನಕ್ಕೂ ವಿವಿಧ ರೀತಿಗಳು ಇವೆ. ಮಾರ್ಗದರ್ಶನಕ್ಕಾಗಿ ವಿಭಿನ್ನ ರೀತಿಗಳನ್ನೇ ದೇವನು ಸೃಷ್ಟಿಸಿದ್ದಾನೆ. ಬುದ್ಧಿಶಕ್ತಿ ವಿವೇಕಗಳಿಂದ ನೋಡಿದರಷ್ಟೇ ನಮ ಅವುಗಳು ಕಾಣಲು ಸಾಧ್ಯ. ಪವಿತ್ರ ಕುರ್‌ಆನಿನ ಪ್ರಕಾರ ನಾವು ಪ್ರಜ್ಞಾಪೂರ್ವಕವಾ ಮಾಡುವ ಕರ್ಮಗಳು ಮುಖ್ಯವಾಗಿವೆ. ಅಂದರೆ ಬುದ್ಧಿ ಉಪಯೋಗಿಸಿ ಚಿಂತಿಸಿರೆಂದ ಪವಿತ್ರ ಕುರ್‌ಆನ್ ಕರೆ ನೀಡಿದೆ. ಯೋಚಿಸದೆ ಮಾಡುವ ಕೆಲಸದಲ್ಲಿ ತಪ್ಪುಗಳುಂಟಾಗು ಸಾಧ್ಯತೆಗಳಿವೆ. ಆದ್ದರಿಂದ ಯೋಚಿಸದೆ ಏನೂ ನಿರ್ಧರಿಸಬಾರದೆಂದು ಪವಿತ್ರ ಕುರ್‌ಆನ ಕರೆ ನೀಡುತ್ತದೆ.

ದೇವನ ಏಕತ್ವವನ್ನು ಮತ್ತು ಅವನ ಅಸ್ತಿತ್ವವನ್ನು ಸೂಚಿಸುವ ಅನೇಕ ವಸ್ತುಗಳ ಜಗತ್ತಿನಲ್ಲಿವೆ. ಕೆಲವು ಕಣ್ಣಿಗೆ ಕಾಣುತ್ತವೆ, ಇನ್ನು ಹಲವು ಕಣ್ಣಿಗೆ ಅಗೋಚರವಾಗಿವೆ. ಪವಿತ್ರ ಕುರ್‌ಆನಿನ ಕರೆಯಂತೆ ಮಾನವನ ಕಣ್ಣಿಗೆ ಅನುಭವವಾಗುವ ಮತ್ತು ಅವನು ಪ್ರಯೋಜ

ನಡೆಯುವ ವಸ್ತುಗಳ ಮೂಲಕ ದೇವನೆಡೆಗೆ ತಲುಪಬೇಕಾಗಿದೆ. ನಾವು ಸುದೃಢ ಪ್ರಪಂಚ ರಚನೆ ಮತ್ತು ಅದರಲ್ಲಿರುವ ಸುದೃಢವಾದ ವ್ಯವಸ್ಥೆಯನ್ನು ನೋಡುತ್ತೇವೆಯಲ್ಲವೇ? ಅದರಲ್ಲಿಯೂ ನಾವು ದೇವನ ಅದೃಶ್ಯ ಆಧಿಪತ್ಯವನ್ನು ಗುರುತಿಸಬಹುದಾಗಿದೆ.

ಒಂದು ವೇಳೆ ಭೂಮಿಯ ಗಾತ್ರ ಈಗಿನದಕ್ಕಿಂತ ಸಣ್ಣದಾದರೆ ವಾಯುಮಂಡಲ ತೋಳಾಗಬಹುದು. ಭೂಮಿಯನ್ನು ರಕ್ಷಿಸಲು ಅದಕ್ಕೆ ಅಸಾಧ್ಯವಾಗುತ್ತಿತ್ತು. ಉಲ್ಕಾಪಾತಗಳು ನಿರಂತರ ಸಂಭವಿಸಿ ಭೂಮಿ ನುಚ್ಚುನೂರಾಗುತ್ತಿತ್ತು. ದಿನಕ್ಕೆ ಶತಕೋಟಿ ಉಲ್ಕೆಗಳು ವಾಯು ಮಂಡಲವನ್ನು ಶರವೇಗದಲ್ಲಿ ಪ್ರವೇಶಿಸುತ್ತದೆ. ಅದನ್ನು ಭೂಮಿಗೆ ಬೀಳದಂತೆ ವಾಯು ಮಂಡಲವೇ ತಡೆಯುತ್ತಿದೆ. ಆದುದರಿಂದ ಭೂಮಿಯು ಅದರ ಭೀಕರ ನಾಶ ದಿಂದ ರಕ್ಷಿಸಲ್ಪಡುತ್ತದೆಯೆಂದು ಹಾವರ್ಡ್ ಯೂನಿವರ್ಸಿಟಿಯ ಪ್ರೊಫೆಸರ್ ಫ್ಲೆಚರ್ ವ್ಯಾಟ್ಸನ್ ನಡೆಸಿದ ಸಂಶೋಧನೆಯಲ್ಲಿ ಬಹಿರಂಗವಾಗಿದೆ.

ಭೂಮಿಯ ಗಾತ್ರ ಈಗಿರುವುದಕ್ಕಿಂತ ದೊಡ್ಡದಾದರೂ ವಾಯು ಮಂಡಲವು ಭೂಮಿಯ ಆಕರ್ಷಣ ಶಕ್ತಿಯನ್ನೇ ತಾಳಲಾರದೆ ವಾಯು ಮಂಡಲವೇ ಮುದುಡುತ್ತಿತ್ತು. ಅದು ಕೆಲವು ಕಿಲೋ ಮೀಟರ್‌ಗೆ ಸೀಮಿತಗೊಳ್ಳುತ್ತಿತ್ತು. ನಮಗೆ ಗಾಳಿಯ ಒತ್ತಡವನ್ನು ತಡೆಯಲು ಸಾಧ್ಯ ವಿರಲಿಲ್ಲ. ಮಾನವನೂ ಬದುಕಿ ಉಳಿಯುತ್ತಿರಲಿಲ್ಲ.

ಒಟ್ಟಾರೆ ಭೂಮಿ ಆಕಸ್ಮಿಕ ಸೃಷ್ಟಿಯಲ್ಲವೆಂದು ಸಂಶೋಧನೆಗಳಿಂದ ಸಾಬೀತಾಗಿದೆ. ಯೋಜನೆಯ ಪ್ರಕಾರವೇ ಭೂಮಿಯನ್ನು ಸೃಷ್ಟಿಸಲಾಗಿದೆ. ಹಾಗಿದ್ದರೆ ಭೂಮಿ ಸೃಷ್ಟಿಗೂ ಒಂದು ಉದ್ದೇಶವಿದೆಯೆಂದು ನಮಗೆ ಮನವರಿಕೆಯಾಗುವುದಿಲ್ಲವೇ?

ಭೂಮಿ ಗಂಟೆಗೆ ಸಾವಿರ ಮೈಲು ರಭಸದಿಂದ ತನ್ನ ಕಕ್ಷೆಯಲ್ಲಿ ತಿರುಗುತ್ತಿದೆ. ಅದು ಗಂಟೆಗೆ ನೂರು ಮೈಲು ವೇಗದಲ್ಲಿ ತಿರುಗುತ್ತಿದ್ದರೆ, ಹಗಲು ರಾತ್ರಿಗಳು ಈಗಿರುವುದಕ್ಕಿಂತ 10 ಪಟ್ಟು ದೀರ್ಘವಾಗುತ್ತಿತ್ತು. ಭೂಮಿಯಲ್ಲಿ ಹಸಿರುಗಳು ಹೇಳಹೆಸರಿಲ್ಲದಂತಾಗುತ್ತಿತ್ತು. ಸುದೀರ್ಘ ಹಗಲಿನ ಸೆಕೆಯನ್ನೂ ಅದೇ ರೀತಿ ಸುದೀರ್ಘ ರಾತ್ರಿಯ ಮೈ ಕೊರೆಯುವ ಚಳಿ ಯನ್ನೂ ನಮಗೆ ಸಹಿಸಲು ಸಾಧ್ಯವಿರಲಿಲ್ಲ. ಭೂಮಿಯಲ್ಲಿ ಮರಗಿಡಗಳು ಮೊಳಕೆಯೊಡೆ ಯುತ್ತಿರಲಿಲ್ಲ. ಕೃಷಿಕಾರ್ಯ ಸಾಧ್ಯವಾಗುತ್ತಿರಲಿಲ್ಲ. ಆಹಾರೋತ್ಪಾದನೆಯೇ ಸ್ಥಗಿತವಾಗುತ್ತಿತ್ತು. ಆದರೆ, ಇಂದು ಇವೆಲ್ಲವೂ ಸುಸೂತ್ರದಲ್ಲಿ ಯೋಜನೆಯಂತೆ ನಡೆಯುತ್ತಿದೆಯಲ್ಲವೇ?

ಸೂರ್ಯನು ನಮ್ಮಿಂದ ಅದರ ಉಷ್ಣವನ್ನು ತಾಳಲು ಸಾಧ್ಯವೆನಿಸುವಷ್ಟು ದೂರದಲ್ಲಿ ಉದಿಸುತ್ತಾನೆ. ಸೂರ್ಯನಿಂದ ಹೆಚ್ಚು ಉಷ್ಣ ಬಿಡುಗಡೆಗೊಂಡರೆ ಏನಾಗಬಹುದು? ಭೂಮಿಯಲ್ಲಿರುವ ಜೀವಿಗಳು ಕರಕಲಾಗುತ್ತಿದ್ದವು. ಇನ್ನು ಸೂರ್ಯನ ಉಷ್ಣ ಈಗಿರು ವುದಕ್ಕಿಂತ ಅರ್ಧದಷ್ಟು ಕಡಿಮೆಯಾದರೆ ಏನಾಗಬಹುದು? ಜೀವ ಸಂಕುಲಗಳು ಚಳಿಯಿಂದ ಬದುಕಿ ಉಳಿಯಲು ಸಾಧ್ಯವಿರಲಿಲ್ಲ. ಆದರೆ ಇಂದು ಇವೆಲ್ಲವೂ ಸುಸೂತ್ರದಲ್ಲಿ ಯೋಜನೆ ಯಂತೆ ನಡೆಯುತ್ತಿದೆಯಲ್ಲವೇ?

ಹೌದು, ಜಗತ್ತಿನಲ್ಲಿ ಎಲ್ಲವೂ ಯೋಜನೆಯಂತೆ ಸೃಷ್ಟಿಸಲ್ಪಟ್ಟಿವೆ. ಆದ್ದರಿಂದಲೇ ಪ್ರಪಂಚದ ವ್ಯವಸ್ಥೆ ಸುಸೂತ್ರವಾಗಿ ನಡೆಯುತ್ತಿವೆ. ಇದು ದೇವನ ಅಸ್ತಿತ್ವ ಮತ್ತು ಪ್ರಭುತ್ವದ ಸಂಕೇತಗಳಾಗಿವೆ.

## ಜಗತ್ತಿನ ಸಹಕಾರಿ ನಿಯಮ

ಜಗತ್ತಿನ ನಾಲ್ಕೂ ದಿಕ್ಕುಗಳಲ್ಲಿ ನಾವು ಒಂದಕ್ಕೊಂದು ಪೂರಕವಾದ ನಿಯಮಗಳನ್ನೇ ಕಾಣುತ್ತಿರುವುದೇಕೆ? ಹೌದು, ಭೂಮಿ-ಆಕಾಶಗಳಲ್ಲಿ ಹೊಂದಾಣಿಕೆಯಿದೆ. ಅವುಗಳ ಪರಸ್ಪರ ಸಹಕಾರದಿಂದ ಭೂಮಿಯ ವಾತಾವರಣ ಸಮತೋಲನದಲ್ಲಿ (Co Ordination) ಇದೆ. ಅಲ್ಲಿ ಸೌಹಾರ್ದತೆ (Harmony) ಇದೆ. ಸಹಕಾರ (co-oparation) ಇದೆ. ಇವೆಲ್ಲವೂ ಜಗತ್ತು ಆಕಸ್ಮಿಕ ಸೃಷ್ಟಿಯಲ್ಲವೆಂಬ ಸೂಚನೆಗಳಾಗಿವೆ. ಜಗತ್ತು ಪರಮ ಬುದ್ಧಿ ಮತ್ತೆಯಿಂದ (Supreme Mind) ಕಾರ್ಯ ನಿರತವಾಗಿವೆ. ಪಶು ಪಕ್ಷಿ, ಸಸ್ಯ ಪ್ರಾಣಿ ಮತ್ತು ಮಾನವರಿಗೆ ಭೂಮಿಯ ವಾತಾವರಣಕ್ಕೆ ತಾಳೆಯಾಗುವಂತಹ ಅಂಗಾಂಗಗಳನ್ನೇ ದಯ ಪಾಲಿಸಲಾಗಿದೆ. ಎಲ್ಲವೂ ಯೋಜನಾ ಬದ್ಧವಾಗಿದೆ.

ಮಾನವರ ಮೆದುಳನ್ನು ಗಮನಿಸಿದ್ದೀರಾ? ಅದರೊಳಗೆ ಶತಕೋಟಿ ಜೀವಕೋಶ(Cells) ಗಳಿವೆ. ಪ್ರತಿಯೊಂದು ಸೆಲ್‌ಗೆ ಅರುವತ್ತು ಸಾವಿರ Points(ಕೇಂದ್ರ)ಗಳಿವೆ. ನಾಲಿಗೆಗೆ ರುಚಿ ಅನುಭವವಾಗಬೇಕೆಂದು 30 ಸಾವಿರ ರುಚಿಯ ನರಗಳಿವೆ. ಕಿವಿ ಕೇಳಬೇಕಾದರೆ 1 ಲಕ್ಷ ಶ್ರವಣ ನರಗಳು ಕೆಲಸ ಮಾಡುತ್ತವೆ. ನಮ್ಮ ಕಣ್ಣಿನಲ್ಲಿ 130 ಮಿಲಿಯನ್ (13 ಕೋಟಿ) ದೃಷ್ಟಿ ಗೋಚರದ ನರಗಳಿವೆ. ಬೆಳಕನ್ನು ಇವು ಹೀರುತ್ತವೆ.

ಈ ರೀತಿ ನಾಲಿಗೆಗೆ ರುಚಿ, ಕಿವಿಗೆ ಸದ್ದು, ಕಣ್ಣಿಗೆ ನೋಟವನ್ನು ನೀಡುವಂತಹ ಯೋಜನೆಯನ್ನು ದೇಹದಲ್ಲಿರಿಸಲಾಗಿದೆ. ಇವೆಲ್ಲ ಹೇಗೆ ಆಕಸ್ಮಿಕವಾಗಿ ಸಂಭವಿಸೀತು? ಮಾನವ ದೇಹದಲ್ಲಿರುವ ಅಸಂಖ್ಯಾತ ಜೀವಕೋಶಗಳು, 36 ಸಾವಿರ ಕಿಲೋ ಮೀಟರ್ ಉದ್ದದ ನರನಾಡಿಗಳು. ಯಾವುದೇ ಅಪಾರ ಬುದ್ಧಿಮತ್ತೆ, ಇಚ್ಛಾ ಶಕ್ತಿಯಿಂದಲ್ಲದೆ ಮಾನವನ ಇಂತಹ ಕ್ಲಿಷ್ಟಕರ ರಚನೆ ಸಾಧ್ಯವಿಲ್ಲ. ಇದು ಆಕಸ್ಮಿಕವಾಗಿ ಹೇಗೆ ಸಂಭವಿಸೀತು?

ನಾವು ಒಂದು ಟೈಪ್‌ರೈಟರನ್ನು ಅಡ್ಡಾದಿಡ್ಡಿಯಾಗಿ ಅದುಮಿ ಒಂದು ಕಾವ್ಯವನ್ನು ಮುದ್ರಿಸಲಾರೆವು. ಅದರ ಬಟನ್‌ಗಳನ್ನು ಸೂಕ್ತವಾಗಿ ಅದುಮಿದಾಗ ಮಾತ್ರ ನಾವು ಬಯಸುವುದನ್ನು ಮುದ್ರಿಸಿ ತೆಗೆಯಬಹುದು. ಇವನ್ನೆಲ್ಲ ಗಮನಿಸಿದಾಗ ಸರಿಯಾದ ಸೂತ್ರದಲ್ಲಿರುವ ನಮ್ಮ ದೇಹ ತನ್ನಷ್ಟಕ್ಕೆ ಸೃಷ್ಟಿಯಾಗಲು ಸಾಧ್ಯವಿಲ್ಲವೆಂದು ಅರ್ಥವಾಗುತ್ತದೆ. ಇದರ ಹಿಂದೆ ಅಪಾರ ಬುದ್ಧಿ ಮತ್ತೆ, ಇಚ್ಛಾ ಶಕ್ತಿ ಖಂಡಿತವಾಗಿಯೂ ವಿನಿಯೋಗವಾಗಿದೆ ಎನ್ನಬಹುದು.

ಪ್ರಪಂಚ ಮತ್ತು ಅದರ ರಚನೆಯನ್ನು ಪರಾಮರ್ಶಿಸಿದರೆ ಪ್ರಕೃತಿಗಿಂತ ಮಿಗಿಲಾದ ಯಾವುದೋ ದೊಡ್ಡ ಶಕ್ತಿಯೊಂದಿದೆ ಎಂದು ಒಪ್ಪಬೇಕಾಗುವುದೆಂದು ಪ್ರೊ। ವೈಟ್ ಹೆಡ್, ಸರ್ ಜೇಮ್ಸ್ ಜೀನ್ಸ್, ಲಾರ್ಡ್ ಎಡ್ಡಿಂಗ್ಟನ್‌ರು ಹೇಳುತ್ತಾರೆ.

ನೋಡಿ, ನಮ್ಮ ಆವಶ್ಯಕತೆಗಳನ್ನು ಪೂರೈಸುವ ವಿವಿಧ ರೀತಿಯ ವಿಧಾನಗಳನ್ನು ನಾವು ಭೂಮಿಯಲ್ಲಿ ಕಾಣುತ್ತೇವೆಯಲ್ಲವೆ? ನಾವು ಉಸಿರಾಡುವುದಕ್ಕಾಗಿ ವಾಯು ಮಂಡಲ ದಿಂದ ಆಮ್ಲಜನಕ ಬಿಡುಗಡೆಯಾಗುತ್ತದೆ. ಆರೋಗ್ಯ ಉಳಿಸುವುದಕ್ಕಾಗಿ ವಿವಿಧ ಭಕ್ಷ್ಯ ಪದಾರ್ಥಗಳಿವೆ. ಜಗತ್ತಿನೊಳಗೆ ನಮ್ಮೆಲ್ಲ ಆವಶ್ಯಕತೆಗಳು ಈಡೇರುತ್ತಿರುವುದನ್ನು ನಾವು ಕಾಣುತ್ತೇವೆ. ಎಲ್ಲ ಕೆಲಸಗಳನ್ನು ನಾವು ಮಾಡುತ್ತಿದ್ದೇವೆ. ನಮ್ಮ ಅಗತ್ಯಗಳ ಅರಿವಿರುವ ಯಾವುದೋ ಪರ ಪ್ರಭುತ್ವ ಇದರ ಹಿಂದೆ ಇರಲೇಬೇಕು. ಹೀಗೆ ಕರುಣಾಗ್ರೇಸರನಾದ ಆ ಪ್ರಭುವಿನ ಕೈವಾಡವನ್ನು ನಾವು ಗುರುತಿಸಬಹುದು.

ನಾವು ಜ್ಞಾನವನ್ನು ಸಂಪಾದಿಸಿಕೊಳ್ಳುವುದಿದ್ದರೆ ಜ್ಞಾನಿಯೋರ್ವನು ಇರಲೇಬೇಕಾಗಿದೆ. ಆ ಕರುಣಾಗ್ರೇಸ ಪ್ರಭುವಿನಿಂದಲ್ಲದೇ ಇಂತಹ ಯಾವ ದಯೆಯೂ ಇಲ್ಲ. ಕೇವಲ ಭೌತಿಕ ಪದಾರ್ಥದಿಂದ ನಮ್ಮ ಆವಶ್ಯಕತೆಗಳು ಹೇಗೆ ಈಡೇರಬಹುದು? ಪ್ರಪಂಚದಲ್ಲಿರುವ ಜೀವಿಗಳ ಎಲ್ಲ ಆವಶ್ಯಕತೆಗಳನ್ನು ಪದಾರ್ಥವು ಹೇಗೆ ಪೂರೈಸೀತು? ಹೀಗಾಗಿ ಖಂಡಿತ ವಾಗಿಯೂ ನಮ್ಮ ಅಗತ್ಯಗಳನ್ನು ಈಡೇರಿಸುವ ಓರ್ವ ದೇವನಿದ್ದಾನೆ ಎಂಬುದನ್ನು ನಾವು ಒಪ್ಪಿಕೊಳ್ಳುವುದು ಅನಿವಾರ್ಯ. ದೇವನು ಜ್ಞಾನ, ಬುದ್ಧಿ, ದಯೆ, ಕರುಣೆ, ದಾನಶೀಲತೆ ಮುಂತಾದ ಸಕಲ ಗುಣ ಸಂಪನ್ನನು. ಪ್ರಪಂಚದಲ್ಲಿ ಅವನ ಈ ಗುಣಗಳು ಒಂದಲ್ಲ ಒಂದು ವಿಧದಿಂದ ಪ್ರಕಟಗೊಳ್ಳುತ್ತಿರುತ್ತವೆ.

ದಾನಶೀಲ ಗುಣ ಜೀವಿಗಳ ಲಕ್ಷಣವಾಗಿದೆ. ಜೀವವಿರುವವುಗಳಲ್ಲಿ ಮಾತ್ರ ಅದನ್ನು ನಿರೀಕ್ಷಿಸಬಹುದಾಗಿದೆ. ಜೀವಂತ ಮರದಿಂದ ಹಣ್ಣು, ಹಂಪಲು, ನೆರಳು ಇತ್ಯಾದಿಗಳನ್ನು ಪಡೆಯಬಹುದು. ಈ ಮರ ಒಣಗಿದರೆ ನೆರಳು ಕೂಡಾ ಸಿಗುವುದಿಲ್ಲ. ಅಂದರೆ ಅದರಿಂದ ಪ್ರಯೋಜನಕ್ಕೆ ಸಿಗುವ ದಾನಶೀಲ ಗುಣವನ್ನೇ ಅದು ಕಳೆದುಕೊಂಡಿದೆ. ನದಿ ಹರಿಯು ವುದು ಅದರ ಜೀವಂತಿಕೆಯ ಲಕ್ಷಣವಾಗಿದೆ. ಬೆಂಕಿಯಿಂದ ಶಾಖ ಪಡೆಯುತ್ತೇವೆ. ಶಾಖ ದಿಂದ ಅಡುಗೆಯನ್ನು ತಯಾರಿಸಬಹುದು. ಚಳಿಗಾಲದಲ್ಲಿ ನೀರು ಕಾಯಿಸಬಹುದು. ಶಾಖಕ್ಕಾಗಿ ಬೆಂಕಿಯನ್ನು ಉರಿಸುತ್ತೇವೆಂದು ಇಟ್ಟುಕೊಳ್ಳೋಣ.

ಈಗ ಬೆಂಕಿ ನಂದಿ ಹೋದರೆ ಏನಾದೀತು? ಕೆಂಡ ಬೂದಿಯಾದರೆ ಅಡುಗೆಯನ್ನು ಹೇಗೆ ತಯಾರಿಸಿಯೇವು? ಬೂದಿಯಿಂದ ಶಾಖವನ್ನು ಪಡೆಯಲಾರೆವಷ್ಟೇ? ಅಂದರೆ ಇಲ್ಲಿ ಬೆಂಕಿಯ ದಾನ ಶೀಲ ಗುಣ ಶಾಖ ಅಥವಾ ಉಷ್ಣವಾಗಿದೆ. ಸೂರ್ಯನ ಪ್ರಕಾಶ ಅದರ ಜೀವಂತಿಕೆಯ ಲಕ್ಷಣವಾಗಿದೆ. ತನ್ನ ಕಿರಣಗಳಿಂದ ಪ್ರಪಂಚವನ್ನೇ ಅದು ಬೆಳಗುತ್ತದೆ. ಸೂರ್ಯನು ನೀಡುವ ಶಾಖ-ಪ್ರಕಾಶಗಳು ಸೂರ್ಯನ ದಾನಶೀಲ ಗುಣವಾಗಿದೆ. ಯೋಚಿಸಿ ನೋಡಿರಿ. ಸೂರ್ಯನಿಂದ ಈ ಗುಣಗಳು ಬತ್ತಿ ಹೋದರೆ? ಶಾಖ ರಹಿತವಾಗಿ ಹೊಲದ ಪೈರುಗಳು ಮಾಗಲಾರವಷ್ಟೇ? ಜೀವಂತ ವಸ್ತುವಿಗೆ ದಾನಶೀಲ ಗುಣಗಳಿವೆಯೆಂದು ಈ ಉದಾಹರಣೆಗಳಿಂದ ನಾವು ಅರಿತೆವು. ದಾನಶೀಲವಲ್ಲದ, ಕೊಡುಗೆ ನೀಡುವ ಶಕ್ತಿಯಿಲ್ಲದ,

ವಸ್ತುಗಳು ಮೃತ ಸಮಾನವಾಗಿದೆ. ಜಿಪುಣನಿಂದ ಯಾವುದೇ ಕೊಡುಗೆಯನ್ನು ನಿರೀಕ್ಷಿಸಲ ಸಾಧ್ಯವಿಲ್ಲವಷ್ಟೇ. ಜಿಪುಣ ಒಣಗಿ ಬರಡಾದುದಕ್ಕೆ ಸಮಾನ. ಅವನು ಏನನ್ನೂ ಕೊಡಲಾರ ಅವನಿಂದ ಯಾವ ದಾನವನ್ನೂ ನಿರೀಕ್ಷಿಸುವಂತಿಲ್ಲ. ಸತ್ತ ವ್ಯಕ್ತಿಗೆ ಒಂದು ಸಲಾಮ್‌ ಉತ್ತರಿಸುವ ತಾಕತ್ತಿದೆಯಾ? ಅವನಿಂದ ಏನನ್ನು ನಿರೀಕ್ಷಿಸಿದರೂ ಅರ್ಥಶೂನ್ಯವಾಗುವುದು

ನಾವು ಇಂದು ಜಗತ್ತಿನಲ್ಲಿ ಅಪಾರ ದಾನಶೀಲ ಗುಣಗಳನ್ನು ಕಾಣುವೆವಲ್ಲವೇ ಇವೇನು ಒಂದು ನಿರ್ಜೀವ(ಪದಾರ್ಥ) ವಸ್ತುವಿನಿಂದ ಸಂಭವಿಸಿತೇ? ಜಗತ್ತಿನಲ್ಲಿರುವ ಜೀ ಜಾಲಗಳು ನಿರ್ಜೀವವಾದ ಪದಾರ್ಥದಿಂದ ಆಗಿವೆ ಎಂದರೆ ಅದು ಬಾಲಿಶತನ ವಾದೀತು ಜಗದ ಸೃಷ್ಟಿಯ ಹಿಂದೆ ಜೀವಂತ ಪ್ರಭುತ್ವದ ಕೈವಾಡ ಖಂಡಿತ ಇದೆ. ಅದು ದೇ ಪ್ರಭುತ್ವವಾಗಿದೆ. ಆ ದೇವನ ದಯೆ-ದಾನಶೀಲತೆಗಳು ಜಗತ್ತನ್ನು ಆವರಿಸಿಕೊಂಡು ಕಾರ್ಯ ನಿರತವಾಗಿದೆ ಎಂದು ನಾವು ಒಪ್ಪಿಕೊಳ್ಳಬೇಕು.

ಸೂಕ್ಷ್ಮ ವ್ಯಕ್ತಿಯ ಕಣ್ಣೆದುರು ದೇವನು ಬರುವ ಅಗತ್ಯವಿಲ್ಲ. ಜಗತ್ತಿನಲ್ಲಿರುವ ದೇವ ಅಪಾರ ಕೊಡುಗೆಗಳಲ್ಲಿ ಅವನು ದೇವನ ಅಸ್ತಿತ್ವವನ್ನು ಗುರುತಿಸುವನು. ಯಾಕೆಂದ ಮಾನವನ ಮನಸ್ಸಿಗೆ ಮಿತಿಯಿದೆ. ಆದರೂ ಅದು ಉನ್ನತವೂ ವಿಶಾಲವೂ ಆಗಿದೆ. ಹೀಗಾ ದೇವನ ಅಸ್ತಿತ್ವವನ್ನು ಗುರುತಿಸುವುದು ಅವನಿಗೆ ಕಷ್ಟಸಾಧ್ಯವಲ್ಲ. ಈ ರೀತಿ ಮಾನವನೊಳ ದೇವನ ಅಸ್ತಿತ್ವ ಮತ್ತು ಪ್ರಭುತ್ವದ ನಂಬಿಕೆ ಬಲವಾಗಿ ನೆಲೆ ಯೂರಿದೆ ಎನ್ನಬಹುದು.

ಆದರೂ ಪ್ರಶ್ನೆಯೊಂದು ಉದ್ಭವಿಸುವ ಸಾಧ್ಯತೆಯಿದೆಯೆನ್ನಿ, ಸೀಮಿತ ಅಸ್ತಿತ್ವವಾ ಮಾನವನಿಗೆ ದೇವಾಸ್ತಿತ್ವದ ಅರಿವು ಹೇಗೆ ಸಾಧ್ಯ?

ಸರಳ ಪ್ರಶ್ನೆಯಿದು. ಎಷ್ಟಾದರೂ ಮಾನವನಿಗೆ ದೇವನ ಅಸೀಮ ಅಸ್ತಿತ್ವ ಮತ್ತ ಪ್ರಭುತ್ವವನ್ನು ನಿಖರವಾಗಿ ತಿಳಿಯಲಾಗದು. ಆದುದರಿಂದ ಅದಕ್ಕಾಗಿ ಪ್ರವಾದಿಗ ಮಾರ್ಗದರ್ಶನ ಅಗತ್ಯವಾಗಿದೆ.

ಹೌದು, ಪ್ರಪಂಚದಲ್ಲಿರುವ ವಸ್ತುಗಳಲ್ಲಿ ದೇವನ ಅಸ್ತಿತ್ವದ ಛಾಪು ಗೋಚರಿ ಸುವುದು ಜಗತ್ತಿನ ಯಾವ ವಸ್ತುವೂ ಸ್ವಯಂ ತನ್ನನ್ನು ಸೃಷ್ಟಿಸಿಕೊಂಡಿಲ್ಲ. ಇನ್ನೊಬ್ಬನಿಂದ ಸೃಷ್ಟಿಯಾಗಿದೆ ಪ್ರಪಂಚದಲ್ಲಿ ಕಂಡು ಬರುವ ನಿದರ್ಶನಗಳಲ್ಲಿ ದೇವನ ಅಸ್ತಿತ್ವವು ಎದ್ದು ಕಾಣುವುದ ಇಂತಹ ಮನಸ್ಸಿನಲ್ಲಿ ಉದ್ಭವಿಸುವ ಭಾವನೆಗಳಿಗೆ ಮೆದುಳೋ ಮನಸ್ಸೋ ಕೇಂದ್ರವಲ್ಲ. ಈ ನಿದರ್ಶನಗಳು ಸರ್ವಶಕ್ತನಾದ ದೇವನ ಅದ್ಭುತದಲ್ಲಿ ಒಂದಾಗಿದೆ. ಇವೆಲ್ಲ ಯಾರಿಂದಲು ನಿರಾಕರಿಸಲು ಸಾಧ್ಯವಿಲ್ಲದ ಆಟೋಲಾಜಿಕಲ್ ತರ್ಕಗಳು. ಇಂತಹ ನಿದರ್ಶನಗಳು ದೇವ ಅಸ್ತಿತ್ವವನ್ನು ನಮ್ಮ ಮುಂದೆ ಪ್ರಸ್ತುತಪಡಿಸುತ್ತಿವೆ.

ಈ ವರೆಗಿನ ಉದಾಹರಣೆಗಳು ದೇವನ ಪ್ರಭುತ್ವ ಮತ್ತು ಅಸ್ತಿತ್ವದ ಕಣ್ಣಿಗೆ ಕಾಣು ಬಹಿರಂಗ ಪುರಾವೆಗಳಾಗಿವೆ. ಇವು ದೇವನು ಕರುಣಾಮಯಿ ಎಂದು ಸಾರುತ್ತಿವೆ. ಅವ

'ರಮ ಪ್ರಭುತ್ವದ ಕೃಪೆ ಸದಾ ನಮ್ಮ ಮೇಲಿರುತ್ತದೆ ಎಂಬುದನ್ನು ಇವು ಸೂಚಿಸುತ್ತಿವೆ. 'ದುದರಿಂದ ದೇವನಿಂದ ನಿರಾಶರಾಗುವ ಪ್ರಶ್ನೆಯೇ ಇಲ್ಲ, ನಾವು ಸಂಪೂರ್ಣ ಭರವಸೆ ಬಂದ ದೇವನೊಂದಿಗೆ ಸಂಬಂಧವನ್ನು ಸ್ಥಾಪಿಸಬೇಕು.

ಒಂದು ವೇಳೆ, ನಮ್ಮ ಕೆಲವು ಆವಶ್ಯಕತೆಗಳು ಈಡೇರದೆ ಉಳಿದಿರಬಹುದು. ಹಾಗೆಂದು ೀವನಲ್ಲಿ ಭರವಸೆಯನ್ನೇ ಕಳಕೊಳ್ಳುವವರು ಕೃತಘ್ನರು ಮಾತ್ರ. ಇವರ ಮುಂದೆ ನೀವು ೀವನ ಮಹಿಮೆಯನ್ನು ಹೇಳಿಯೂ ಪ್ರಯೋಜನವಾಗದು. ಅವರು ದೇವನಲ್ಲಿ ಶ್ವಾಸವಿರಿಸುವ ಬದಲು ನಿರಾಕರಿಸುತ್ತಾರೆ. ದೇವನ ಅಪಾರ ಅನುಗ್ರಹಗಳನ್ನೇ ರಾಕರಿಸುತ್ತಿದ್ದೇವೆಂಬ ಜ್ಞಾನವೇ ಆ ಅಜ್ಞಾನಿಗಳಿಗಿರುವುದಿಲ್ಲ.

ಪ್ರಪಂಚದಲ್ಲಿ ಮಾನವರ ಭೌತಿಕ ಆವಶ್ಯಕತೆಗಳು ಈಡೇರುತ್ತಿದೆ. ಆದ ಕಾರಣ ೀವನಿಗೆ ಕೃತಜ್ಞರಾಗುವುದು ನಮ್ಮ ಕರ್ತವ್ಯ ಆಗಿದೆ. ಪ್ರಪಂಚದಲ್ಲಿ ಲಭ್ಯವಿರುವ ಭೌತಿಕ ಸ್ತುಗಳು ಮಾನವನಿಗೆ ಅಮೂಲ್ಯವಾದದ್ದು. ನೋಡಿ, ಈ ಪ್ರಪಂಚದಲ್ಲಿ ಪ್ರವಾದಿಗಳ ಮೂಲಕ ದೇವನು ನೇರವಾಗಿ ಸಂಬೋಧಿಸಿರುವ ಶ್ರೇಷ್ಠತೆಯು ಮಾನವನಿಗೆ ಲಭಿಸಿತು.

ಹೌದು, ಮಾನವನಿಗೆ ಯಾಕೆ ಈ ಶ್ರೇಷ್ಠ ಸ್ಥಾನ ಲಭಿಸಿತು? ಆತ್ಮದ ಮಾಧುರ್ಯವನ್ನು ನುಭವಿಸುವುದು ಹೇಗೆ? ಜೀವನದ ಸಾರ್ಥಕ್ಯವೇನು ಎಂಬುದನ್ನೆಲ್ಲ ಪ್ರವಾದಿಗಳಿಂದಲೇ ಮಾನವರು ಕಲಿತುಕೊಂಡಿದ್ದಾರೆ. ಈ ಬಗ್ಗೆ ಮುಂದೆ ವಿವರಿಸಲಾಗಿದೆ.

ಹೌದು, ಭೌತಿಕ ಸುಖ ಸೌಕರ್ಯಗಳು ಮಾನವ ಜೀವನದ ಮಹತ್ಸಾಧನೆಯಲ್ಲ, ದೇವ ಕ್ತಿ ಸಮರ್ಪಣೆಗಳೇ ಮಾನವನಿಗೆ ಪ್ರಾಮುಖ್ಯವಾಗಿದೆ. ಮಾನವರ ಬಳಿ ಸಕಲ ಸುಖ ಶ್ವರ್ಯಗಳಿರಬಹುದು. ಆದರೂ ದೇವನನ್ನು ಪ್ರಾರ್ಥಿಸಲು ತಿಳಿಯದಿದ್ದರೆ ಅವನ ಜೀವನ ೂನ್ಯವಾಗಿದೆ. ಅದು ಬರಡು ಮರುಭೂಮಿಯಂತಹ ಬದುಕಾಗಿರುವುದು. ಯಾಕೆಂದರೆ ಮರುಭೂಮಿಯಲ್ಲಿ ಹೂ, ಹಣ್ಣು ಫಲ ವಸ್ತುಗಳಿಲ್ಲ, ಹಸಿರಿಲ್ಲ, ಅಲ್ಲಿ ಹಕ್ಕಿಗಳು ವಾಸಿಸುವುದಿಲ್ಲ. ಂದ ಮೇಲೆ ಅಲ್ಲಿ ಹಕ್ಕಿಗಳ ಇಂಚರವನ್ನು ನಿರೀಕ್ಷಿಸುವುದಕ್ಕೆ ಅರ್ಥ ವಿದೆಯೇ? ಇಂತಹ ದುಕು ಅರ್ಥಶೂನ್ಯವಾದ ಬದುಕಲ್ಲವೇ?

ಜೀವನವನ್ನು ಒಂದು ಆಟ ವಿನೋದ ಎಂದು ತಿಳಿದವರಿಗೆ ಜಗತ್ತು ಯಾವ ನಿರೀಕ್ಷೆ ಯನ್ನೂ ಸೃಷ್ಟಿಸಲಾರದು. ಬದುಕು ಆಟ ವಿನೋದ ಅಲ್ಲ, ಅಮರತ್ವದ ಸಂಬಂಧ ಕಡಿದುಕೊಂಡ ಯಾವುದೂ ಅಮೂಲ್ಯವಲ್ಲ. ದೇವನಲ್ಲಿ ನಿರೀಕ್ಷೆಯಿಟ್ಟವನೇ ಆಶಾವಾದಿ. ಅಮರತ್ವದ ರೀಕ್ಷೆಯಿರುವವನನ್ನೇ ಮಾನವನೆಂದು ಹೇಳಬಹುದು.

ಇಂದು ನಾಳೆಗಳೆಂಬ ಭವಿಷ್ಯದ ಚಿಂತೆಗಳನ್ನು ನಾವು ಮಾನವರಲ್ಲಿ ಕಾಣುತ್ತೇವೆ. ೇವಲ ಇಂದಿಗೆ ಸೀಮಿತವಾದ ತೃಪ್ತಿಯು ಅವನಲ್ಲಿಲ್ಲ. ಅವನು ನಾಳೆಗಳೀಚೆಗೂ ಚಿಂತಿಸ ೇಕಾಗಿದೆ. ಜಗತ್ತನ್ನು ನೋಡಿ, ಅದರಲ್ಲಿ ನಾಳೆಗಳನ್ನು ತೋರಿಸುವ ಅಸಂಖ್ಯಾತ ಕುರುಹು

ಗಳಿಲ್ಲವೇ? ಅವು ನಮ್ಮನ್ನು ಸುಖಿಯಾದ ನಾಳೆಗಾಗಿ ನಮ್ಮನ್ನು ಪ್ರೇರೇಪಿಸುತ್ತಿವೆ. ಹೌ ಇಂದನ್ನು ನಾವು ಸಮೃದ್ಧಗೊಳಿಸಿದರೆ ಸುಖೀ ನಾಳೆಗಳನ್ನು ನಿರೀಕ್ಷಿಸಬಹುದು. ಇಂದು ಸ ಅಪರಿಚಿತವಲ್ಲ. ಸತ್ಯಕ್ಕೆ ಅನುಕೂಲವಾಗಿ ಪ್ರಪಂಚದ ಕಾರ್ಯಕಲಾಪಗಳು ನಡೆಯುತ್ತಿವೆ. ಸತ್ಯದೆಡೆಗೆ ಮಾನವನು ತಲುಪುವುದು ಅಷ್ಟು ಸುಲಭವಿಲ್ಲ. ಅವನಿಗೆ ಮಾರ್ಗದರ್ಶನ ಆವಶ್ಯಕತೆಯಿದೆ. ದೇವನು ಅದಕ್ಕೂ ವ್ಯವಸ್ಥೆ ಮಾಡಿದ್ದಾನೆ. ಮುಂದೆ ಈ ದೇವದ ಮಾರ್ಗದರ್ಶನಗಳ ವಿಧಾನಗಳನ್ನು ಅರಿಯೋಣ.

✧ ✧ ✧

ಅಧ್ಯಾಯ-2

# ಬುದ್ಧಿ ವಿವೇಕಗಳ ಸೀಮೆಗಳು

**ಮಾ**ನವರ ಬುದ್ಧಿ ಮತ್ತು ವಿವೇಕಗಳಿಗೆ ಒಂದು ಸೀಮೆಯಿದೆ. ಮೆದುಳು ಮಾನವನಿಗೆ ದೊರೆತ ಅಮೂಲ್ಯ ಅನುಗ್ರಹವಾಗಿದೆ. ಮಾನವನು ಪ್ರತಿಯೊಂದು ಕಾರ್ಯವನ್ನು ಆಲೋಚಿಸಿ ಬುದ್ಧಿ ಪೂರ್ವಕವಾಗಿ ಮಾಡಬೇಕು. ಆದರೆ ಬುದ್ಧಿಯ ಬಳಕೆಯಲ್ಲಿ ಅದರ ಇತಿಮಿತಿಯ ಅರಿವನ್ನು ಹೊಂದಿರುವುದು ಅವಶ್ಯಕ. ಅದರ ಸಾಮರ್ಥ್ಯವನ್ನು ಮೀರುವ ಕೆಲಸವನ್ನು ಅದರ ಮೇಲೆ ಹೇರಬಾರದು. ಅಂತಹವರು ಖಂಡಿತವಾಗಿಯೂ ವಿಫಲ ರಾಗುತ್ತಾರೆ. ಬುದ್ಧಿ ಶಕ್ತಿಗೆ ಒತ್ತಡ ಹಾಕುವುದೆಂದರೆ ಒಂದರ್ಥದಲ್ಲಿ ದೌರ್ಜನ್ಯವೇ ಆಗುವುದು.

ವಿಜ್ಞಾನ ಬುದ್ಧಿಯ ಕೊಡುಗೆಯಲ್ಲವೇ? ಆದರೆ ಕಾಂಟೆ ಕೇವಲ ಬುದ್ಧಿಯಿಂದ ಸತ್ಯವನ್ನು (Reality) ತಲುಪಲಾರೆವೆಂದು ಹೇಳುತ್ತಾನೆ. ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್ 'ಔಟ್ ಆಫ್ ಮೈ ಲೇಟರ್ ಡೇಸ್' ಎಂಬ ಆತ್ಮ ಕಥನದಲ್ಲಿ ಹೀಗೆ ಬರೆದಿದ್ದಾರೆ. "ವಿಜ್ಞಾನ ಇದು ಏನೆಂದು ಯಾವ ವಸ್ತುವನ್ನೂ ತಿಳಿಸಬಹುದು. ಆದರೆ ಅದು ಏನು ಆಗಬೇಕೆಂಬ ಮೌಲ್ಯವನ್ನು ಮಾತ್ರ ವಿಜ್ಞಾನ ನಿರ್ಣಯಿಸುವುದಿಲ್ಲ."

ವಿಜ್ಞಾನದಿಂದ ಮೆದುಳಿನ ಚಿಂತನೆಗೆ ನಿಲುಕದ ವಸ್ತುವನ್ನು ದೃಢಪಡಿಸಲಾಗದು ಮತ್ತು ಮೆದುಳು ಮಾನವರಲ್ಲಿರುವ ಮೂಲ ವಸ್ತುವಾಗಿದೆ. ಅದರ ಜ್ಞಾನಕ್ಕೆ ಎಟುಕದ ವಸ್ತುವಿನ ಬಗ್ಗೆ ನಾವು ಅಜ್ಞಾನಿಗಳಾಗಿದ್ದೇವೆ. ಆದುದರಿಂದ ಮೆದುಳು ಮತ್ತು ಬುದ್ಧಿಯಿಂದ ಹೊರಗಿರುವ ಪರಮ ಸತ್ಯವನ್ನು ತಲುಪಲು ನಮ್ಮಿಂದಾಗದು. ಅಲ್ಲಿಗೆ ತಲುಪಲು ನಮ್ಮ ಬುದ್ಧಿ ಶಕ್ತಿಯೋ ಮೆದುಳಿನ ಜ್ಞಾನವೋ ಸಾಲುವುದಿಲ್ಲವೆಂದು ಬಿಶಪ್ ಬರ್ಕಲೇ(Bishop Berkley) ಬರೆದಿದ್ದಾರೆ.

ವಿಜ್ಞಾನ ಇಂದ್ರಿಯ ಅನುಭವವಾಗುವ ವಸ್ತುಗಳಿಗೆ ಸೀಮಿತವಾಗಿದೆ. ನಾವು ವಿಜ್ಞಾನದ ವಿಷಯಗಳನ್ನು ಚರ್ಚಿಸುತ್ತೇವೆಯೇ ಹೊರತು ಇಂದ್ರಿಯ ಜ್ಞಾನ ಮೀರಿ ನಿಂತ ಸತ್ಯವನ್ನಲ್ಲ. ಆದುದರಿಂದ ವಿಜ್ಞಾನವು ಆ ಸತ್ಯವನ್ನು ಸಂಪರ್ಕಿಸದು. ಪ್ರಯೋಗ ಶಾಲೆಯಲ್ಲಿ ಪ್ರಯೋಗ ಮಾಡುವ ಮೂಲಕ ಸತ್ಯವನ್ನು ತಲುಪಲು ಸಾಧ್ಯವಿಲ್ಲ, ಯಾಕೆಂದರೆ ವಿಜ್ಞಾನ ಭೌತಿಕ ವಸ್ತುಗಳನ್ನು ದಾಟಿ ಬೆಳೆಯುವುದಿಲ್ಲ, ಆದಕ್ಕೆ ತನ್ನ ಸೀಮೆಯನ್ನು ದಾಟುವ ಶಕ್ತಿಯಿಲ್ಲ.

ಆದರೆ ಪ್ರಪಂಚದಲ್ಲಿ ಅಸಂಖ್ಯಾತ ಕಣ್ಣಿಗೆ ಗೋಚರವಾಗದ ವಸ್ತುಗಳಿವೆ. ವಿಜ್ಞಾನದಿಂದ ಇದನ್ನು ಗುರುತಿಸಲು ಆಗಿಲ್ಲ ಎಂಬ ಕಾರಣ ನೀಡಿ ನಾವು ಅವುಗಳೇ ಇಲ್ಲವೆಂದರೆ ಹೇಗೆ?

ಈ ರೀತಿ ಅಂದುಕೊಳ್ಳುವುದರಿಂದಲೇ ಭೂಮಿಯಲ್ಲಿ ಅಧರ್ಮವು ಹುಟ್ಟಿಕೊಂಡಿತು ಎನ್ನಬಹುದು. ಈ ತಪ್ಪನ್ನೆಸಗಿದವರೇ ಪ್ರಪಂಚವನ್ನು ಯಂತ್ರಕ್ಕೆ ಹೋಲಿಸುತ್ತಿದ್ದಾರೆ. ಅವರು ಜಗತ್ತು ಆಕಸ್ಮಿಕ ಸೃಷ್ಟಿ. ಅದಕ್ಕೆ ಸೃಷ್ಟಿಕರ್ತನಿಲ್ಲ. ಅದರ ಸೃಷ್ಟಿಯ ಹಿಂದೆ ಜೀವಂತ ಪ್ರಭುತ್ವದ ಕೈವಾಡವಿಲ್ಲ ಎಂದು ವಾದಿಸುತ್ತಾರೆ. ಈ ಪ್ರಶ್ನೆಗೆ ವಿಜ್ಞಾನದಲ್ಲಿ ಉತ್ತರವಿಲ್ಲ. ಇದು ಬುದ್ಧಿಶಕ್ತಿಯಿಂದ ಪರಿಹಾರವಾಗುವ ಸಮಸ್ಯೆಯಲ್ಲ.

ಆದರೂ ಮಾನವರ ಪಾಲಿಗೆ ಬುದ್ಧಿಶಕ್ತಿ ಅಮೂಲ್ಯವಾದದ್ದೇ. ಇಂದ್ರಿಯ ಜ್ಞಾನ ಪರಿಪೂರ್ಣಗೊಳ್ಳುವುದೇ ಬುದ್ಧಿಶಕ್ತಿಯಿಂದ. ಇಂದ್ರಿಯಗಳು ಸರಿಯಾಗಿ ಕೆಲಸ ನಿರ್ವಹಿಸು ವುದಕ್ಕೆ ಬುದ್ಧಿಶಕ್ತಿ ಆವಶ್ಯಕವಾಗಿದೆ. ಇಂದ್ರಿಯಗಳಿಗೆ ಮೆದುಳು ಮಾರ್ಗದರ್ಶನ ನೀಡುತ್ತದೆ. ಈ ರೀತಿ ಬುದ್ಧಿಶಕ್ತಿಗೆ ಬಹಳ ಪ್ರಾಮುಖ್ಯವಿದೆ.

ನೋಡಿ, ಕುಡಿದು ಅಮಲೇರಿಸಿಕೊಂಡವನ ಮೆದುಳಿನ ಶಕ್ತಿ ಅಥವಾ ಬುದ್ಧಿ ಶಕ್ತಿಯೇ ನಾಶವಾಗಿರುತ್ತದೆಯಷ್ಟೆ? ಕುಡುಕನಲ್ಲಿ ಅವನ ಬುದ್ಧಿ, ಇಂದ್ರಿಯ ಮತ್ತು ಮೆದುಳು ಸೂಕ್ತ ವಾಗಿ ಕ್ರಿಯಾಶೀಲವಲ್ಲ. ಈ ಉದಾಹರಣೆಯಿಂದ ನಾವು ಬುದ್ಧಿ ಮತ್ತು ಮೆದುಳು ಶಕ್ತಿ ಎಷ್ಟು ಮಹತ್ವದ್ದೆಂದು ಅರ್ಥ ಮಾಡಿಕೊಳ್ಳಬಹುದು.

ಬುದ್ಧಿ ಶಕ್ತಿಗೆ ಒಂದು ಮಿತಿಯಿದೆ. ತನ್ನ ಮಿತಿಯನ್ನು ದಾಟಿದಾಗ ಸ್ತಿಮಿತವಿಲ್ಲದಾಗು ವುದು. ಆದುದರಿಂದ ಜೀವನದ ಪರಮ ಸತ್ಯವನ್ನು(Ultimate Reality) ಗ್ರಹಿಸಲು ಸಾಧ್ಯವಿಲ್ಲ.

ಬರ್ಗ್‌ಸಾ ಎಂಬವರು, ಭೌತಿಕ ಚಿಂತನೆಗಳು ಜೀವನದ ರಹಸ್ಯವನ್ನು ಅರಿಯಲು ಅಸಮರ್ಥವೆಂದು ಸಾರಿದ್ದಾರೆ. ಜೀವನದ ಪ್ರಗತಿಯನ್ನು ಪ್ರಕಟಿಸಲು ಬುದ್ಧಿಶಕ್ತಿ ಅಸಮರ್ಥ ವಾಗಿದೆ. ಜೀವನದ ಪೂರ್ಣ ಆಶಯವನ್ನು ಅದು ಪ್ರಕಟಿಸಲಾರದೆಂದೇ ಬರ್ಗ್‌ಸಾ[1] ಹೇಳುತ್ತಾರೆ.

ಬುದ್ಧಿಯಿಂದ ಯಾವುದೇ ವಿಷಯದಲ್ಲಿ ಅಂತಿಮ ಪುರಾವೆಯನ್ನಾಗಲಿ, ಸಂಪೂರ್ಣ ಸತ್ಯವನ್ನಾಗಲಿ, ತಾರ್ಕಿಕವಾದ ನಂಬಿಕೆಗಳನ್ನಾಗಲಿ ಸಂಗ್ರಹಿಸಲು ಸಾಧ್ಯವಿಲ್ಲ. ಅದು ಅಭೇದ್ಯ ವಿಶ್ವಾಸದ ಸಮೀಪವೂ ಸುಳಿಯಲಾರದೆಂದು ಬ್ರೈಟ್‌ಮನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪ್ರಕೃತಿಯ ವ್ಯವಸ್ಥೆಯು ಮೌಲ್ಯದಾಯಕ ಸತ್ಕ್ರಿಯೆಗಳಿಂದ ಅದ್ಭುತವನ್ನೇ ಸೃಷ್ಟಿಸಿದೆ. ಆದರೆ ವಿಜ್ಞಾನಕ್ಕೆ ತನ್ನ ಕೊನೆಯ ಮಾತನ್ನು ವಿಶ್ಲೇಷಿಸಬೇಕೆಂದರೆ ಜಗತ್ತಿನ ಕೊನೆಯ ಮಾನವನ ವರೆಗೂ ಕಾಯುವುದು ಅನಿವಾರ್ಯವಾಗಿದೆ ಎಂದು[3] ಡಾ। ಜೇಮ್ಸ್ ಗ್ರೇಥರ್‌ರ ಅಭಿಪ್ರಾಯವಾಗಿದೆ.

---

1. Creative evolution preface (p-10)
2. The Science and The Modern World (P-113)
3. Greate Design (P-52)

ಸರ್ ಜೇಮ್ಸ್ ಜೀನ್ಸ್‌ರು ಆಧುನಿಕ ವಿಜ್ಞಾನವು ಪ್ರಪಂಚದ ನಿಗೂಢ ರಹಸ್ಯ ನ್ನು ಬಗೆಹರಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಆ ರಹಸ್ಯವು ವಿಜ್ಞಾನಕ್ಕೆ ಅಪರಿಚಿತವಾಗಿ ಉಳಿದಿದೆ ಎಂದು ತನ್ನ (The Mystoriaus Universel) ಗ್ರಂಥದಲ್ಲಿ ಅವರು ಉಲ್ಲೇಖಿಸಿದ್ದಾರೆ.[4]

ಭೌತಶಾಸ್ತ್ರದ ಎಲ್ಲ ನಂಬಿಕೆಗಳು ಇಂದ್ರಿಯ ಪ್ರಪಂಚದ ಉತ್ಪನ್ನವಾಗಿದೆ. ಮಾನವನ ನನಕ್ಕಿಂತ ಮೊದಲು ಪ್ರಕೃತಿಯಿತ್ತು. ಅದು ಮಾನವನ ಅಂತ್ಯದ ನಂತರವೂ ಇರುವುದು ಂದು ಮಾಕ್ಸ್ ಪ್ಲಂಕ್ (Max Plank) ಹೇಳುತ್ತಾರೆ. ನಮಗೆ ಅಗೋಚರವಾದ ಇನ್ನೊಂದು ಗತ್ತು ಇದೆ. ಆದರೆ ಅದು ನಮ್ಮ ಜ್ಞಾನಕ್ಕೆ ಎಟಕುವುದಿಲ್ಲ. ಇಂದು ನಾವು ನೋಡುವ ್ರಪಂಚವು ಪೂರ್ಣ ಜಗತ್ತಿನ ಅಪೂರ್ಣ ಸ್ಥಿತಿಯೆಂದು ಡೀನ್ ಇಂಜ್ (Dean Inge) ರೆಯುತ್ತಾರೆ.[5]

ಒಂದು ವೇಳೆ, ಈ ಜಗತ್ತು ಪಾಶ್ಚಾತ್ಯ ವಿದ್ವಾಂಸರ ಅನಿಸಿಕೆಗಳಂತೆ ಮಾಯೆ ಎಂದಾದರೆ ತ್ಯವನ್ನು ಬುದ್ಧಿಶಕ್ತಿಯಿಂದ ಗುರುತಿಸುವುದು ಅಸಾಧ್ಯ ವಿಚಾರವಾಗುವುದು. ಈ ರೀತಿ ತ್ಯವನ್ನು ಗುರುತಿಸಲು ಅಲೌಕಿಕ ಸಹಾಯ ಮತ್ತು ಕೊಡುಗೆಗಳು ಆವಶ್ಯಕ ಎಂಬಂಶವನ್ನು ಾವು ಗುರುತಿಸಬಹುದು. ಅದೇ ವೇಳೆ ವಿಜ್ಞಾನಕ್ಕೆ ಸತ್ಯದ ಸಮೀಪವೂ ತಲುಪಲು ಾಧ್ಯವಿಲ್ಲವೆಂದು ಕೂಡಾ ನಾವು ಪರಿಗಣಿಸಬೇಕಾಗಿದೆ. ಇದರಿಂದ ನಮಗೆ ಉದ್ದೇಶ ಮತ್ತು ರೀಕ್ಷೆಗಳು ಸತ್ಯದ ಅಮೂಲ್ಯವಾದ ಮಗ್ಗುಲೆಂದು ಅರ್ಥವಾಗುತ್ತದೆ.

ಸತ್ಯವನ್ನು ಅರಿಯುವಷ್ಟೇ ಜೀವನದುದ್ದೇಶ ಮತ್ತು ಸಮಯದ ಸದ್ಬಳಕೆಯ ಅರಿವಿರು ದು ಕೂಡಾ ನಮಗೆ ಪ್ರಾಮುಖ್ಯವಾದದ್ದೇ. ಇವೆರಡೂ ಕೂಡಾ ನಮ್ಮ ಬುದ್ಧಿ ಜ್ಞಾನಗಳಿಗೆ ತೀತವಾದುದು. ಸರ್ ರಿಚರ್ಡ್ ಲಿವಿಂಗ್‌ಸ್ಟನ್ ಬಹಳ ಸ್ಪಷ್ಟವಾಗಿ ಇದನ್ನು ವಿಶದೀಕರಿಸಿದ್ದಾರೆ.

ನಾವು ವಸ್ತುಗಳನ್ನು ಸಂಗ್ರಹಿಸಬಹುದು. ಅದರ ಉಪಯೋಗವನ್ನು ಮಾನವರಿಗೆ ಹೇಳ ಹುದು. ಆದರೆ ಅದು ಯಾವ ಉದ್ದೇಶಕ್ಕಾಗಿದೆ ಎಂಬುದನ್ನು ನಾವು ಹೇಳಲಾರೆವು.[6] ಅಂದರೆ ುದ್ಧಿಶಕ್ತಿಯಿಂದ ವಸ್ತುವಿನ ಮೌಲ್ಯವನ್ನು ಗುರುತಿಸಲು ಸಾಧ್ಯವಿಲ್ಲ ಎಂದು ಇದರ ಅರ್ಥ.

ಜೇಟ್ ಎಂಬವರು ಬುದ್ಧಿಯ ಸೀಮಿತ ಶಕ್ತಿಯನ್ನು ಇನ್ನೊಂದು ರೀತಿಯಲ್ಲಿ ವರಿಸುತ್ತಾರೆ. ವಿಜ್ಞಾನವು ವಸ್ತುಗಳ ಸೀಮಿತ ಹತೋಟಿಯನ್ನು ಕಲಿಸುತ್ತದೆ. ಅದಕ್ಕೆ ವಸ್ತುಗಳ ುದ್ದೇಶವನ್ನು ಹೇಳಿಕೊಡಲು ಸಾಧ್ಯವಿಲ್ಲ. ವಿಜ್ಞಾನವೆಂದರೆ ಎರಡು ಅಲಗಿನ ಖಡ್ಗವಾಗಿದೆ. ಜ್ಞಾನಿಕ ಶಕ್ತಿಯನ್ನು ತಿಳಿದ ಮಾನವನಿಗೆ ಬಳಕೆಯೇ ಅರಿತಿಲ್ಲ. ವಿಜ್ಞಾನ ತನ್ನ ಗೋತ್ಕರ್ಷದಷ್ಟೇ ವಿನಾಶಕಾರಿ ಗುಣವನ್ನು ಹೊಂದಿದೆ. ಮಾನವರು ವಿನಾಶದ ಸಮೀಪ

---

Universe in the Light of Modern Physics
Education for a World -A drift
God and The Austronomers P-13

ದಲ್ಲಿ ಸಾಗುತ್ತಿದ್ದಾರೆ. 19ನೇ ಶತಮಾನದಲ್ಲಿ ನಾವು ವಿಜ್ಞಾನದ ಪ್ರಗತಿಯನ್ನು ನೋಡಿದೆ ಇನ್ನು ಮುಂದೆ ಮಾನವನನ್ನು ಅದು ಯಾವ ಅಧೋಗತಿಗೆ ತಲುಪಿಸಲಿದೆ ಎಂದು ನೋ ಬಹುದು.[7]

ಮನೋ ವಿಜ್ಞಾನಿ ಜುಂಗ್ (ಕ್ರಿ.ಶ. 1875-1961) ತನ್ನ ಆತ್ಮಕಥೆಯಲ್ಲಿ ಬರೆದಿರು ವಿಚಾರವು ಗಮನಾರ್ಹವಾದದ್ದು.

ನಾನು ಯಾವ ವಸ್ತುವಿಗೆ ಯಾವ್ಯಾವ ಮೌಲ್ಯವಿದೆ ಮತ್ತು ಇಲ್ಲವೆಂದು ನಿರ್ಧರಿಸ ಸಮರ್ಥನಲ್ಲ. ನನಗೆ ನನ್ನ ಹುಟ್ಟು, ಬದುಕು ತಿಳಿದಿದೆ. ಆದರೆ ನನ್ನ ಹುಟ್ಟಿನಲ್ಲಿ ನನ್ನ ಇಚ್ಛೆ ಪಾತ್ರವೇನಿಲ್ಲ. ಆದುದರಿಂದ ನಾನು ಕಳುಹಿಸಲ್ಪಟ್ಟವನು. ಬೇರೆ ಯಾವುದೋ ವಸ್ತು ಅವಲಂಬನೆಯಿಂದ ನನ್ನ ಅಸ್ತಿತ್ವವಿದೆ. ಆದರೆ ನಾನು ಅದು ಯಾವ ವಸ್ತು ವೆಂದು ಅರಿತಿ

ವಸ್ತುವಿನ ನಿಕಟವಾದ ಮತ್ತು ತಾತ್ಕಾಲಿಕವಾದ ಉದ್ದೇಶಗಳನ್ನು ತಿಳಿಸಲಷ್ಟೇ ಬು ಸಮರ್ಥವಾಗಿದೆ. ವಸ್ತುವಿನ ಮೂಲ ಉದ್ದೇಶ ಬುದ್ಧಿಗೆ ಅಪರಿಚಿತವಾಗಿಯೇ ಉಳಿದಿ ಮಾನವನಿಗೆ ತನ್ನ ಬುದ್ಧಿ ಶಕ್ತಿಯಿಂದ ತನ್ನ ಮೇಲೆಯೇ ಸದಾ ಸಮತೋಲದ ದೃಷ್ಟಿಯ ಹರಿಸಲು ಸಾಧ್ಯವಿಲ್ಲ. ಆದುದರಿಂದ ಅವನು ತನ್ನೆಲ್ಲ ಯೋಗ್ಯತೆ-ಶಕ್ತಿ-ಸಾಮರ್ಥ್ಯಗಳ ಗುರುತಿಸಲಾರ. ತನ್ನ ಜೀವನದ ಗುರಿಯನ್ನು ನಿಗದಿಪಡಿಸಲೂ ವಿಫಲನಾಗಿರುವನು. ಆದ್ದರಿ ತನ್ನ ಸಕಲ ಅಗತ್ಯಗಳಿಗೆ ನ್ಯಾಯವನ್ನು ನೀಡಲಾರನು.

ಇಬ್ನು ತೈಮಿಯರು ತನ್ನ ಪ್ರಸಿದ್ಧ 'ಅಲ್‌ರದ್ದು ಅಲಲ್ ಮಂತಿಕೀನ್' ಎಂಬ ಗ್ರಂಥದ ಬುದ್ಧಿಯ ನ್ಯೂನತೆಗಳನ್ನು ಬೊಟ್ಟು ಮಾಡಿದ್ದಾರೆ. ಪರಲೋಕ-ಏಕದೇವತ್ವ- ಪ್ರವಾದಿಗಳ ಅಳೆಯುವ ಸಾಮರ್ಥ್ಯ ಬುದ್ಧಿಗಿಲ್ಲವೆಂದು ಇಬ್ನು ಖಲ್ದೂನ್ (ಕ್ರಿ.ಶ. 1332-1406) ತ ತಾರೀಖ್ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಅಂದರೆ ಅಭೌತಿಕ ವಿಚಾರಗಳಲ್ಲಿ ಬುದ್ಧಿ ಅಸಹಾಯಕ ಮತ್ತು ದುರ್ಬಲವಾ ಎಂದರ್ಥ. ಆಧುನಿಕ ವಿಚಾರವಾದಿ ಕಾಂಟೆ (ಕ್ರಿ.ಶ. 1724-1806) ದಿ ಕ್ರಿಟಿಕ್ ಆ ಪ್ಯೂರ್ ರೀಝನ್ (The Critique of Pure reason) ಎಂಬ ತನ್ನ ಗ್ರಂಥದಲ್ಲಿ ಬು ಶಕ್ತಿ ಅತಿ ಸೀಮಿತವಾಗಿದ್ದು ಅದರಲ್ಲಿ ಅನೇಕ ಭ್ರಮೆಗಳಿವೆ. ಆದುದರಿಂದ ಅದು ಎಂ ಅಂತಿಮ ಸತ್ಯ(Ultimate Truth)ವನ್ನು ಸಮೀಪಿಸುವುದು ಸಾಧ್ಯವಲ್ಲವೆಂದು ಬರೆಯುತ್ತಾ

ಈ ಎಲ್ಲ ವಿವರಣೆಗಳಿಂದ ಬುದ್ಧಿ ನಗಣ್ಯವಾದುದೆಂದು ಸಾಧಿಸುವ ಉದ್ದೇಶವಿಲ್ಲ. ಬುದ್ಧಿಯನ್ನು ಮೀರಿ ನಿಂತಿದೆ ಎಂಬುದಷ್ಟೇ ಈ ವಿವರಣೆಗಳ ಉದ್ದೇಶ. ಯಾವತ್ತೂ ಬು ಅಪ್ರಯೋಜಕವಲ್ಲ. ಯಾಕೆಂದರೆ ಮಾನವನಿಗೆ ಅದು ದೈವಿಕ ಕೊಡುಗೆ ಮತ್ತು ಅಮೂಲ್ಯ

7. God and Evil ) - 114

ದು. ಮಾನವನಿಗೆ ಬುದ್ಧಿ ಶಕ್ತಿಗಾಗಿ ಗೌರವ ಸಂದಿವೆ. ಬುದ್ಧಿಯಿರುವುದರಿಂದಲೇ ಾನವನ ಸ್ಥಾನ ಪ್ರಾಣಿಗಿಂತ ಉನ್ನತವಾಯಿತು. ಹೌದು, ಬುದ್ಧಿಯನ್ನು ನೀಡುವ ಮೂಲಕ ವನು ಮಾನವನನ್ನು ಯಾವುದೋ ವಿಶೇಷ ಕಾರ್ಯಕ್ಕಾಗಿ ಆಯ್ದು ಕೊಂಡಿದ್ದಾನೆ.

ಇಷ್ಟೊಂದು ಸುವ್ಯವಸ್ಥೆ ಮಾಡಿರುವ ದೇವನು ಮಾನವನ ಮಾರ್ಗದರ್ಶನಕ್ಕೂ ವ್ಯವಸ್ಥೆ ಾಡಿರಬೇಕಲ್ಲವೇ? ಯಾವತ್ತು ಮಾನವನನ್ನು ಅಸಹಾಯಕ ಸ್ಥಿತಿಯಲ್ಲಿಡುವುದು ವೇಚ್ಛೆಯಲ್ಲ. ಮಾನವ ವ್ಯವಸ್ಥೆಯನ್ನೇ ನೋಡಿ, ದೇವನು ಕಣ್ಣಿಗೆ ದೃಷ್ಟಿಯನ್ನು ನೀಡಿದ್ದಾನೆ. ಾನವನು ಕಣ್ಣಿಂದ ಪ್ರಯೋಜನ ಪಡೆಯುವಂತಾಯಿತು. ಒಂದು ವೇಳೆ ದೇವನು ಕಣ್ಣು ಟ್ಟು ನೋಡುವ ಸಾಮರ್ಥ್ಯ ದಯಪಾಲಿಸದಿರುತ್ತಿದ್ದರೆ ಮಾನವನು ಕಣ್ಣಿದ್ದೂ ುಡನಾಗುತ್ತಿರಲಿಲ್ಲವೇ? ಆಗ ಅವನು ಪರದಾಡ ಬೇಕಾಗುತ್ತಿತ್ತಲ್ಲವೇ? ದೇವನು ಾನವನನ್ನು ಅಸಹಾಯಕ ಸ್ಥಿತಿಯಲ್ಲಿಟ್ಟಿಲ್ಲ ಎಂಬುದು ಇದರಿಂದ ನಮಗೆ ಅರ್ಥವಾಯಿತು.

ಹಾಗಾದರೆ ಕಣ್ಣು ನೀಡಿ, ಅದೇ ಕಣ್ಣಿಂದ ಬೆಳಕನ್ನು ನೋಡುವ ಶಕ್ತಿ ಕೊಟ್ಟ ದೇವನು ದ್ಧಿಗೂ ಆವಶ್ಯಕ ವ್ಯವಸ್ಥೆ ಮಾಡಿರಬಹುದು. ಇಲ್ಲವೆಂದಾದರೆ ಮಾನವನು ಸನ್ಮಾರ್ಗದಲ್ಲಿ ಚರಿಸಲಾರ. ಬದುಕಿನಲ್ಲಿ ಉದ್ಭವಿಸುವ ನಾನಾ ತರದ ಸಂದೇಹಗಳನ್ನು ಬಿಡಿಸಿ ುನ್ನಡೆಯಲು ಮಾನವನಿಗೆ ಮಾರ್ಗದರ್ಶನ ಆವಶ್ಯಕವಾಗಿದೆ. ಮುಂದಿನ ಅಧ್ಯಾಯ ಲ್ಲಿ ಈ ಕುರಿತು ಸವಿಸ್ತಾರವಾಗಿ ಚರ್ಚಿಸೋಣ.

✧ ✧ ✧

ಅಧ್ಯಾಯ-3

# ಮಾನವ-ಒಂದು ನಿಗೂಢ ಜೀ

**ಭೌ**ತಿಕ ಜಗತ್ತಿನೊಂದಿಗೆ ಮಾನವನಿಗೆಷ್ಟು ಆಳವಾದ ಸಂಬಂಧವಿದೆಯೋ ಅಭೌತಿ ಜಗತ್ತಿನೊಂದಿಗೂ ಅವನು ಸಂಬಂಧವನ್ನು ಹೊಂದಿದ್ದಾನೆ. ಜೀವನದ ನಿಗೂಢತೆಯನ ಭೇದಿಸಲಾಗದ ಮಾನವನು ಅದೆಷ್ಟೋ ವಿಚಾರಗಳಲ್ಲಿ ಅಜ್ಞಾನಿಯಾಗಿದ್ದಾನೆ. ಅವನನ ಸಂದೇಹಗಳಾವರಿಸಿಕೊಂಡಿವೆ. ಆ ಅಂಧಕಾರದಿಂದ ಮುಕ್ತಿ ಹೊಂದುವುದು ಸುಲಭವ ಯಾಕೆಂದರೆ ಮಾನವನ ವ್ಯಕ್ತಿತ್ವ ಎಷ್ಟೇ ಸತ್ಯಸಂಧವೂ ಸರಳವೂ ಆಗಿದ್ದರೂ ಅದು ಸ್ವಲ್ಪ ಜಟಿಲವಾಗಿದೆ. ಆದ್ದರಿಂದಲೇ ಮಾನವನಿಗೆ ತನ್ನ ಜೀವನದ ರಹಸ್ಯ ಅರ್ಥವಾಗಿಲ್ಲ.

ನೋಡಿ, ಬುದ್ಧಿ ಮಾನವನ ಅನುಭವಕ್ಕೆ ವೇದ್ಯವಾಗುವಂತಹ ಅಮೂಲ್ಯ ವ ವಾಗಿದೆ. ಬುದ್ಧಿ ರಹಿತ ಮಾನವನನ್ನು ಊಹಿಸುವುದು ಕಷ್ಟ. ಒಂದರ್ಥದಲ್ಲಿ ಬುದ್ಧಿಯ ಮಾನವರ ಪ್ರಾಣವೆನ್ನಬಹುದು-ಜೀವವೆನ್ನಬಹುದು. ಬುದ್ಧಿಯಿರುವ ಜೀವಿ ಕೇವ ಒಂದು ಪದಾರ್ಥ ಸೃಷ್ಟಿಯಲ್ಲವೆಂದು ಆಧುನಿಕ ಅಧ್ಯಯನಗಳೇ ಸಾಬೀತುಪಡಿಸಿವೆ. ಪ್ರಾಣ ಪದಾರ್ಥಕ್ಕೆ ಹೊರತಾದ ಸ್ವಅಸ್ತಿತ್ವವನ್ನು ಹೊಂದಿದೆ ಎಂದೂ ಅಧ್ಯಯನಗಳಿಂದ ತಿಳಿ ಬಂದಿದೆ.

ಹಾಗಾದರೆ ಬುದ್ಧಿ ಅಥವಾ ಜೀವಕ್ಕೆ ಮೂಲವಿರಲೇಬೇಕಲ್ಲವೇ? ಅದು ಎಲ್ಲಿ ಬಹುದು? ಖಂಡಿತಾ ಈ ಪ್ರಶ್ನೆಗೆ ಉತ್ತರಿಸಲು ವಿಜ್ಞಾನ ಅಸಮರ್ಥವಾಗಿದೆ.

ಆದರೂ ಡಾ। ಬುಕ್(Buck) ಎಂಬವರು ಬುದ್ಧಿಯ ಮೂರು ಹಂತಗಳ ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ.

**1. ಸಾಮಾನ್ಯ ಬುದ್ಧಿ (Simple Consciousness);** ಇದು ಪ್ರಾಣಿಗಳ ಬು ಮಟ್ಟವಾಗಿವೆ. ಪ್ರಾಣಿಗಳು ಯಂತ್ರದಂತೆ ಜೀವಿಸುತ್ತವೆ. ಅದಕ್ಕೆ ವಿಚಾರ ಸಾಮರ್ಥ್ಯವಿ ಅದಕ್ಕೆ ಅತೀಂದ್ರಿಯ ಶಕ್ತಿಯಿಲ್ಲ. ಅವುಗಳಿಗೆ ನಾಗರಿಕತೆ-ಸಂಸ್ಕಾರಗಳಿಲ್ಲ. ಪ್ರಾಣಿಗ ಮರಗಿಡಗಳಂತೆ ಕೇವಲ ಮಾನವರ ಸೇವೆಗಾಗಿರುವ ಸೃಷ್ಟಿಗಳಾಗಿವೆ.

**2. ಆತ್ಮ ಪ್ರಜ್ಞೆ (Set Consciousness);** ಜನಸಾಮಾನ್ಯರು ಈ ಬುದ್ಧಿ ಮಟ್ಟವ ಹೊಂದಿದ್ದಾರೆ. ಮಾನವರಿಗೆ ತಮ್ಮ ಅರಿವು, ನಾಳೆಗಳ ಕುರಿತು ಚಿಂತಿಸುವ ಬುದ್ಧಿ ಶಕ್ತಿಯಿ

ಮಾನವರು ನಶ್ವರವಾದ ಜೀವನದಲ್ಲಿದ್ದು ಶಾಶ್ವತ ಜೀವನಕ್ಕೆ ಪ್ರಯತ್ನಿಸುತ್ತಾರೆ. ಅವರಿಂದ ಸೂಕ್ಷ್ಮ-ಕೋಮಲ ಸುಂದರ ಭಾವನೆಗಳು ವ್ಯಕ್ತವಾಗುತ್ತವೆ. ಈ ಭಾವನೆಗಳ ಆಳವಿಸ್ತಾರವನ್ನು ಅಳತೆ ಮಾಡುವುದು ಸಾಧ್ಯವಿಲ್ಲ. ಮಾನವರಲ್ಲಿ ಅಪರಿಮಿತ ಅನುಭವಗಳು ವ್ಯಕ್ತವಾಗ ಬಹುದು. ಅವರ ಮೆದುಳಿನಲ್ಲಿ ಅಪಾರ ವಿಚಾರಗಳು ಸಂಭವಿಸಬಹುದು. ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್‌ರಿಗೂ ಮೆದುಳಿನ ಸಂಪೂರ್ಣ ಶಕ್ತಿ ಬಳಕೆ ಸಾಧ್ಯವಾಗಿಲ್ಲ ಎಂದು ಮೆದುಳಿನ ಮೇಲೆ ನಡೆದಿರುವ ಅಧ್ಯಯನಗಳು ತಿಳಿಸಿವೆ.

**3. ವಿಶ್ವವ್ಯಾಪಿ ಪ್ರಜ್ಞೆ (Cosmic Consciousness);** ಬುದ್ಧಿಯ ಈ ಮಟ್ಟ ಸಾಮಾನ್ಯ ಬುದ್ಧಿ ಮಟ್ಟಕ್ಕಿಂತ ಉನ್ನತವಾಗಿದೆ. ಜನಸಾಮಾನ್ಯರಲ್ಲಿ ಈ ಬುದ್ಧಿ ಮಟ್ಟವಿರು ವುದಿಲ್ಲ. ಪ್ರವಾದಿಗಳು ಮತ್ತು ಸಂದೇಶವಾಹಕರಲ್ಲಿ ಇದು ಪೂರ್ಣವಾಗಿ ಕಾಣಿಸುತ್ತವೆ.

## ಮಾನವನ ಆತ್ಮ

ಮೆದುಳು ಮಾನವನ ವ್ಯಕ್ತಿತ್ವ-ಬುದ್ಧಿ ಇತ್ಯಾದಿಗಳ ಮೂಲವೆಂದು ಭೌತಿಕವಾದಿಗಳು ಪ್ರತಿಪಾದಿಸುತ್ತಾರೆ. ಈ ಪ್ರತಿಪಾದನೆಯನ್ನು ಅತ್ಯಾಧುನಿಕ ಸಂಶೋಧನೆಗಳು ನಿರಾಕರಿ ಸುತ್ತಿವೆ. ಮೆದುಳು ಮತ್ತು ಬುದ್ಧಿಗಳಿಗೆ ಎರಡು ಪ್ರತ್ಯೇಕ ಅಸ್ತಿತ್ವಗಳಿವೆ. ಮಾನವನ ಬುದ್ಧಿ, ಪ್ರಾಣಿ ಬುದ್ಧಿಯಿಂದ ವಿಕಸನವಾದ ರೂಪವಲ್ಲ, ಅದು ಮೆದುಳಿನ ಚಮತ್ಕಾರವೂ ಅಲ್ಲವೆಂಬ ವಿಚಾರವನ್ನು ಆಧುನಿಕ ಅಧ್ಯಯನಗಳು ಬಹಿರಂಗಪಡಿಸಿವೆ.

ಮಾನವ ಮತ್ತು ಪ್ರಾಣಿಗಳ ಬುದ್ಧಿ ಮಟ್ಟದಲ್ಲಿ ಕೇವಲ ದರ್ಜೆಗಳ ಅಂತರವಲ್ಲ, ಅವೆರಡು ಬೇರೆ ಬೇರೆ ಎರಡು ಪ್ರಕಾರಗಳೆಂಬುದನ್ನೂ ಅಧ್ಯಯನಗಳು ತಿಳಿಸಿವೆ.

ಮಾನವ ಮೆದುಳು ಮತ್ತು ಆತ್ಮಗಳು ಒಂದೇ ಅಲ್ಲ ಎಂದು ಓಸ್ಪೊಂಸ್ಕಿ ಹೇಳಿದ್ದಾರೆ. ಮೆದುಳು ಆತ್ಮವನ್ನು ಮೂರು ಕೋನಗಳಿಂದ ತೋರಿಸುವ ಕನ್ನಡಿಯೆಂದು ಅವರು ಹೇಳಿದ್ದಾರೆ. ಆತ್ಮದ ಸಂಪೂರ್ಣ ಚಿತ್ರವನ್ನು ತೋರಿಸಲು ಮೆದುಳಿಗೆ ಸಾಧ್ಯವಿಲ್ಲ. ಆತ್ಮದ ಒಂದಂಶವನ್ನು ಅದು ತೋರಿಸುತ್ತದೆ. ಒಂದು ವೇಳೆ ಮೆದುಳಿನಲ್ಲಿ ಕೇಡುಂಟಾದರೆ ಆತ್ಮದ ಚಿತ್ರವು ಸರಿಯಾದ ರೀತಿ ಪ್ರಕಟಗೊಳ್ಳದು. ಕನ್ನಡಿ ಬಿದ್ದು ಒಡೆದರೆ ಅದರಲ್ಲಿ ಚಿತ್ರಗಳು ಹೋಳು ಹೋಳಾಗಿ ಕಾಣುತ್ತವೆ. ಆದರೂ ಚಿತ್ರಗಳಿಗೆ ಯಾವ ಹಾನಿಯೂ ಉಂಟಾಗು ವುದಿಲ್ಲ. ಇದರಂತೆ ಮೆದುಳಿನಲ್ಲಿ ನ್ಯೂನತೆಯಾದರೆ ಆತ್ಮಕ್ಕೆ ನ್ಯೂನತೆ ಸಂಭವಿಸುವುದಿಲ್ಲ.[1]

ಮಾನವರು ಸಾಮಾನ್ಯವಾಗಿ ಆತ್ಮಕ್ಕಿಂತ ಶರೀರಕ್ಕೆ ಹೆಚ್ಚು ಗಮನ ನೀಡುತ್ತಾರೆ. ಆದುದರಿಂದ ಅವರಿಗೆ ಆತ್ಮದ ಗುಣಗಳು ಅನುಭವವಾಗುವುದಿಲ್ಲ. ಯಾಕೆಂದರೆ ಮಾನವರು ತಮ್ಮ ಶರೀರ ಪೋಷಣೆಗೇ ಹೆಚ್ಚಿನ ಆದ್ಯತೆ ನೀಡುತ್ತಾರೆ. ಅದು ಆರೋಗ್ಯವಾಗಿರಬೇಕೆಂದು

. Tertiu, Organum, P 164

ಪ್ರಯತ್ನಿಸುತ್ತಾರೆ. ಈ ದೇಹವಲ್ಲದೆ ಬೇರೆಯೇನಿವೆ ಎಂಬ ಪ್ರಜ್ಞೆ ಮಾನವರಿಗಿಲ್ಲ. ಆ ಬಗ್ಗೆ ಚಿಂತಿಸುವುದಕ್ಕೂ ಅವರಲ್ಲಿ ಸಮಯವಿಲ್ಲ.

ಮಾನವನು ಪ್ರಾಪಂಚಿಕ ಸುಖ ಸೌಕರ್ಯಗಳ ಕುರಿತು ಸುಂದರವಾದ ಕನಸನ್ನು ಕಾಣುತ್ತಾನೆ. ಜೀವನ ಮಟ್ಟವನ್ನು ಏರಿಸುವುದಕ್ಕಾಗಿ ಅವನಿಗೆ ಹಣಕಾಸಿನ ಆವಶ್ಯಕತೆಯಿದೆ. ಅದಕ್ಕಾಗಿ ಅವನು ನೌಕರಿ-ಕೆಲಸ, ಉದ್ಯೋಗ ಮಾಡುವುದು. ಹೀಗೆ ಜೀವನದಲ್ಲಿ ವ್ಯಸ್ತನಾಗುವುದರಿಂದ ತನ್ನ ವ್ಯಕ್ತಿತ್ವಕ್ಕೆ ಸಂಬಂಧಿಸಿರುವ ವಿಷಯಗಳನ್ನು ಆಳವಾಗಿ ಅವನು ಚಿಂತಿಸುವುದಿಲ್ಲ. ಇದೇ ರೀತಿ ಮುಂದುವರಿದು ಆತ್ಮದ ಅಸ್ತಿತ್ವವನ್ನೇ ನಿರಾಕರಿಸತೊಡಗುತ್ತಾನೆ. ತನ್ನ ತಪ್ಪನ್ನು ಸಮರ್ಥಿಸುವುದಕ್ಕಾಗಿ ಆಧಾರ ಪುರಾವೆಗಳನ್ನು ಸಂಗ್ರಹಿಸತೊಡಗುತ್ತಾನೆ. ತನ್ನ ವಾದ ನಿರಾಧಾರವಲ್ಲವೆಂದು ಸ್ವತಃ ತನ್ನನ್ನೇ ತೃಪ್ತಿಪಡಿಸಬೇಕಾಗುತ್ತದೆ.

ಆದುದರಿಂದ ಯಾರೋ ಮಹಾನುಭಾವರು "You are soul with a body rather than a body with a soul" ಎಂದು ಉಲ್ಲೇಖಿಸಿದ್ದಾರೆ ಎನ್ನಬಹುದು.

"ಮಾನವಾ! ವಾಸ್ತವದಲ್ಲಿ ನೀನು ಒಂದು ಆತ್ಮವಾಗಿದ್ದಿ! ಅದಕ್ಕೆ ಶರೀರ ದೊರಕಿತು. ಆದರೆ ನೀನು ಆತ್ಮವನ್ನು ಹೊಂದಿದ ಒಂದು ಶರೀರವಲ್ಲ" ಎಂದು ಈ ಹೇಳಿಕೆಯ ಅರ್ಥವಾಗಿದೆ.

## ನೈತಿಕ ಪ್ರಜ್ಞೆ

ಮಾನವನಲ್ಲಿ ಬುದ್ಧಿಯಂತೆ ನೈತಿಕ ಪ್ರಜ್ಞೆಯೂ ಇದೆ. ಅದು ಅವನಿಗೆ ಒಳಿತು ಮತ್ತು ಕೆಡುಕುಗಳ ವ್ಯತ್ಯಾಸವನ್ನು ತೋರಿಸುವುದು. ನೈತಿಕ ಪ್ರಜ್ಞೆಯಿಂದಾಗಿ ಅವನು ಉತ್ತಮ ಮತ್ತು ಕೆಟ್ಟ ಕೆಲಸಗಳ ಅಂತರವನ್ನು ಅರಿಯುತ್ತಾನೆ. ಮಾನವನಿಗೆ ಕಾಣುವ ಶರೀರ ಮಾತ್ರವಲ್ಲ, ಅವನ ಬೇರೆಯೂ ಅಸ್ತಿತ್ವಗಳಿವೆ ಎಂಬುದಕ್ಕೆ ಈ ನೈತಿಕ ಪ್ರಜ್ಞೆ ಒಂದು ಆಧಾರವಾಗಿದೆ. ಮಾನವರಲ್ಲಿ ಯಾವಾಗಲೂ ಒಳಿತು ಕೆಡುಕುಗಳ ಅರಿವು ಇರುತ್ತವೆ. ಪ್ರಾಚೀನ ನಾಗರಿಕತೆಗಳಲ್ಲಿ ನೈತಿಕ ಪ್ರಜ್ಞೆಯಿತ್ತು. ಆ ಕಾಲದಲ್ಲಿಯೂ ಅವನು ನೈತಿಕತೆಯ ಅರಿವು ಹೊಂದಿದ್ದನೆಂದು ಐತಿಹಾಸಿಕ ಅಧ್ಯಯನಗಳು ದೃಢಪಡಿಸಿವೆ. ಪವಿತ್ರ ಕುರ್‌ಆನ್ ಈ ರೀತಿ ವಿಶ್ಲೇಷಿಸಿದೆ.

**"ಮಾನವ ಚಿತ್ತದ ಹಾಗೂ ಅದನ್ನು ಸುಗಮಗೊಳಿಸಿದವನಾಣೆ, ಆ ಬಳಿಕ ಅವನು ಅದರ ದುಷ್ಟತೆಯನ್ನೂ ಅದರ ಸಾತ್ವಿಕತೆಯನ್ನೂ ಅದಕ್ಕೆ ಪ್ರೇರೇಪಿಸಿದನು"**

**(ಪವಿತ್ರ ಕುರ್‌ಆನ್, 91:7-8)**

## ಆಧ್ಯಾತ್ಮಿಕ ಪ್ರಜ್ಞೆ

ಮಾನವನಲ್ಲಿ ನೈತಿಕ ಪ್ರಜ್ಞೆಯಲ್ಲದೆ ಆಧ್ಯಾತ್ಮಿಕ ಪ್ರಜ್ಞೆಗಳೂ ಗೋಚರಿಸುತ್ತಿವೆ. ಆಧ್ಯಾತ್ಮದ ಹಸಿವು ಆರಂಭವಾದ ಹಂತದಲ್ಲಿ ತನ್ನ ಆರಾಧ್ಯನನ್ನು ಅವನು ಹುಡುಕ ತೊಡಗುತ್ತಾನೆ

ಥವಾ ಆ ಪ್ರಯತ್ನವನ್ನು ಆರಂಭಿಸಿರುವಂತೆ ಭಾಸವಾಗುತ್ತದೆ. ಅಂದರೆ ಅವನೊಳಗೆ ುದು ಭಿನ್ನ (ಆಧ್ಯಾತ್ಮದ) ದಾಹ ಹುಟ್ಟಿದೆಯೆಂದು ಅರ್ಥ. ಯಾರಿಗೂ ಸತ್ಯವು ಅರಿವಾಗ ೇಕಾದರೆ ಇಂತಹ ದಾಹಗಳು (ಆಧ್ಯಾತ್ಮದ ತುಡಿತ) ಆರಂಭಗೊಳ್ಳುವುದು ಪ್ರಮುಖ ಗಿದೆ. ಅಗೋಚರವಾದ ದೇವನನ್ನು ಹುಡುಕುತ್ತಾ ಮಾನವನು ತನ್ನ ಆಧ್ಯಾತ್ಮಿಕ ದಾಹವನ್ನು ೕಸಲು ಪ್ರಯತ್ನಿಸುತ್ತಾನೆ. ಅವನಿಗೆ ತನ್ನ ಆರಾಧ್ಯನನ್ನು ಕಾಣಬೇಕಾಗಿದೆ. ತನ್ನನ್ನು ೇವನಿಗೆ ಸಮರ್ಪಿಸಿ ಶಾಂತಿ ಮತ್ತು ನೆಮ್ಮದಿ ಹೊಂದಬೇಕಾಗಿದೆ.

ಅದಲ್ಲದೆ ಪ್ರತಿಯೊಬ್ಬ ಮಾನವನಿಗೂ ಅಂತರಾತ್ಮ(Conscience)ವಿದೆ. ಅದು ಾನವನನ್ನು ಸದಾ ಜಾಗೃತಗೊಳಿಸುವ ಕೆಲಸ ನಿರ್ವಹಿಸುತ್ತಿದೆ. ಮಾನವನು ಕೆಟ್ಟ ಕಾರ್ಯಕ್ಕೆ ಡಗುವಾಗ ಎಚ್ಚರಿಸುತ್ತದೆ. ಈ ಧ್ವನಿಯನ್ನು ಅಣಗಿಸಲು ಮಾನವನಿಂದ ಸಾಧ್ಯವಿಲ್ಲ. ಷ್ಟಿಕರ್ತನು ಇದನ್ನು ಸೃಷ್ಟಿಯ ಮೂಲದೊಂದಿಗೇ ಮಾನವನಲ್ಲಿರಿಸಿದ್ದಾನೆ. ಆದುದರಿಂದ ದರ ಮೇಲೆ ಮಾನವನ ನಿಯಂತ್ರಣವಿಲ್ಲ. ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ.

**"ಅಲ್ಲ; ನಾನು ಪುನರುತ್ಥಾನ ದಿನದ ಆಣೆ ಹಾಕುತ್ತೇನೆ- ಮತ್ತು ಅಲ್ಲ, ನಾನು ಳಿಯುವ ಚಿತ್ತದ ಆಣೆ ಹಾಕುತ್ತೇನೆ." (ಪವಿತ್ರ ಕುರ್‌ಆನ್, 75:1-2)**

ಮಾನವನು ಅನುಚಿತ ಕಾರ್ಯಕ್ಕಿಳಿದಾಗ ಅಂತರಾತ್ಮ ಅವನನ್ನು ಎಚ್ಚರಿಸುತ್ತದೆ. ಇದು ತ್ಮದ ಗುಣವೆಂದು ಪವಿತ್ರ ಕುರ್‌ಆನ್‌ನಿಂದ ತಿಳಿದು ಬರುತ್ತದೆ. ಯಾವುದು ಸರಿ ಮತ್ತು ಾವುದು ತಪ್ಪು ಕೆಲಸವೆಂದು ತಿಳಿಸಿ ತಪ್ಪು ಕೆಲಸದಿಂದ ದೂರವಿರುವಂತೆ ಆತ್ಮವು ೇರೇಪಿಸುತ್ತದೆ. ಕೆಟ್ಟ ಕಾರ್ಯವು ಆತ್ಮದ ಪ್ರಕಾಶಕ್ಕೆ ಕಳಂಕವಾಗಿದೆ. ಒಟ್ಟಾರೆ ಮಾನವನಲ್ಲಿರುವ ವೆಲ್ಲವೂ ಸತ್ಯದ ದೊಡ್ಡ ಆಧಾರ ಪ್ರಮಾಣಕ್ಕಿರುವ ಸೂಚಕಗಳಾಗಿವೆ.

## ಂದರ್ಯ(ಅಲಂಕಾರ) ಪ್ರಜ್ಞೆ

ಮಾನವರಲ್ಲಿ ನವಿರಾದ ಸೌಂದರ್ಯ ಪ್ರಜ್ಞೆಯು ಗೋಚರಿಸುತ್ತದೆ. ಇದು ಕೂಡಾ ಾನವನಿಗೆ ನೈತಿಕ ಪ್ರಜ್ಞೆಯಂತೆ ಪ್ರಾಮುಖ್ಯವಾಗಿದೆ. ಅದರಿಂದ ಅಭಿರುಚಿಯು ವ್ಯಕ್ತ ಳ್ಳುವುದು. ಸೌಂದರ್ಯವು ಅಭಿರುಚಿಗನುಗುಣವಾದುದು. ಸೌಂದರ್ಯವನ್ನು ಯಾವ ಸ್ತುವೂ ಸ್ವಯಂ ಪ್ರಕಟಿಸುವುದಿಲ್ಲ. ನಮ್ಮ ವಿಚಾರಗಳಿಗೆ ತಕ್ಕಂತೆ ಸೌಂದರ್ಯ ಪ್ರಜ್ಞೆ ಬರುತ್ತದೆ. ಪವಿತ್ರ ಕುರ್‌ಆನ್ ಅದನ್ನು ಈ ರೀತಿ ಉಲ್ಲೇಖಿಸಿದೆ.

**"ವಾಸ್ತವದಲ್ಲಿ ಇವರ ಪೈಕಿ ಯಾರು ಉತ್ತಮ ಕರ್ಮಗಳನ್ನು ಮಾಡುತ್ತಾರೆಂದು ರೀಕ್ಷಿಸಲಿಕ್ಕಾಗಿ ನಾವು ಈ ಭೂಮಿಯಲ್ಲಿರುವ ಎಲ್ಲ ವಸ್ತುಗಳನ್ನು ಭೂಮಿಗೆ ಅಲಂಕಾರ ನ್ನಾಗಿ ಮಾಡಿರುತ್ತೇವೆ." (ಪವಿತ್ರ ಕುರ್‌ಆನ್, 18:7)**

ಮಾನವನು ವಾಸಿಸುವ ಭೂಮಿ ಆಕರ್ಷಕವಾಗಿದೆ. ಅದನ್ನು ಸುಂದರವಾಗಿರಿಸ ಲಾಗಿ ಎಂದು ಪವಿತ್ರ ಕುರ್‌ಆನಿನ ಈ ವಚನಗಳು ವ್ಯಾಖ್ಯಾನಿಸುತ್ತಿವೆ.

ಭೂಮಿಯಲ್ಲಿ ಕೆಲವು ಕಡೆ ಹಸಿರು ತುಂಬಿದ ಕಾಡುಗಳಿವೆ. ಹಸಿರಿನಿಂದ ನಳನಳಿಸು ಗದ್ದೆ ತೋಟಗಳಿವೆ. ಹೂದೋಟಗಳಲ್ಲಿ ಸುಂದರವಾದ ಹೂವುಗಳು ಅರಳುವುದನ್ನು ನಾ ಕಾಣುತ್ತೇವೆ. ಕೋಗಿಲೆಯ ಇಂಪಾದ ಧ್ವನಿಯನ್ನು ನಾವು ಕೇಳುತ್ತೇವೆ. ಕೆಲವು ಕಡೆ ಚುಕ್ಕಿಗ ರುವ ಜಿಂಕೆಗಳಿವೆ. ತುಂಬಿ ಹರಿಯುವ ತೊರೆಗಳಿವೆ. ಈ ರೀತಿ ಭೂಮಿಯು ಸರ್ವಾಲಂಕಾ ಭೂಷಿತವಾಗಿದೆ. ಬೇರೆ ಬೇರೆ ಋತುಗಳ ಆಗಮನದಿಂದ ಭೂಮಿ ಮತ್ತಷ್ಟು ಶೃಂಗರಿ ಕೊಳ್ಳುತ್ತದೆ. ದೇವನು ಮಾನವನಿಗೆ ವಾಸಕ್ಕಾಗಿ ಇಷ್ಟೊಂದು ಅಂದ ಚೆಂದದ ವ್ಯವಸ್ಥೆ ಮಾಡಿ ವುದಾದರೆ ಮಾನವ ಜೀವನ ಅಂದಗೆಡುವುದನ್ನು ಹೇಗೆ ಬಯಸಿಯಾನು? ಅದಕ್ಕೂ ಅವನ ವ್ಯವಸ್ಥೆ ಮಾಡಿರಬೇಕಲ್ಲವೇ? ಉತ್ತಮ ಕರ್ಮ ಸಚ್ಚಾರಿತ್ರ್ಯದಿಂದ ಮಾನವ ಜೀವನ ಸುಂದ ವಾಗುವುದು. ಪವಿತ್ರ ಕುರ್‌ಆನ್ ಮಾನವನ ಸೌಂದರ್ಯವನ್ನು ಈ ರೀತಿ ವಿವರಿಸುತ್ತಿ

**"ವಾಸ್ತವದಲ್ಲಿ ಇವರ ಪೈಕಿ ಯಾರು ಉತ್ತಮ ಕರ್ಮಗಳನ್ನು ಮಾಡುತ್ತಾರೆಂದ ಪರೀಕ್ಷಿಸಲಿಕ್ಕಾಗಿ." (ಪವಿತ್ರ ಕುರ್‌ಆನ್, 18:7)**

## ಮನೋ ವೈಜ್ಞಾನಿಕ ದೃಷ್ಟಿಕೋನ

ಮಾನವನು ಕುಬ್ಜನಾಗಿರುವುದನ್ನು , ಅನಾದರಕ್ಕೊಳಗಾಗುವುದನ್ನು ಮನಸ್ಸು ಸಹಿಸದ ಎಂಬ ವಿಚಾರವು ಮನೋ ವೈಜ್ಞಾನಿಕ ಅಧ್ಯಯನಗಳಿಂದ ಸ್ಥಿರವಾಗಿದೆ. ಅದು ಮಾನವನಿ ಪ್ರತಿಷ್ಠೆ ಲಭಿಸಲೆಂದು ಹಾರೈಸುತ್ತಿರುತ್ತದೆ. ಮಾನವನೊಳಗಿನ ಪ್ರಕೃತಿದತ್ತ ಅಭಿರುಚಿಗಳು, ಆ ಪ್ರಜ್ಞೆ (Self Consciousness) ಮತ್ತು ಆತ್ಮ ಗೌರವಗಳು (Self Respect) ತನ್ನ ಗೌರವ ಸಂಕಲ್ಪಗಳನ್ನು ಅರಿಯುತ್ತವೆ. ಇದು ಮಾನವನ ವ್ಯಕ್ತಿತ್ವದ ದೃಷ್ಟಿಯಿಂದ ಮಹತ್ವದ್ದಾಗಿ ಅದನ್ನು ರಕ್ಷಿಸುವುದು, ಅದನ್ನು ಅಭಿವೃದ್ಧಿಪಡಿಸುವುದು ಮಾನವನ ಕರ್ತವ್ಯವೇ ಸರಿ.

ಆದರೆ ಮಾನವನ ವ್ಯಕ್ತಿತ್ವಕ್ಕೊಂದು ಮೂಲ(Important Personality)ವಿದೆ. ಮೂಲ ಪರಮ ವ್ಯಕ್ತಿತ್ವ (Supreme Personality) ಎಂಬುದು ನಾವು ಅರಿತಿರಬೇಕು. ಅದ ನಿರ್ಜೀವ ವಸ್ತುವಲ್ಲ ಎಂದು ಸಾಮಾನ್ಯ ಜ್ಞಾನಕ್ಕೂ ಅರಿಯುವುದು. ಒಂದರ್ಥದಲ್ಲಿ ಭೌತಿ ಜಗತ್ತಿನಲ್ಲಿ ಮಾನವನು ಪರಮ ವ್ಯಕ್ತಿತ್ವದ (Supreme Personality) ಪ್ರತ್ಯ ಪ್ರಮಾಣವಾಗಿದ್ದಾನೆ. ಹೀಗೆ ಈ ಜಗತ್ತಿನ ಹಿಂದೆ ಮಹಾನ್ ಸತ್ಯವೊಂದು ಖಂಡಿ ವಾಗಿಯೂ ಕ್ರಿಯಾಶೀಲವಾಗಿದೆಯೆಂದು ಅರಿತುಕೊಳ್ಳಬಹುದು. ಅದನ್ನು ನಾವು ಆಳವಾ ತಿಳಿಯಲು ಅಸಮರ್ಥರಾಗಿದ್ದೇವೆ ಅಷ್ಟೇ. ಹೀಗಿದ್ದರೂ ಜಗತ್ತಿಗೊಂದು ಮಹಾ ಉದ್ದೇಶವಿ ಯೆಂದು ನಮಗೆ ಅರಿವಾಗುತ್ತದೆ. ಹೌದು, ಆ ಉದ್ದೇಶಕ್ಕೆ ಅನುಗುಣವಾಗಿ ಜನಸಂಚಾ ನಡೆಯುತ್ತಿದೆ ಎಂಬ ನಂಬಿಕೆ ನಮ್ಮಲ್ಲಿ ಮೂಡುತ್ತದೆ.

# ಪ್ರತ್ಯಕ್ಷ ಮತ್ತು ಪರೋಕ್ಷ

ಜೀವಿಯಲ್ಲಿ ಕೆಲವು ಅಂಶಗಳು ಪ್ರತ್ಯಕ್ಷವಾಗಿ ಗೋಚರಿಸುತ್ತಿವೆ. ಆದರೆ ಅದರಲ್ಲಿ (Unseen) ಅದೃಶ್ಯ ಅಂಶವೇ ಹೆಚ್ಚಾಗಿವೆ ಮತ್ತು ನಮ್ಮ ಕಣ್ಣಿಗೆ ಕಾಣಿಸುವ ಅಂಶಗಳಿಗಿಂತ ಹೆಚ್ಚು ಅವು ಅಮೂಲ್ಯವಾಗಿದೆ. ಶರೀರ ಎಲ್ಲರ ಕಣ್ಣಿಗೂ ಕಾಣಿಸುವುದಿಲ್ಲವೇ? ಆದರೆ ಆತ್ಮ ಮತ್ತು ಅದರ ಗುಣಗಳು ಅದೃಶ್ಯವಾಗಿವೆ. ಯಾರಿಗೂ ಅದನ್ನು ಪ್ರತ್ಯಕ್ಷವಾಗಿ ನೋಡಲು ಸಾಧ್ಯವಿಲ್ಲ. ನಿಜಕ್ಕಾದರೆ ಹೊರಗೆ ಕಾಣಿಸುತ್ತಿರುವ ಅಂಶಗಳಿಗಿಂತ ಮರೆಯಲ್ಲಿರುವ ಅಂಶಗಳು ಅಧಿಕವಾಗಿವೆ. ಸಾಗರದಲ್ಲಿ ತೇಲಾಡುವ ಮಂಜುಗಡ್ಡೆಗೆ ಸಮಾನ (Ice Burg) ಎಂದು ಇದನ್ನು ಹೋಲಿಸಬಹುದಾಗಿದೆ. ಸಮುದ್ರದಲ್ಲಿ ತೇಲಾಡುವ ಮಂಜುಗಡ್ಡೆಯ ಸ್ವಲ್ಪ ಭಾಗ ಮಾತ್ರ ಹೊರಗೆ ಕಾಣುತ್ತದೆ. ಹೆಚ್ಚಿನ ಭಾಗ ನೀರಿನೊಳಗೆ ಮುಳುಗಿರುತ್ತದೆ ಯಲ್ಲವೇ? ಹೌದು, ಮಂಜುಗಡ್ಡೆಯ ಸಮುದ್ರದೊಳಗಿನ ದೊಡ್ಡ ಭಾಗ ಹೊರಗೆ ಗೋಚರಿಸುವುದೇ ಇಲ್ಲ.

ಇದೇ ರೀತಿಯಲ್ಲಿ ಮಾನವನು ಎಷ್ಟು ಹೊರಗೆ ಕಾಣುವನೋ ಅದಕ್ಕಿಂತ ಹೆಚ್ಚಿನ ಭಾಗ ಈ Ice Burgನಂತೆ ಅಗೋಚರವಾಗಿ ಉಳಿದಿದ್ದಾನೆ. ನಮಗೆ ನಾವು ಭೂಮಿಯಲ್ಲಿ ವಾಸಿಸುತ್ತೇವೆಂದು ಗೊತ್ತು. ಆದರೆ ನಾವಿಲ್ಲಿ ಯಾಕೆ ವಾಸಿಸುತ್ತಿದ್ದೇವೆ. ನಮ್ಮ ವಾಸಕ್ಕೊಂದು ಉದ್ದೇಶವಿದೆಯೇ, ನಮ್ಮ ಜೀವನ ಪ್ರಯಾಣಕ್ಕಿರುವ ಗುರಿ ಯಾವುದು? ನಮ್ಮ ಈ ಜೀವನದಲ್ಲಿ ನಾವು ಯಾವ ಕರ್ತವ್ಯಗಳನ್ನು ಪೂರೈಸಲಿಕ್ಕಿದೆ? ಈ ಜಗತ್ತಿಗೆ ಪಾಲಕ ಪ್ರಭು ಇದ್ದಾನಲ್ಲವೆ! ಇದ್ದರೆ ಅವನ್ಯಾರು? ಅವನು ಈ ಜಗತ್ತನ್ನು ಯಾವ ಯೋಜನೆಗನುಗುಣವಾಗಿ ಮುನ್ನಡೆಸುತ್ತಿದ್ದಾನೆ. ಈ ಪ್ರಶ್ನೆಗೆ ಉತ್ತರ ಯಾವುದೇ ಶಿಲೆಯಲ್ಲಿ ಕೆತ್ತಿರಿಸಲಾಗಿಲ್ಲ. ಆದುದರಿಂದ ಜನರು ಹೋಗಿ ಓದಿ ಇವನ್ನು ಅರಿತುಕೊಳ್ಳುವುದು ಸಾಧ್ಯವಿಲ್ಲ. ಆದುದರಿಂದ ಖಂಡಿತವಾಗಿಯೂ ಇದು ಜಟಿಲವಾದ ಪ್ರಶ್ನೆಯಾಗಿದೆ.

ಈ ಪ್ರಶ್ನೆಗೆ ಸರಿಯಾದ ಉತ್ತರ ಸಿಗದೆ ನಾವು ಯಾವ ಜೀವನ ದರ್ಶನವನ್ನೇ ಪ್ರಸ್ತುತಪಡಿಸಿದರೂ ಅದು ಅಪೂರ್ಣವಾಗುತ್ತದೆ. ಅದು ಜೀವನದ ಸರಿಯಾದ ದರ್ಶನವೇ ಆಗಲಾರದು. ಅದು ಕೇವಲ ತಪ್ಪು ನ್ಯೂನತೆಗಳಿರುವ ದರ್ಶನವಾಗಿ ಬಿಡುವುದು. ಹೀಗಾಗಿ ಬುದ್ಧಿ ಶಕ್ತಿಯಿಂದ ಮಾನವರು ರೂಪಿಸುವ ಜೀವನ ದರ್ಶನಗಳ ಮೇಲೆ ಹೇಗೆ ಭರವಸೆ ಯಿರಿಸಲು ಸಾಧ್ಯ? ಈ ಮೊದಲೇ ನಾವು ಮಾನವ ಬುದ್ಧಿ ಪರಿಪೂರ್ಣವಲ್ಲ, ಸತ್ಯದೆಡೆಗೆ ತಲುಪಲು ಅದು ಸಮರ್ಥವಾಗಿಲ್ಲ ಎಂದು ಅರಿತಿದ್ದೇವೆಯಷ್ಟೆ. ಆದುದರಿಂದ ನಮ್ಮ ಬುದ್ಧಿ ನಮಗಾಗಿ ಒಂದು ಜೀವನ ದರ್ಶನ ರೂಪಿಸಿದರೆ ಅರ್ಥ ಶೂನ್ಯವಾಗುತ್ತದೆ.

ಯಾಕೆಂದರೆ ಮಾನವನ ಜೊತೆ ಅದು ಒಂದು ಹಂತದವರೆಗೆ ಮಾತ್ರ ಬರಬಹುದು. ಆಮೇಲೆ ಅದಕ್ಕೆ ಏನೂ ಹೊಳೆಯದು. ಈ ಜಗತ್ತಿನಲ್ಲಿ ಅದೃಶ್ಯವಾದುದೇನು. ಅದು ಯಾವ ಸೂಚನೆಗಳನ್ನು ನಮಗೆ ನೀಡುತ್ತಿವೆ. ಆ ಸೂಚನೆಗಳು ನಮ್ಮನ್ನು ಹೇಗೆ ತಲುಪುತ್ತಿವೆ? ನಮ್ಮ

ಜೀವನದ ಗುರಿ ಯಾವುದು? ವಿನಾಶವಂತೂ ನಮ್ಮ ಗುರಿಯಾಗಲು ಸಾಧ್ಯವಿಲ್ಲ ಎಂಬಂಶವನ್ನು ನಮ್ಮ ಬುದ್ಧಿಯೇ ತಿಳಿಸುತ್ತದೆ. ಹಾಗಾದರೆ ಶಾಶ್ವತ ಜೀವನ ದೆಡೆಗೆ ಸಾಗುವುದು, ಪರಮಸತ್ಯದೊಂದಿಗೆ ಐಕ್ಯವಾಗುವುದು ನಮ್ಮ ಜೀವನದ ಕರ್ತವ್ಯ ವಿರಬಹುದು. ಹಾಗಿದ್ದರೆ ಈ ಕರ್ತವ್ಯ ನಿಭಾವಣೆಯಿಂದ ಪರಮ ಸತ್ಯದ ಸಮೀಪಕ್ಕೆ ತಲುಪುವ ಅರ್ಹತೆ ದೊರೆಯುತ್ತದೆ. ನಮ್ಮ ಉದ್ದೇಶ ಆಗ ಯಶಸ್ವಿಯಾಗುವುದು. ಆ ಮೂಲಕ ನಾವು ವೈಫಲ್ಯ ಮತ್ತು ಸರ್ವನಾಶದಿಂದ ಪಾರಾಗುತ್ತೇವೆ ಎಂದಾಯಿತು.

ಹೌದು, ದೇವನ ಕುರಿತು ನಮ್ಮ ನಿರ್ಲಕ್ಷ್ಯ ನಮ್ಮನ್ನು ದೇವನಿಂದ ವಿಮುಖ ಗೊಳಿಸುತ್ತದೆ. ದೇವ ಸಾಮೀಪ್ಯವನ್ನು ಅಲಕ್ಷ್ಯದಿಂದ ನಾವು ಸಾಧಿಸಲಾರೆವು ಎಂದು ನಮ್ಮ ಬುದ್ಧಿಗೆ ಹೊಳೆಯುತ್ತದೆ. ಜನರ ಮೇಲೆ ದೌರ್ಜನ್ಯ-ಅಕ್ರಮ-ಅನ್ಯಾಯಗಳನ್ನೆಸಗಿ ದೇವನಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ನಮ್ಮಿಂದ ಸಾಧ್ಯವಾದೀತೆ? ಖಂಡಿತವಾಗಿಯೂ ಮಾನವರ ದೌರ್ಜನ್ಯ ನೀತಿ ದೇವ ಪ್ರಕೋಪಕ್ಕೆ ಕಾರಣವಾಗುವುದೆಂದು ನಮ್ಮ ಅಂತಃಪ್ರಜ್ಞೆಯೇ ಸೂಚನೆ ನೀಡುತ್ತಿದೆ. ನಮ್ಮ ಬುದ್ಧಿ ನಿಜವನ್ನೇ ಹೇಳುತ್ತಿರಬಹುದೇ ಎಂಬುದು ನಮಗೆ ಸ್ಪಷ್ಟವಾಗುವ ತನಕ ನಮ್ಮ ಆತಂಕ ಕೊನೆಗೊಳ್ಳುವುದಿಲ್ಲ.

"ನಾವು ಒಂದು ವೇಳೆ ಸರಿಯಾದ ಪರಿಣಾಮದೆಡೆಗೆ ಸಾಗಿದರೂ ನಮ್ಮ ಅಭಿಪ್ರಾಯಗಳು ಸರಿಯಿದೆಯೇ ಎಂದು ನಿರ್ಧರಿಸಲಾರೆವು" ಎಂಬ ಕಾರ್ಲ್ ಪೂಪರ್‌ರ ಅಭಿಮತದಂತೆ ನಮ್ಮಲ್ಲಿರುವ ಸಂಶಯ-ಶಂಕೆಗಳು ದೂರವಾಗುವುದಿಲ್ಲ. ಸಂದೇಹ ಪರಿಹಾರ ವಾಗಲು ನಮಗೆ ಬುದ್ಧಿಯ ಮಾರ್ಗದರ್ಶನವಲ್ಲದೆ ಬೇರೆ ಮಾರ್ಗದರ್ಶನಗಳು ಆವಶ್ಯಕ ವಾಗಿದೆ ಎಂದು ಸ್ಪಷ್ಟವಾಗುತ್ತವೆ. ಅಂದರೆ ನಮಗೆ ದೇವ ಮಾರ್ಗದರ್ಶನ ಆವಶ್ಯಕವಾಗಿ ದೊರೆಯಬೇಕು. ಅದು ಮಾನವರಿಗೆ ಕೇವಲ ದೇವನ ಸಂದೇಶವಾಹಕರಿಂದ ಮಾತ್ರವೇ ತಲುಪುವುದು. ಈ ಮಾರ್ಗದರ್ಶನದ ಮಾಧ್ಯಮವನ್ನು 'ರಿಸಾಲತ್' (ಪ್ರವಾದಿತ್ವ) ಎಂದು ಕರೆಯುತ್ತೇವೆ.

ಬುದ್ಧಿಯ ಮೇಲೆ ಮಾತ್ರ ಭರವಸೆಯನ್ನಿಡುವವರು ಬುದ್ಧಿಯೇತರ ಮಾರ್ಗದರ್ಶನದ ವಿಧಾನಗಳನ್ನು ಒಪ್ಪಲಾರರು. ಅಂದರೆ ಅವರು ಪ್ರವಾದಿತ್ವವನ್ನು ನಿರಾಕರಿಸುವ ಅಪರಾಧ ವೆಸಗುತ್ತಿದ್ದಾರೆ ಎಂದಾಯಿತು. ಇವರನ್ನು ಪವಿತ್ರ ಕುರ್‌ಆನ್ ಪ್ರಶ್ನಿಸುವುದನ್ನು ನೋಡಿ,

**"ಇವರು ಬರೆದಿಡುತ್ತಿರುವಂತಹ ಪರೋಕ್ಷ ಜ್ಞಾನವೇನಾದರೂ ಇವರ ಬಳಿ ಇದೆಯೇ?"**

**(ಪವಿತ್ರ ಕುರ್‌ಆನ್, 68:47)**

**"ಅವನು ಸತ್ಯವನ್ನು ಕಾಣಲು ಅವನ ಬಳಿ ಅದೃಶ್ಯದ ಜ್ಞಾನ ಇದೆಯೇ?"**

**(ಪವಿತ್ರ ಕುರ್‌ಆನ್, 53:35)**

"ಇವನಿಗೆ ಅಗೋಚರ ವಿಷಯಗಳ ಸುಳಿವು ಸಿಕ್ಕಿ ಬಿಟ್ಟಿರುವುದೇ? ಅಥವಾ ಇವನು ರಹ್ಮಾನನಿಂದ ಏನಾದರೂ ಕರಾರು ಪಡೆದಿರುವನೇ?" (ಪವಿತ್ರ ಕುರ್‌ಆನ್, 19:78)

ಪವಿತ್ರ ಕುರ್‌ಆನಿನ ಈ ವಚನಗಳು ಸಾಮಾನ್ಯ ಜನರು ಪರೋಕ್ಷ ಜ್ಞಾನ ಹೊಂದಿಲ್ಲ ಎಂದು ತಿಳಿಸುತ್ತವೆ. ಪರೋಕ್ಷಕ್ಕೆ ಸಂಬಂಧಿಸಿದ ಸಂಪೂರ್ಣ ಜ್ಞಾನವಿಲ್ಲದೆ ನಾವು ಜೀವನಕ್ಕಾಗಿ ರೂಪಿಸುವ ಪ್ರಣಾಳಿಕೆಗಳು ಸಂದೇಹ ಭ್ರಮೆಗಳಿಂದ ಮುಕ್ತವಾಗಲಾರದು. ಹೀಗೆ ಬುದ್ಧಿಯ ಮಾರ್ಗದರ್ಶನದ ಹೊರತಾದ ಇತರ ಮಾರ್ಗದರ್ಶನಗಳೂ ಇವೆ ಎಂದು ನಮಗೆ ತಿಳಿಯುತ್ತದೆ. ಈ ಮಾರ್ಗದರ್ಶನ ಮಾನವನಿಗೆ ಅಲಭ್ಯವಾದರೆ ಜೀವನ ಸಾಗರದಲ್ಲಿ ಚುಕ್ಕಾಣಿ ಕಡಿದುಕೊಂಡ ನಾವೆಯನ್ನು ಹುಡುಕುವ ಸ್ಥಿತಿ ಅವನಿಗೆ ಬಂದೊದಗುವುದು. ಈ ಸ್ಥಿತಿಯು ಪರಮ ಪ್ರಭುತ್ವದ ಮಹಿಮೆ ಅನುಗ್ರಹಗಳಿಗೆ ವಿರುದ್ಧವಾಗಿದೆ.

ನಮ್ಮ ಸಣ್ಣಪುಟ್ಟ ಆವಶ್ಯಕತೆಗಳನ್ನು ಕಡೆಗಣಿಸದಾತನೇ ನಮಗೆ ಪ್ರಾಣವನ್ನು ವರದಾನವಾಗಿ ನೀಡಿದವನು. ನಮ್ಮನ್ನು ಈ ಭೂಮಿಯಲ್ಲಿ ವಾಸ್ತವ್ಯ ಹೂಡಿಸಿದವನು ಖಂಡಿತವಾಗಿಯೂ ನಮ್ಮ ಮಾರ್ಗದರ್ಶನಕ್ಕೂ ವ್ಯವಸ್ಥೆ ಮಾಡಿದ್ದಾನೆ.

ನೋಡಿ, ಈ ಭೂಮಿಯಲ್ಲಿ ನಮಗೆ ಹಸಿವಾಯಿತೆಂದರೆ ಅನ್ನಾಹಾರಗಳು ದೊರೆಯುತ್ತವೆ. ಖಾದ್ಯ ಪದಾರ್ಥಗಳು, ತರಕಾರಿಗಳು ದೊರೆಯುತ್ತವೆ. ಇಷ್ಟೇ ಅಲ್ಲ ಹಲವು ರೀತಿಯ ರುಚಿ ರುಚಿಯಾದ ಫಲ ವಸ್ತುಗಳು ಇಲ್ಲಿ ನಮಗೆ ದೊರೆಯುತ್ತವೆ. ಮಾತ್ರವಲ್ಲ ಜಗತ್ತಿನ ಎಲ್ಲ ವಸ್ತುಗಳಲ್ಲಿ ನಮ್ಮ ಸೌಂದರ್ಯ ಪ್ರಜ್ಞೆಯ ತೃಪ್ತಿಗಾಗಿ ಸೌಂದರ್ಯವನ್ನು ಕೂಡಾ ಇರಿಸಲಾಗಿದೆ. ನಮ್ಮ ಕಣ್ಣ ತಂಪಿಗಾಗಿ ತರತರದ ಸುಂದರ ಹೂಗಳು ಅರಳುತ್ತಿವೆ. ನಮ್ಮ ಆಘ್ರಾಣ ಶಕ್ತಿಗಾಗಿ ವಿಭಿನ್ನ ಪ್ರಕಾರದ ಸುಂಗಧಗಳಿವೆ.

ಹೀಗೆ ನಮ್ಮ ಮನೋ ಪ್ರವೃತ್ತಿ ಅಭಿರುಚಿಗಳತ್ತ ಸಂಪೂರ್ಣ ಗಮನ ನೀಡಲಾಗಿದೆ. ಎಲ್ಲಿಯೂ ನಮ್ಮ ಬಯಕೆಗಳನ್ನು ಉಪೇಕ್ಷಿಸಿರುವುದು ಗೋಚರಿಸುವುದಿಲ್ಲ. ಮನುಷ್ಯನ ಎಲ್ಲ ಆವಶ್ಯಕತೆಗಳನ್ನು ಈಡೇರಿಸಿದ ಪ್ರಭು, ಜಗನ್ನಿಯಾಮಕ ಜೀವನ ಲಕ್ಷ್ಯವನ್ನು ತಲುಪುವ ಮಾರ್ಗವನ್ನು ಸುಲಭಗೊಳಿಸಿದ್ದಾನೆ. ಮಾನವ ಜೀವ ಕೇವಲ ತಿಂದುಂಡು ಪ್ರಾಪಂಚಿಕ ಭೋಗ ವಿಲಾಸಗಳಿಗೆ ಸೀಮಿತವಾದುದಲ್ಲವೆಂಬ ವಿಚಾರವನ್ನು ಯಾರಿಂದ ನಿರಾಕರಿಸಲು ಸಾಧ್ಯವಿದೆ?

ಮಾನವರಲ್ಲಿ ಪ್ರಪಂಚದ ಸುಖ ಸಾಧನಗಳನ್ನು ಮೀರಿ ಅಮರತ್ವದ ಬಯಕೆ ಗೋಚರಿಸುತ್ತದೆ. ಆದುದರಿಂದ ಜೀವನದ ಅಂತಿಮ ರಹಸ್ಯಕ್ಕೆ ಅಪರಿಚಿತನಾಗಿ ಉಳಿಯುವುದು ಅವನಿಗೆ ಸಾಧ್ಯವಲ್ಲ. ಅವನು ದೇವ ಸಾಕ್ಷಾತ್ಕಾರದ ಆಕಾಂಕ್ಷೆಯನ್ನು ನಿಜವಾಗಿಯೂ ಹೊಂದಿರುವನು. ಪರಸ್ಪರ ಸಿಹಿ ಮಾತಿಗೆ ತೃಪ್ತಿಪಡುವ ಪ್ರವೃತ್ತಿ ಮಾನವನದಲ್ಲ. ಅವನು

ತನ್ನ ಪ್ರಭುವಿನೊಡನೆ ಸಂಭಾಷಿಸುವ ಶ್ರೇಯಸ್ಸು ಸಿಗಲೆಂದು ಹಾತೊರೆಯುತ್ತಾನೆ. ಸಾಧ್ಯ ವಾದಷ್ಟು ಪ್ರಭುವಿನ ಸಾಮೀಪ್ಯ ಗಳಿಸುವುದು. ದೇವನ ಭೇಟಿಯಾಗುವುದು ಮಾನವನ ವಿಧಿಯಾಗಿದೆ.

ಪವಿತ್ರ ಕುರ್‌ಆನ್ ಹೀಗೆ ಉದ್ಬೋಧಿಸುತ್ತಿದೆ.

**"ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಡನೆ ಯಾರನ್ನೂ ಸಹಭಾಗಿ ಮಾಡದಿರಲಿ."**

**(ಪವಿತ್ರ ಕುರ್‌ಆನ್, 18:110**

**"ಅದು ಉನ್ನತಿಯ ಸೋಪಾನಗಳ ಒಡೆಯನಾದ ಅಲ್ಲಾಹನ ಕಡೆಯಿಂದ ಬರಲಿದೆ ದೇವಚರರು ಮತ್ತು ರೂಹ್ ಅವನ ಸಾನಿಧ್ಯಕ್ಕೆ ಐವತ್ತು ಸಾವಿರ ವರುಷಗಳ ಅವಧಿಯು ಒಂದು ದಿನದಲ್ಲಿ ಏರಿ ಹೋಗುತ್ತಾರೆ." (ಪವಿತ್ರ ಕುರ್‌ಆನ್, 70:3-4)**

ಮಾನವನ ನಿಜವಾದ ಉನ್ನತಿ ದೇವನೆಡೆಗೆ ಸಾಗುವುದೆಂದು ಪವಿತ್ರ ಕುರ್‌ಆನಿ ವಚನಗಳಿಂದ ತಿಳಿದು ಬರುವುದು. ನಮ್ಮ ಚಾರಿತ್ರ್ಯ ಕರ್ಮಗಳು ದೇವನ ಸಮೀಪ ಒಯ್ಯುವುದು. ಈ ರಹಸ್ಯ ನಮ್ಮಿಂದ ಅರಿಯಲು ಅಸಾಧ್ಯವಾದರೆ ನಮ್ಮ ಜೀವ ಪ್ರಾಣಿಗಳಿಗೆ ಸಮಾನವಾಗುತ್ತದೆ. ಇಂತಹ ಬದುಕೊಂದು ಅಪರಾಧವಾಗಿದೆ.

ಒಂದು ವೇಳೆ ದೇವನನ್ನು ಬಿಟ್ಟು ಮಾನವನು ಬೇರೆ ಯಾರನ್ನೋ ತನ್ನ ಆರಾಧ್ಯನಾ ಮಾಡಿಕೊಂಡರೆ, ಮಾನವನು ಈ ಆರಾಧ್ಯರಿಗೆ ತನ್ನನ್ನು ಸಮರ್ಪಿಸಿಕೊಂಡರೆ, ಮಾನವ ಬದುಕು ಪ್ರಾಣಿಗಳಿಗಿಂತಲೂ ಕೀಳಾಗುವುದು. ಪ್ರಾಣಿಗಳಿಗೆ ದೇವನ ಅರಿವಿಲ್ಲ, ಆದರು ಅದು ದೇವನೊಂದಿಗೆ ಯಾರನ್ನೂ ಭಾಗೀದಾರಗೊಳಿಸುವುದಿಲ್ಲ, ಬೇರೆ ಯಾರನ್ನೂ ಅದ ಪ್ರಾರ್ಥಿಸುವುದಿಲ್ಲ, ಪೂಜಿಸುವುದಿಲ್ಲ. ಸರಿಯಾಗಿ ಹೇಳಬೇಕೆಂದರೆ ಅವುಗಳು ಸತ್ಯದ ಜ್ಞಾನವೆ ಇಲ್ಲದ ಅಸಹಾಯಕ ಜೀವಿಗಳಾಗಿವೆ. ಆದುದರಿಂದ ಪ್ರಾಣಿಗಳೇಕೆ ಬ್ರಹ್ಮ ಜ್ಞಾನವನ ಪಡೆದಿಲ್ಲ? ಜೀವನದಲ್ಲಿ ದೇವ ಸಂಪ್ರೀತಿಯ ಮಾಧುರ್ಯವನ್ನೇಕೆ ಕಳಕೊಂಡಿವೆ ಎಂ ಮಾತು ಅಪ್ರಸ್ತುತವಾಗುವುದು. ನಿಜಕ್ಕೂ ಪಶು ಪಕ್ಷಿಗಳನ್ನು ಈ ಉದ್ದೇಶಕ್ಕಾಗಿ ಸೃಷ್ಟಿಸಲಾಗಿಲ್ಲ ಅದಕ್ಕೆ ಈ ಮಟ್ಟದ ಬುದ್ಧಿಯನ್ನೂ ನೀಡಿಲ್ಲ. ಇಂತಹ ಉತ್ತರ ದಾಯಿತ್ವ ದಿಂದ ಅ ಮುಕ್ತವಾಗಿವೆ.

✧ ✧ ✧

ಧ್ಯಾಯ-4

# ಮಾರ್ಗದರ್ಶನದ ಅಗೋಚರ ವಿಧಾನಗಳು

**ಮಾ**ನವನಿಗೆ ವೀಕ್ಷಿಸುವ, ಆಲಿಸುವ ಶಕ್ತಿಯನ್ನು ದೇವನು ನೀಡಿದ್ದಾನೆ. ಅವುಗಳಿಂದ ಾನವನಿಗೆ ಜ್ಞಾನ-ಮಾಹಿತಿಗಳು ಲಭಿಸುತ್ತವೆ. ತಾನು ಗಳಿಸಿದ ಜ್ಞಾನದಿಂದ ಏನಾದ ಂದು ತೀರ್ಮಾನ ಮಾಡಲು ಅವನು ಪ್ರಯತ್ನಿಸುತ್ತಾನೆ. ಒಂದು ವೇಳೆ ಆಳವಾಗಿ ್ಪ್ಷಿ ಹಾಯಿಸು ವುದಾದರೆ ಮಾನವನೊಳಗಿನ ಸಾಮರ್ಥ್ಯಗಳು ಜಾಗೃತ ಸ್ಥಿತಿಯಲ್ಲಿ ರುವುದು ೋಚರಿಸುತ್ತವೆ. ವ್ಯಕ್ತಿ ತನ್ನ ಶಕ್ತಿ ಸಾಮರ್ಥ್ಯವನ್ನು ಸಂಪೂರ್ಣವಾಗಿ ವಿನಿಯೋಗಿಸುವನು. ಲವೊಮ್ಮೆ ತನ್ನ ಬಂಡಾಯ ಉದ್ಧಟತನದಿಂದಾಗಿ ತನ್ನ ಅಂತರಾತ್ಮ ವಿರೋಧಿಸುವ ದಾರಿಯನ್ನು ್ವೀಕರಿಸಿದಾಗ ಅವನ ಅಂತರಾತ್ಮವೇ ವಿರೋಧಿಸುವುದು. ಮಾನವನಲ್ಲಿ ಅಸ್ತಿತ್ವದಲ್ಲಿರುವ ಾರ್ಗದರ್ಶನಗಳನ್ನು ಸಾಮಾನ್ಯವಾಗಿ ನಾವು ಸಹಜವೃತ್ತಿ (Instinct) ಅಂತಃಪ್ರಜ್ಞೆ ntuition) ಮತ್ತು ಅಂತರಾತ್ಮ (Conscience) ಎಂದು ಕರೆಯುತ್ತೇವೆ.

## ಹಜ ಪ್ರವೃತ್ತಿ (Instinct)

ಪವಿತ್ರ ಕುರ್‌ಆನ್ ಅಗೋಚರ ಅಥವಾ ಗುಪ್ತ ಮಾರ್ಗದರ್ಶನಗಳನ್ನು ವಹ್ಯ್ (ದೇವ ್ರಕಾಶನ) ಮತ್ತು ಇಲ್‌ಹಾಮ್ (ಅಲೌಕಿಕ ಪ್ರೇರಣೆ) ಎಂದು ಹೆಸರಿಸಿದೆ. ಅದು ಹಾಗೆ ರೆದಿರುವುದಕ್ಕೆ ವಿಶೇಷ ಕಾರಣವಿದೆ. ವಹ್ಯ್ (ಪ್ರಕಾಶನ) ಎಂದರೆ ಗೋಪ್ಯತೆ ಮತ್ತು ಸೂಕ್ಷ್ಮ ಂಕೇತಗಳೆಂದು ಅರ್ಥ. ಪರಾಶಕ್ತಿ(Supreme Natural Means) ಯಿಂದ ಈ ಸಂಕೇತಗಳು ೂರಕುವುದರಿಂದ ಅದನ್ನು ವಹ್ಯ್ ಅಥವಾ ಪ್ರಕಾಶನವೆಂದು ಕರೆಯ ಲಾಯಿತು. ಆದರೆ ವಿತ್ರ ಕುರ್‌ಆನಿನಲ್ಲಿ ವ್ಯಾಪಕ ಅರ್ಥದಲ್ಲಿ ವಹ್ಯ್ ಶಬ್ದವು ಪ್ರಯೋಗಿಸ ಲ್ಪಟ್ಟಿದೆ. ಯಾಕೆಂದರೆ ಮಾರ್ಗದರ್ಶನವು ವಿಶಾಲವಾದ ವ್ಯಾಪ್ತಿಯನ್ನು ಹೊಂದಿರು ವುದು. ಆಕಾಶವೂ ಹ್ಯನ್ನು[1] ಪಾಲಿಸುವುದೆಂದು ಪವಿತ್ರ ಕುರ್‌ಆನ್‌ನಿಂದ ನಮಗೆ ತಿಳಿದು ಬರುತ್ತದೆ. ಭೂಮಿ, ೀವಚರರು, ಜೇನ್ನೊಣಗಳು ಈ ವಿಧಾನದ ಮಾರ್ಗದರ್ಶನದ ಫಲಾನುಭವಿಗಳಾಗಿವೆ.[2]

ಈ ಮಾರ್ಗದರ್ಶನದಂತೆ ಮೀನು ನೀರಲ್ಲಿ ಈಜಾಡುತ್ತದೆ. ಯಾರು ಅದಕ್ಕೆ ಈಜಾಡಲು

ಪವಿತ್ರ ಕುರ್‌ಆನ್, 41:12
ಪವಿತ್ರ ಕುರ್‌ಆನ್, 16:68

ಕಲಿಸಿದರು? ಈಗ ತಾನೆ ಹುಟ್ಟಿದ ಮಗುವಿಗೆ ಮೊಲೆ ಹಾಲು ಚೀಪುವುದಕ್ಕೆ ಯಾರು ಹೆ ಕೊಡುವುದು? ಈ ಎಲ್ಲ ಜ್ಞಾನವು ದೇವದತ್ತ ಮಾರ್ಗದರ್ಶನದಂತೆ ಪ್ರತಿಯೊಂದಕ್ಕೂ ದೊ ಯುತ್ತದೆ. ಇಲ್ಹಾಮೀ ಜ್ಞಾನವೆಂದು ಇದನ್ನು ಕರೆಯುವರು. ಆವಶ್ಯಕತೆಗಳಿಗನುಗುಣವಾ ಇಲ್ಹಾಮೀ (ಅದೃಶ್ಯ) ಮಾರ್ಗದರ್ಶನ ಲಭಿಸುವುದು. ಗೀಜಗನ ಹಕ್ಕಿ, ಜೇನ್ನೊಣಗ ಗೂಡು ಕಟ್ಟುವ ತಂತ್ರಜ್ಞಾನವನ್ನು ಯಾರು ಹೇಳಿಕೊಟ್ಟಿದ್ದಾರೆ? ಅವು ಎಲ್ಲಿಯೂ ತರಬೇ ಯನ್ನು ಪಡೆದಿಲ್ಲ. ಆದರೂ ಅವು ತಮ್ಮ ಗೂಡುಗಳನ್ನು ಕಟ್ಟಿಕೊಳ್ಳುತ್ತವೆ. ಒಂದು ವೇ ತಾಯಿಯ ಎದೆ ಹಾಲನ್ನು ಚೀಪುವ ಜ್ಞಾನ ಶಿಶುಗಳಿಗೆ ಇಲ್ಲದಿ ರುತ್ತಿದ್ದರೆ ಅವುಗಳಿಗೆ ಹಾ ಕುಡಿಸುವ ವಿಚಾರ ಸಂಕಷ್ಟಕ್ಕೀಡು ಮಾಡುತ್ತಿತ್ತು.

ಈ ರೀತಿ ಮಾನವನು ದಾರಿ ತಪ್ಪಬಾರದೆಂದು ಮಾನವನ ಮಾರ್ಗದರ್ಶನಕ ಮಾಡಿದ ವ್ಯವಸ್ಥೆಯೇ ರಿಸಾಲತ್ ಅಥವಾ ಪ್ರವಾದಿತ್ವವಾಗಿದೆ. ಮಾನವನ ಮಾರ್ಗ ದರ್ಶನಕ ಅವತೀರ್ಣವಾಗುವ ಜ್ಞಾನವನ್ನು ವಹ್ಯ್ ಅಥವಾ ವಹ್ಯ್ ಜಲೀ(ಸುಸ್ಪಷ್ಟ ಪ್ರಕಾಶನ)ವೆಂ ಕರೆಯಲಾಗಿದೆ. ಇದು ಪ್ರವಾದಿಗಳಿಗೆ ಅವತೀರ್ಣವಾಗುವ ದೇವನ ವಚನಗಳಾಗಿದ್ದು ಹಿ ಅವತೀರ್ಣವಾದ ವಹ್ಯ್ ಪ್ರವಾದಿಯಿಂದ ಬಹಿರಂಗವಾಗುತ್ತದೆ.

ಈ ರೀತಿ ಪ್ರವಾದಿಗಳ ಮೂಲಕ ಮಾನವರ ಸಕಲ ಕ್ಷೇತ್ರಗಳಿಗೂ ದೇವನಿ ಮಾರ್ಗದರ್ಶನ ಲಭಿಸಿದೆ. ಮುಂದೆ ಇದನ್ನು ಸವಿಸ್ತಾರವಾಗಿ ಚರ್ಚಿಸಲಾಗುವುದು.

## ಅಂತಃಪ್ರಜ್ಞೆ (Intuition)

ಕೆಲವೊಮ್ಮೆ ಅಕಸ್ಮಾತ್ತಾಗಿ ಯಾವುದಾದರೂ ವಸ್ತುವಿಗೆ ಸಂಬಂಧಿಸಿದ ವಿಚಾರವು ನವ ಹೊಳೆಯಬಹುದು. ಇದು ನಮ್ಮೊಳಗೆ ನಡೆಯುವ ಯಾವುದೋ ಆಂತರಿಕ ಪ್ರಕ್ರಿಯೆ ಪರಿಣಾಮವಾಗಿದೆ. ವಿದ್ಯುತ್ ಸಂಚಾರದಂತೆ ಅಕಸ್ಮಾತ್ ಸಂಭವಿಸುವ ಕ್ರಿಯೆಯಿದು. ಇದ ಅಂತಃಪ್ರಜ್ಞೆ ಎನ್ನುತ್ತೇವೆ.

ಕೆಪ್ಲರ್ (Kapler) ಗ್ರಹಗತಿ ಅಂಡಾಕಾರದಲ್ಲಿದೆಯೆಂದು ಆಕಸ್ಮಾತ್ತಾಗಿ ಕಂಡು ಕೊಳ್ಳುತ್ತಾ ಈ ರೀತಿ ಅವನಿಗೆ ಜ್ಞಾನ ಹೊಳೆದ ಪರಿಣಾಮವಾಗಿ ನಕ್ಷತ್ರ ಚಲನೆಯ ಕಗ್ಗಂಟು ಪರಿಹ ವಾಯಿತು. ಜಗತ್ತಿನಲ್ಲಿ ಉಪಯುಕ್ತ ಬಳಕೆಯ ಎಲ್ಲ ಸಂಶೋಧನೆಗಳಲ್ಲಿ ಇಂತಹ ಗ ಮಾರ್ಗದರ್ಶನಗಳು ಇವೆ. ಜಗತ್ತಿನ ದೊಡ್ಡ ದೊಡ್ಡ ಸಾಧಕರು, ವಿಚಾರ ವಾದಿಗ ಲೇಖಕರಿಂದ ನಡೆದ ಮಹಾನ್ ಕಾರ್ಯಗಳ ಹಿಂದೆ ಈ ಗುಪ್ತ ಮಾರ್ಗದರ್ಶನದ ಪಾತ್ರ ಇ

## ಅಂತರಾತ್ಮ (Conscience)

ಅಂತರಾತ್ಮ ಪ್ರತಿಯೋರ್ವ ವ್ಯಕ್ತಿಯಲ್ಲಿಯೂ ಇದೆ. ಕೆಟ್ಟ ಕೆಲಸಕ್ಕಿಳಿದ ಸಂದರ್ಭ ದಲ್ಲಿ ಅದು ಅವನನ್ನು ಎಚ್ಚರಿಸುತ್ತದೆ.[3] ಅಂತರಾತ್ಮದ ಧ್ವನಿಯನ್ನು ದಮನಿಸಲು ಸಾಧ್ಯವಿ

3. ನೋಡಿರಿ, ಪವಿತ್ರ ಕುರ್‌ಆನ್, 75:2

ಹೃದಯ ಭಿತ್ತಿಯಲ್ಲಿ ಎಚ್ಚರಿಕೆ ಕೊಡುವ ಯಾವುದೋ ವಸ್ತುವಿದೆ. ಕೆಟ್ಟ ಕೆಲಸಗಳಿಗಿಳಿಯು ವಾಗ ನೀನು ತಪ್ಪು ಮಾಡುತ್ತಿರುವೆ ಎಂದು ವಿರೋಧಿಸುವ ಅನುಭವಗಳು ತೀರಾ ಸಾಮಾನ್ಯ ವ್ಯಕ್ತಿಗೂ ಆಗುತ್ತದೆ. ಇದು ಅಂತರಾತ್ಮದ ಧ್ವನಿಯಾಗಿದೆ. ಆದರೆ ಮಾನವರ ಅಪರಾಧ, ಅಜ್ಞಾನಗಳಿಂದಾಗಿ ಅವನೊಳಗಿರುವ ಈ ಅದೃಶ್ಯ ಧ್ವನಿಯು ಅಸಹಾಯಕ ವಾಗುವುದು. ಅದು ಎಷ್ಟೇ ಎಚ್ಚರಿಕೆ ನೀಡಿದರೂ ಮಾನವನು ಅದರೆಡೆಗೆ ಗಮನ ಹರಿಸಲಾರ. ಆದರೂ ಅಂತರಾತ್ಮ ತನ್ನಷ್ಟಕ್ಕೆ ತನ್ನ ಈ ಕರ್ತವ್ಯವನ್ನು ಮಾಡುವುದು. ಅದು ಯಾವ ಪರಿಸ್ಥಿತಿಯಲ್ಲಿಯೂ ಕರ್ತವ್ಯ ಚ್ಯುತಿ ಮಾಡಲಾರದು. ಅಂತರಾತ್ಮದ ಧ್ವನಿಗೆ ಕಿವಿಗೊಟ್ಟು ನೈಜ ಕರ್ತವ್ಯಗಳಿಂದ ವಿಮುಖರಾಗದ ಮಾನವರು ಧನ್ಯರು.

ನೈತಿಕ ಪ್ರಜ್ಞೆಯ ಮೂಲ ಅಂತರಾತ್ಮವಾಗಿದೆ. ಬುದ್ಧಿ ವಿವೇಕಗಳೊಂದಿಗೆ ಮಾನವರಲ್ಲಿ ನೈತಿಕ ಪ್ರಜ್ಞೆಯೂ ಇದೆ. ಒಳಿತು ಕೆಡುಕುಗಳ ಅಂತರವನ್ನು ನೈತಿಕ ಪ್ರಜ್ಞೆಯ ಕಾರಣದಿಂದ ಮಾನವನು ಅರಿತುಕೊಳ್ಳುತ್ತಾನೆ. ಅವನು ಕೆಟ್ಟ ಕೆಲಸ ಯಾವುದು? ಉತ್ತಮ ಕೆಲಸ ಯಾವುದೆಂದು ಪರಾಮರ್ಶಿಸುವನು. ಮಾನವನಲ್ಲಿ ನೈತಿಕ ಅಸ್ತಿತ್ವವೂ ಇದೆ. ಆದರಿಂದ ಮಾನವನಿಗೆ ಒಳಿತು ಕೆಡುಕುಗಳ ಅನುಭವವಾಗುವುದು.

ಪ್ರತಿ ನಾಗರಿಕತೆಗಳಲ್ಲಿಯೂ ಸಂಸ್ಕೃತಿಗಳಲ್ಲಿಯೂ ಉತ್ತಮ ಮತ್ತು ಕೆಟ್ಟ ರೀತಿಯ ಅನುಭವಗಳನ್ನು ಗುರುತಿಸಬಹುದಾಗಿದೆ. ಈ ಅನುಭವದಿಂದ ಮಾನವನು ಎಂದೂ ಮುಕ್ತನಾಗಿಲ್ಲ, ಅದೃಶ್ಯ ರೂಪದಲ್ಲಿ (ಇಲ್‌ಹಾಮೀ ಮಾರ್ಗದರ್ಶನ) ನೈತಿಕ ಅಸ್ತಿತ್ವ ಮಾನವನ ಮೂಲಭೂತ ಆವಶ್ಯಕತೆಯಾಗಿದೆ. ಇದು ಮಾನವನ ಅಸ್ತಿತ್ವದಲ್ಲಿ ವಿಲೀನ ವಾಗಿದೆ. ನೈತಿಕತೆ ಇಲ್ಲದ ಮಾನವನು ನಿರರ್ಥಕನು. ಈ ರೀತಿಯ ವಹ್ಯ್ ಮತ್ತು ಸೂಕ್ಷ್ಮ ಮಾರ್ಗದರ್ಶನ ಗಳು ಮಾನವನಲ್ಲಿ ತನ್ನ ಕರ್ಮ, ಚಾರಿತ್ರ್ಯಗಳ ಅರಿವನ್ನು ಮೂಡಿಸ ಲೆಂದೇ ಅದೃಶ್ಯ ರೂಪದಲ್ಲಿರುತ್ತದೆ. ವಹ್ಯ್ ಕರ್ಮ, ಚಾರಿತ್ರ್ಯಗಳ ಮಹತ್ವಪೂರ್ಣ ಭಾಗವಾಗಿದೆ. ಮಾನವನು ನಗೆ ಲಭಿಸುವ ಅದೃಶ್ಯ ಜ್ಞಾನದ ಮೂಲಕ ತನ್ನ ಕರ್ಮ ಚಾರಿತ್ರ್ಯಗಳನ್ನು ತಿಳಿದುಕೊಳ್ಳುತ್ತಾನೆ. ಆದರೆ ಅವನಿಗೆ ಈ ಅದೃಶ್ಯ ಜ್ಞಾನ(ದಿವ್ಯವಾಣಿ)ದ ಪರಿವೆಯೇ ಇರುವುದಿಲ್ಲ, ನಮ್ಮ ಜೀವನದಲ್ಲಿ ನಮಗೆ ದೃಷ್ಟಿ-ಶ್ರವಣಗಳ ಸಾಮರ್ಥ್ಯ ಲಭಿಸಿದಂತೆ ಈ ಅದೃಶ್ಯ ಜ್ಞಾನ(ದಿವ್ಯವಾಣಿ)ದ ಪಾತ್ರವೂ ಏನೇನೂ ಕಡಿಮೆಯಲ್ಲ,

ಹೃದಯದಲ್ಲಿ ಮೂಡುವ ಒಳಿತು ಮತ್ತು ಸಮಂಜಸ ಚಿಂತನೆಗಳಿಗೆ ಪವಿತ್ರ ಕುರ್‌ಆನ್ ವಹ್ಯ್ ಎಂಬ ಸಂಜ್ಞೆಯನ್ನು ಬೇರೆ ಬೇರೆ ಕಡೆಗಳಲ್ಲಿ ನೀಡಿದೆ.

**"ನನ್ನ ಮೇಲೂ ನನ್ನ ಸಂದೇಶವಾಹಕರ ಮೇಲೂ ವಿಶ್ವಾಸವಿಡಿರೆಂದೂ ಹವಾರಿಗಳಿಗೆ ನಾನು ಸೂಚನೆ ಕೊಟ್ಟಾಗ, ನಾವು ವಿಶ್ವಾಸವಿಟ್ಟೆವೆಂದೂ ನಾವು ಮುಸ್ಲಿಮರಾಗಿರುವ ಬಗ್ಗೆ ಸಾಕ್ಷಿ ಯಲ್ಲಿರೆಂದೂ ಅವರು ಹೇಳಿದರು." (ಪವಿತ್ರ ಕುರ್‌ಆನ್, 5:111)**

ಪವಿತ್ರ ಕುರ್‌ಆನ್ ಇನ್ನೊಂದೆಡೆ ಈ ರೀತಿ ವಿವರಿಸಿವೆ.

"ನಾವು ಮೂಸಾರ ತಾಯಿಗೆ, ಇದಕ್ಕೆ ಮೊಲೆ ಹಾಲುಣಿಸು. ಮುಂದೆ ನಿನಗೆ ಇದ ಪ್ರಾಣದ ಬಗ್ಗೆ ಭಯವುಂಟಾದರೆ ಇದನ್ನು ನದಿಯಲ್ಲಿ ಹಾಕಿ ಬಿಡು. ನೀನು ಕೊಂಚವೂ ಭಯಪಡಬೇಡ ವ್ಯಥೆಪಡಬೇಡ ಎಂದು ಸೂಚನೆ ಕೊಟ್ಟೆವು." (ಪವಿತ್ರ ಕುರ್‌ಆನ್, 28:7

# ನೈಜ ಕನಸುಗಳು

ದೈವಿಕ ಮಾರ್ಗದರ್ಶನದಲ್ಲಿ ಕನಸು ಒಂದು ಭಾಗವಾಗಿದೆ. ನೈಜ ಕನಸು ಪ್ರವಾದಿತ್ವ ನಲ್ವತ್ತನೇ ಭಾಗವೆಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ.[4]

"ಪ್ರವಾದಿತ್ವವು ನನ್ನೊಂದಿಗೆ ಕೊನೆಗೊಂಡಿದೆ. ಒಂದು ವೇಳೆ ನುಬುವ್ವತ್‌ಗೆ ಹೋಲು ಯಾವುದಾದರೂ ವಸ್ತು ಕಾಣಿಸಿಕೊಳ್ಳುವುದಿದ್ದರೆ ಅದು ಉತ್ತಮ ಕನಸಾಗಿರುತ್ತದ್‌ ಎಂದ ಪ್ರವಾದಿವರ್ಯ(ಸ) ಹೇಳಿದ್ದಾರೆ. ಇಂತಹ ಕನಸನ್ನು ತೋರಿಸುವ ಯಾವುದೇ ಬಾಹ್ಯ ಅಥವ ಭೌತಿಕ ಸಾಮುಗ್ರಿಗಳಿಲ್ಲ. ದೇವನ ಆಜ್ಞಾಪಾಲಕ ದಾಸರು ಕನಸುಗಳಿಂದ ಸೂಚನೆಯನ ಪಡೆಯುವರು. ಉತ್ತಮ ಕನಸುಗಳ ಮೂಲಕ ದೊರೆತಿರುವ ಸೂಚನೆಗಳಿಂದ ಇತಿಹಾಸ ದ ಪ್ರಯೋಜನಗಳಾಗಿರುವುದನ್ನು ಪವಿತ್ರ ಕುರ್‌ಆನ್ ಸೂಚಿಸಿದೆ.

ಈಜಿಪ್ಟ್‌ನ ಸಾಮ್ರಾಟನಿಗೆ, ಏಳು ಕೊಬ್ಬಿದ ಹಸುಗಳನ್ನು, ಏಳು ಬಡಕಲು ಹಸುಗ ತಿನ್ನುತ್ತಿರುವುದು ಮತ್ತು ಏಳು ಒಣಗಿದ ತೆನೆಗಳು, ಏಳು ಹಸಿರು ತೆನೆಗಳನ್ನು ನುಂಗು ಕನಸ್ಸು ಬಿದ್ದಿರುವುದನ್ನು ಪವಿತ್ರ ಕುರ್‌ಆನ್ ವರ್ಣಿಸಿದೆ. ಆನಂತರ ಈ ಕನಸು ನಿ ವಾಯಿತು. ಅದು ಈಜಿಪ್ಟ್‌ನಲ್ಲಿ ಅನುಭವಕ್ಕೂ ಬಂತು. ಈಜಿಪ್ಟ್‌ನಲ್ಲಿ ಏಳು ವರ್ಷಗಳ ಕಾ ಸಮೃದ್ಧಿ ನೆಲೆಸಿದವು. ಗದ್ದೆ ಪೈರುಗಳು ಹಸಿರಿನಿಂದ ನಳನಳಿಸಿ ಯಥೇಚ್ಛ ಧಾನ್ಯ ಆಹಾ ವಸ್ತುಗಳು ಬೆಳೆದವು. ಆನಂತರ ತುಂಬ ಕಠಿಣ (ಬರ)ಕಾಲ ಬಂದವು. ಸಮೃದ್ಧಿಯ ದಿನಗಳ ತೆಗೆದಿರಿಸಿದ ಧಾನ್ಯಗಳನ್ನು ಬರಗಾಲದಲ್ಲಿ ಉಪಯೋಗಿಸಲಾಗಿತ್ತು.

ಈ ರೀತಿ ಇನ್ನೂ ಕೆಲವು ನೈಜ ಕನಸುಗಳ ವಿವರಣೆ ಪವಿತ್ರ ಕುರ್‌ಆನಿನಲ್ಲಿ ಬಂದಿ ಪ್ರವಾದಿ ಯೂಸುಫ್‌ರು(ಅ) ತನ್ನ ಬಾಲ್ಯ ಕಾಲದಲ್ಲಿ ಸೂರ್ಯ ಚಂದ್ರ ಹಾಗೂ ಹನ್ನೊಂ ನಕ್ಷತ್ರಗಳು ತನಗೆ ಸಾಷ್ಟಾಂಗವೆರಗುವ ಕನಸು ಕಂಡಿದ್ದರು. ಆನಂತರ ಇದು ನಿಜವಾ ಅನುಭವವಾಯಿತು. ಪ್ರವಾದಿ ಯೂಸುಫ್‌ರಿಗೆ(ಅ) ಯೌವನದಲ್ಲಿ ಈಜಿಪ್ಟ್‌ನ ರಾಜ್ಯಭಾ ಲಭಿಸಿತು. ಅವರ 11 ಸಹೋದರರು ತಂದೆ ತಾಯಿಗಳೊಂದಿಗೆ ಅವರ ಬಳಿಗೆ ಬಂದ ಮತ್ತು ಎಲ್ಲರೂ ಯೂಸುಫರ(ಅ) ಮುಂದೆ ಬಾಗಿದರು. ಈ ಸಂದರ್ಭದಲ್ಲಿ ಪ್ರವಾ ಯೂಸುಫ್‌ರು(ಅ) ಬಾಲ್ಯದ ಕನಸನ್ನು ಈ ರೀತಿ ಉದ್ಧರಿಸಿದ್ದಾರೆ. "ತಂದೆಯವರೇ, ಇ ನನ್ನ ಬಾಲ್ಯದ ಕನಸಿನ ಸಾಕಾರವಾಗಿದೆ. ನನ್ನ ಕನಸನ್ನು ನನ್ನ ಪ್ರಭು ನಿಜಗೊಳಿಸಿರುವನು.

4. ಹದೀಸ್: ಬುಖಾರಿ ಮುಸ್ಲಿಮ್.
5. ಹದೀಸ್: ಬುಖಾರಿ.
6. ವಿವರಕ್ಕಾಗಿ: ಪವಿತ್ರ ಕುರ್‌ಆನ್‌ನ 12:4-5ರಿಂದ 100ರ ವರೆಗಿನ ವಚನಗಳನ್ನು ಪರಾಮರ್ಶಿ ನೋಡಬಹುದು.

ಕೇಕುಲೆಯವರಿಗೆ (Kekule) ಬೆಂಝಿನ್‌ನ (Benzine) ಅಣು ರಚನೆಯನ್ನು ತಿಳಿದು ೂಳ್ಳಬೇಕಾಗಿತ್ತು.[7] ಅವರು ತನಗೆ ಗೊತ್ತಿದ್ದ ಎಲ್ಲ ಸಾಧ್ಯತೆಗಳನ್ನು ಪ್ರಯೋಗ ಶಾಲೆಯಲ್ಲಿ ್ರಯೋಗ ಮಾಡಿ ನೋಡಿದರೂ ಪ್ರಯೋಜನವಾಗಿರಲಿಲ್ಲ. ಇದೇ ಯೋಚನೆಯಲ್ಲಿ ುಳುಗಿದ್ದಾಗ ಅದೊಂದು ದಿನ ಅವರಿಗೆ ಒಂದು ಕನಸು ಬಿತ್ತು. ಎರಡು ಸರ್ಪಗಳು ಬಾಲ ುತ್ತು ಮುಖದ ಭಾಗವನ್ನು ಸೇರಿಸಿ ವೃತ್ತಾಕಾರ ಮಾಡಿರುವುದನ್ನು ಅವರು ಕನಸಿನಲ್ಲಿ ೋಡಿದರು. ಕೂಡಲೇ ಬೆಂಝಿನ್‌ನ ರಚನೆಗಳ ಸಾಧ್ಯತೆಯು ಅವರಿಗೆ ಹೊಳೆಯಿತು. ೆಂಝಿನ್ ಸಂಕೋಲೆಯಾಕಾರದ ರಚನೆಯಲ್ಲ, ಕನಸಿನಲ್ಲಿ ಕಂಡ ಹಾವಿ ನಂತೆ ವೃತ್ತಾಕಾರ ಾಗಿರಬಹುದು ಎಂಬ ಸೂಚನೆಯಂತೆ ಪ್ರಯೋಗ ಮುಂದುವರಿಸಿದರು ಕೇಕುಲೆಯವರ ಮಸ್ಯೆ ಬಗೆಹರಿಯಿತು. ಈ ರೀತಿ ಅವರು ಬೆಂಝಿನ್‌ನ ರಚನೆಯನ್ನು ಕಂಡು ಹಿಡಿದರು.

ಹೊಲಿಗೆ ಯಂತ್ರಕ್ಕೆ ಸೂಜಿಯನ್ನು ಜೋಡಿಸುವ ವಿಧಾನವೂ ಕನಸಿನ ಮೂಲಕ ೋಧಿಸಲ್ಪಟ್ಟಿತು ಎಂದು ಹೇಳಲಾಗುತ್ತದೆ. ಹೀಗೆ ಪ್ರತಿಯೊಂದು ರಚನೆಯೂ ಮಾರ್ಗದರ್ಶನ ಂತೆ ರಚಿಸಲ್ಪಟ್ಟಿದೆ ಮತ್ತು ಆ ರಚನೆಗಳಲ್ಲಿ ಉದ್ದೇಶಗಳಿವೆಯೆಂದೂ ತಿಳಿದುಬರುತ್ತದೆ. ುತ್ತು ಎಲ್ಲ ರಚನೆಗಳು ಅವುಗಳು ಅಸ್ತಿತ್ವ ಪಡೆದುಕೊಂಡಿರುವ ಉದ್ದೇಶದ ಹೊಳಪು ಗಳನ್ನೇ ೊರ ಸೂಸುತ್ತವೆ. ಜಗತ್ತಿನ ಪ್ರಕೃತಿ ಮತ್ತು ಅಸ್ತಿತ್ವಗಳಲ್ಲಿ ವ್ಯಾಪಕವಾಗಿ ಕಾಣಿಸಿ ಕೊಳ್ಳುವ ಚಾರವಿದು. ಪ್ರಕೃತಿ ಕೂಡಾ ಮಾರ್ಗದರ್ಶನದಿಂದ ವಂಚಿತಗೊಂಡಿಲ್ಲ.

ಮಾನವನಿಗೆ ಸಹಜ ಪ್ರವೃತ್ತಿಯಿದೆ. ಅಂತಃಪ್ರಜ್ಞೆ ಹಾಗೂ ಅಂತರಾತ್ಮಗಳಿವೆ. ಜೊತೆಗೆ ವನಲ್ಲಿ ನೈತಿಕ ಪ್ರಜ್ಞೆ ಮತ್ತು ನೈತಿಕ ಅಸ್ತಿತ್ವವಿದೆ. ಅವನು ಆರನೆಯ ಇಂದ್ರಿಯವನ್ನು ೊಂದಿದ್ದಾನೆ. ತೃತೀಯ ನೇತ್ರವೂ ಅವನಲ್ಲಿದೆ(Third Eye). ಮುಂದೆಂದೋ ಆಗುವ ಟನೆಗಳು ಅವನಿಗೆ ಹೊಳೆಯಬಹುದು. ಇದನ್ನು ಕಶ್ಫ್ ಅಥವಾ ಅನಾವರಣ(Vision) ಂದು ಕರೆಯುತ್ತಾರೆ.

ಕೆಲವೊಮ್ಮೆ ಈ ಸೂಚನೆಗಳು ಕನಸಿನ ಮೂಲಕ ದೊರೆಯಬಹುದು. ಅದನ್ನು ಡೆಯಲೆಂದು ಯಾವುದೇ ಭೌತಿಕ ವಸ್ತುಗಳಿಲ್ಲ. ಮಾನವನಿಗೆ ಈ ರೀತಿಯೂ ಜ್ಞಾನ ೊರೆಯುತ್ತಿದೆ ಮತ್ತು ಅವನಿಗೆ ಒಳಿತು ಕೆಡುಕುಗಳ ಜ್ಞಾನವೂ ಲಭ್ಯವಾಗಿದೆ. ಆದರೆ ವಿಷ್ಟು ಜ್ಞಾನಗಳೇ ಜೀವನದಲ್ಲಿ ವ್ಯಾಪಿಸಿರುವ ಸಮಸ್ಯೆಗಳ ಮಾರ್ಗದರ್ಶನಕ್ಕೆ ಸಾಲದು. ಾನವನಲ್ಲಿ ನೋಡುವ, ಆಲಿಸುವ ಮತ್ತು ವಿಚಾರ ಮಾಡಿ ನಿರ್ಣಯ ಕೈಗೊಳ್ಳುವ ಾಮರ್ಥ್ಯ ಗೋಚರಿಸುತ್ತಿವೆಯಷ್ಟೇ. ಆದರೆ ಸ್ಪಷ್ಟ ಮಾರ್ಗದರ್ಶನ ನೀಡುವ ಪ್ರಾಮಾಣಿಕ ೂಲ ಮಾನವನ ಬಳಿಯಿಲ್ಲದಿದ್ದರೆ ತನ್ನ ಜೀವನಕ್ಕೆ ಸ್ಪಷ್ಟ ಪ್ರಣಾಳಿಕೆಯನ್ನು ಅವನು ಡೆಯಲಾರ. ಜೀವನದ ಜಟಿಲತೆಗಳ ನಡುವೆ ದೇವನಿಗೆ ಕೃತಜ್ಞತೆ ಹೇಗೆ ಅರ್ಪಿಸುವುದು? ದಕ್ಕೆ ಯಾವ ಮಾರ್ಗವನ್ನು ಅನುಸರಿಸಬೇಕೆಂದು ಅರಿಯಬೇಕಾದದ್ದು ಮಾನವನ ಅನಿವಾರ್ಯತೆಯಾಗಿದೆ. ದೇವನ ಕೃತಜ್ಞತೆಯ ಮಾರ್ಗದಲ್ಲಿ ಸಂಚರಿಸಿ ದೇವ ಸಂಪ್ರೀತಿ

. ಹೈಡ್ರೋಕಾರ್ಬನ್ ಸರಳ ಸಮ್ಮಿಶ್ರಣ.

ಯನ್ನು ಅವನು ಗಳಿಸಬೇಕಾಗಿದೆ. ಸೃಷ್ಟಿಕರ್ತನ ಅವಕೃಪೆಗೆ ಪಾತ್ರವಾಗುವ ಕೃತಘ್ನತೆ ದಾರಿ ಯಾವುದೆಂದು ಅರಿತು ಮಾನವನು ಅದರಿಂದ ದೂರವಿರಬೇಕಾಗಿದೆ.

ಮಾನವನಿಗೆ ಜ್ಞಾನ ನೀಡುವ ಮಾನವನ ಬಳಿಯಿರುವ ವಸ್ತುಗಳು ಅವನ ಜೀವನ ಸಕಲ ಕ್ಷೇತ್ರಕ್ಕೂ ಮಾರ್ಗದರ್ಶನ ನೀಡಲು ಸಾಲದು. ಇವಿಷ್ಟೇ ಅಲ್ಲ, ಮಾನವ ಯೋಚಿಸಲು, ತನ್ನ ದಾರಿಯನ್ನು ನಿರ್ಧರಿಸಲು, ಸೂಕ್ತ ದಾರಿಯನ್ನು ಆಯ್ದುಕೊಳ್ಳ ಸ್ವತಂತ್ರನಾಗಿದ್ದಾನೆ.

ಅವನಿಂದ ಬಹುತೇಕ ಈ ಸ್ವಾತಂತ್ರ್ಯದ ತಪ್ಪು ಬಳಕೆ ನಡೆಯುತ್ತಿವೆ. ಸ್ವಾರ್ಥ ಅಹಂಕಾರ, ಅಸೂಯೆ, ಪಕ್ಷಪಾತ, ಆಲಸ್ಯ, ನಿರ್ಲಕ್ಷ್ಯಗಳೇ ಅದಕ್ಕೆ ಕಾರಣವಾಗಿದೆ. ಕೆ ವಾತಾವರಣದ ಪ್ರಭಾವಗಳಿಂದ ಮಾನವನು ಸುರಕ್ಷಿತನಲ್ಲ. ಕೆಟ್ಟ ಪರಿಸರದ ವಿಧ ಆಚರಣೆಗಳಿಗೆ ವಿರುದ್ಧವಾಗಿ ನಡೆಯುವುದು ಅವನಿಗೆ ಸುಲಭವೇನಲ್ಲ.

ಹೀಗಾಗಿ ಮಾನವನ ಜೀವನಕ್ಕೆ ಸಂಪೂರ್ಣ ಮಾರ್ಗದರ್ಶನ ಆವಶ್ಯಕವಾಗಿದೆ. ಅವ ಜೀವನಕ್ಕೆ ಸ್ಪಷ್ಟ ಪ್ರಣಾಳಿಕೆ ಸಿಗಬೇಕಾದರೆ ಅದು ಪ್ರಾಮಾಣಿಕ ಮಾರ್ಗದರ್ಶನವಾಗಿರ ಬೇಕ ಅದು ನಿಷ್ಪಕ್ಷಪಾತಿ ಮತ್ತು ನಿರ್ವಿಘ್ನವಾದುದಾಗಿರಬೇಕು. ಆ ಮಾರ್ಗದರ್ಶನವನ್ನು ಮೀರು ಬೇರೆ ಮಾರ್ಗದರ್ಶನದ ಮೂಲಗಳೇ ಇರಬಾರದು. ತುಚ್ಛ ಬಯಕೆಗಳು, ಸ್ವಾರ್ಥಪ ಮುಂತಾದ ದುರ್ಗುಣಗಳಿಂದ ಸಂಪೂರ್ಣ ಅದು ಪರಿಶುದ್ಧವಾಗಿರಬೇಕು.

ಸತ್ಯವನ್ನು ಸಂಕೋಚವಿಲ್ಲದೆ ಸಂತೋಷದಿಂದ ಸ್ವೀಕರಿಸುವಂತಹ ವಸ್ತು (ಸತ್ಯವಿಶ್ವಾ ಮಾನವನಲ್ಲಿ ಆವಶ್ಯವಾಗಿ ಇರಬೇಕು. ಸತ್ಯ ಪ್ರಕಟಗೊಂಡು ಮಾನವನು ನಿರ್ಲಕ್ಷಿ ವುದಾದರೆ ಅದು ಮಾನವನು ಸ್ವಯಂ ತನ್ನ ಮೇಲೆಯೇ ಎಸಗಿದ ಶತ್ರುತ್ವವಾಗಿದೆ. ಸತ್ಯವ ಉಪೇಕ್ಷಿಸುವವರು ವಿನಾಶವನ್ನು ಆಹ್ವಾನಿಸುತ್ತಾರೆ. ಅಜ್ಞಾನ-ನಿರ್ಲಕ್ಷ್ಯತನ, ಅಂಧಕಾರ ದಿ ಮುಕ್ತಿ ಹೊಂದುವುದಕ್ಕಾಗಿ ಮಾನವನ ಪಾಲಿಗೆ ಸತ್ಯವು ಬಹಿರಂಗಗೊಳ್ಳುವುದು, ಬಹುದೊ ಮಾರ್ಗದರ್ಶನವಾಗಿದೆ. ಸತ್ಯವನ್ನು ಅವಲಂಬಿಸಿಯೇ ಜೀವನದ ಸಾರ್ಥಕತೆ ಮ ಯಶಸ್ಸುಗಳಿವೆ. ಸತ್ಯಮಾರ್ಗದರ್ಶನಗಳ ಕರೆಯಂತೆ ಮಾನವನು ತನ್ನ ಜೀವನವ ರೂಪಿಸಿಕೊಳ್ಳಬೇಕು. ಜಗತ್ತಿನಲ್ಲಿ ಅವನ ಅಸ್ತಿತ್ವಕ್ಕಾಗಿರುವ ಯೋಜನೆಯಂತೆ ಅವನ ಜೀವ ವಿರಬೇಕು.

ಮಾನವರಿಗೆ ಅತ್ಯಗತ್ಯವಾದ ಈ ಪರಿಪೂರ್ಣ ಮಾರ್ಗದರ್ಶನವು ಕೇವಲ ಪ್ರವಾ ಗಳಿಂದ ಮಾತ್ರವೇ ಲಭಿಸುವುದು. ಪ್ರವಾದಿಗಳ ಮಾಧ್ಯಮದಿಂದ ದೇವನು ಇದ ಮಾನವರಿಗೆ ದಯಪಾಲಿಸಿದ್ದಾನೆ. ಈ ಮಾರ್ಗದರ್ಶನವಿಲ್ಲದೆ ನಮ್ಮ ಬುದ್ಧಿ, ವಿವೇ ಅಂತರಾತ್ಮ ಇತ್ಯಾದಿ ಆತ್ಮಕ್ಕೆ ಸಂಬಂಧಿಸಿರುವ ವಿಚಾರಗಳು ದುರ್ಬಲವಾಗಿರುತ್ತದೆ. ಪ್ರವಾದಿ ಮಾರ್ಗದರ್ಶನವನ್ನು ಸ್ವೀಕರಿಸಿದಾಗಲೇ ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳು ಅನ್ವರ್ಥಗೊಳ್ಳುವುದ

ಇನ್ನು, ನಾವು ಪ್ರವಾದಿಗಳ ಮೂಲಕ ಸಿಗುವ ಸ್ಪಷ್ಟ ಮಾರ್ಗದರ್ಶನ (Perfe Guidance)ದೆಡೆಗೆ ಗಮನ ಹರಿಸೋಣ. ಪ್ರವಾದಿಗಳ ಮೂಲಕ ತಲುಪುವ ಮಾರ್ಗದರ್ಶ

ಾಲತ್(ಪ್ರವಾದಿತ್ವ) ಎನ್ನುತ್ತಾರೆ ಅಥವಾ ಸಂದೇಶವಾಹಕತ್ವವೆಂದೂ ಕರೆಯಲಾಗುತ್ತದೆ. ಪಂಚದಲ್ಲಿ ಪ್ರವಾದಿಗಳ ಬೃಹತ್ತಾದ ಇತಿಹಾಸವಿದೆ. ಮಾನವೇತಿಹಾಸ ದಲ್ಲಿ ಪ್ರಮುಖ ನವನ್ನು ಅದು ಪಡೆದಿದೆ.

ಮಾನವ ಜನಾಂಗಗಳ ಏಳಿಗೆಗಾಗಿ ಪ್ರವಾದಿಗಳು ಅಪಾರ ಪರಿಶ್ರಮ ನಡೆಸಿದರು ತ್ತು ಅವರು ಅಪಾರ ನಷ್ಟ-ಕಷ್ಟಗಳನ್ನು ಎದುರಿಸಿದರು. ಜಗತ್ತಿಗೆ ಶ್ರೇಷ್ಠ ಚಾರಿತ್ರ್ಯವೇನೆಂದು ಚಯಿಸಿದರು. ಮಾನವರಿಗೆ ಹಿರಿಮೆಯನ್ನು ತಂದುಕೊಟ್ಟರು. ಇಂತಹ ಪ್ರವಾದಿಗಳ ಹಾಸಗಳನ್ನು ನಿರ್ಲಕ್ಷಿಸುವುದು ಅಪರಾಧವಾಗಿದೆ. ಅನ್ಯಾಯ ಮತ್ತು ಅಹಂಭಾವವಾಗಿದೆ.

✧ ✧ ✧

ಅಧ್ಯಾಯ-5

# ರಿಸಾಲತ್ (ಪ್ರವಾದಿತ್ವ) ಮತ್ತು ಅದರ ಮಹತ

ರಿಸಾಲತ್ ಅಥವಾ ಸಂದೇಶವಾಹಕತ್ವವು ಮಾನವರಿಗೆ ಅತಿ ಮಹತ್ವದ ವಿಚಾ ವಾಗಿದೆ. ಆದರೆ ಸಾಮಾನ್ಯವಾಗಿ ಅದಕ್ಕೆ ಮಾನವರಿಂದ ಸಿಗಬೇಕಾದ ಮಹತ್ವವು ದೊರಕೀ

ಮಾನವರಿಗೆ ದೊರಕಿದ ದೇವನ ಅನುಗ್ರಹ ಮತ್ತು ದಯೆ ಎಂದು ಪ್ರವಾದಿತ್ವವನ ಪವಿತ್ರ ಕುರ್‌ಆನ್ ವಿವರಿಸಿದೆ.[1] ಭೂಮಿಯಲ್ಲಿ ಪ್ರಾಣಿಗಳಿಗೂ ಆಹಾರ ಮತ್ತು ವಾಸ್ತವ್ಯ ಸೌಕರ್ಯಗಳು ಇವೆ. ಆದರೆ ದೇವನು ನೇರವಾಗಿ ಸಂಬೋಧಿಸಿರುವ ಜೀವಿ ಮಾನ ನಾಗಿದ್ದಾನೆ. ದೇವಾನುಗ್ರಹಗಳನ್ನು ಗುರುತಿಸುವುದು ಮತ್ತು ಅದರ ಪ್ರಯೋಜನ ಪಡೆಯು ಸ್ವಾತಂತ್ರ್ಯವನ್ನು ದೇವನು ಮಾನವನಿಗೆ ನೀಡಿದ್ದಾನೆ.

ದೇವನು ಪ್ರವಾದಿಗಳೊಡನೆ ವಹ್ಯ್(ಪ್ರಕಾಶನ)ಯ ಮುಖಾಂತರ ಸಂಭಾಷಿಸಿರುವನ ಅವರ ಮೇಲೆ ತನ್ನ ವಾಣಿಗಳನ್ನು ಅವತೀರ್ಣಗೊಳಿಸಿದ್ದಾನೆ. ಮಾನವರಿಗಾಗಿ ಮಾಡಲಾ ಮಾರ್ಗದರ್ಶನದ ವ್ಯವಸ್ಥೆಯಿದು. ಇದಕ್ಕಾಗಿ ದೇವನನ್ನು ಎಷ್ಟೇ ಸ್ತುತಿಸಿದರೂ ಸಾಲದ

ಎಡ್ಡಿಂಗ್ಟನ್‌ರು(Eddington), "ವಹ್ಯ್‌ನ ಪ್ರಭುತ್ವ, ಅಸ್ತಿತ್ವಗಳೆಂಬುದು ಪ್ರಶ್ನೆಯೆ ಅಲ್ಲ. ವಹ್ಯ್‌ನ ಮೂಲಕ ಮಾನವನಿಗೆ ದೇವನು ಮಾರ್ಗದರ್ಶನ ನೀಡುತ್ತಾನೆಂ ಸಂದೇಹಾತೀತವಾಗಿ ನಂಬುವುದು ಪ್ರಶ್ನೆಯಾಗಿದೆ" ಎಂದು ಹೇಳುವಷ್ಟು ಮಾನವ ವಹ್ಯ್ ಪಾತ್ರ ಜೀವನಕ್ಕೆ ಮಹತ್ವದಾಯಕವಾಗಿದೆ.[2]

ಮಾನವ ಜೀವನ ಮೌಲ್ಯರಹಿತವಾದರೆ ನಿರರ್ಥಕವಾದಂತೆಯೇ ಮತ್ತು ಅಂತಹ ಜೀವ ತುಚ್ಛವಾಗುವುದು. ಆದರೆ ಮಾನವನಲ್ಲಿರುವ ಜೀವನ ಮೌಲ್ಯವನ್ನು ಗುರುತಿಸುವುದು ಹೇ ಮತ್ತು ಯಾವುದು ಅದನ್ನು ವಿಶ್ವಾಸಾರ್ಹಗೊಳಿಸುತ್ತದೆ ಎಂಬ ಪ್ರಶ್ನೆ ಉದ್ಭವಿಸ ಬಹುದ ಜೀವನ ಮೌಲ್ಯ(Values of Life)ವನ್ನು ಪ್ರಕಾಶನ ಅಥವಾ ವಹ್ಯ್‌ನ ಮೂಲ ದಿಂ ತಿಳಿಯಲು ಸಾಧ್ಯವಿದೆ ಮತ್ತು ಅದು ಜೀವನಕ್ಕೆ(ಮಾನವರಿಗೆ) ಮೌಲ್ಯವನ್ನು ತಂದು ಕೊಡುವುದ

ಆದರೆ ದೈವಿಕ ಪ್ರಕಾಶನ(ವಹ್ಯ್) ಮಾನವರಲ್ಲೇ ವಿಶೇಷ ವ್ಯಕ್ತಿಗಳಿಗೆ ಅವತೀರ್ಣ ವಾಗುತ್ತದೆ. ಅವರನ್ನು ನಾವು ಪ್ರವಾದಿಗಳೆಂದು ಕರೆಯುತ್ತೇವೆ.

1. ಪವಿತ್ರ ಕುರ್‌ಆನ್, 6:158, 7:52, 11:17, 28: 16:89
2. Science and Unseen World P-44

ಪ್ರವಾದಿಗಳ ಮೂಲಕ ಸಿಕ್ಕಿರುವ ಎಲ್ಲ ಜೀವನ ಮೌಲ್ಯಗಳು ಸತ್ಯವೆಂದು ಸಾಬೀತು ಗೊಂಡಿದೆ ಎಂದು ಐನ್‌ಸ್ಟೈನ್‌ರು ಒಪ್ಪಿಕೊಂಡಿದ್ದಾರೆ. ಜೋಡ್(Joad) ಎಂಬವರು ವಹ್ಯ್ ಸ್ವಯಂ ತನಗೆ ತಾನೇ ಪ್ರಮಾಣವಾಗಿದೆ[3] ಎಂದು ಹೇಳಿದ್ದಾರೆ. ಬುದ್ಧಿಗೆ ಮಸುಕೆನಿಸಿದರೂ ಬೈಜ ಜ್ಞಾನವನ್ನು ಗೋಚರಿಸಿದ ಕೂಡಲೇ ಅಂತಃಪ್ರಜ್ಞೆಯು ತಕ್ಷಣ ಸ್ವೀಕರಿಸುವುದು ಮತ್ತು ಇದನ್ನು ಆತ್ಮದ ವಿಶೇಷತೆಯೆಂದು ಜೋಡ್ ಹೇಳುತ್ತಾರೆ.

ವಹ್ಯ್‌ಯನ್ನು ವಿವರಿಸುತ್ತಾ ಓಸ್ಪೆಂಸ್ಕಿಯವರು(Ouspensky) ಹೀಗೆ ವಿವರಿಸಿದ್ದಾರೆ.

"ಒಂದು ವೇಳೆ ವಹ್ಯ್ ಅವತೀರ್ಣವಾಗದಿದ್ದರೆ ಧರ್ಮದ ಅಸ್ತಿತ್ವ ಉಳಿಯುತ್ತಿ ರಲಿಲ್ಲ. ಧರ್ಮದಲ್ಲಿ ಸಾಮಾನ್ಯ ಮಾನವರ ಚಿಂತನೆಯ ಮಟ್ಟವನ್ನು ಮೀರಿದ ಒಂದಲ್ಲ ಒಂದು ತತ್ವಗಳಿರುತ್ತವೆ."[4]

ಬುದ್ಧಿ ಮತ್ತು ಜಾಗೃತಿಗೆ ದಿವ್ಯವಾಣಿ(ವಹ್ಯ್)ಯಿಂದ ಹೊಳಪು ಸಿಗುವುದು. ದಿವ್ಯವಾಣಿ ಮಾನವ ಬುದ್ಧಿಗೆ ಸಹಾಯಕವಾಗಿದೆ. ಅದು ಎಂದೂ ಬುದ್ಧಿಯನ್ನು ಪಥಭ್ರಷ್ಟಗೊಳಿಸದು. ಈ ರೀತಿಯಾಗಿ ನಮ್ಮ ಮಾರ್ಗದರ್ಶನಕ್ಕೆ ಬುದ್ಧಿ ಸಾಕಾಗುವುದಿಲ್ಲವೆಂದು ದಿವ್ಯವಾಣಿಯ ಅಸ್ತಿತ್ವವು ಖಚಿತಪಡಿಸುತ್ತದೆ. ಮಾನವನ ಸಕಲ ಆವಶ್ಯಕತೆಗಳೆಡೆಗೆ ನೇರವಾಗಿ ಬುದ್ಧಿಯು ತಲುಪಲಾರದು.

ಲಾಕ್‌ರು(Locke) ಹೀಗೆ ಬರೆದಿದ್ದಾರೆ- ದಿವ್ಯವಾಣಿಗೆ ಸ್ಥಾನ ನೀಡಲು "ಬುದ್ಧಿ ಮತ್ತು ಸೂಕ್ಷ್ಮ ಜಾಗೃತಿಯನ್ನು ತಮ್ಮಿಂದ ದೂರವಿಡುವವರೇ ದಿವ್ಯವಾಣಿ ಮತ್ತು ಬುದ್ಧಿ ಎಂಬ ಎರಡು ದೀಪಗಳನ್ನು ನಂದಿಸಿರುವ ಅಪರಾಧಿಗಳಾಗಿದ್ದಾರೆ.[5]

ಆದುದರಿಂದ ಹೆನ್ರಿ ಬರ್ಗ್‌ಸನ್‌ರು(Henri Bergson) ಅಂತರ್‌ಪ್ರಜ್ಞೆಗೆ(Intuition) ಹೆಚ್ಚು ಮಹತ್ವ ನೀಡುತ್ತಾರೆ ಮತ್ತು ಎ.ಎಸ್. ಎಡ್ಡಿಂಗ್ಟನ್‌ರ(A.S. Eddington) ಆಂತರಿಕ ವಿಶ್ವಾಸ (Inner Conviction)ಕುರಿತ ವಿಚಾರಗಳನ್ನು ನಾವು ಕಾಣುತ್ತೇವೆ.

ವಹ್ಯ್, ರಿಸಾಲತ್ (ದಿವ್ಯವಾಣಿ ಮತ್ತು ಸಂದೇಶವಾಹಕತ್ವ) ಮಾಧ್ಯಮದ ಮೂಲಕ ದೇವನು ಮಾನವರಿಗೆ ಸಂಪೂರ್ಣ ಮಾರ್ಗದರ್ಶನದ ವ್ಯವಸ್ಥೆಯನ್ನು ಮಾಡಿದ್ದಾನೆ. ಮಾನವರ ಜೀವನದ ಮೂಲ ಉದ್ದೇಶ ಮತ್ತು ವಿವರಗಳು ಅದರಿಂದ ಲಭಿಸುವುದು. ಮಾತ್ರವಲ್ಲ, ಭೌತಿಕ ಜೀವನದ ಸುತ್ತ ವ್ಯಾಪಕವಾಗಿರುವ ವಿಷಯಗಳಲ್ಲಿ ಮತ್ತು ಸಮಸ್ಯೆಗಳಲ್ಲಿ ಪ್ರವಾದಿತ್ವವು ಸಂಬಂಧ ಹೊಂದಿರುವುದು. ಪ್ರಪಂಚದಲ್ಲಿ ಆರ್ಥಿಕ, ಸಾಮಾಜಿಕ ಹೀಗೆ ಎಲ್ಲ ವಿಷಯಗಳಲ್ಲಿಯೂ ದಿವ್ಯವಾಣಿಯ ಮಾರ್ಗದರ್ಶನದಂತೆ ನ್ಯಾಯವನ್ನು ಸಂಸ್ಥಾಪಿಸಬಹುದಾಗಿದೆ ಮತ್ತು ಮಾನವರ ಮೇಲೆ ನಡೆಯುವ ಅತ್ಯಾಚಾರ, ಶೋಷಣೆಗಳಿಂದ ಬಿಡುಗಡೆಗೊಳಿಸಬಹುದಾಗಿದೆ.

---

3. Philosophical Aspects of Modern Science.
4. New Modern of Universe P 34.
5. Essay Book IVth Quoted by Brightman.

# ಪ್ರವಾದಿಯ ಉನ್ನತ ಸ್ಥಾನ

ಪ್ರವಾದಿಯ ಸ್ಥಾನವು ಅತ್ಯುನ್ನತವಾದುದು. ಆ ಸ್ಥಾನವು ಬುದ್ಧಿಯ ಅತ್ಯುನ್ನತ ಮಟ್ಟದಲ್ಲಿರುವುದು. ಸಾಮಾನ್ಯ ಜನರು ಊಹಿಸಲಸಾಧ್ಯವಾಗಿರುವಷ್ಟು ಆ ಸ್ಥಾನವು ಶ್ರೇಷ್ಠವಾಗಿದೆ.

ಬುಕೆ (Buke) ಹೇಳುವಂತೆ ಆತ್ಮ ಪ್ರಜ್ಞೆ(Self Consciousness)ಯಿರುವ ಮನುಷ್ಯನು ಎಲ್ಲ ದೃಷ್ಟಿಯಿಂದಲೂ ಪ್ರಾಣಿಗಳಿಗಿಂತ ಶ್ರೇಷ್ಠ(ಉನ್ನತ)ನಾಗಿದ್ದಾನೆ. ಮನುಷ್ಯನ ಮಟ್ಟವನ್ನೇರಲು ಪ್ರಾಣಿಯಿಂದ ಎಂದೂ ಸಾಧ್ಯವಿಲ್ಲ. ಅದೇ ವೇಳೆ ಸ್ಥಿರ ರೂಪದ ವ್ಯಾಪಕ ಪ್ರಜ್ಞೆ (Cosmic Consciousness)ಯಿರುವ ವ್ಯಕ್ತಿಯು ಸಾಮಾನ್ಯ ಮಾನವರಿಗಿಂತ ಅತ್ಯಂತ ಉನ್ನತ ಸ್ಥಾನದಲ್ಲಿರುತ್ತಾನೆ.[6]

ಪ್ರಪಂಚದಲ್ಲಿ ಬುದ್ಧಿಯ ಈ ಉನ್ನತ ಸ್ಥಾನ ಪಡೆದವರನ್ನು ಪ್ರವಾದಿಗಳು (ರಸೂಲ್) ಎಂದು ಕರೆಯುತ್ತೇವೆ. ಇವರಿಗೆ ಅತ್ಯುನ್ನತ ದರ್ಜೆಯ ದಿವ್ಯವಾಣಿ ಪ್ರಾಪ್ತವಾಗುವುದು. ಆದುದರಿಂದ ಇತರ ವಸ್ತುಗಳಿಗೆ ಅದರೊಡನೆ ಪೈಪೋಟಿ ನಡೆಸುವುದು ಸಾಧ್ಯವಲ್ಲ. ದಿವ್ಯವಾಣಿ ದೇವನಿಂದ ಅವತೀರ್ಣಗೊಳ್ಳುತ್ತಿದೆಯೆಂದು ಪ್ರವಾದಿಗಳಿಗೆ ಅನುಭವ ವಾಗುವುದು. ದೇವನು ದಿವ್ಯವಾಣಿಯನ್ನು ಅವತೀರ್ಣಗೊಳಿಸುವ ಮೂಲಕ ಪ್ರವಾದಿ ಗಳಿಗೆ ಸತ್ಯವಿಶ್ವಾಸ-ನ್ಯಾಯಯುತ ಆದೇಶಗಳು, ಧಾರ್ಮಿಕ ವಿಧಿ ವಿಧಾನಗಳ ಜ್ಞಾನವನ್ನು ಕಲಿಸಿಕೊಡುತ್ತಾನೆ. ಯಾಕೆಂದರೆ ಪ್ರವಾದಿಗಳಿಗೆ ಮಾನವರ ಜೀವನದ ಪ್ರತಿಯೊಂದು ಕ್ಷೇತ್ರಕ್ಕೂ ಮಾರ್ಗದರ್ಶನ ನೀಡುವ ಹೊಣೆಯಿದೆ.

ಪ್ರವಾದಿಗಳಿಗೆ ಅವತೀರ್ಣವಾಗುವ ದಿವ್ಯವಾಣಿಯು ವಿಶಿಷ್ಟವಾದುದೆಂದು ಬರ್ಡ್‌ವೇ (Berdyav) ಹೇಳಿದ್ದಾರೆ. ಅವರ ವಿವರಣೆಯಿಂದ ದಿವ್ಯವಾಣಿಯ ಸಾಮರ್ಥ್ಯದಲ್ಲಿ ಅವರಿಗೆ ನಂಬಿಕೆಯಿತ್ತು ಎಂಬ ಪುರಾವೆಯಿದೆ. ಜೀವದೊಳಗೆ ಅಡಕವಾದ ರಹಸ್ಯಗಳನ್ನು ದಿವ್ಯವಾಣಿಯ ಮೂಲಕ ಪ್ರವಾದಿಗಳು ಬಹಳ ಸರಳವಾಗಿ ಅರ್ಥೈಸುವರೆಂಬ ಅಭಿಮತವನ್ನು ಅವರು ವ್ಯಕ್ತಪಡಿಸಿದ್ದಾರೆ. ಅಂಚೆಯಿಂದ ಬರುವ ಪತ್ರವನ್ನು ಓದಿ ನಾವು ಅದರ ವಿಚಾರವನ್ನು ತಿಳಿಯುವಂತೆ ಪ್ರವಾದಿಗಳಿಗೆ ದಿವ್ಯವಾಣಿಯ ಮೂಲಕ ಜೀವ ರಹಸ್ಯವನ್ನು ತಿಳಿಯಲು (Possibility) ಸಾಧ್ಯ ಎಂಬಂಶವನ್ನು ಬರ್ಡ್‌ವೇ ಒಪ್ಪಿದ್ದಾರೆ. ಅವರು ಹೀಗೆ ಹೇಳಿರುವರು-

"ಪ್ರವಾದಿತ್ವ ಅಥವಾ ಸಂದೇಶವಾಹಕತ್ವವು ದೈವಿಕ ವಾಣಿಯ (Revelation) ಆಧಾರಿತವಾಗಿದೆ. ಪ್ರಪಂಚ ಮತ್ತು ಮಾನವರ ವರ್ತಮಾನ, ಭವಿಷ್ಯಗಳ ಕುರಿತು ದೇವ ಧ್ವನಿಯನ್ನು ಪ್ರವಾದಿಗಳು ಆಲಿಸುತ್ತಾರೆ. ಅವರು ಏಕಾಂಗಿಯಾಗಿ ಪಾರು ಮಾಡಲು ಪ್ರಯತ್ನಿಸಿದ ಜನರೇ ಅವರ ಮೇಲೆ ಕಲ್ಲೆಸೆಯುತ್ತಾರೆ. ಇಷ್ಟೆಲ್ಲ ಕಿರುಕುಳ ನೀಡಿಯೂ ಈ ಜನರಿಂದ ಪ್ರವಾದಿಗಳು ದೂರವಾಗಲಾರರು.

6. Cosmic Consciousness P-67

ಪ್ರವಾದಿಗಳಿಗೆ ಅವತೀರ್ಣವಾಗುವ ದಿವ್ಯವಾಣಿಯು ಅವರ ಸಾಧನೆಯಲ್ಲ. ಕ್ರಮೇಣ ಾಸ ಹೊಂದಿ ಸಿಗುವ ವಸ್ತುವೂ ಅಲ್ಲ. ಅದೊಂದು ಆಂತರಿಕ ವಿಚಾರವಾಗಿದೆ. ಪ್ರವಾದಿಯ ್ಯವಾಣಿಗೂ ಭಾರತ ಮತ್ತು ಗ್ರೀಸ್ ದೇಶದ ಸಾಧು ಸಂತರ ಅಲೌಕಿಕ ದರ್ಶನಗಳಿಗೂ ಬಂಧವಿಲ್ಲ. ಅವೆರಡೂ ವಿಭಿನ್ನ ವಸ್ತುಗಳಾಗಿವೆ.[7]

ಓಸ್ಪೆಂಸ್ಕಿಯವರು ಹೀಗೆ ಹೇಳಿದ್ದಾರೆ- ಇಂತಹ ಮಾರ್ಗದರ್ಶಕರು(ಪ್ರವಾದಿಗಳು) ಾನವತೆಯ ಪರಮ ಸ್ಥಾನದಲ್ಲಿ ಆಸೀನರಾಗಿರುತ್ತಾರೆ. ಅವರಲ್ಲಿ ಪರಿಪೂರ್ಣ ಆಧ್ಯಾತ್ಮಿಕ ್ಞನವಿರುವುದು. ಇಂತಹವರು ಜೀವನದ ಹೊಸ ಸ್ತರಗಳಲ್ಲಿ ಪ್ರಕಟವಾಗುತ್ತಾರೆ.[8] ಪ್ರವಾದಿಗಳ ವಾದಿತ್ವವು ಇಂದ್ರಿಯ ವಿವೇಕಗಳಿಗೆ ಅತೀತವಾದ ಗುಣ-ಪ್ರಾವೀಣ್ಯತೆಯಾಗಿದೆ. ಇಮಾಮ್ ಝ್ಝಾಲಿ ಈ ರೀತಿ ಬರೆದಿದ್ದಾರೆ, "ಬುದ್ಧಿಗಿಂತ ಪ್ರವಾದಿತ್ವ ಒಂದು ದರ್ಜೆ ಉನ್ನತವಾಗಿದೆ. ವಾದಿತ್ವದ ಮೂಲಕ ಕಣ್ತೆರೆಸಲ್ಪಟ್ಟಿತೆಂದಾದರೆ ಬುದ್ಧಿಯಿಂದ ಯೋಚಿಸಲಾಗದ ೇಷಾತಿವಿಶೇಷ ವಸ್ತುಗಳ ಜ್ಞಾನ ಲಭಿಸುವುದು."[9]

ಮುಜದ್ದಿದ್ ಅಲ್ಫಸಾನಿ ಮತ್ತು ಶೇಖ್ ಅಹ್ಮದ್ ಸರ್‌ಹಿಂದಿಯವರು(ರ) ದಿವ್ಯವಾಣಿ ುನ್ನು ಈ ರೀತಿ ವಿಶ್ಲೇಷಿಸಿದ್ದಾರೆ. ಬುದ್ಧಿ ಮತ್ತು ಜ್ಞಾನೇಂದ್ರಿಯಗಳ ಕಾರ್ಯ ವಿಧಾನವು ರೆ ಬೇರೆಯಾಗಿದೆ. ಜ್ಞಾನೇಂದ್ರಿಯಕ್ಕೆ ಗೋಚರಿಸದ ವಸ್ತುವನ್ನು ಬುದ್ಧಿ ಪತ್ತೆ ಹಚ್ಚುವುದು. ದ್ಧಿ ಮತ್ತು ನುಬುವ್ವತ್(ಪ್ರವಾದಿತ್ವ) ಕೂಡಾ ಭಿನ್ನ ಕಾರ್ಯ ವಿಧಾನವನ್ನು ಹೊಂದಿದೆ. ದ್ಧಿಗೆ ಹೊಳೆಯದ ವಸ್ತುಗಳ ಜ್ಞಾನ ನುಬುವ್ವತ್(ಪ್ರವಾದಿತ್ವ) ಮಾಧ್ಯಮದಿಂದ ದೊರೆಯು ಿ. ಹೀಗಿರುವಾಗ ಜ್ಞಾನಕ್ಕಾಗಿ ಬುದ್ಧಿಯೊಂದನ್ನು ಅವಲಂಬಿಸಲು ಹೇಗೆ ಸಾಧ್ಯ. ನಿಜಕ್ಕಾದರೆ ದ್ಧಿಯನ್ನು ಮೀರಿದ ಇತರ ಜ್ಞಾನ ವಿಧಾನಗಳನ್ನು ನಿರಾಕರಿಸುವವರು ಪ್ರವಾದಿತ್ವವನ್ನೇ ಾಕರಿಸುವ ತಪ್ಪು ಮಾಡುತ್ತಿದ್ದಾರೆ. ಆ ಮೂಲಕ ಅವರು ಸ್ಪಷ್ಟ ಮಾರ್ಗದರ್ಶನದಿಂದ ಚಿತರಾಗಿದ್ದಾರೆ. ಮಾತ್ರವಲ್ಲ ಅವರು ಪ್ರವಾದಿತ್ವದ ವಿರೋಧಿ ಗಳೆಂದೂ ಸ್ಪಷ್ಟವಾಗುವುದು.

## ್ರವಾದಿಯ ಒಂದು ವಿಶೇಷ ಗುಣ

ಪ್ರವಾದಿಗಳಿಗೆ ಪ್ರವಾದಿತ್ವವು ಹೃದಯ ಪರಿಷ್ಕಾರಗೊಂಡ ಸ್ಥಿತಿಯಲ್ಲಿ ದೊರೆಯುವುದು. ವಾದಿಗಳಿಗೆ ಸುಸ್ಪಷ್ಟವಾದ ದಿವ್ಯವಾಣಿ ಲಭಿಸುವ ವೇಳೆ ದೇವನ ವತಿಯಿಂದ ಎಚ್ಚರ ಮತ್ತು ತರಿಕ ಪ್ರಕಾಶ ಪ್ರಾಪ್ತವಾಗಿರುವುದು. ಆದುದರಿಂದ ಅವರು ಬಹಳ ಸುಲಭವಾಗಿ ಸತ್ಯ ತ್ತು ಅಸತ್ಯದ ಅಂತರವನ್ನು ಗುರುತಿಸುತ್ತಾರೆ. ಈ ಸ್ಥಿತಿಯಲ್ಲಿ ದಿವ್ಯವಾಣಿ ಅವರು ಳುವಂತಹ ವಿಚಾರಗಳನ್ನೇ ಪುಷ್ಟೀಕರಿಸುತ್ತಾ ಅವತೀರ್ಣವಾಗುವುದು. ದಿವ್ಯವಾಣಿಯಿಂದ

The Devine and Human P. 136
Meaning and Purpose, by Kenneth Walker P. 96
ಮಂಕರಝುಮ್ ಮಿನಜ್ಜಲಾಲ್ ಪುಟ -31

ಪ್ರವಾದಿಗಳ ಹೇಳಿಕೆಗಳಿಗೆ ಪುಷ್ಟಿ ಮತ್ತು ಸಾಕ್ಷಿ ದೊರೆಯುವುದೇ ಪ್ರವಾದಿತ್ವದ ವೈಶಿಷ್ಟ ವಾಗಿದೆ. ಪವಿತ್ರ ಕುರ್‌ಆನ್ ಬೇರೆ ಬೇರೆ ಕಡೆಗಳಲ್ಲಿ ಇದನ್ನು ಪ್ರಸ್ತಾಪಿಸಿದೆ-

**"ನೂಹರು ಹೀಗೆ ಹೇಳಿದರು- ಓ ನನ್ನ ಜನಾಂಗ ಬಾಂಧವರೇ, ನೀವೇ ಯೋಚಿಸಿ ನಾನು ನನ್ನ ಪ್ರಭುವಿನ ಕಡೆಯಿಂದ ಒಂದು ಸ್ಪಷ್ಟ ಆಧಾರ ಪ್ರಮಾಣದಲ್ಲಿ ಸ್ಥಿರವಾಗಿ ತರುವಾಯ ಅವನು ನನಗೆ ತನ್ನ ವಿಶೇಷ ಕೃಪೆಯನ್ನು ಪ್ರದಾನ ಮಾಡಿದನು. ಆದರೆ ಅ ನಿಮಗೆ ಗೋಚರಿಸಲಿಲ್ಲ. ಹೀಗಿರುವಾಗ ನೀವು ಒಪ್ಪದಿದ್ದರೂ ನಾವು ಬಲಾತ್ಕರಿಸಿ ನಿಮ್ಮ ತಲೆ ಲೇಪಿಸಲು ನಮ್ಮಲ್ಲೇನು ಸಾಧನವಿದೆ?" (ಪವಿತ್ರ ಕುರ್‌ಆನ್, 11:28)**

ಇದೇ ರೀತಿ ಪ್ರವಾದಿ ಸಾಲಿಹ್(ಅ) ಬಗೆಗೂ ಪವಿತ್ರ ಕುರ್‌ಆನ್ ಪ್ರಸ್ತಾಪಿಸಿದೆ.

**"ಓ ನನ್ನ ಜನಾಂಗ ಬಾಂಧವರೇ, ನಾನು ನನ್ನ ಪ್ರಭುವಿನ ಕಡೆಯಿಂದ ಸುಷ್ಪ ಪ್ರಮಾಣವನ್ನಿರಿಸಿಕೊಂಡಿದ್ದರೆ ಹಾಗೂ ಅವನು ತನ್ನ ಕೃಪೆಯನ್ನೂ ನನಗೆ ದಯಪಾಲಿಸಿದ್ದ ಆ ಬಳಿಕ ನಾನು ಅವನ ಆಜ್ಞೋಲ್ಲಂಘನೆ ಮಾಡಿದರೆ, ನನ್ನನ್ನು ಅಲ್ಲಾಹನ ಹಿಡಿತದಿಂ ರಕ್ಷಿಸುವವರಾರು? ನೀವು ಇದರ ಬಗ್ಗೆ ವಿವೇಚಿಸಿದಿರಾ? ನೀವು ನನ್ನನ್ನು ಇನ್ನಷ್ಟು ನಷ್ಟ ಗುರಿಪಡಿಸುವಿರೇ ವಿನಾ ಇನ್ನೇನು ಮಾಡಬಲ್ಲಿರಿ?" (ಪವಿತ್ರ ಕುರ್‌ಆನ್, 11:63)**

ಅಲ್ಲಾಹನ ಅಂತಿಮ ಪ್ರವಾದಿ ಮುಹಮ್ಮದರು(ಸ) ಸಂದೇಶ ಪ್ರಚಾರ ಕಾಯ ಆರಂಭಿಸಿದಾಗ ಅವಿವೇಕಿಗಳು, 'ಈ ವ್ಯಕ್ತಿ ಸ್ವತಃ ರಚಿಸಿ ದೇವನ ವಚನಗಳೆಂದು ಹೇಳುತ್ತಿದ್ದಾ ಎಂದು ತೀವ್ರವಾಗಿ ವಿರೋಧಿಸಿದರು. ಆದರೆ ಪವಿತ್ರ ಕುರ್‌ಆನ್ ಇಂತಹವರಿಗೆ ಸವಾಲೊಡ್ಡಿತ ಇದು ದೇವನ ವತಿಯಿಂದಲ್ಲವಾದರೆ ಇಂತಹ ವಚನ ಗಳನ್ನು ರಚಿಸಿ ತನ್ನಿರಿ ಎಂಬ ಪವಿ ಕುರ್‌ಆನಿನ ಸವಾಲು ಇಂದಿಗೂ ಹಾಗೆಯೇ ಉಳಿದಿದೆ. ಯಾಕೆಂದರೆ ದೇವನ ವಚನಗಳನ ಸುಳ್ಳಾಗಿಸುವವರು ದೇವನೊಡನೆ ಸ್ಪರ್ಧೆ ಗಿಳಿಯುತ್ತಾರೆ. ಆದರೆ ದೇವನೊಡನೆ ಪೈಪೋ ನಡೆಸಲು ಮತ್ತು ದೇವವಚನದಂತಿರುವುದನ್ನು ರಚಿಸಲು ಯಾರಿಂದಲೂ ಸಾಧ್ಯವಿಲ್ಲ.

ಪ್ರವಾದಿಯನ್ನು(ಸ) ಅಂದು ವಿರೋಧಿಸುತ್ತಿದ್ದವರು ಪ್ರಾಪಂಚಿಕ ಸುಖ ಸೌಕರ್ಯಗ ಆರಾಧಕರಾಗಿದ್ದರು. ಸತ್ಯವನ್ನು ವಿರೋಧಿಸಿದರೆ ನರಕಾಗ್ನಿಯೇ ಪರಿಣಾಮವೆಂಬ ಕಲ್ಪ ಅವರಲಿಲ್ಲ. ಇಂತಹ ಅಂಧಕಾರದಲ್ಲಿ ಜೀವಿಸುವುದೆಂದರೆ ಕತ್ತಲೆಯಲ್ಲಿ ತಡಕಾಡಿದಂತೆ ಎಂ ಪ್ರವಾದಿಗಳು ಕರೆ ನೀಡಿದ್ದರು. ಪಥಭ್ರಷ್ಟತೆ ಮತ್ತು ಅಂಧಕಾರ ಯಾವತ್ತಿದ್ದರೂ ಸತ್ಯಮಾಗ ಮತ್ತು ಪ್ರಕಾಶಗಳಿಗೆ ಸಮಾನವಲ್ಲ.

ಪೂರ್ಣ ಪ್ರಕಾಶದಲ್ಲಿರುವವರಿಗೆ ಪ್ರವಾದಿಯ ಸ್ಥಾನವು ದೊರೆಯುತ್ತದೆ. ಅವ ಸತ್ಯಪ್ರಿಯನೂ ಅಂಧಕಾರದಿಂದ ಸಂಪೂರ್ಣ ಮುಕ್ತನೂ ಆಗಿರಬೇಕು. ಪ್ರವಾ ಮುಹಮ್ಮದರು(ಸ) ಇಂತಹ ವ್ಯಕ್ತಿಯಾಗಿದ್ದರು. ಪವಿತ್ರ ಕುರ್‌ಆನ್ ಅವರನ್ನು ಹೀ ಉಲ್ಲೇಖಿಸಿದೆ.

"ತನ್ನ ಪ್ರಭುವಿನ ಕಡೆಯಿಂದ ಪ್ರತ್ಯಕ್ಷ ಪ್ರಮಾಣವನ್ನು ಪಡೆದ ವ್ಯಕ್ತಿಯು ಆ ಬಳಿಕ (ಆ ಪ್ರಮಾಣಕ್ಕೆ ಪೂರಕವಾಗಿ) ಪ್ರಭುವಿನ ಕಡೆಯಿಂದ ಒಂದು ಸಾಕ್ಷ್ಯವೂ ಬಂದಾಗ ಮತ್ತು ಅದಕ್ಕೆ ಮುಂಚೆ ಮಾರ್ಗದರ್ಶಿ ಹಾಗೂ ಕೃಪೆಯಾಗಿ ಬಂದಿದ್ದ ಮೂಸಾರ ಗ್ರಂಥವೂ ಇರುವಾಗ ಅವನು ಲೋಕೋಪಾಸಕರಂತೆ ಇದನ್ನು ನಿರಾಕರಿಸಬಲ್ಲನೇ?) ಇಂತಹವರು ಖಂಡಿತ ಇದರಲ್ಲಿ ವಿಶ್ವಾಸವಿರಿಸುವರು. ಯಾವುದಾದರೂ ಜನ ವಿಭಾಗವು ಇದನ್ನು ನಿರಾಕರಿಸಿದರೆ ಅದಕ್ಕೆ ವಾಗ್ದಾನ ನೀಡಲಾಗಿರುವ ಸ್ಥಾನವು ನರಕಾಗ್ನಿಯೇ, ಆದುದರಿಂದ ಓ ಸಂದೇಶವಾಹಕರೇ! ಇದರ ಬಗ್ಗೆ ನೀವು ಯಾವುದೇ ಸಂದೇಹಕ್ಕೊಳಗಾಗಬೇಡಿರಿ. ಇದು ನಿಮ್ಮ ಪ್ರಭುವಿನಿಂದ ಬಂದಿ ರುವ ಪರಮ ಸತ್ಯ. ಆದರೆ ಹೆಚ್ಚಿನವರು ವಿಶ್ವಾಸವಿರಿಸುವುದಿಲ್ಲ". (ಪವಿತ್ರ ಕುರ್‌ಆನ್, 11-17)

'ಆ ವ್ಯಕ್ತಿ' ಎಂದು ಈ ವಚನವು ಪ್ರವಾದಿ ಮುಹಮ್ಮದರನ್ನು(ಸ) ಸಂಬೋಧಿಸಿದೆ. ಪ್ರವಾದಿತ್ವಕ್ಕಿಂತ ಮೊದಲೇ ಪ್ರವಾದಿತ್ವವನ್ನು ಸ್ವೀಕರಿಸಲು ಸೂಕ್ತವಾದ ಪ್ರಕಾಶ ಮತ್ತು ಅಂತರ್ ದೃಷ್ಟಿಯನ್ನು ಅವರಿಗೆ ನೀಡಲಾಗಿತ್ತು ಎಂದು ಇಲ್ಲಿ ವಿವರಿಸಲಾಗುತ್ತಿದೆ. ಅಂದರೆ ಪ್ರವಾದಿ ಯಾಗುವ ವ್ಯಕ್ತಿಯ ಆತ್ಮ ಮತ್ತು ಹೃದಯಗಳ ಪರಿಷ್ಕರಣೆ ನಡೆಯುವುದು. ಆನಂತರವೇ ಅವರು ದೇವವಾಣಿಯನ್ನು ಸ್ವೀಕರಿಸಲು ಯೋಗ್ಯರೆನಿಸುವರು. ಆನಂತರ ದಿವ್ಯವಾಣಿ ಒಮ್ಮೆ ಲಭಿಸತೊಡಗಿದರೆ ಕಿಂಚಿತ್ತೂ ಗೊಂದಲವಿಲ್ಲದೆ ಇದು ದೇವನ ವತಿ ಯಿಂದ ಅವತೀರ್ಣ ವಾಗುತ್ತಿದೆ ಎಂದು ಅವರು ಅರಿತುಕೊಳ್ಳುವರು. ಪ್ರವಾದಿವರ್ಯರ(ಸ) ಪ್ರವಾದಿತ್ವಕ್ಕಿಂತ ಪೂರ್ವ ಜೀವನದಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಅವರ ಆತ್ಮ ಪರಿಶುದ್ಧ ವಾಗಿತ್ತು. ಸಕಲ ಕೆಡುಕುಗಳಿಂದ ಅವರು ಪರಿಶುದ್ಧರಾಗಿದ್ದರು. ಮನಸ್ಸಿನ ಮತ್ತು ಆತ್ಮದ ನಿಷ್ಕಳಂಕತೆಯು ಪ್ರವಾದಿವರ್ಯರ(ಸ) ವಿಶೇಷ ಗುಣವಾಗಿತ್ತು. ವಿಚಾರ ಗಳಲ್ಲಿ ಕರ್ಮಗಳಲ್ಲಿ ಕೆಡುಕಿನೊಂದಿಗೆ ಯಾವುದೇ ಸಂಬಂಧವಿರಲಿಲ್ಲ. ಕಪಟ ದೇವತೆಗಳ ಸಮಕ್ಷಮ ಅವರೆಂದೂ ತಲೆಬಾಗಿದವರಲ್ಲ. ಮೂರ್ತಿ ಪೂಜೆಯಿಂದ ಮಾರು ದೂರವಿದ್ದರು. ಮದ್ಯ ಸೇವನೆ-ಅಶ್ಲೀಲ ಕರ್ಮಗಳಂತಹ ಕೆಡುಕುಗಳನ್ನು ಅವರಲ್ಲಿ ಯೋಚಿಸುವುದಕ್ಕೂ ಸಾಧ್ಯವಿರಲಿಲ್ಲ. ಅವರ ಗಮನ ಎಲ್ಲವೂ ಏಕದೇವನ ಕಡೆಗಿತ್ತು. ಈ ರೀತಿ ನುಬುವ್ವತ್ (ಪ್ರವಾದಿತ್ವ)ಗಿಂತ ಮುಂಚಿನ ಪ್ರವಾದಿವರ್ಯರ(ಸ) ಜೀವನವು ಪ್ರವಾದಿತ್ವ ಸ್ವೀಕರಿಸಲು ಸರ್ವ ರೀತಿಯಲ್ಲಿ ಸಜ್ಜಾಗಿತ್ತು ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಪ್ರವಾದಿತ್ವ ಅವತೀರ್ಣಗೊಂಡ ಮೇಲೆ ಅವರಿಗೆ ಸದಾ ಪ್ರಿಯವಾಗಿದ್ದ ಸತ್ಯಕ್ಕೇ ಅವರು ಸ್ವಯಂ ಸಾಕ್ಷಿಯಾದರು. ಇನ್ನು ಪ್ರವಾದಿವರ್ಯರಿಗೆ(ಸ) ನುಬುವ್ವತ್ ಪ್ರಾಪ್ತವಾಯಿ ತೆಂದರೆ ಅದು ಪ್ರಕಾಶಕ್ಕೆ ಪ್ರಕಾಶ ಸೇರಿತೆಂದೇ ಅರ್ಥ. ಈ ಮೂಲಕ ಮಾಧುರ್ಯ ಮಾಧುರ್ಯವನ್ನೇ ಗೌರವಿಸಿತು ಎನ್ನಬಹುದು. ಸೌಂದರ್ಯವು ಸೌಂದರ್ಯವನ್ನು ಸ್ವಾಗತಿಸಿತು. ಪಾವಿತ್ರ್ಯವನ್ನು ಪಾವಿತ್ರ್ಯವು ಸಮರ್ಥಿಸಿತು ಎಂದು ಪ್ರವಾದಿವರ್ಯರಿಗೆ(ಸ) ಪ್ರವಾದಿತ್ವ ಲಬ್ಧಿಯನ್ನು

ವಿಶ್ಲೇಷಿಸಬಹುದಾಗಿದೆ. ಇನ್ನೊಂದು ಮಾತಿನಲ್ಲಿ, ದೇವನು ಪ್ರವಾದಿತ್ವದ ಸತ್ಯಕ್ಕೆ ಸ್ವಯಂ ಪ್ರವಾದಿಯನ್ನೇ ಸಾಕ್ಷಿಯಾಗಿಸಿರುವನು ಎಂದೂ ಹೇಳ ಬಹುದು. ಪ್ರವಾದಿತ್ವದ ನಂತರ ಪ್ರವಾದಿವರ್ಯರಿಗೆ(ಸ) ಸತ್ಯದ ವಿಸ್ತಾರವಾದ ಜ್ಞಾನ, ಅದರಂತೆ ವ್ಯವಹರಿಸಲು ಸೂಕ್ತವಾದ ಶಿಕ್ಷಣವನ್ನು ದಿವ್ಯವಾಣಿಯ ಮೂಲಕ ನೀಡಲಾಯಿತು ಎಂದೂ ವಿಶ್ಲೇಷಿಸಬಹುದು.

ಮೇಲಿನ ಪವಿತ್ರ ಕುರ್‌ಆನ್ ವಚನಗಳಲ್ಲಿ ಪ್ರತ್ಯಕ್ಷ (ಸ್ಪಷ್ಟ) ಪ್ರಮಾಣವೆಂದು ಸೂಚಿಸ ಲಾಗಿದೆಯಷ್ಟೇ. ಇದು ಅರಬಿ ಮೂಲದ 'ಬಯ್ಯಿನಃ' ಎಂಬ ಪದದ ಅನುವಾದವಾಗಿದೆ. ಪ್ರತ್ಯಕ್ಷ ಪ್ರಮಾಣ ಮತ್ತು ಆನಂತರ ಸಾಕ್ಷ್ಯವು ಬರುವುದೆಂದು ಪವಿತ್ರ ಕುರ್‌ಆನ್ ಸೂಚಿಸಿದೆ. ಪ್ರವಾದಿತ್ವಕ್ಕೆ ಮೊದಲು ಅವರು ಅದನ್ನು ಸ್ವೀಕರಿಸಲು ಯೋಗ್ಯವಾದ ಸತ್ಯಸಂಧರೇ ಆಗಿರುವರು. ಅಂದರೆ ಅವರಿಗೆ ವಹ್ಯ್ ಲಭಿಸುವ ಮೊದಲೇ ಅವರು ಸತ್ಯದ ಪ್ರಕಾಶದಲ್ಲಿರುತ್ತಾರೆ. ಅವರ ಬುದ್ಧಿ-ವಿವೇಕ, ಅಭಿರುಚಿ ಮತ್ತು ಚಾರಿತ್ರ್ಯವು ಅತ್ಯುತ್ತಮವೂ ಪವಿತ್ರವೂ ಆದ ಸ್ಥಿತಿಯಲ್ಲಿರುವುದು ಎಂದು ಪವಿತ್ರ ಕುರ್‌ಆನ್ ವಚನಗಳಿಂದ ತಿಳಿದು ಬರುತ್ತದೆ ಮತ್ತು ಪ್ರವಾದಿಗೆ ಅವತೀರ್ಣಗೊಳ್ಳುವ ದಿವ್ಯವಾಣಿಯು ರಹ್ಮತ್ (ದಯೆ) ರಿಝ್ಕ್ ಹಸನ್ (ಉತ್ತಮ ಜೀವನಾಧಾರ) ಮತ್ತು ಪ್ರಕಾಶವಾಗಿದೆ ಎಂದು ಈ ವಚನಗಳಿಂದ ವ್ಯಕ್ತವಾಗಿದೆ. ಇಂತಹ ಅನೇಕ ಉದಾಹರಣೆಗಳು ಪವಿತ್ರ ಕುರ್‌ಆನಿನಲ್ಲಿದೆ ಮತ್ತು ಪೂರ್ವ ದೈವಿಕ ಗ್ರಂಥಗಳಾದ ತೌರಾತ್-ಇಂಜೀಲ್‌ಗಳಲ್ಲಿಯೂ ಇವೆ.

ಅಲ್ಲಾಮಾ ಹಮೀದುದ್ದೀನ್ ಫರಾಹಿಯವರು(ರ) ಈ ರೀತಿ ಬರೆಯುತ್ತಾರೆ- "ದೇವನು ಪ್ರವಾದಿಗೆ ಸರ್ವ ಪ್ರಥಮವಾಗಿ ತೌಹೀದ್, ನಮಾಝ್, ಸಮರ್ಪಣೆಯ ಶಿಕ್ಷಣ ನೀಡುತ್ತಾನೆ. ಅದರಿಂದ ಪ್ರವಾದಿಗಳ ಹೃದಯವು ಶಾಂತವಾಗುತ್ತದೆ. ಆನಂತರ ಪ್ರವಾದಿಗಳ ಪ್ರಕೃತಿಗೆ ಆವಶ್ಯಕವಾಗಿರುವುದು ದಿವ್ಯವಾಣಿ ಮೂಲಕ ದೊರೆಯುತ್ತದೆ."[10]

ಏಕದೇವತ್ವ ಮತ್ತು ನಮಾಝ್‌ನ ಶಿಕ್ಷಣದ ಬಳಿಕ ಇಹ್‌ಸಾನ್, ಅರ್ಥಾತ್ ಒಳಿತಿನ ಶಿಕ್ಷಣವನ್ನು ಪ್ರವಾದಿಗಳಿಗೆ ನೀಡಲಾಗುವುದು. ನಮಾಝ್ ಮತ್ತು ಝಕಾತ್‌ಗಳು ಸಕಲ ಒಳಿತಿನ ಮೂಲಗಳಾಗಿವೆ. ಪ್ರವಾದಿಗಳು ಜನರನ್ನು ಅವುಗಳೆಡೆಗೆ ಆಮಂತ್ರಿಸುವರು. ಅವುಗಳ ಆಧಾರದಲ್ಲಿ ಸ್ವರ್ಗದ ಸೂಚನೆಯನ್ನು ನೀಡುವರು ಮತ್ತು ಪರಲೋಕದಲ್ಲಿ ಎದುರಿಸ ಬೇಕಾದ ಭಯಾನಕ ಸ್ಥಿತಿಯನ್ನು ವಿವರಿಸುವರು. ಅಂದರೆ ಸಕಲ ಕೆಡುಕುಗಳು ಮತ್ತು ವಿನಾಶಕ್ಕೆ ನಮಾಝ್ ಮತ್ತು ಝಕಾತ್ ಉಲ್ಲಂಘನೆ ಕಾರಣವೆಂದು ಜನರಿಗೆ ಪ್ರವಾದಿಗಳು ತಿಳಿಸುವರು.

ಪ್ರವಾದಿಗಳ ಶಿಕ್ಷಣದಿಂದ ಆತ್ಮವು ಅವರ ಶಿಕ್ಷಣ ಮೂಲವಾಗಿದೆ ಎಂದು ತಿಳಿಯುತ್ತದೆ. ಪ್ರವಾದಿಗಳು ಆತ್ಮವನ್ನು ಸಂಬೋಧಿಸಿ ಸತ್ಯದೆಡೆಗೆ ಕರೆ ನೀಡುತ್ತಾರೆ. ಅದಕ್ಕೆ ಸೂಕ್ತವಾದ ನಿಯಮ ಶಿಷ್ಟಾಚಾರಗಳನ್ನು ಅನುಸರಿಸಲು ಜನರಿಗೆ ಹೇಳುತ್ತಾರೆ. ಈ ಕುರಿತು ಪ್ರಿನ್ಸಿಪಾಲ್

10. ನೋಡಿರಿ, ಪವಿತ್ರ ಕುರ್‌ಆನ್, 20:12-16

ಕ್ರೆಡಿಟ್‌ರು ಈ ರೀತಿ ಉಲ್ಲೇಖಿಸಿದ್ದಾರೆ, "ಪರಮ ಸತ್ಯಕ್ಕೆ ಜೀವ (ಆತ್ಮವು) ಅಪರಿಚಿತವಾಗಿಲ್ಲ. ಎಂದು ವೇಳೆ ನಮಗೆ ಅದೆಲ್ಲಿಯೋ ದೂರದಲ್ಲಿದೆ ಎಂದೆನಿಸಿದರೂ ನಮ್ಮ ನಡುವೆಯೇ ಅದು ಇರುವುದು. ಪರಮ ಸತ್ಯಕ್ಕೆ ತಲೆ ಬಾಗುವುದರಿಂದ ನಮಗೆ ಯಾವ ಹಾನಿಯೂ ಸಂಭವಿಸದು. ನಾವು ಯಾವುದೋ ಬಾಹ್ಯ ದಮನಕಾರಿ ಕಾನೂನನ್ನು, ಅಥವಾ ಬಾಹ್ಯ ಸತ್ಯವನ್ನೂ ಸ್ವೀಕರಿಸಿ ದಂತಾಗುವುದಿಲ್ಲ. ಆ ಮೂಲಕ ನಾವು ನಮ್ಮದೇ ಪ್ರಕೃತಿಯ ಕಾನೂನನ್ನು, ಅನುಸರಿಸಿ ದಂತಾಗುವುದು. ಅಂದರೆ ನಮ್ಮ ಹೃದಯದ ಆಳದಲ್ಲಿ ಒಬ್ಬ ಆಡಳಿತಗಾರನಿದ್ದಾನೆ, ಅವನ ಆದೇಶಗಳನ್ನೇ ಪಾಲಿಸುತ್ತೇವೆ ಅಷ್ಟೇ."

ನಮ್ಮ ಮತ್ತು ದೇವನ ನಡುವೆ ಸಂಬಂಧವಿರುವುದರಿಂದ ದೇವಾದೇಶಗಳನ್ನು ಪಾಲಿಸುವುದು ತಪ್ಪಲ್ಲ. ಆ ಮೂಲಕ ನಮ್ಮದೇ ಪ್ರಕೃತಿಯನ್ನು ನಾವು ಗೌರವಿಸುತ್ತೇವೆ. ಭೂಮಿಯಲ್ಲಿರುವ ಪ್ರಾಣಿಗಳು ಕೂಡಾ ಪ್ರಕೃತಿಯ ಆದೇಶಗಳನ್ನು ಪಾಲಿಸಬೇಕಾಗಿದೆ. ಹೌದು, ಪ್ರಕೃತಿಯ ಆದೇಶಗಳನ್ನು ಅನುಸರಿಸಿಯೇ ಭೂಮಿಯಲ್ಲಿ ಅವು ಬದುಕುತ್ತವೆ.

ಜಗತ್ತು ಪ್ರಕೃತಿಯನ್ನು ಅನುಸರಿಸುತ್ತಿದೆ ಮತ್ತು ಈ ಅನುಸರಣೆಯಿಂದ ಜಗತ್ತಿನಲ್ಲಿ ಸಕಲ ಸೌಂದರ್ಯಗಳು ಗೋಚರಿಸುತ್ತಿವೆ. ಪ್ರಕೃತಿಯ ಅನುಸರಣೆಯಂತೆ ಜಗತ್ತಿನಲ್ಲಿ ಅಥವಾ ಪ್ರಕೃತಿಯ ದೈವಿಕ ನಿಯಮವನ್ನು ಪಾಲಿಸುವುದರಿಂದ) ಪ್ರತಿಯೊಂದು ಚಲನೆಗಳಾಗು ವುದನ್ನು ಕಾಣಬಹುದು.

ನಮಗೆ ಪ್ರವಾದಿಗಳ ಮೂಲಕ ಪ್ರಾಕೃತಿಕ ಮತ್ತು ನೈಸರ್ಗಿಕ ಆದೇಶಗಳ ಬಗ್ಗೆ ತಿಳಿಯುವುದು. ಅಂದರೆ ಪ್ರವಾದಿಯಿಂದ ನಾವು ವಾಸ್ತವಿಕ ಪ್ರಕೃತಿಯನ್ನು ಅರಿತು ಕೊಳ್ಳುತ್ತೇವೆ. ನಮ್ಮ ನೈಜ ಬಯಕೆ ಅಭಿಲಾಷೆಗಳನ್ನು ನಮಗೆ ಅವರಿಂದ ನಮಗೆ ತಿಳಿಯುವುದು. ಅಂದರೆ ಪ್ರವಾದಿಯು ಪ್ರಕೃತಿಯ ಧ್ವನಿಯಾಗಿದ್ದಾರೆ. ಅವರು ತಂದಿರುವ ಧರ್ಮ ಪ್ರಕೃತಿ ಧರ್ಮವಾಗಿದೆ. ಪ್ರಾಕೃತಿಕ ಆದೇಶವನ್ನು ಮಾರೂಫ್ (ಒಳಿತಿನಾದೇಶ) ಎನ್ನಲಾಗಿದೆ. ಪ್ರವಾದಿ ತೋರಿಸಿಕೊಟ್ಟಿರುವ ದಾರಿಯನ್ನು ಸಿರಾತೆ ಮುಸ್ತಕೀಮ್(ನೇರ, ಸಹಜ ಮಾರ್ಗ) ಎನ್ನಲಾಗಿದೆ.

ಪ್ರವಾದಿಗಳು ತಡೆಯುವ ಕಾರ್ಯವನ್ನು ಮುಂಕರ್ (ಕೆಡುಕು Unfamiliar) ಅವರ ಉಪದೇಶಗಳನ್ನು ತದ್‌ಕೀರ್ (ಅನುಸ್ಮರಣೆ) ಎನ್ನುತ್ತೇವೆ. ಪ್ರವಾದಿಗಳ ಕಾರ್ಯವು ಪ್ರಕೃತಿ ವಿರೋಧಿಯಲ್ಲ, ಮಾನವರಲ್ಲಿ ಮೂಲದಲ್ಲೇ ಇರುವ ವಿಚಾರವನ್ನು ಸ್ಪಷ್ಟಪಡಿಸು ವುದು ಅವರ ಕಾರ್ಯವಾಗಿದೆ. ಅದು ಅವರು ಮಾನವರಿಗೆ ಮಾಡುವ ಉಪಕಾರ ವಾಗಿದೆ. ಇದುದರಿಂದ ಪ್ರವಾದಿಗಳನ್ನು ವಿರೋಧಿಸುವವರಿಂದ ತಮ್ಮ ಕೃತ್ಯಗಳನ್ನು ಲೋಕಾಂತ್ಯದಂದು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಅವರು ಅಂದು ಸತ್ಯವನ್ನು ನಾವರಿಯೆವು ಎನ್ನಲಾರರು. ನಾವು ಕೃತಘ್ನರು, ಸತ್ಯವನ್ನು ನಿರಾಕರಿಸಿದವರು ಎಂದು ತಮ್ಮ ವಿರುದ್ಧವೇ ಅಂದು ಸಾಕ್ಷಿ

ನುಡಿಯುವರು. ಆ ರೀತಿ ಅವರು ತಮ್ಮ ಬಂಡಾಯವನ್ನು ಸ್ವಯಂ ಒಪ್ಪಿಕೊಳ್ಳುವರು.

ಈ ರೀತಿ ಪ್ರವಾದಿಗಳಿಂದ ಬಂದ ಧರ್ಮ ನೈಜ ಧರ್ಮವಾಗಿದೆ ಎಂದು ತಿಳಿದ ಬರುವುದು. ಆದುದರಿಂದ ಆ ಧರ್ಮದಂತೆ ನಮ್ಮ ನೈಜ ಬಯಕೆ- ಕಾಮನೆ-ಅಭಿಲಾ ಗಳೆಲ್ಲವೂ ಇರಬೇಕಾಗಿದೆ. ಇದನ್ನು ನಿರಾಕರಿಸುವುದು ಬಂಡಾಯವಾಗಿದೆ.

ಪ್ರವಾದಿಗಳು ಇಂತಹ ಜನಾಂಗಗಳ ಸುಧಾರಣೆಗಾಗಿ ಆಗಮಿಸುತ್ತಾರೆ. ಪ್ರವಾದಿಗ ಆಗಮನದೊಂದಿಗೆ ಆ ಜನಾಂಗಗಳ ಪರೀಕ್ಷೆ ಮತ್ತು ನಿರ್ಧಾರ ದಿನಗಳು ಎದುರಾಗುವುದ ಪವಿತ್ರ ಕುರ್‌ಆನ್ ಮತ್ತು ಅದಕ್ಕಿಂತ ಮುಂಚಿನ ದೈವಿಕ ಗ್ರಂಥಗಳಲ್ಲಿ ಈ ಕುರಿತು ಉಲ್ಲೇ ಗಳಿವೆ. ಅವುಗಳಲ್ಲಿ ಸತ್ಯಾಸತ್ಯ ಸಂಘರ್ಷದ ಮಾಹಿತಿಯಿದ್ದು ಅಂತಿಮವಾಗಿ ಸತ್ಯವೇ ಜಯ ಪಡೆದಿದೆ ಎಂದು ತಿಳಿಯುವುದು. ಸತ್ಯದ ಹಿಂಬಾಲಕರು ಕಡಿಮೆ ಸಂಖ್ಯೆಯಲ್ಲಿದ್ದರೂ ಅಪಾ ಸಂಖ್ಯೆಯಲ್ಲಿ ವಿರೋಧಿಗಳಿದ್ದರೂ ಕೊನೆಯದಾಗಿ ಸತ್ಯವೇ ಗೆದ್ದು ಪ್ರವರ್ಧಮಾನಕ್ಕೆ ಬಂದಿತ್ತ ಯಾಕೆಂದರೆ ಸತ್ಯವಿರೋಧಿಗಳ ವಿದ್ರೋಹವು ಮಿತಿ ಮೀರಿದಾಗ ದೈವಿಕ ಪ್ರಕೋಪದಿಂ ವಿರೋಧಿಗಳ ನಾಶ ಸಂಭವಿಸಿದೆ. ಇಂತಹ ವಿನಾಶಕ್ಕಿಂತ ಮೊದಲು ಅವರಿಗೆ ತಪ ಬಂಡಾಯವನ್ನು ತೊರೆದು ಸತ್ಯವನ್ನು ಬೆಂಬಲಿಸುವ ಕಾಲಾವಕಾಶವನ್ನು ನೀಡಲಾಗುತ್ತಿತ್ತ ಆದರೆ ವಿರೋಧಿಗಳು ತಮ್ಮ ನೀತಿಗೆ ಅಂಟಿ ಕೊಂಡು ಹೆಚ್ಚೆಚ್ಚು ವಿದ್ರೋಹದಲ್ಲಿ ಮುಳುಗಿದಾ ಅವರಿಗೆ ಭೂಮುಖದಲ್ಲಿ ಜೀವಿಸುವ ಅವಕಾಶವು ಕೊನೆ ಗೊಳ್ಳುವುದು. ಅವರ ನಾ ಸಂಭವಿಸುವುದು. ಸತ್ಯದ ಹಿಂಬಾಲಕರು ಕಡಿಮೆ ಸಂಖ್ಯೆ ಯಲ್ಲಿದ್ದರೂ ಇವರ ವಿರು ಜಯಗಳಿಸುವರು. ಯಾಕೆಂದರೆ ಅದು ದೇವೇಚ್ಛೆಯಾಗಿದೆ.

ಪ್ರವಾದಿತ್ವವನ್ನು ಪ್ರವಾದಿಗಳು ಸಂದೇಹಾತೀತವಾಗಿ ಗುರುತಿಸುತ್ತಾರೆ ಎಂಬ ವಿಚಾರವ ಈ ಮೊದಲು ಚರ್ಚಿಸಲಾಗಿತ್ತು. ತಾವು ಆಲಿಸಿದ್ದು, ವೀಕ್ಷಿಸಿದ್ದು ಎಲ್ಲವೂ ಸತ್ಯವಾಗಿದೆ ಎಂ ಅವರಿಗೆ ಖಚಿತವಾಗುವುದು. ಈ ರೀತಿ ಪ್ರವಾದಿಗಳಿಗೆ ದೇವನು ತೋರಿಸಿಕೊಡು ಸತ್ಯಸಂಗತಿಗಳು. ದೃಶ್ಯ ಅಥವಾ ಅದೃಶ್ಯ ರೂಪದಲ್ಲಿರಬಹುದು ಅಥವಾ ನೇರವಾ ಹೃದಯದೊಳಕ್ಕೆ ಸಿಗುವ ಜ್ಞಾನಗಳಾಗಿರಬಹುದು, ವಾಣಿಗಳಾಗಿರಬಹುದು ಅಥವಾ ದಿವ್ಯವಾ (Revolution)ಯೇ ಅವತೀರ್ಣವಾಗಿರಬಹುದು. ಇವೆಲ್ಲವೂ ದೇವನಿಂದ ಬಂದಿದೆ ಎಂ ಅವರು (ಪ್ರವಾದಿಗಳು) ನಿಸ್ಸಂದೇಹವಾಗಿ ತಿಳಿಯುತ್ತಾರೆ. ಇದರಲ್ಲಿ ಶೈತಾನನ ದು ಪ್ರಭಾವಗಳಿಲ್ಲ ಎಂದು ಅವರಿಗೆ ಸ್ಪಷ್ಟವಾಗಿ ತಿಳಿದಿರುತ್ತದೆ. ಯಾಕೆಂದರೆ ಪ್ರವಾದಿಗೆ ತಾನೋಪ ಪ್ರವಾದಿಯೆಂಬ ವಿಚಾರ ಖಚಿತವಾಗಿ ತಿಳಿದಿರುತ್ತದೆ.

ಪ್ರವಾದಿಗಳಿಗೆ ದೇವನ ಸತ್ಯ ದರ್ಶನವಾಗಿ ಅವರು ತಾನು ಪ್ರವಾದಿಯೆಂಬ ಅಚ ವಿಶ್ವಾಸವನ್ನು ಹೊಂದುವರು. ಮೀನಿಗೆ ಈಜಾಡುವ ಭರವಸೆಯಿರುವಂತೆ, ಹಕ್ಕಿಗಳಿಗೆ ಹಾರಾಡು

---

11. ಪವಿತ್ರ ಕುರ್‌ಆನ್, 6:130

ಶ್ವಾಸ ಇರುವಂತೆ ಪ್ರವಾದಿಗೂ ತಾನು ಪ್ರವಾದಿ ಎಂಬ ದೃಢ ವಿಶ್ವಾಸ-ಭರವಸೆಗಳು ೂಡುತ್ತವೆ. ಅಂದರೆ ತಾನು ಪ್ರವಾದಿಯೇ ಅಥವಾ ಪ್ರವಾದಿಯೆಂಬುದು ತನ್ನ ಭ್ರಮೆಯೇ ಂಬ ಚಂಚಲತೆ ಎಂದೂ ಪ್ರವಾದಿಗಳಿಗೆ ಆಗಲಾರವು. ಯಾಕೆಂದರೆ ಅವರು ದೇವನ ಪೂರ್ಣ ,ಕಾಶದಲ್ಲಿರುತ್ತಾರೆ ಮತ್ತು ಆ ಪ್ರಕಾಶದೆಡೆಗೆ ಜನರನ್ನು ಕರೆಯುತ್ತಾರೆ.

ಅನಂತರ ಪ್ರವಾದಿಗಳಿಗೆ ನೀಡಲಾದ ಸ್ಥಾನಕ್ಕೆ ಅರ್ಹವಾಗಿ ಆಕಾಶ ಭೂಮಿಗಳನ್ನು ವರಿಸಿರುವ ದೇವ ಸಾಮ್ರಾಜ್ಯವನ್ನು ತೋರಿಸಲಾಗುವುದು. ಅವರ ಮುಂದಿನಿಂದ ಭೌತಿಕ ವರಣಗಳು ಸರಿದು ಸತ್ಯದರ್ಶನವಾಗುವುದು. ಜನರು ಈ ಸತ್ಯದಲ್ಲಿ ಪರೋಕ್ಷ ವಿಶ್ವಾಸ ರಿಸಬೇಕೆಂದು ಪ್ರವಾದಿಗಳು ಕರೆ ನೀಡುತ್ತಾರೆ.

ಪ್ರವಾದಿಯ ಪದವು ಯಾವುದೇ ದಾರ್ಶನಿಕ ಪದವಲ್ಲ, ಅದಕ್ಕೆ ಸಂಪೂರ್ಣ ಭಿನ್ನವಾಗಿದೆ. ವರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಜ್ಞಾನ ದೊರೆಯುವುದು. ಈ ಆಧಾರದಲ್ಲಿ ಅವರ ಸ್ಥಾನ ರ್ಣಯಗೊಳ್ಳುವುದು. ಆದರೆ ದಾರ್ಶನಿಕನ ಮಾತುಗಳಿಗೆ ಊಹೆ ಮತ್ತು ಬುದ್ಧಿಯು ಧಾರವಾಗಿರುತ್ತದೆ. ಅವನು ಕಲ್ಪಿಸಿ ಹೇಳುವ ವಿಚಾರ ಎಷ್ಟು ಉನ್ನತ ಮತ್ತು ಸೂಕ್ಷ್ಮ ರ್ಶಿತ್ವದ್ದಾದರೂ ಪ್ರವಾದಿತ್ವಕ್ಕೆ ಸರಿಸಾಟಿಯಾಗಲಾರದು. ಅದು ಪ್ರವಾದಿಯ ಜ್ಞಾನ, ವ್ಯಕ್ತಿ ನುಭವ ಮತ್ತು ಅವಲೋಕನಗಳ ಮುಂದೆ ತಲೆ ಎತ್ತಿ ನಿಲ್ಲಲಾರದು.

ದಾರ್ಶನಿಕನ ದರ್ಶನ ಶಾಸ್ತ್ರದ ಅಧ್ಯಯನ ನಡೆಸಿದರೆ ನಮ್ಮ ಸಂದೇಹಗಳಿಗೆ ಪರಿಹಾರ ೂರೆಯುವುದಿಲ್ಲ. ಆದರೆ ನಮಗೆ ಶಾಂತಿ, ಅಲೌಕಿಕ ತೃಪ್ತಿ ಪ್ರವಾದಿಯ ಮೇಲೆ ವಿಶ್ವಾಸ ರಿಸಿದಾಗ ದೊರೆಯುತ್ತದೆ. ದಾರ್ಶನಿಕನೊಬ್ಬನು ಎಂದೂ ತಾನು ಸತ್ಯದ ಪ್ರತ್ಯಕ್ಷದರ್ಶಿ ಂದು ವಾದಿಸಲು ಸಾಧ್ಯವಿಲ್ಲ. ಕೇವಲ ಸಂಭಾವನೀಯತೆಗಳನ್ನಷ್ಟೇ ಮಾತನಾಡಲು ಅವನಿಗೆ ಾಧ್ಯವಿದೆ. ಈ ಹಂತವನ್ನು ಕೇವಲ ಪ್ರವಾದಿಗಳು ಮಾತ್ರ ಮೀರಿ ಮುಂದುವರಿಯುವರು. ,ವಾದಿಯ ಕರೆ ಮಾನವನ ಆತ್ಮದ ಧ್ವನಿಯಾಗಿ ಅದನ್ನು ಆಲಿಸಬೇಕೆಂದು ಪ್ರವಾದಿಗಳು ರಿಶ್ರಮಿಸುತ್ತಾರೆ.

ಪ್ರವಾದಿಗಳು ಮಾನವರ ಮೇಲೆ ಯಾವುದೋ ಅಪರಿಚಿತ ಮಾತುಗಳನ್ನು ಹೇರಲು ,ಯತ್ನಿಸುವುದಿಲ್ಲ. ಅವರು ತಮ್ಮ ಮಾತುಗಳ ಮೂಲಕ ಮಾನವರ ಮರೆವು, ಪ್ರಜ್ಞಾ ೂನ್ಯತೆ ಮತ್ತು ನಿರ್ಲಕ್ಷ್ಯಗಳನ್ನು ದೂರಗೊಳಿಸುತ್ತಾರೆ. ನಮ್ಮ ದೃಷ್ಟಿ ಮತ್ತು ಆಲಿಸುವ ಶಕ್ತಿಗೆ ೂನಚು ನೀಡುತ್ತಾರೆ. ಮಾನವರು ಹಾಗೂ ಸತ್ಯದ ನಡುವೆ ಆವರಿಸಿದ್ದ ತೆರೆಯನ್ನು ೨ಿಸಲು ಪ್ರಯತ್ನಿಸುತ್ತಾರೆ. ಒಂದು ವೇಳೆ ಅದು ಸರಿಯದಿದ್ದರೆ ಮಾನವರು ಕೊನೇ ಪಕ್ಷ ಂದಲ್ಲ ಒಂದು ರೀತಿಯಲ್ಲಿ ಪರೋಕ್ಷ ಜಗತ್ತಿನ (Unseen World) ಹೊಳಪನ್ನು ಒಂದು ಂತದ ವರೆಗಾದರೂ ಅನುಭವಿಸುವಂತಾಗಬೇಕೆಂದು ಅವರು ಬಯಸುತ್ತಾರೆ.

ಸತ್ಯದ ವಿರೋಧಿಗಳಿಂದ ಮಾನವನ ನೈಜ ಪ್ರಕೃತಿಯನ್ನು ಪೂರ್ಣವಾಗಿ ಅಳಿಸಿ

ಹಾಕಲು ಎಂದಿಗೂ ಸಾಧ್ಯವಿಲ್ಲ. ತಮ್ಮ ಮಿಥ್ಯವಾದಗಳ ಮುಖೇನ ಮಾನವರನ್ನು ಅ
ನೈಜ ಪ್ರಕೃತಿಯಿಂದ ದೂರ ಸರಿಸಲು ಪ್ರಯತ್ನವನ್ನಷ್ಟೇ ಅವರು ನಡೆಸಬಹುದು. ಮೇಲ್ನೋ
ಈ ಕಾರ್ಯದಲ್ಲಿ ಅವರು ಯಶಸ್ವಿಯಾಗಿದ್ದಾರೆಂದು ಅನಿಸುವುದಾದರೂ ಆಗಲೂ ಮಾನ
ನೈಜ ಪ್ರಕೃತಿ ಪ್ರಕಟವಾಗಲು ಒತ್ತಡ ಹೇರುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಪ್ರವಾದಿ
ಕರೆಯಿಂದ ಸತ್ಯವನ್ನು ಗುರುತಿಸಬಹುದು. ಪ್ರವಾದಿಗಳ ಪ್ರಯತ್ನ ಈ ದಿಸೆಯಲ್ಲಿ ಸಾಗುತ್ತ

ಎಲ್ಲ ಅಡ್ಡಿ ಆತಂಕಗಳನ್ನು ಮೀರಿ ಮಾನವರಿಗೆ ಸತ್ಯದರ್ಶನವಾಗಬೇಕು ಎ
ಆಶಾವಾದವು ಪ್ರವಾದಿಗಳಿಗಿರುತ್ತದೆ. ಕೆಸರಿನಲ್ಲಿ ಬಿದ್ದು ವಜ್ರವು ಹೊಳಪನ್ನು ಕಳೆದುಕೊಂ
ಅಕ್ಕಸಾಲಿಗನು ತಿದ್ದಿ ತೀಡಿ ಪರಿಶುದ್ಧಗೊಳಿಸುವಂತೆ, ಪ್ರವಾದಿಗಳು ಮಾನವರನ್ನು ಪರಿಶು
ಗೊಳಿಸಲು ಪ್ರಯತ್ನಿಸುತ್ತಾರೆ. ಪ್ರವಾದಿಯು ಜನರಿಗೆ ಸರ್ವಥಾ ಉಪಯುಕ್ತವಾದ ಸಂದೆ
ವನ್ನು (Message) ನೀಡುತ್ತಾರೆ. ಅದು ದೈವಿಕ ಸಂದೇಶವಾಗಿದ್ದು ಈ ಸಂದೇಶಕ್ಕೆ ನಿದ್ರಿಸು
ಆತ್ಮವನ್ನು ಎಚ್ಚರಗೊಳಿಸುವ ಸಾಮರ್ಥ್ಯವಿದೆ. ಈ ರೀತಿ ಓರ್ವ ನೆನಪಿಸುವವನ ಪಾತ್ರವ
ಪ್ರವಾದಿಗಳು ನಿಭಾಯಿಸುತ್ತಾರೆ ಎನ್ನಬಹುದು. ಅಂದರೆ ಮಾನವರ ಆತ್ಮವು ಮ
ವಿಷಯಗಳನ್ನು ಅವರು ನೆನಪಿಸುತ್ತಾರೆ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ವಿವರಿಸಿ

**"...ಅಲ್ಲಾಹನು ನಿಮ್ಮ ಕಡೆಗೆ ಒಂದು ಉಪದೇಶವನ್ನು ಅವತೀರ್ಣಗೊಳಿಸಿರುತ್ತಾ ಸತ್ಯವಿಶ್ವಾಸಿಗಳನ್ನೂ ಸತ್ಕರ್ಮವೆಸಗುವವರನ್ನೂ ಅಂಧಕಾರಗಳಿಂದ ಹೊರತೆಗೆದು ಪ್ರಕಾಶ ದೆ ಒಯ್ಯಲಿಕ್ಕಾಗಿ. ನಿಮಗೆ ಅಲ್ಲಾಹನ ಸುಸ್ಪಷ್ಟ ಮಾರ್ಗದರ್ಶವನ್ನು ನೀಡುತ್ತಿರುವ ಒಬ್ಬ ಸಂದೆ ವಾಹಕ." (ಪವಿತ್ರ ಕುರ್‌ಆನ್, 65:10-11)**

ಮಾನವರು ಏಕದೇವತ್ವ ಮತ್ತು ಕರ್ಮಫಲಗಳಲ್ಲಿ ವಿಶ್ವಾಸವಿರಿಸಬೇಕೆಂಬುದು ಪ್ರವಾದಿ
ಪ್ರಥಮ ಶಿಕ್ಷಣವಾಗಿದೆ. ಜನರು ಏಕದೇವನಲ್ಲಿ ವಿಶ್ವಾಸವಿರಿಸಿ ಆ ದೇವನ ಆದೇಶಗಳ
ಜೀವಿಸಬೇಕೆಂದು ಅವರು ಕರೆ ನೀಡುತ್ತಾರೆ. ಆ ದೇವನೇ ಸೃಷ್ಟಿಕರ್ತ, ಪಾಲಕ ಪ್ರಭು ಮ
ರಕ್ಷಕನಾಗಿದ್ದಾನೆ. ಮಾನವರ ಸರ್ವನಾಶ ದೇವೇಚ್ಛೆಯಲ್ಲ ಮಾನವರ ಪರಿಪೂರ್ಣತೆಗಾಗಿ
ಅವನು ಪ್ರವಾದಿತ್ವದ ವ್ಯವಸ್ಥೆಯನ್ನು ಮಾಡಿದ್ದಾನೆ. ಮಾನವನನ್ನು ಸ್ವರ್ಗಲೋಕಕ್ಕೆ ತಲುಪಿ
ವುದು ದೇವೇಚ್ಛೆಯಾಗಿದೆ. ಅದು ಅಂಧಕಾರವೇ ಇಲ್ಲದ, ಪ್ರಕಾಶಗಳಿರುವ ದುಃಖವೇ ಇಲ್ಲ
ಕೇವಲ ಸಂತೋಷವಿರುವ, ಯಾವ ಕಷ್ಟವೂ ಇಲ್ಲದ, ಅಮರತ್ವದ ಜೀವನವಿರುವ ಪರಿಪೂ
ಸ್ಥಾನವಾಗಿದೆ. ಆದರೆ ಇದನ್ನು ನೇರವಾಗಿ ತಲುಪುವಷ್ಟು ನಮ್ಮ ಆತ್ಮ ಪ್ರಬಲವಲ್ಲ. ಆದುದರಿ
ನಮ್ಮ ಆತ್ಮ ಪ್ರಬಲವಾಗಬೇಕು. ಅದಕ್ಕಾಗಿ ಮಾರ್ಗದರ್ಶನ ಆವಶ್ಯಕವಾಗಿದೆ. ಆ ಮಾರ್ಗದರ್ಶ
ಸಿಕ್ಕರೆ ಮಾನವರು ಪ್ರಬಲರಾಗುವರು, ಸಕಲ ಸಂದೇಹಗಳಿಂದ ಮುಕ್ತರಾಗುವರು.

ಏಕದೇವತ್ವ ಮತ್ತು ಕರ್ಮಫಲಗಳೆರಡೂ ಪರಸ್ಪರ ಸಂಬಂಧವಿರುವ ವಿಚಾರಗಳಾಗಿ

ಒಬ್ಬನು ಬರೇ ಬೋಧನೆಯಿಂದ (Enlightment) ಏಕದೇವತ್ವವಾದಿಯಾಗುವುದಿಲ್ಲ. ಅದಕ್ಕೆ ಜೀವನದಲ್ಲಿ ಏಕದೇವನ ಆದೇಶಗಳಂತೆ ಜೀವಿಸುವುದು ಅನಿವಾರ್ಯವಾಗಿದೆ.

ದೇವಾದೇಶಗಳ ಉಲ್ಲಂಘನೆ ಕೃತಘ್ನತೆಯಾಗಿದೆ. ಈ ಅಪರಾಧಕ್ಕಾಗಿ ಯಾತನೆಯನ್ನ ನುಭವಿಸಬೇಕು ಅಥವಾ ದೈವಿಕ ಶಿಕ್ಷೆಗೊಳಗಾಗಬೇಕೆಂದು ಇತಿಹಾಸವು ತಿಳಿಸುತ್ತಿದೆ. ಜಗತ್ತು ಯಾವುದೋ ಪರಮಸತ್ತೆಯಿರುವ ಅಧಿಕಾರದ ಅಧೀನವಾಗಿದೆ ಎಂದು ಈ ಮೂಲಕ ನಾವು ಅರಿಯಬಹುದು. ಭೌತಿಕ ಜೀವನದಲ್ಲಿಯೇ ಅದರ ಪ್ರಕೋಪ, ಯಾತನೆಗಳು ಗೋಚರಿಸಲು ಸಾಧ್ಯವಿದೆ. ಯಾವುದಾದರೂ ಜನಾಂಗಗಳು ಕೆಡುಕಿನಲ್ಲಿ ಮಿತಿ ಮೀರಿದಾಗ ಮತ್ತು ಅವುಗಳ ದೌರ್ಜನ್ಯ ಪರಾಕಾಷ್ಠೆಗೆ ತಲುಪಿದಾಗ ಆ ಜನಾಂಗವನ್ನು ಒಂದೋ ನಿಂದ್ಯವನ್ನಾಗಿ ಮಾಡಲಾಗುವುದು ಅಥವಾ ಅದನ್ನು ಸಂಪೂರ್ಣ ನಾಶಗೊಳಿಸಲಾಗುವುದು.

ಯಾಕೆಂದರೆ ದೇವನು ಈ ಜನಾಂಗಕ್ಕೆ ಪ್ರತಿಷ್ಠೆ ನೀಡಿರುವುದು ಕ್ಷೋಭೆ ಹರಡಲೆಂದು ಆಗಿರಲಿಲ್ಲ. ತಮ್ಮನ್ನು ಜಗತ್ತಿನಲ್ಲಿ ರಚನಾತ್ಮಕ ಅಥವಾ ನಿರ್ಮಾಣಾತ್ಮಕವಾಗಿ ತೊಡಗಿಸಿ ಕೊಳ್ಳಲಿ ಎಂದು ನೀಡಿದ್ದನು. ಜನಾಂಗಗಳು ಅಕ್ರಮಕ್ಕಿಳಿದಾಗ ಅದನ್ನು ಶಿಕ್ಷಿಸಲಾಗುತ್ತದೆ. ಯಾಕೆಂದರೆ ದೇವನು ಜಗತ್ತಿನಲ್ಲಿ ಅನ್ಯಾಯ ದೌರ್ಜನ್ಯಗಳನ್ನು ಸಹಿಸುವುದಿಲ್ಲ.

ನ್ಯಾಯ ಸಂಸ್ಥಾಪಿಸಿ ಮಾನವರ ಹಿತಕ್ಕಾಗಿ ದುಡಿಯುವ ಜನಾಂಗದ ಮೇಲೆ ದೇವ ಕೃಪೆಯಿರುತ್ತದೆ. ಪರಲೋಕದ ಪ್ರತಿಫಲ ಅಥವಾ ಕರ್ಮಫಲಗಳನ್ನು ನಿರ್ಣಯಿಸುವ ದಿನ ದೌರ್ಜನ್ಯಕೋರರಿಗೆ ಆವಶ್ಯಕವಾಗಿ ಶಿಕ್ಷೆ ದೊರೆಯುವುದು, ದೇವನ ಆಜ್ಞೆಯನ್ನು ಪಾಲಿಸಿದ ನಿಷ್ಠಾವಂತ ದಾಸರನ್ನು ಅಂದು ಅನುಗ್ರಹಿಸಲಾಗುವುದು. ಅವರವರ ಕರ್ಮಫಲಕ್ಕೆ ತಕ್ಕಂತೆ ಅಂದು ನಿರ್ಧಾರವಾಗುವುದು. ಪರಲೋಕದಲ್ಲಿ ಮಾನವರು ಯಾವುದನ್ನೂ ಅನುಚಿತವಾಗಿ ಎದುರಿಸಲಾರರು. ಅಲ್ಲಿ ಅವರವರ ಕರ್ಮಕ್ಕೆ ತಕ್ಕ ಪ್ರತಿಫಲ ದೊರೆಯುವುದು.

ವರ್ತಮಾನ ಲೋಕವನ್ನು ನಾವು 'ಇಂದು' (Today) ಎಂದು ಕರೆದರೆ, ಪರಲೋಕವನ್ನು ನಾವು 'ನಾಳೆ ' (Tomorrow) ಎಂದು ಕರೆಯುವೆವು. ಯಾವುದೇ ವ್ಯಕ್ತಿ ಅಥವಾ ಜನಾಂಗದ ಇಂದು ಉತ್ತಮವಾಗಿದ್ದರೆ ನಾಳೆ ಕೂಡಾ ಸುಂದರವಾಗಿರುವುದು. ಆದುದರಿಂದ ಬರಲಿರುವ ನಾಳೆಗಳು (ಪರಲೋಕದ ದಿನಗಳು) ಯಾರಿಗೆ ಸಂತಾಪಕರ ವಾಗಿರುತ್ತದೆ ಮತ್ತು ಯಾರಿಗೆ ಸಂತೋಷಕರವಾದುದೆಂದು ನಮ್ಮ ಇಂದಿನ (ವರ್ತಮಾನದ) ಆಧಾರದಲ್ಲಿ ನಿರ್ಧಾರವಾಗಲಿದೆ ಎಂದು ಹೇಳಬಹುದು.

ಪ್ರವಾದಿಗಳು ನೇರವಾಗಿ ಆಗಮಿಸಿರುವ ಮತ್ತು ಪ್ರವಾದಿಗಳನ್ನು ಪ್ರತ್ಯಕ್ಷವಾಗಿ ನೋಡದ ಜನಾಂಗಗಳೆರಡೂ ಸಮಾನವಲ್ಲ. ಅವೆರಡು ಬೇರೆ ಬೇರೆಯಾಗಿದೆ. ಪ್ರವಾದಿಯ ಕಾಲದ ಜನಾಂಗಗಳು ಅವರಿಂದ ನೇರ ಸಂದೇಶವನ್ನು ಆಲಿಸಿರುತ್ತವೆ. ಅಂದರೆ ಈ ಜನಾಂಗಕ್ಕೆ

ಪ್ರವಾದಿಗಳ ಚಾರಿತ್ರ್ಯ ಮತ್ತು ಸಂದೇಶ ನೇರವಾಗಿ ತಲುಪುತ್ತದೆ. ಈ ಜನಾಂಗವು ಪ್ರವಾದಿಗಳ ಜೀವನ ಮತ್ತು ಸತ್ಯಸಂಧತೆಯ ಪ್ರತ್ಯಕ್ಷದರ್ಶಿಯಾಗಿದೆ. ಈ ಜನಾಂಗದ ಮೇಲೆ ದೇವನ ಹೊಣೆ (ಹುಜ್ಜತ್) ಪೂರ್ಣಗೊಳ್ಳುವುದು. ಈ ಜನಾಂಗಗಳು ಒಂದು ವೇಳೆ ಪ್ರವಾದಿಯ ಮೇಲೆ ವಿಶ್ವಾಸವಿರಿಸದಿದ್ದರೆ ಅಥವಾ ವಿಶ್ವಾಸವಿರಿಸಲು ವಿಳಂಬಿಸಿದ್ದರೆ ಅದಕ್ಕಾಗಿ ಪರಲೋಕದಲ್ಲಿ ನೆಪಗಳಿಗೆ ಅವಕಾಶವಿರುವುದಿಲ್ಲ. ಅದು ಶಿಕ್ಷೆಗೆ ಗುರಿಯಾಗಬೇಕಾಗುವುದು. ಪ್ರವಾದಿಗಳ ಸಂದೇಶವನ್ನು ನಿರಾಕರಿಸಿ, ಪ್ರವಾದಿಗಳನ್ನು ಸುಳ್ಳಾಗಿಸಿದರೆ ಮತ್ತು ಪ್ರವಾದಿಗಳಿಗೆ ಪ್ರಾಣ ಬೆದರಿಕೆಯೊಡ್ಡಿದರೆ ಅಂತಹ ಜನಾಂಗ ವಿನಾಶಕ್ಕೊಳಗಾಗುವುದು. ಪ್ರವಾದಿಗಳನ್ನು ಪ್ರತ್ಯಕ್ಷವಾಗಿ ಕಂಡ ಈ ಜನಾಂಗಗಳ ಸುಧಾರಣೆಗೆ ಹೆಚ್ಚು ಅವಕಾಶವಿರುವುದಿಲ್ಲ. ಯಾಕೆಂದರೆ ಅವರು ಪ್ರವಾದಿಗಳನ್ನು ಸತಾಯಿಸಿ ದವರು ಪ್ರವಾದಿಗಳ ಅನುಯಾಯಿಗಳಿಗೆ ಎಲ್ಲ ರೀತಿ ತೊಂದರೆ ಯೊಡ್ಡಿದವರು. ಈ ಬಗ್ಗೆ ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ.

**ಇವರಿಗಿಂತ ಮುಂಚೆ ಗತಿಸಿದವರ ಪರಿಣಾಮವೇನಾಯಿತೆಂಬುದು ಇವರಿಗೆ ಕಾಣಿಸುವಂತಾಗಲು ಇವರು ಭೂಮಿಯಲ್ಲೆಂದೂ ಸಂಚರಿಸಿಲ್ಲವೇ? ಅವರು ಇವರಿಗಿಂತ ಹೆಚ್ಚು ಬಲಶಾಲಿಗಳಾಗಿದ್ದರು ಮತ್ತು ಇವರಿಗಿಂತ ಭದ್ರ ಸ್ಮಾರಕಗಳನ್ನು ಭೂಮಿಯಲ್ಲಿ ಬಿಟ್ಟು ಹೋಗಿರುವರು. ಆದರೆ ಅಲ್ಲಾಹನು ಅವರನ್ನು ಅವರ ಪಾಪಗಳಿಗಾಗಿ ಹಿಡಿದು ಬಿಟ್ಟನು. ಅವರನ್ನು ಅಲ್ಲಾಹನಿಂದ ರಕ್ಷಿಸುವವನಾರೂ ಇರಲಿಲ್ಲ. ಅವರ ಗತಿ ಹೀಗಾದುದೇಕೆಂದರೆ ಅವರ ಬಳಿ ಅವರ ಸಂದೇಶವಾಹಕರು ಸುಸ್ಪಷ್ಟ ನಿದರ್ಶನಗಳನ್ನು ತಂದಿದ್ದರು. ಅವರು ನಿರಾಕರಿಸಿಬಿಟ್ಟರು ಕೊನೆಗೆ ಅಲ್ಲಾಹನು ಅವರನ್ನು ಹಿಡಿದು ಬಿಟ್ಟನು. ನಿಶ್ಚಯವಾಗಿಯೂ ಅವನು ಪ್ರಬಲನು ಕಠಿಣವಾಗಿ ಶಿಕ್ಷಿಸುವವನೂ ಆಗಿರುತ್ತಾನೆ. (ಪವಿತ್ರ ಕುರ್‌ಆನ್, 40:21-22)**

ಇವೆಲ್ಲವೂ ಭೌತಿಕ ಜಗತ್ತಿನಲ್ಲಿ ಕಾಣಿಸುವ ಪರಿಣಾಮವಾಗಿದೆ. ಆದರೆ ಪರಲೋಕದಲ್ಲಿ ಅವರ ಸ್ಥಿತಿ ಇನ್ನಷ್ಟು ಕಠಿಣವಾಗಿರುವುದೆಂದು ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ

**ಎಲ್ಲ ಜನರೂ ಬಹಿರಂಗಗೊಳ್ಳುವ ಆ ದಿನ ಅವರ ಯಾವ ವಿಷಯವೂ ಅಲ್ಲಾಹನಿಂದ ಅಡಗಿರಲಾರದು. ಇಂದು ಪ್ರಭುತ್ವ ಯಾರದು? (ಎಂದು ಆ ದಿನ ಕೂಗಿ ಕೇಳಲಾಗುವುದು) ಏಕೈಕನೂ ಅಜೇಯನೂ ಆದ ಅಲ್ಲಾಹನದು. (ಎಂದು ಇಡೀ ವಿಶ್ವವು ಕೂಗಿ ಹೇಳುವುದು) (ಆಗ) ಇಂದು ಪ್ರತಿಯೊಬ್ಬ ಜೀವಿಗೆ ಅವನು ಸಂಪಾದಿಸಿದುದರ ಪ್ರತಿಫಲ ನೀಡಲಾಗುವುದು ಇಂದು ಯಾರ ಮೇಲೂ ಅನ್ಯಾಯ ಆಗದು. (ಎಂದು ಹೇಳಲಾಗುವುದು) ನಿಶ್ಚಯ ವಾಗಿಯೂ ಅಲ್ಲಾಹನು ಲೆಕ್ಕ ಪರಿಶೋಧನೆಯಲ್ಲಿ ಅತಿ ಶೀಘ್ರನಾಗಿರುತ್ತಾನೆ.**

**(ಪವಿತ್ರ ಕುರ್‌ಆನ್, 40:16-17**

ಪವಿತ್ರ ಕುರ್‌ಆನಿನ ಮೇಲಿನ ವಚನವು ಪ್ರವಾದಿಯ ಮೇಲೆ ವಿಶ್ವಾಸವಿರಿಸಿ ಅವ

ಾರ್ಗದರ್ಶನವನ್ನು ಸ್ವೀಕರಿಸಿದವರನ್ನು ಅದೃಷ್ಟಶಾಲಿಗಳೆಂದು ವಿವರಿಸಿದೆ. ಅವರು ಪ್ರಜ್ಞಾ ಶೂನ್ಯರಾಗದೆ ಅಶ್ರದ್ಧೆ ತೋರದೆ ತಮ್ಮದೇ ಹೃದಯದ ಧ್ವನಿ ಮತ್ತು ಹೃದಯ ಬಡಿತವನ್ನು ್ರವಾದಿಗಳ ಸಂದೇಶದಲ್ಲಿ ಆಲಿಸಿದರು. ಪ್ರವಾದಿಗಳ ಸಂದೇಶದ ನೈಜತೆಯನ್ನು ಮನಗಂಡು ್ರವಾದಿಯನ್ನು ತಮ್ಮ ಅಸ್ತಿತ್ವ, ಪ್ರಾಣಗಳಿಗಿಂತ ಮಿಗಿಲಾಗಿ ಪ್ರೀತಿಸಿದರು. ಪ್ರವಾದಿ ಮತ್ತು ಅವರ ನಡುವೆ ನಿಕಟ ಮತ್ತು ಸುಮಧುರ ಸಂಬಂಧಗಳಿದ್ದವು.

ಅಲ್ಲಾಮಾ ಹಮೀದುದ್ದೀನ್ ಫರಾಹಿ(ರ) ಹೀಗೆ ಬರೆದಿದ್ದಾರೆ-

"ಪ್ರವಾದಿಯು ಆ ವಿಶ್ವಾಸಿಗಳ ಸಂವೇದನಾಶೀಲ ಹೃದಯವಾಗಿರುತ್ತಾರೆ. ಅಂದರೆ ಅವರು ಪ್ರವಾದಿ ಯನ್ನು ಗುರುತಿಸಿ ಅವರ ಮಾರ್ಗದರ್ಶನವನ್ನು ಸ್ವೀಕರಿಸಿದರು. ಆದುದರಿಂದ ್ರವಾದಿಯ ಕಿವಿಯಿಂದ ಆಲಿಸುವ, ಕಣ್ಣಿಂದ ನೋಡುವ ಮತ್ತು ಅವರ ಹೃದಯ ಾಧ್ಯಮದಿಂದ ಅರಿಯುವ, ಅನುಭವಿಸುವ ಸೌಭಾಗ್ಯ ದೊರಕಿತು. ಆದರೆ ಈ ಅದೃಷ್ಟ ಂತರು ಮತ್ತು ಪ್ರವಾದಿಗಳ ನಡುವೆಯಿದ್ದ ಆಳವಾದ ಸಂಬಂಧ ಸಾಮಾನ್ಯ ಜನಾಂಗಗಳಿಗೆ ಅಪರಿಚಿತವಾಗಿದೆ. ಆದುದರಿಂದ ಅಧಕ್ಕೆ ಪ್ರವಾದಿ ಮತ್ತು ಪ್ರವಾದಿಯ ಆದೇಶಗಳನ್ನು ರಾಕರಿಸುವ ಮೂಲಕ ತಾವೇ ಅಪ್ರಾಮಾಣಿಕರಾಗಿದ್ದೇವೆ ಎಂಬ ಅರಿವಿಲ್ಲ."

ಆದರೆ ದೇವನು ಮಾನವನ ಮಾರ್ಗದರ್ಶನಕ್ಕಾಗಿ ಸಕಲ ಮಾಧ್ಯಮಗಳನ್ನು ಒದಗಿಸಿದ್ದಾನೆ. ಮಾನವರ ಅಂತರಾತ್ಮ, ಬುದ್ಧಿ, ವಿವೇಕ ಹಾಗೂ ಜಗತ್ತುಗಳಲ್ಲಿ ದೇವನ ಸಂಕೇತಗಳನ್ನು ಕಾಣಬಹುದಾಗಿದೆ. ಪ್ರವಾದಿಗಳನ್ನು ಪ್ರತ್ಯಕ್ಷ ನೋಡದಿದ್ದರೂ ಅವರಿಂದ ೇರ ಮಾರ್ಗದರ್ಶನ ದೊರಕದಿದ್ದರೂ ಈ ಸೂಕ್ಷ್ಮ ಸಂಕೇತಗಳು ಹಾಗೂ ಚಿಹ್ನೆಗಳ ಮೂಲಕ ತ್ಯವನ್ನು ಅರಿಯ ಬಹುದಾಗಿದೆ.

ಇದು ಮಾನವರ ಮೇಲೆ ದೇವಾನುಗ್ರಹವಾಗಿದೆ. ದೇವನಿಂದ ಪ್ರವಾದಿಗಳು ಯೋಜಿಸಲ್ಪಟ್ಟರು. ಮಾನವರಿಗೆ ಏಕದೇವತ್ವ ಮತ್ತು ಅದರ ಬೇಡಿಕೆಗಳು ದೇವನಿಗೆ ಕೃತಜ್ಞತೆ ರ್ಪಿಸುವ ಮಾರ್ಗವನ್ನು ಅವರು ತಿಳಿಸಿಕೊಟ್ಟರು. ದೇವ ನಿರಾಕರಣೆ ಅಥವಾ ಕೃತಜ್ಞತೆಗಳೆಂದರೇನು? ದೇವನ ಅಂಗೀಕಾರ ಅಥವಾ ಕೃತಜ್ಞತೆಯು ಹೇಗೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುವ ಗ್ರಂಥಗಳನ್ನು ದೇವನು ನೀಡಿರುವನು.

ದೇವನಿಗೆ ಮಾನವರು ಕೃತಜ್ಞರಾದರೆ ಒಳ್ಳೆಯ ಪರಿಣಾಮವಿದ್ದರೆ, ಕೃತಘ್ನರಾದರೆ ಕೆಟ್ಟ ಪರಿಣಾಮಗಳಿವೆ.

ಪ್ರವಾದಿಗಳ ಶಿಕ್ಷಣಗಳು ಜಗತ್ತಿನ ಮೇಲೆ ಆಳವಾದ ಪರಿಣಾಮವನ್ನು ಬೀರಿವೆ. ಪ್ರಪಂಚದಲ್ಲಿ ದೇವನ ಮತ್ತು ಪರಲೋಕ ನಂಬಿಕೆ ಕಂಡು ಬರುವಲ್ಲೆಲ್ಲ ಒಳಿತು, ಕೆಡುಕುಗಳ ಪರಾಮರ್ಶೆಯನ್ನು ಕಾಣುತ್ತೇವೆ. ದಯೆ, ಕರುಣೆಗಳು ವ್ಯಕ್ತವಾಗುತ್ತಿವೆ. ಇವೆಲ್ಲವೂ ಪ್ರವಾದಿಗಳ ಶಿಕ್ಷಣದ ಪ್ರಭಾವವಾಗಿದೆ. ಪ್ರಪಂಚದ ಬೇರೆ ಬೇರೆ ಜನಾಂಗಗಳಲ್ಲಿ ಪ್ರವಾದಿ ಶಿಕ್ಷಣಗಳ

ಪ್ರಭಾವ ಕಂಡು ಬರುತ್ತದೆ. ಆದರೆ ಈ ವಾಸ್ತವಿಕತೆಯನ್ನು ಅವರ ನಂಬಿಕೆಯ ಮೂ
ಉಗಮವನ್ನು ಅವರು ಗುರುತಿಸಲು ಸಮರ್ಥರಾಗಿಲ್ಲ.

## ಪ್ರವಾದಿಗಳ ಆಗಮನದ ಆವಶ್ಯಕತೆ

ಮೇಲಿನ ವಿವರಣೆಗಳಿಂದ ನಾವು ಪ್ರವಾದಿಯು ಜಗತ್ತಿಗೆ ಮಾನವರ ಜೀವ ಉದ್ದೇಶವನ್ನು ತಿಳಿಸಲು ಆಗಮಿಸುತ್ತಾರೆಂದು ತಿಳಿದೆವು. ಮಾನವರನ್ನು ಯ ಯೋಜನೆಯಂತೆ ದೇವನು ಸೃಷ್ಟಿಸಿದ್ದಾನೆ. ಮಾನವ ಜೀವನದ ಗುರಿಯೇನು? ಸತ್ತ ಮೆ ಜೀವನವಿದೆಯೇ, ಇಲ್ಲವೇ? ಈ ಅದೃಶ್ಯ(Unseen) ವಿಚಾರಗಳ ರಹಸ್ಯವ ಬಹಿರಂಗಗೊಳಿಸುವುದಕ್ಕಾಗಿ ಪ್ರವಾದಿಗಳು ನಿಯೋಜಿಸಲ್ಪಟ್ಟಿದ್ದಾರೆ.

ಮಾನವರಿಗೆ ಪ್ರವಾದಿಗಳ ಮಾರ್ಗದರ್ಶನದ ಹೊರತು ಪರೋಕ್ಷವನ್ನು ಅರಿಯ ಬೇರೆ ಯಾವುದೇ ವಿಶ್ವಸನೀಯ ಸಾಧನವಿಲ್ಲ. ಮಾನವರ ಬದುಕಿನ ಪರೋಕ್ಷ ಭಾಗ ಅಮೂಲ್ಯವಾಗಿದೆ. ಆದುದರಿಂದ ನಾವು ಪರೋಕ್ಷದ ಜ್ಞಾನವನ್ನು ಪಡೆಯುವು ಆವಶ್ಯಕವಾಗಿದೆ. ಇದು ನಮ್ಮ ಇಂದಿನ ಆವಶ್ಯಕತೆಯಾಗಿದೆ. ಪರೋಕ್ಷದ ಜ್ಞಾನದ ಹೊ ನಮ್ಮ ಜೀವನ ಮೌಲ್ಯವನ್ನು ನಿರ್ಧರಿಸುವುದು ಅಸಂಭವವಾಗಿದೆ. ಜೀವನ ಮೌಲ್ಯವ ಅರಿಯದಿರುವುದು ನಮ್ಮ ಜೀವನದೊಂದಿಗೆ ತೋರಿಸುವ ನಿರ್ಲಕ್ಷ್ಯವಾಗುತ್ತದೆ. ನ್ಯಾಯ ಬೇಡಿಕೆಯಂತೆ ಮುಂದೆ ಇದು ದೊಡ್ಡ ಅಪರಾಧವಾಗಿದೆ. ದೇವನ ಶಿಕ್ಷಣದಿಂದ ಮಾತ್ರ ನಾ ಪರೋಕ್ಷ ಜ್ಞಾನವನ್ನು ಗಳಿಸಿಕೊಳ್ಳಬಹುದು. ಆ ಶಿಕ್ಷಣವನ್ನು ನಮಗೆ ಪ್ರವಾದಿಗಳು ಕಲಿಸುತ್ತಾ ಮಾನವನು ಏನೇ ಹೇಳಿದರೂ ಅದೊಂದು ಊಹೆ-ಅಂದಾಜು ಮಾತ್ರವಾಗುವು ಊಹೆಗಳಾಗಲಿ, ಅಂದಾಜುಗಳಾಗಲಿ ಸತ್ಯಕ್ಕೆ ಸಮಾನವಲ್ಲ.

ನಮ್ಮ ಜೀವನದ ನೈಜ ರೂಪುರೇಷಗಳಿಗಾಗಿ ಜೀವನದ ಪರೋಕ್ಷ ಭಾಗಗಳ ಅ ಆವಶ್ಯಕವಾಗಿವೆ. ಆದುದರಿಂದ ಮಾನವನು ಅದರ ಪರಿಪೂರ್ಣ ಜ್ಞಾನ ಹೊಂದುವು ಅವನ ಮೂಲಭೂತ ಆವಶ್ಯಕತೆಯಾಗಿದೆ. ಅದಕ್ಕಾಗಿ ದೇವನಿಂದ ಪ್ರವಾದಿಗಳ ಸ ಜಾರಿಗೊಂಡಿತು.

**"ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಈಗ ನೀವು ಇರುವ ಸ್ಥಿತಿಯಲ್ಲಿ ಎಷ್ಟು ಮಾತ್ರ ಇರಗೊಡಲಾರನು. ಅವನು ಶುದ್ಧರನ್ನು ಅಶುದ್ಧರಿಂದ ಬೇರ್ಪಡಿಸಿಯೇ ತೀರುವನು. ಆ ನಿಮಗೆ ಅಗೋಚರವನ್ನು ತಿಳಿಯಪಡಿಸುವುದು ಅಲ್ಲಾಹನ ಪದ್ಧತಿಯಲ್ಲ. (ಪರೋಕ್ಷ ಜ್ಞ ನೀಡುವುದಕ್ಕಾಗಿ) ಅಲ್ಲಾಹನು ತನ್ನ ಸಂದೇಶವಾಹಕರಲ್ಲಿ ಇಷ್ಟ ಬಂದವರನ್ನು ಆಯ್ದು ಕೊಳ್ಳುತ್ತಾ ಆದುದರಿಂದ (ಪರೋಕ್ಷ ವಿಷಯಗಳ ಕುರಿತು) ಅಲ್ಲಾಹ್ ಮತ್ತು ಅವನ ಸಂದೇಶವಾಹ ಮೇಲೆ ವಿಶ್ವಾಸವಿರಿಸಿರಿ..." (ಪವಿತ್ರ ಕುರ್‌ಆನ್, 3:179)**

"ಅವನೇ ಅಲ್ಲಾಹ್. ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅವನು ಮ್ರಾಟನು, ಪರಮ ಪಾವನನು, ಸಾದ್ಯಂತ ಮಂಗಲಮಯನು, ಶಾಂತಿದಾತನು, ರಕ್ಷಕನು, ಪ್ರಬಲನು, ತನ್ನ ಆಜ್ಞೆಯನ್ನು ಶಕ್ತಿಯಿಂದ ಅನುಷ್ಠಾನಿಸಿ ಬಿಡುವವನು, ಸದಾ ರ್ವೋನ್ನತನಾಗಿಯೇ ಇರುವವನು, ಜನರು ಮಾಡುತ್ತಿರುವ ಸಹಭಾಗಿತ್ವದಿಂದ ಅಲ್ಲಾಹನು ಶುದ್ಧನು." (ಪವಿತ್ರ ಕುರ್‌ಆನ್, 59:23)

ಈ ಪವಿತ್ರ ವಚನಗಳು ದೇವನನ್ನು ಸಾಮ್ರಾಟ ಎಂದು ಕರೆದಿದೆ. ಸಾಮ್ರಾಟ ತನ್ನ ತಿಯೊಬ್ಬ ಪ್ರಜೆಗಳೊಂದಿಗೆ ನೇರ ಸಂಪರ್ಕವಿರಿಸುವುದಿಲ್ಲ. ವಿಶೇಷ ದೂತರ ಮೂಲಕ ಪರ್ಕ ಇರಿಸುತ್ತಾನೆ. ಇದು ಸಾಮ್ರಾಟನ ಘನತೆಗೆ ಶೋಭಿಸುವ ನೀತಿಯಾಗಿದೆ. ಸಾಮ್ರಾಟನು ಜೆಗಳಿಗೆ ತನ್ನ ಆದೇಶಗಳು ತಲುಪಬೇಕು. ಅವರು ಅದನ್ನು ಪಾಲಿಸುತ್ತಾ ಸುಖವಾಗಿರ ಕೆಂದು ಬಯಸುತ್ತಾನೆ. ದೇವನಾದರೋ? ಪ್ರಪಂಚದ ಸೃಷ್ಟಿಕರ್ತ ಮತ್ತು ಸಾಮ್ರಾಟ ಗಿರುವನು. ಈ ಸಾಮ್ರಾಟನನ್ನು ಸ್ವಾಭಿಮಾನಿ, ಪ್ರಭು, ಸುಖ ಶಾಂತಿದಾತನೆಂದು ಪವಿತ್ರ ರ್‌ಆನ್ ವಿವರಿಸಿದೆ. ತನ್ನ ಆದೇಶಗಳನ್ನು ಅವನು ತನ್ನ ಪ್ರತಿನಿಧಿ ಅಥವಾ ದೂತರ ಲಕ ತಲುಪಿಸುವ ಏರ್ಪಾಟು ಮಾಡಿದ್ದಾನೆ. ಈ ರೀತಿ ಪ್ರವಾದಿಗಳ ಮೂಲಕ ಜನರ ್ಯಾಣದ ಯೋಜನೆಗಳನ್ನು ಜನರ ಮುಂದಿರಿಸಿ ಅವರಿಗೆ ಮನವರಿಕೆ ಮಾಡಿಸುವುದು ಈ ಮ್ರಾಟನ ಉದ್ದೇಶವಾಗಿದೆ. ಸಾಮ್ರಾಟ ಅಥವಾ ದೇವನ ವತಿಯಿಂದ ಇದು ಸಹಜ ಮತ್ತು ಭಾವಿಕವಾಗಿ ಸಂಭವಿಸುವುದು. ಪ್ರಜೆಗಳ ಕಾಳಜಿ, ಸುಖ ಸೌಕರ್ಯ ಉನ್ನತಿಯನ್ನು ಪೇಕ್ಷಿಸದವನು ವಿವೇಕಿಯಾದ ಆಡಳಿತಗಾರನಲ್ಲವಷ್ಟೇ?

ಪ್ರವಾದಿಗಳು ಮತ್ತು ಸಂದೇಶವಾಹಕರು ಜಗತ್ತಿನ ನೈಜ ಸಾಮ್ರಾಟನಾದ ದೇವನ ದೇಶಗಳನ್ನು ಜನರೆಡೆಗೆ ತಲುಪಿಸುತ್ತಾರೆ. ಈ ಆದೇಶಗಳನ್ನು ಜನರು ಅನುಸರಿಸಿದರೆ ವನು ಸಂತೃಪ್ತನಾಗುವನು. ಇಲ್ಲದಿದ್ದರೆ ದೇವನ ಕ್ರೋಧಕ್ಕೀಡಾಗಬೇಕಾಗುವುದೆಂದು ವಾದಿಗಳು ಎಚ್ಚರಿಸುತ್ತಾರೆ.

ಪ್ರವಾದಿಗಳು ಮತ್ತು ಸಂದೇಶವಾಹಕರಿಂದ ದೈವಿಕ ಆದೇಶಗಳು ಮಾತ್ರವಲ್ಲ ಜೀವನದ ಲಭೂತ ಆವಶ್ಯಕತೆಯಾಗಿರುವ ಪರೋಕ್ಷ ಜ್ಞಾನವನ್ನೂ ಪಡೆಯಬೇಕಾಗಿದೆ. ವಾಸ್ತವದಲ್ಲಿ ವರು ನೀಡುವ ಸಂದೇಶವು ಮಾನವರ ಪ್ರಕೃತಿಗೆ ಅಪರಿಚಿತವಲ್ಲ, ಮೂಲತಃ ಅದು ನವನ ಆಂತರ್ಯದಲ್ಲಿರುವ ವಿಷಯವಾಗಿದೆ. ಅವರು ಮಾನವನ ಆಳದಲ್ಲಿ ಸುಪ್ತ ಗಿರುವ ನೈಜ ನಿಯಮಗಳನ್ನೇ ನೆನಪಿಸಿಕೊಡುತ್ತಾರೆ. ಮಾನವರ ಸ್ವಭಾವದಲ್ಲಿ ಸಮರ್ಪಣೆ, ರಾಧನಾ ಭಾವ ಮುಂತಾದ ಮೂಲ ಗುಣಗಳನ್ನು ನಾವು ಕಾಣುತ್ತೇವಲ್ಲವೇ? ಪ್ರವಾದಿಗಳು ನ್ನಲ್ಲಿರುವ ಈ ಅಭಿರುಚಿಗಳನ್ನು ಅಳಿಸಿ ಹಾಕುವ ಕುಚೇಷ್ಟೆಗಿಳಿಯಬೇಡಿರಿ ಎಂದು

ಎಚ್ಚರಿಸುತ್ತಾರೆ. ಮಾನವರು ನಿರ್ಲಕ್ಷ್ಯ ಅಜ್ಞಾನಗಳಿಂದ ಎಚ್ಚರಾಗದಿದ್ದರೆ ತಮ್ಮ ಕಲ್ಯಾಣ ಸಾಧ್ಯತೆಗಳನ್ನೇ ಮುಚ್ಚಿದಂತಾಗುವುದು ಎಂದು ಪ್ರವಾದಿಗಳು ಎಚ್ಚರಿಸುತ್ತಾರೆ.

ಭೌತಿಕ ಲೋಕದ ಸೌಕರ್ಯಗಳು ಮಾನವ ಭೌತಿಕ ಆವಶ್ಯಕತೆಗಳನ್ನಷ್ಟೇ ಪೂರೈಸ ವುದು. ಅವನ ನಿರೀಕ್ಷೆಯಲ್ಲಿರುವ ಆದರೆ ಮಾನವರನ್ನು ನಿರೀಕ್ಷಿಸುತ್ತಿರುವ ಶಾಶ್ವತ ಜೀವ (ಪರಲೋಕ)ಕ್ಕೆ ಇದ್ಯಾವುದೂ ಪ್ರಯೋಜನವಿಲ್ಲ ಎಂಬ ವಸ್ತುಸ್ಥಿತಿಯನ್ನು ಪ್ರವಾದಿ ಗಳ ಜನರಿಗೆ ನೆನಪಿಸಿಕೊಡುತ್ತಾರೆ. ದೇವನು ತನ್ನ ಹೊಣೆಯನ್ನು(ಹುಜ್ಜತ್ತನ್ನು) ಪ್ರವಾದಿ ಗಳನ ಕಳುಹಿಸುವ ಮೂಲಕ ಪೂರ್ಣಗೊಳಿಸುತ್ತಾನೆ. ಆದ್ದರಿಂದ ದೇವನ ಮುಂದೆ ನಾವು ಸತ್ಯದಿಂ ಅಪರಿಚಿತವಾಗಿದ್ದೆವು. ಯಾರಾದರೂ ಮಾರ್ಗದರ್ಶನ ನೀಡುತ್ತಿದ್ದರೆ ಕೃತಜ್ಞತೆಯ ದಾರಿಯನ ಅನುಸರಿಸುತ್ತಿದ್ದೆವು ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪ್ರವಾದಿಗಳು ಆಗಮಿ ಸಂದೇಶವನ್ನು ತಲುಪಿಸಿದ ನಂತರ ಜನರು ಯಾವುದೇ ನೆಪಗಳನ್ನು ಹೇಳಿ, ರಕ್ಷ ಪಡೆಯುವುದು ಸಾಧ್ಯವಿಲ್ಲವೆಂದು ಪವಿತ್ರ ಕುರ್‌ಆನ್ ಎಚ್ಚರಿಸುತ್ತದೆ.

**"ಓ 'ಯಕ್ಷ' ಮತ್ತು ಮಾನವ ವರ್ಗವೇ, ನಿಮಗೆ ನನ್ನ ನಿದರ್ಶನಗಳನ್ನು ಕೇಳಿಸುತ ಇಂದಿನ ಪರಿಣಾಮದ ಬಗ್ಗೆ ಎಚ್ಚರಿಸಲಿಕ್ಕಾಗಿ ನಿಮ್ಮ ಬಳಿಗೆ ನಿಮ್ಮೊಳಗಿಂದಲೇ ಸಂದೇ ವಾಹಕರು ಬಂದಿರಲಿಲ್ಲವೇ? (ಎಂದೂ ಆ ಸಂದರ್ಭದಲ್ಲಿ ಅಲ್ಲಾಹನು ಅವರೊಡನೆ ಕೇಳುವನ ಅವರು, 'ನಿಜ. ನಮ್ಮ ವಿರುದ್ಧ ನಾವೇ ಸಾಕ್ಷಿ ಹೇಳುತ್ತೇವೆ' ಎನ್ನುವರು. ಇಂದು ಲೌಕ ಜೀವನವು ಇವರನ್ನು ವಂಚನೆಗೊಳಪಡಿಸಿರುತ್ತದೆ. ಆದರೆ ಆಗ ಅವರು ನಾ ಸತ್ಯನಿಷೇಧಿಗಳಾಗಿದ್ದೆವೆಂದು ತಮ್ಮ ವಿರುದ್ಧ ತಾವೇ ಸಾಕ್ಷಿ ಹೇಳುವರು."**

**(ಪವಿತ್ರ ಕುರ್‌ಆನ್, 6:13**

ಇನ್ನೊಂದೆಡೆ ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ-

**"ಅವನು ಈ ಸಂದೇಶವಾಹಕರೆಲ್ಲರನ್ನು ನಿಯೋಗಿಸಿದ ಬಳಿಕ ಜನರ ಬಳಿ ಅಲ್ಲಾಹ ಗೆದುರು ವಾದವುಳಿಯದಂತಾಗಲು ಅವರನ್ನು ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರನ್ನಾ ಮಾಡಿ ಕಳುಹಿಸಿದ್ದನು. ಅಲ್ಲಾಹನು ಪ್ರತಾಪಶಾಲಿಯೂ ಯುಕ್ತಿ ಪೂರ್ಣನೂ ಆಗಿರುತ್ತಾನೆ.**

**(ಪವಿತ್ರ ಕುರ್‌ಆನ್, 4:16**

✧ ✧ ✧

ಅಧ್ಯಾಯ-6

# ಪ್ರವಾದಿಗಳ ಇತಿಹಾಸ

ಸಕಲ ಮಾನವರು ಒಂದೇ ತಂದೆ ತಾಯಿಯ ಸಂತಾನವಾಗಿದ್ದಾರೆ. ನಾವೆಲ್ಲರೂ ಪ್ರಥಮ ಮಾನವ ಮತ್ತು ಪ್ರವಾದಿ ಆದಮ್‌ರ(ಅ) ಮಕ್ಕಳಾಗಿದ್ದೇವೆ. ಆದಮ್‌ರು(ಅ) ತಮ್ಮ ಸಂತಾನಗಳಿಗೆ ದೇವನ ಆದೇಶಗಳನ್ನು ಹೇಳಿಕೊಡಬೇಕೆಂದು ದೇವನು ಆದೇಶಿಸಿದನು. ಅದರಂತೆ "ದೇವನೊಬ್ಬನೇ ಅವನಲ್ಲದೆ ಅನ್ಯ ಆರಾಧ್ಯನಿಲ್ಲ, ಅವನೇ ನಿಮ್ಮ ಪ್ರಭು. ಅವನ ಆದೇಶಗಳ ಪಾಲನೆಯಿಂದ ಜೀವನದಲ್ಲಿ ಅವನ ಸಂತೃಪ್ತಿಗೆ ಪ್ರಯತ್ನಿಸಬೇಕು. ನೀವು ಸಹಾಯಕ್ಕಾಗಿ ದೇವನನ್ನು ಪ್ರಾರ್ಥಿಸಿರಿ. ಭೂಮಿಯಲ್ಲಿ ಅವನಿಗೆ ಮಾತ್ರ ಕೃತಜ್ಞರಾಗಿ ಜೀವಿಸಿರಿ. ಹೀಗೆ ಮಾಡಿದರೆ ನೀವು ನ್ಯಾಯದಲ್ಲಿರುವಿರಿ. ನಿಮಗೆ ಮೋಕ್ಷ (ಶಾಶ್ವತತೆ) ಲಭಿಸುವುದು. ಆನಂತರ ಅಲ್ಲಿ ನಿಮಗೆ ಆನಂದಕರವಾದ ಜೀವನವಿದೆ. ಅಲ್ಲಿ ದುಃಖ ಪರಿತಾಪಗಳಿಲ್ಲ, ಯಾವುದೇ ರೀತಿಯ ಕೊರತೆಗಳಿಲ್ಲ" ಎಂದು ಆದಮರು(ಅ) ಸಂತಾನಗಳಿಗೆ ಕಲಿಸಿದ್ದರು.

ಕ್ರಮೇಣ ಆದಮರ(ಅ) ಸಂತಾನವು ಭೂಮಿಯ ವಿವಿಧ ಭಾಗಗಳಿಗೆ ಹರಡಿ ವಿವಿಧ ಜನಾಂಗಗಳು ತಲೆ ಎತ್ತಿದವು. ಕ್ರಮೇಣ ಅವರು ದೇವಾದೇಶಗಳನ್ನು ಮರೆತರು. ಕೆಡುಕುಗಳು ಸಂಭವಿಸಿತು. ತುಚ್ಛ ಬಯಕೆಗಳ ಈಡೇರಿಕೆಗಾಗಿ ನಾನಾ ಸಂಪ್ರದಾಯಗಳನ್ನು ಅವರು ಹುಟ್ಟು ಹಾಕಿದರು. ಬೇರೆ ಬೇರೆ ಮತಗಳಾದವು. ದೇವಾದೇಶಗಳನ್ನು ಸಂಪೂರ್ಣವಾಗಿ ಮರೆತರು. ಹೀಗೆ ಇವರ ಸುಧಾರಣೆಗಾಗಿ ದೇವನು ಪ್ರವಾದಿಗಳನ್ನು ಕಳುಹಿಸಲು ಪ್ರಾರಂಭಿಸಿದನು.

ಈ ರೀತಿ ದೇವನಿಂದ ಪ್ರತಿಯೊಂದು ಜನಾಂಗಗಳಿಗೆ ಮತ್ತು ಭೂಭಾಗಗಳಿಗೆ ಪ್ರವಾದಿಗಳು ನಿಯೋಜಿಸಲ್ಪಟ್ಟಿದ್ದಾರೆ. ಅವರೆಲ್ಲರೂ ಒಂದೇ ಮೂಲಭೂತ ಶಿಕ್ಷಣ ನೀಡಿದರು. ಜನರೆಡೆಯಲ್ಲಿ ಹರಡಿರುವ ಅಜ್ಞಾನ, ಅಂಧಕಾರಗಳ ಮೂಲೋತ್ಪಾಟನೆಗೆ ವಿಶೇಷ ಪ್ರಯತ್ನ ನಡೆಸಿದರು.

ಪ್ರವಾದಿಗಳ ಸತ್ಯಧರ್ಮ ಪ್ರಚಾರವು ಸುಲಭದ ತುತ್ತಾಗಿರಲಿಲ್ಲ. ಅವರು ಜನರ ವಿರೋಧವನ್ನು ಎದುರಿಸಬೇಕಾಯಿತು. ನಿರಂತರ ಪ್ರಯತ್ನದಿಂದ ಕ್ರಮೇಣ ಪ್ರವಾದಿಗಳಿಗೆ ಅನುಯಾಯಿಗಳು ಸಿಕ್ಕಿದರು. ಆದರೆ ಇದೇ ಜನ ವಿಭಾಗ ಪ್ರವಾದಿಗಳ ಕಾಲಾನಂತರ ಅವರ ಶಿಕ್ಷಣಗಳನ್ನೇ ಕೆಡಿಸಿದರು. ತಮಗೆ ತೋಚುವಂತೆ ತಿದ್ದುಪಡಿ ಮಾಡಿದರು. ದೈವಿಕ ಗ್ರಂಥಗಳ ಮೇಲೆಯೂ ಹಸ್ತಕ್ಷೇಪ ನಡೆಸಿದರು. ತಮ್ಮ ಸುಳ್ಳು ಕಥೆಗಳನ್ನು ಸೇರಿಸಿದರು. ಈ ರೀತಿ ದೇವ

ಶಿಕ್ಷಣ ಮತ್ತು ಆದೇಶಗಳನ್ನು ಎಲ್ಲಿವರೆಗೆ ಈ ಜನರು ಕೆಡಿಸಿದರೆಂದರೆ ಅದರಲ್ಲಿ ಇವರು ಸೇರಿಸಿದ ಅಂಶ ಯಾವುದು ದೇವನ ಆದೇಶಗಳಾವುದೆಂದೂ ಕಂಡು ಹುಡುಕುವುದು ಕ್ಲಿಷ್ಟಕರ ವಾಗಿತ್ತು. ಯಾಕೆಂದರೆ ದೈವಿಕ ಗ್ರಂಥದಲ್ಲಿ ತಮ್ಮ ಕಾನೂನು- ನಿಯಮಗಳನ್ನು ಸೇರ್ಪಡೆ ಗೊಳಿಸಿದ್ದರು. ಕೆಲವು ಶತಮಾನಗಳು ಕಳೆದ ಬಳಿಕ ನಕಲಿ ಧಾರ್ಮಿಕ ಶಿಕ್ಷಣಗಳು ಯಾವುವು? ಮತ್ತು ಸರಿಯಾದ ಧಾರ್ಮಿಕ ವಿಧಾನಗಳು ಯಾವುವು ಎಂದು ಬೇರ್ಪಡಿಸಿ ತಿಳಿಯುವ ಯಾವ ಮಾನದಂಡವೂ ಉಳಿಯಲಿಲ್ಲ.

ಗತ ಪ್ರವಾದಿಗಳ ಚರಿತ್ರೆಯಲ್ಲಿ ಅಸಹ್ಯಕರ ವಿಚಾರಗಳನ್ನು ಇವರು ಹೇರಿದ್ದರು. ನಿಜವಾದ ಪ್ರವಾದಿ ಚರಿತ್ರೆಗಳನ್ನು ತಿಳಿಯುವುದೇ ಕಷ್ಟಕರ ಕೆಲಸವೆನಿಸಿತು. ಇಷ್ಟೆಲ್ಲ ಆಗಿದ್ದರೂ ಗತ ಪ್ರವಾದಿಗಳ ಶಿಕ್ಷಣದ ಕೆಲವಾರು ನೈಜಾಂಶಗಳು ಈಗಲೂ ಉಳಿದುಕೊಂಡಿವೆ. ನಾವು ಬೇರೆ ಬೇರೆ ಜನಾಂಗಗಳ ಬದುಕಿನಲ್ಲಿ ಈಗಲೂ ಅದರ ಪ್ರಭಾವವನ್ನು ಕಾಣಬಹುದಾಗಿದೆ. ಅದರ ಅಧ್ಯಯನವನ್ನು ಇಂದೂ ನಡೆಸಲು ಸಾಧ್ಯವಿದೆ. ದೇವ ವಿಶ್ವಾಸ, ಪರಲೋಕ ವಿಶ್ವಾಸ ಎಲ್ಲ ಜನರಲ್ಲಿಯೂ ಇಂದಿಗೂ ಕಂಡು ಬರುತ್ತವಷ್ಟೇ? ಇವು ಪ್ರವಾದಿಗಳ ಶಿಕ್ಷಣಗಳಲ್ಲಿರುವ ನೈಜಾಂಶಗಳಾಗಿವೆ.

ಜನರಲ್ಲಿ ಕೆಡುಕು ಮಿತಿಮೀರಿ ವ್ಯಾಪಿಸಿದಾಗ ಅವರ ಸುಧಾರಣೆಗಾಗಿ ಪ್ರವಾದಿಗಳು ನಿರಂತರವಾಗಿ ಆಗಮಿಸಿದರು. ಅಂತಿಮ ಪ್ರವಾದಿ ಮುಹಮ್ಮದರು(ಸ) ಹೇಳಿರುವಂತೆ ಲಕ್ಷಾಂತರ ಪ್ರವಾದಿಗಳು ಇತಿಹಾಸದಲ್ಲಿ ಆಗಿ ಹೋಗಿದ್ದಾರೆ. ಭೂಮಿಯಲ್ಲಿರುವ ಎಲ್ಲ ಜನಾಂಗಗಳಿಗೂ ಪ್ರವಾದಿಗಳು ಆಗಮಿಸಿರುವುದರಿಂದ ಲಕ್ಷಾಂತರ ಪ್ರವಾದಿಗಳಾಗಿರ ಬಹುದು. ಪ್ರವಾದಿ ಮುಹಮ್ಮದರು(ಸ) ಭೂಮುಖಕ್ಕೆ 1 ಲಕ್ಷದ 24 ಸಾವಿರ ಪ್ರವಾದಿಗಳು ಆಗಮಿಸಿದ್ದಾರೆಂದು ಹೇಳಿರುವುದಾಗಿ ವರದಿಯಾಗಿದೆ. ಪವಿತ್ರ ಕುರ್‌ಆನ್ ಕೆಲವು ವಿಶೇಷ ಪ್ರವಾದಿಗಳು, ಅವರ ಜೀವನ ಚರಿತ್ರೆ ಮತ್ತು ಕಾರ್ಯಕ್ಷೇತ್ರವನ್ನು ಉಲ್ಲೇಖಿಸಿದೆ.

1. ಆದಮ್ 2. ಇದ್ರಿಸ್ 3. ನೂಹ್ 4. ಹೂದ್ 5. ಸಾಲಿಹ್ 6. ಇಬ್‌ರಾಹೀಮ್ 7. ಲೂತ್ 8. ಇಸ್ಮಾಯಿಲ್ 9. ಇಸ್‌ಹಾಕ್ 10. ಯಅ್‌ಕೂಬ್ 11. ಯೂಸುಫ್ 12. ಅಯ್ಯೂಬ್ 13. ಶುಐಬ್ 14. ಮೂಸಾ 15. ಹಾರೂನ್ 16. ಝುಲ್‌ಕಿಲ್ 17. ದಾವೂದ್ 18. ಸುಲೈಮಾನ್ 19. ಇಲಿಯಾಸ್ 20. ಅಲ್-ಯಸಅ್ 21. ಯೂನುಸ್ 22. ಝುಕರಿಯ್ಯಾ 23. ಯಹ್ಯಾ 24. ಈಸಾ 25. ಮುಹಮ್ಮದ್. ಇದು ಪವಿತ್ರ ಕುರ್‌ಆನ್ ವಿವರಿಸಿರುವ ವಿಶೇಷ ಪ್ರವಾದಿಗಳ ಹೆಸರಾಗಿದೆ. ಇವರ ಮೇಲೆ ಅಲ್ಲಾಹನ ಅನುಗ್ರಹವಿರಲಿ.

ಪವಿತ್ರ ಕುರ್‌ಆನ್ ಮತ್ತು ಕೆಲವು ಜನಾಂಗಗಳ ಹೆಸರನ್ನು ಪ್ರಸ್ತಾಪಿಸಿದೆ. ನೂಹ್‌ರ ಜನಾಂಗ, ಆದ್-ಸಮೂದ್, ತುಬ್ಬಅ್, ಮದ್‌ಯನ್ ನಿವಾಸಿಗಳು, ಅಸ್‌ಹಾಬುರ್ರಸ್ಸ್, ಅಸ್‌ಹಾಬುಲ್ ಐಕಃ ಮತ್ತು ಲೂತ್‌ರ ಜನಾಂಗ, ಬನಿ ಇಸ್ರಾಯೀಲ್ ಮತ್ತು ಸಬಾದ

ಾಂಗ ಮುಂತಾದ ವಿಶೇಷ ಜನಾಂಗಗಳ ಹೆಸರು ಪವಿತ್ರ ಕುರ್‌ಆನಿನಲ್ಲಿ ಉಲ್ಲೇಖ ವಾಗಿದೆ.

ಪವಿತ್ರ ಕುರ್‌ಆನ್ ಪ್ರಥಮವಾಗಿ ಅರಬ್ ಜನಾಂಗವನ್ನು ಸಂಬೋಧಿಸಿದ್ದರೆ, ಆನಂತರ ಹೂದಿ ಮತ್ತು ಕ್ರೈಸ್ತ ಸಮುದಾಯವನ್ನು ಸಂಬೋಧಿಸಿರುವುದು. ಯಹೂದಿಗಳ ಗ್ರಾಮಗಳು ತ್ತು ಬೃಹತ್ ಸಂಖ್ಯೆಯಲ್ಲಿ ಕ್ರೈಸ್ತರೂ ಅರೇಬಿಯಾದಲ್ಲಿ ವಾಸವಿದ್ದರು.

ಆದುದರಿಂದ ಅರಬರಿಗೆ ಪರಿಚಯವಿದ್ದ ಯಹೂದಿಗಳು ಮತ್ತು ಕ್ರೈಸ್ತರನ್ನು ಪವಿತ್ರ ್‌ಆನ್ ಉಲ್ಲೇಖಿಸಿತು. ಯಹೂದಿಗಳು ಮತ್ತು ಕ್ರೈಸ್ತರಿಗೆ ತಿಳಿದಿದ್ದ ಪ್ರವಾದಿಗಳನ್ನು ಗೂ ಅವರ ಜನಾಂಗಗಳನ್ನು ಅದು ಉಲ್ಲೇಖಿಸಿತು. ಯಾಕೆಂದರೆ ಅರಬರು, ಕ್ರೈಸ್ತರು ತ್ತು ಯಹೂದಿಗಳಿಗೆ ತಿಳಿದಿರುವ ಪ್ರವಾದಿಗಳು ಮತ್ತು ಜನಾಂಗಗಳ ಉಲ್ಲೇಖವು ಅವರ ರ್ಗದರ್ಶನಕ್ಕೆ ಉಪಯುಕ್ತವಾಗಿತ್ತು. ಪವಿತ್ರ ಕುರ್‌ಆನ್ ಉಲ್ಲೇಖಿಸಿದ ಜನಾಂಗ ಗಳನ್ನು ರೇಬಿಯಾದ ಜನರು ಅರಿತಿದ್ದರು. ಅವರು ವ್ಯಾಪಾರ ನಿಮಿತ್ತ ಈ ಜನಾಂಗಗಳ ವಸತಿಗಳಿರುವ ಡುಗಳಲ್ಲಿ ಸುತ್ತಾಡುತ್ತಿದ್ದರು. ನಮ್ಮ ಮಾರ್ಗದರ್ಶನಕ್ಕೆ ಪವಿತ್ರ ಕುರ್‌ಆನಿ ನಲ್ಲಿರುವ ಾಂಗಗಳು ಮತ್ತು ಪ್ರವಾದಿಗಳ ಚರಿತ್ರೆ ಸಾಕಾಗುವುದು.

ಆದರೆ ಹಝ್ರತ್ ಆದಮ್(ಅ) ಮತ್ತು ಹಝ್ರತ್ ನೂಹ್‌ರ(ಅ) ಮಧ್ಯೆ ಸುದೀರ್ಘ ಲದಲ್ಲಿದ್ದ ಜನಾಂಗಗಳ ಚರಿತ್ರೆಯನ್ನು ಅರಬರು ತಿಳಿದಿರಲಿಲ್ಲ. ಆದುದರಿಂದ ಅದನ್ನು ವಿತ್ರ ಕುರ್‌ಆನ್ ಉಲ್ಲೇಖಿಸದೆ ಹಝ್ರತ್ ನೂಹ್‌ರಿಂದ(ಅ) ಪ್ರವಾದಿಗಳ ಇತಿಹಾಸವನ್ನು ್ರರಂಭಿಸಿದೆ.

ತಮ್ಮ ಪ್ರವಾದಿಗಳನ್ನು ಆಯಾ ಜನಾಂಗಗಳು ವಿರೋಧಿಸಿತ್ತೆಂದು ಈ ಹಿಂದೆಯೇ ಚಿಸಲಾಗಿದೆಯಷ್ಟೇ. ಅವರು ಪ್ರವಾದಿಗಳ ಶಿಕ್ಷಣದ ಲಾಭವೆತ್ತುವಲ್ಲಿ ವಿಫಲ ಗೊಂಡರು. ಂದು ವೇಳೆ ಈ ಜನಾಂಗಗಳಲ್ಲಿ ಯಾವುದೇ ಜನವಿಭಾಗ ಅಥವಾ ಸಮುದಾಯ ವಾದಿಗಳನ್ನು ಅನುಸರಿಸಿದರೂ ಅವು ಪ್ರವಾದಿ ಶಿಕ್ಷಣಗಳನ್ನು ಸುರಕ್ಷಿತವಾಗಿ ಇರಿಸಲು ಫಲವಾಗಿವೆ ಮತ್ತು ನಂತರದ ಪೀಳಿಗೆಯಂತೂ ಪ್ರವಾದಿಗಳ ಶಿಕ್ಷಣವನ್ನೇ ಬದಲಾಯಿಸಿತು. ದುದರಿಂದ ಅವರ ಕಟ್ಟುಕತೆಗಳೊಂದಿಗೆ, ಪ್ರವಾದಿಗಳ ನೈಜ ಶಿಕ್ಷಣ ಮತ್ತು ಚರಿತ್ರೆಯೂ ಶ್ರಣಗೊಂಡಿವೆ. ಕಾಲ ಕ್ರಮೇಣ, ಮಾನವರನ್ನೇ ದೇವನೆಂದು ಆರಾಧಿಸುವ ಕಾರ್ಯ ರಂಭವಾಗಿತ್ತು. ಮಾನವನು ದೇವನೆಂದೂ ದೇವಪುತ್ರನೆಂದೂ ದೇವನ ಅವತಾರವೆಂದೂ ವನಿಗೆ ಪೂಜೆ-ವಂದನೆಗಳು ನಡೆದವು. ತಮ್ಮ ಧಾರ್ಮಿಕ ನೇತಾರರು ಹೇಳುವುದನ್ನು ನರು ಅನುಸರಿಸತೊಡಗಿದರು. ಈ ಪಥಭ್ರಷ್ಟ ನೇತಾರರ ಅಂಧಾನುಕರಣೆ ಗಿಳಿದರು. ರ್ಮವು ಛಿದ್ರಗೊಂಡಿತು. ಜನರಿಗೂ ತಮ್ಮಲ್ಲಿರುವ ತಿಳುವಳಿಕೆ, ಬುದ್ಧಿ ಶಕ್ತಿಯನ್ನು ಳಸಬೇಕೆಂದು ಅನ್ನಿಸಲಿಲ್ಲ. ಆದ ಕಾರಣ ಧಾರ್ಮಿಕ ನೇತಾರರೆನಿಸಿಕೊಂಡವರು ಜನರನ್ನು ತಿಕವಾಗಿ ಮತ್ತು ವ್ಯಾವಹಾರಿಕವಾಗಿ ಹೀಗೆ ಸಕಲ ರೀತಿಯಿಂದ ಪಥಭ್ರಷ್ಟ ಗೊಳಿಸುವಲ್ಲಿ

ಯಶಸ್ವಿಯಾದರು. ನೈಜ ಶಿಷ್ಟಾಚಾರ-ಸಂಸ್ಕೃತಿ-ನೈತಿಕತೆಗಳು ನಾಶವಾದವು. ಪ್ರವಾದಿಗಳಿದ್ದಾ ಪ್ರವಾದಿಗಳ ವಿರುದ್ಧವೇ ಜನರು ಬಂಡಾಯವೆದ್ದರು. ಈ ಮನುಷ್ಯ ನಮ್ಮ ಮಾರ್ಗದರ್ಶ ಮಾಡುವುದೇ ಎಂದು ಪ್ರವಾದಿಗಳನ್ನು ಅಣಕಿಸಿದ್ದರು. ಪ್ರವಾದಿಗಳ ಮೇಲೆ ವಿಶ್ವಾಸವಿರಿಸ ನಿರಾಕರಿಸಿದ್ದರು.

ಏನಿದು? ಪ್ರವಾದಿಗಳನ್ನು ಧಿಕ್ಕರಿಸಿದ ಜನರು ಧರ್ಮ ಗುರುಗಳನ್ನು ತಲೆ ಮೇ ಹೊತ್ತುಕೊಂಡರೇ! ಪ್ರವಾದಿಗಳ ಮಾತನ್ನೇ ನಿರಾಕರಿಸುವ ಜನರು ಧರ್ಮಗುರುಗಳ ಮಾತ ಸಂತೋಷದಿಂದ ಸ್ವೀಕರಿಸುತ್ತಿರುವುದು ವಿಚಿತ್ರವಲ್ಲವೇ? ಅದು ಕೂಡಾ ಈ ಪಥಭ್ರ ಧರ್ಮಗುರುಗಳ ಮಾರ್ಗದರ್ಶನವನ್ನು ಚಾಚೂತಪ್ಪದೆ ಪಾಲಿಸುತ್ತಿದ್ದರು. ಹಾಗಿದ್ದರೆ ಜನರಿಗೆ ಅಲೆದಾಟ ಪಥಭ್ರಷ್ಟತೆಗಳು ಪ್ರಿಯವಾಗಿರಬಹುದು. ಆದುದರಿಂದ ಅವರು ಸತ್ಯ ಬೆಳಕಿನೆಡೆಗೆ ಸಾಗಲು ವಿಫಲರಾದರು. ಸಚ್ಚಾರಿತ್ರ್ಯ-ಜ್ಞಾನ-ವಿವೇಕಗಳಿಂದ ವಂಚಿಸುತ್ತಿ ತಮ್ಮ ಮಾರ್ಗದರ್ಶಕರೇ ಅವರಿಗೆ ಪ್ರಿಯವಾಗಿದ್ದರು.

## ಪ್ರವಾದಿಗಳ ಸಮಾನ ಶಿಕ್ಷಣ

ಪ್ರವಾದಿಗಳು ಜಗತ್ತಿಗೆ ನೀಡಿದ ಶಿಕ್ಷಣದಲ್ಲಿ ಯಾವುದೇ ಮೂಲಭೂತ ವ್ಯತ್ಯಾ ಗಳಿರಲಿಲ್ಲ. ದೇವನೊಬ್ಬನೇ ಮತ್ತು ನಾವೆಲ್ಲರೂ ಆ ದೇವನ ದಾಸರಾಗಿದ್ದೇವೆ ಎಂಬ ಮೂ ಭೂತ ಶಿಕ್ಷಣವನ್ನು ಎಲ್ಲ ಪ್ರವಾದಿಗಳು ಜನರ ಮುಂದಿರಿಸಿದರು. ದೇವನ ದಾಸ್ಯ ಮತ ಅನುಸರಣೆಯಿಂದ ಬದುಕಬೇಕು. ದೇವನ ಮುಂದೆ ತಮ್ಮ ಕರ್ಮಗಳ ಲೆಕ್ಕವನ್ನು ಸಮರ್ಪಿ ಲಿಕ್ಕಿದೆ. ಪ್ರಪಂಚದ ಭೌತಿಕ ಜೀವನದ ನಂತರ ಪರಲೋಕದಲ್ಲಿಯೂ ಮಾನವರು ಜೀವಿ ಬೇಕಾಗಿದೆ. ಅಲ್ಲಿ ಅವರವರ ಕರ್ಮಗಳ ಪ್ರಕಾರ ಕೆಲವರಿಗೆ ಸಂತೋಷದಾಯಕ ಇನ್ನು ಕೆ ವರಿಗೆ ದುಃಖಭರಿತ ಮತ್ತು ಯಾತನೆಯ ಜೀವನವಿದೆ ಎಂದು ಪ್ರವಾದಿಗಳು ಕರೆ ನೀಡಿದರು

ದೇವ ಸಂಪ್ರೀತಿ ಗಳಿಕೆ ಮಾನವರ ಕರ್ತವ್ಯವಾಗಿದೆ. ಸನ್ಮಾರ್ಗದಲ್ಲಿ ಸಂಚರಿಸಿದ ಸಫಲರಾಗಬಹುದು. ಮೂಲಭೂತ ಶಿಕ್ಷಣವನ್ನು ಎಲ್ಲ ಪ್ರವಾದಿಗಳು ತಮ್ಮ ಜನಾಂಗಗಳಿ ನೀಡಿದರು. ಆದುದರಿಂದ ಪ್ರವಾದಿಗಳೆಲ್ಲರ ಮೂಲಭೂತ ಶಿಕ್ಷಣ ಒಂದಾಗಿತ್ತು.

ಆನಂತರ ದೇವನ ಹಕ್ಕು, ಅಧಿಕಾರಗಳು ಮತ್ತು ದಾಸರ ಹಕ್ಕುಗಳನ್ನು ಜನ ಅರಿತುಕೊಳ್ಳಬೇಕು. ಭೂಮುಖದಲ್ಲಿ ಯಾವ ವ್ಯಕ್ತಿಯ ಮೇಲೂ ಯಾವುದೇ ಅನ್ಯಾ ನಡೆಯಬಾರದು ಮತ್ತು ದೌರ್ಜನ್ಯವಾಗಬಾರದು. ಜನರು ನ್ಯಾಯ ಮತ್ತು ತ್ಯಾ ಆಧಾರಿತವಾಗಿ ಜೀವನ ನಡೆಸಬೇಕು. ಪರಸ್ಪರ ಕರುಣೆ, ಹಿತಮಿತವಾಗಿ ವರ್ತಿಸಬೇಕು. ತಮ ಅಗತ್ಯಕ್ಕಿಂತ ಇತರರ ಅಗತ್ಯಕ್ಕೆ ಹೆಚ್ಚು ಆದ್ಯತೆ ನೀಡಬೇಕು, ಬಡವರು, ಅಸಹಾಯ ಜನರಿಗೆ ಉಪಕಾರಿಗಳಾಗಬೇಕು ಎಂಬ ಸಮಾನ ಶಿಕ್ಷಣಗಳನ್ನು ಎಲ್ಲ ಪ್ರವಾದಿಗಳು ನೀಡಿದ್ದಾ ಈ ಮೂಲಭೂತ ಶಿಕ್ಷಣಗಳನ್ನು ಎಲ್ಲ ಪ್ರವಾದಿಗಳೂ ನೀಡಿದ್ದಾರೆ.

ಭೂಮಿಯಲ್ಲಿ ದೇವೇಚ್ಛೆಯನ್ನು ನಿರ್ಲಕ್ಷಿಸಿದರೆ ಅಂತಹವರು ಪಥಭ್ರಷ್ಟರಾಗುವರು. ರಲೋಕದಲ್ಲಿ ದೇವನ ಯಾತನೆಗೀಡಾಗುವರು. ಇನ್ನು ದೇವೇಚ್ಛೆಯಂತೆ ಜೀವನ ವ್ಯಯಿಸಿದ ಾಸರಿಗೆ ಅಲ್ಲಿ ದೇವ ಸಂಪ್ರೀತಿ ಮತ್ತು ಉತ್ತಮ ಜೀವನಾಧಾರ ಅರ್ಥಾತ್ ಸ್ವರ್ಗವಾಸ ೊರೆಯುವುದು.

ಸ್ವರ್ಗವಾಸಿಗಳು ನರಕವಾಸಿಗಳನ್ನು ಹೇಗೆ ನರಕಕ್ಕೆ ಹೋದಿರೆಂದು ಪ್ರಶ್ನಿಸುವ ಸಂದರ್ಭ ವಿತ್ರ ಕುರ್‌ಆನ್‌ನಲ್ಲಿದೆ.

**ಅವರು ಹೇಳುವರು; ನಾವು ನಮಾಝ್ ಮಾಡುವವರಾಗಿರಲಿಲ್ಲ- ಮತ್ತು ದರಿದ್ರರಿಗೆ ುಣಿಸುತ್ತಿರಲಿಲ್ಲ- ಮತ್ತು ಸತ್ಯದ ವಿರುದ್ಧ ಮಾತುಗಳನ್ನು ಸೃಷ್ಟಿಸುವವರ ಜೊತೆ ಸೇರಿ ನಾವೂ ಮಾತುಗಳನ್ನು ಸೃಷ್ಟಿಸುತ್ತಿದ್ದೆವು ಮತ್ತು ನಾವು ಪ್ರತಿಫಲದ ದಿನವನ್ನು ಸುಳ್ಳೆಂದು ಹೇಳುತ್ತಿದ್ದೆವು. ೊನೆಗೆ ಆ ಖಚಿತ ದಿನವು ನಮಗೆ ಎದುರಾಗಿಯೇ ಬಿಟ್ಟಿತು. (ಪವಿತ್ರ ಕುರ್‌ಆನ್, 74:43-47)**

ಈ ರೀತಿ ಪ್ರವಾದಿ ಶಿಕ್ಷಣಗಳ ನಿರಾಕರಣೆಗೆ ಏನು ಪರಿಣಾಮವೆಂದು ಪವಿತ್ರ ಕುರ್‌ಆನ್ ವಿವರಿಸುತ್ತಿದೆ. ಎಲ್ಲ ಪ್ರವಾದಿಗಳು ಜನರಿಗೆ ನ್ಯಾಯವಾದ ಶಿಕ್ಷಣವನ್ನು ನೀಡಿದ್ದರು. ಅದು ಸಾಮಾಜಿಕ, ವೈಯಕ್ತಿಕ ಹೀಗೆ ಎಲ್ಲ ಕೆಡುಕುಗಳಿಂದ ಜನರು ಮುಕ್ತರಾಗುವ ಶಿಕ್ಷಣ ವಾಗಿತ್ತು. ಪ್ರವಾದಿಗಳು ಒಳಿತಿನ ಕಾರ್ಯವನ್ನು ಮಾಡಲು ಪ್ರೇರೇಪಿಸುತ್ತಿದ್ದರು. ಜನರ ಪ್ರತಿಯೊಂದು ಕರ್ಮವೂ ದೇವನಿಗಾಗಿ, ದೇವಾನುಗ್ರಹ ಪಡೆಯುವುದಕ್ಕಾಗಿರಬೇಕು. ತೋರಿಕೆಯ ಮತ್ತು ಪ್ರಪಂಚದಲ್ಲಿ ಕೀರ್ತಿ ಸಂಪಾದಿಸುವ ಆಶೆಗಳಿಂದ ನಿಮ್ಮ ಕರ್ಮಗಳಿರ ಬಾರದೆಂಬ ಮೂಲಭೂತ ಶಿಕ್ಷಣವನ್ನು ಸಮಾನವಾಗಿ ಎಲ್ಲ ಪ್ರವಾದಿಗಳು ಜನರಿಗೆ ನೀಡಿದರು.

## ಪವಾಡ (ಮುಅ್‌ಜಿಝಃ Miracle)

ಮಾನವರಿಂದ ಮಾಡಲು ಅಸಾಧ್ಯವಾದ ಮತ್ತು ಮಾನವರ ಮುಂದೆ ಜರಗುವ ಕಾರ್ಯಗಳನ್ನು ಮುಅ್‌ಜಿಝಃ (Miracle) ಎಂದು ಕರೆಯುತ್ತೇವೆ. ಇದನ್ನು ಪವಿತ್ರ ಕುರ್‌ಆನ್ ಆಯತ್, ಆಯಾತ್ ಎಂಬ ಪದಗಳಿಂದ ಪ್ರಸ್ತಾಪಿಸಿದೆ. ಆಯತೆಂದರೆ ಗುರುತು, ಪ್ರಮಾಣ, ದೃಷ್ಟಾಂತ ಅಥವಾ ಆದೇಶಗಳೆಂದಾಗುವುದು. ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ.

**ಆಕಾಶಗಳಲ್ಲೂ ಭೂಮಿಯಲ್ಲೂ ಎಷ್ಟೋ ನಿದರ್ಶನಗಳಿವೆ. ಅವುಗಳನ್ನು ಇವರು ಹಾದು ಕೊಂಡು ಹೋಗುತ್ತಿರುತ್ತಾರೆ ಮತ್ತು ಅವುಗಳ ಕಡೆಗೆ ಕಿಂಚಿತ್ ಗಮನ ಹರಿಸುವುದಿಲ್ಲ.**

**(ಪವಿತ್ರ, ಕುರ್‌ಆನ್, 12:105)**

ಆಯತ್‌ಗಳು ಯಾವುದೇ ರೂಪದ್ದಾದರೂ ಅದು ಮಾನವನ ಬುದ್ಧಿ ಶಕ್ತಿ ಮತ್ತು ಅಂತರ್ಯವನ್ನು ಎಚ್ಚರಿಸುವ ಶಕ್ತಿಯನ್ನು ಹೊಂದಿದೆ. ಪ್ರಪಂಚದಲ್ಲಿ ಅಸಂಖ್ಯಾತ ಆಯತ್‌ಗಳು (ದೃಷ್ಟಾಂತಗಳು) ಹರಡಿವೆ. ಅವು ಪ್ರಪಂಚವನ್ನು ಮಾಧ್ಯಮವಾಗಿಟ್ಟು ದೇವನ ದಯೆ, ಗುಣ, ತತ್ವಾದರ್ಶಿತ್ವ, ಮಹಾನತೆ, ಉಚ್ಚತೆ, ನ್ಯಾಯ ಹಾಗೂ ಕೊಡುಗೆ ಗಳನ್ನು ಪ್ರಕಟಿಸುತ್ತಿವೆ.

ಇದೇ ರೀತಿ ದೈವಿಕ ವಚನಗಳು ಓದುವ, ಆಲಿಸುವ ಆಯಾತ್ (ದೃಷ್ಟಾಂತಗಳು)ಗಳಾಗಿವೆ ಅವುಗಳು ಪ್ರಾಮಾಣಿಕ, ಅತ್ಯಂತ ಸ್ಪಷ್ಟ ಮತ್ತು ವಿಶಾಲ ವಾಗಿದೆ. ಜಗತ್ತಿನಲ್ಲಿರುವ ಅಸಂಖ್ಯಾತ ಆಯಾತ್ (ದೃಷ್ಟಾಂತ, ಗುರುತು, ಪ್ರಮಾಣ)ಗಳಿಗೆ ಪವಿತ್ರ ಕುರ್‌ಆನಿನ ಮೂಲಕ ವಿಶ್ಲೇಷಣ ದೊರಕಿತು. ಆ ವರೆಗೂ ಮೂಕವಾಗಿದ್ದ ಅವುಗಳು ಪವಿತ್ರ ಕುರ್‌ಆನಿನ ಅವತೀರ್ಣದೊಂದಿಗ ಅರ್ಥವನ್ನು ಪಡೆದವು.

ಪವಿತ್ರ ಕುರ್‌ಆನಿನ ದೃಷ್ಟಾಂತಗಳನ್ನು ಪವಿತ್ರ ಕುರ್‌ಆನ್ 'ರಹ್ಮತ್'(ಅನುಗ್ರಹ) ಎಂಬ ವಿಶ್ಲೇಷಿಸಿದೆ ಮತ್ತು 'ರಿಝ್ಕ್‌ಹಸನ್' (ಉತ್ತಮ ಜೀವನಾಧಾರ) ಎಂಬ ಗುರುತನ್ನು ನೀಡಿದೆ. 'ದಿಕ್ರ್' (ಸ್ಮರಣೆ) ಹಾಗೂ 'ನೂರ್' (ಪ್ರಕಾಶ) ಎಂದೂ ಅದು ನೀಡಿದೆ. ಇದರಿಂದ ವಿವೇಕಿಗಳಿಗೆ ಜ್ಞಾನೋದಯವಾಗುವುದು. ಪವಿತ್ರ ಕುರ್‌ಆನಿನಲ್ಲಿ ವಿಶ್ವಾಸವಿರಿಸಿ ಉತ್ತಮ ಕರ್ಮಗಳನ್ನು ಮಾಡಬೇಕೆಂಬ ಪವಿತ್ರ ಕುರ್‌ಆನಿನ ಕರೆಗೆ ವಿವೇಕಿಗಳು ಓಗೊಡುವರು. ಪವಿತ್ರ ಕುರ್‌ಆನಿನ ಕರೆಯು ಬುದ್ಧಿ ವಿವೇಕಗಳಿಗೆ ಸಂಬಂಧಿಸಿರುವ ಕರೆಯಾಗಿದೆ. ಮಾನವರ ನೈಜ ಪ್ರಕೃತಿಯನ್ನು ಜಾಗೃತಗೊಳಿಸುವ ಕೆಲಸವನ್ನು ಅದು ಮಾಡುವುದು. ಆದುದರಿಂದ ಸ್ವಯಂ ಪವಿತ್ರ ಕುರ್‌ಆನ್ ತನ್ನನ್ನು ದಿಕ್ರ್ ಮತ್ತು ತಬ್ಸಿರಾ (ಸ್ಮರಣೆ ಹುಟ್ಟಿಸುವ ಮತ್ತು ಕಣ್ತೆರೆಸುವ ಗ್ರಂಥ) ಎಂದು ಕರೆದುಕೊಂಡಿದೆ. ವಿವೇಕಿಗಳ ಜ್ಞಾನ ಮತ್ತು ವಿಚಾರವು ಪವಿತ್ರ ಕುರ್‌ಆನಿನ ದೃಷ್ಟಾಂತ(ಆಯಾತ್)ಗಳಿಂದ ಸುದೃಢಗೊಳ್ಳುವುದು. ಮಾನವರ ಸಕಲ ಸಂದೇಹಗಳು ದೂರಗೊಳ್ಳುವುದು. ಪವಿತ್ರ ಕುರ್‌ಆನ್ ತನ್ನನ್ನು ಹುದಾ (ಮಾರ್ಗದರ್ಶಿ), ತಿಬ್‌ಯಾನ್ (ಸುಸ್ಪಷ್ಟಪಡಿಸುವುದು), ಹಕ್ (ಸತ್ಯ), ಬುರ್‌ಹಾನಿ (ಪ್ರಮಾಣ), ಬಸಾಇರ್ (ಕಿರಣ), ನೂರ್ (ಪ್ರಕಾಶ), ಶಿಫಾ (ಆರೋಗ್ಯ) ಎಂದು ಕೂಡಾ ಹೆಸರಿಸಿದೆ.

ಜನರನ್ನು ಆಶ್ಚರ್ಯಚಕಿತಗೊಳಿಸುವ ಪವಾಡವನ್ನು ತೋರಿಸಿ, ಜನರು ಅಪ್ರಾಕೃತಿಕ ಕಾರ್ಯಗಳನ್ನು ಪ್ರೀತಿಸುವಂತೆ ಮಾಡುವುದು ಪ್ರವಾದಿಗಳ ಶಿಕ್ಷಣದ ಉದ್ದೇಶವಲ್ಲವೆಂದು ಪವಿತ್ರ ಕುರ್‌ಆನ್‌ನಿಂದಲೇ ತಿಳಿದು ಬರುವುದು. ಪವಾಡಗಳಿಂದ ಜನರಿಗೆ ಮನರಂಜನೆ ಒದಗಿಸುವುದು ಪ್ರವಾದಿಗಳ ಕಾರ್ಯವಲ್ಲವೆಂದು ಪವಿತ್ರ ಕುರ್‌ಆನ್‌ನಿಂದ ನಮಗೆ ಸ್ಪಷ್ಟವಾಗುವುದು. ಹಾಗೆಯೇ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಶಿಕ್ಷಣದ ಅಧ್ಯಯನ ನಡೆಸಿದಾಗ ಅದರಲ್ಲಿ ಸತ್ಯವೇ ಅಮೂಲ್ಯ ವಸ್ತುವಾಗಿದೆ ಎಂದು ನಮಗೆ ತಿಳಿದು ಬರುವುದು.

ಜನರು ಸಕಲ ಭ್ರಮೆ, ಜಡತನ, ಮೂರ್ಖತನ ಮತ್ತು ಅಂಧವಿಶ್ವಾಸದಿಂದ ಮುಕ್ತರಾಗಬೇಕೆಂದು ಪವಿತ್ರ ಕುರ್‌ಆನ್ ಕಲಿಸುತ್ತದೆ. ಜನರು ಪವಿತ್ರ ಕುರ್‌ಆನಿನ ಬೆಳಕಿನಲ್ಲಿ ಜೀವಿಸಬೇಕು ಮತ್ತು ಜೀವನದ ನೈಜ ಅರ್ಥ ಮತ್ತು ಆಶಯಗಳನ್ನು ಅದರಿಂದ ಮನವರಿಕೆ ಮಾಡಿಕೊಳ್ಳಬೇಕೆಂದು ಪವಿತ್ರ ಕುರ್‌ಆನ್ ಮಾರ್ಗದರ್ಶನ ನೀಡುತ್ತದೆ.

ಮಾನವರ ಮನಮಸ್ತಿಷ್ಕಗಳು ದುರಾಗ್ರಹಕ್ಕೊಳಗಾಗಬಾರದು, ಸಂದೇಹಕ್ಕೊಳಗಾಗ

ನಾರದು, ನೈತಿಕತೆ, ಸಚ್ಚಾರಿತ್ರ್ಯಗಳಿಂದ ಅವರ ಜೀವನ ಇನ್ನೊಬ್ಬರಿಗೆ ಮಾದರಿಯಾಗಬೇಕು ಎಂದು ಪವಿತ್ರ ಕುರ್‌ಆನಿನ ಅಧ್ಯಯನದಿಂದ ನಾವು ಸ್ಪಷ್ಟವಾಗಿ ತಿಳಿದುಕೊಳ್ಳುತ್ತೇವೆ. ಮಾನವರ ಈ ಜೀವನ ಶೈಲಿಯ ಮುಂದೆ ಪವಾಡಗಳಿಗೆ ಬೆಲೆಯಿಲ್ಲವೆಂದೂ ಜನರಿಗೆ ಪವಾಡ ಅಥವಾ ಮುಅ್‌ಜಿಝಃಗಳನ್ನು ತೋರಿಸುವುದು ಪ್ರವಾದಿಗಳ ಕಾರ್ಯವಲ್ಲ ವೆಂದೂ ಪವಿತ್ರ ಕುರ್‌ಆನ್‌ನಿಂದ ಸ್ಪಷ್ಟವಾಗುತ್ತದೆ.

ಪವಾಡ ದೇವನಿಂದ ಪ್ರಕಟವಾಗುವ ಕಾರ್ಯವಾಗಿದೆ. ಪ್ರವಾದಿತ್ವದ ಪುಷ್ಟೀಕರಣಕ್ಕಾಗಿ ಅದು ಪ್ರದರ್ಶಿಸಲ್ಪಡುವುದು. ಪ್ರವಾದಿಗಳಲ್ಲಿ ಯಾವುದಾದರೂ ಪವಾಡ ತೋರಿಸಿದರೆ ವಿಶ್ವಾಸವಿರಿಸುತ್ತೇವೆ ಎನ್ನುವವರಿಗಾಗಿ ಅವರು ವಿಶ್ವಾಸವಿರಿಸುತ್ತಾರೆಂದು ಅದು ಪ್ರಕಟಗೊಳ್ಳು ವುದಿಲ್ಲ. ಅದನ್ನು ದೇವನು ತನ್ನ ನಿದರ್ಶನಗಳ ಹೊಣೆಗಾರಿಕೆ ಪೂರ್ತಿಗೊಳಿಸುವುದಕ್ಕಾಗಿ ಪ್ರಕಟಿಸುತ್ತಾನೆ. ನಾಳೆ (ಪರಲೋಕದಲ್ಲಿ) ಸತ್ಯವನ್ನು ಧಿಕ್ಕರಿಸಿದವರು ಯಾವುದಾದರೂ ಪವಾಡವನ್ನು ತೋರಿಸಿರುತ್ತಿದ್ದರೆ ನಾವು ಸತ್ಯವಿಶ್ವಾಸವಿರಿಸುತ್ತಿದ್ದೆವು ಎಂದು ಹೇಳುವ ಸಾಧ್ಯತೆಗಳೇ ಉಳಿಯಬಾರದು ಎಂದು ದೇವನು ಅದನ್ನು ಪ್ರಕಟಿಸುತ್ತಾನೆ.

ಯಾವುದಾದರೂ ಜನಾಂಗವನ್ನು ಅದರ ಉದ್ಧಟತನಗಳಿಗಾಗಿ ಮಾತ್ರ ಶಿಕ್ಷಿಸುವುದು ದೇವೇಚ್ಛೆಯಾಗಿದೆ. ಒಂದು ವೇಳೆ, ಜನಾಂಗಗಳ ಬೇಡಿಕೆಯಂತೆ ಪವಾಡ ತೋರಿಸಿಯೂ ಸತ್ಯದಲ್ಲಿ ವಿಶ್ವಾಸವಿರಿಸದಿದ್ದರೆ ಅದಕ್ಕಿಂತ ದೊಡ್ಡ ಬಂಡಾಯ ವೇನಿದೆ? ಆದುದರಿಂದ ಮೂಜಿಝಃ ಅಥವಾ ಪವಾಡ ಪ್ರಕಟಗೊಂಡ ಬಳಿಕ ಒಂದೋ ಸತ್ಯವಿಶ್ವಾಸವಿರಿಸುವುದು ಅಥವಾ ದೈವಿಕ ಯಾತನೆಗೆ ಗುರಿಯಾಗುವುದು ಅನಿವಾರ್ಯ ವಾಗಿದೆ.

ಪವಿತ್ರ ಕುರ್‌ಆನ್ ಜನಾಂಗಗಳ ಉದ್ಧಟವಾದವನ್ನು ಹೀಗೆ ಉಲ್ಲೇಖಿಸಿದೆ:

**"ಈ ಪ್ರವಾದಿಯ ಮೇಲೆ ಒಬ್ಬ 'ದೇವಚರ' ಏಕೆ ಇಳಿಸಲ್ಪಡಲಿಲ್ಲವೆಂದು ಇವರು ಹೇಳುತ್ತಾರೆ. ನಾವು ದೇವಚರನನ್ನು ಇಳಿಸುತ್ತಿದ್ದರೆ, ಇಷ್ಟರೊಳಗೆ ಎಂದೋ ತೀರ್ಮಾನವೇ ಆಗಿಬಿಡುತ್ತಿತ್ತು. ಅನಂತರ ಇವರಿಗೆ ಅವಧಿ ಕೊಡಲಾಗುತ್ತಿರಲಿಲ್ಲ." (ಪವಿತ್ರ ಕುರ್‌ಆನ್, 6:8)**

ಯಾವ ಪ್ರವಾದಿಯೂ ದೇವನ ವತಿಯಿಂದಲ್ಲದೆ ಪವಾಡ ತೋರಿಸಲಾರರು. ಹೀಗೆ ದೇವನ ನೆರವಿನಿಂದ ಪವಾಡಗಳು ಪ್ರಕಟಗೊಳ್ಳುತ್ತವೆ. ದೇವನ ಸಂದೇಶವನ್ನು ಜನರ ಬಳಿಗೆ ತಲುಪಿಸುವುದು ಮಾತ್ರ ಪ್ರವಾದಿಗಳ ಕರ್ತವ್ಯವಾಗಿದೆ.

ಪವಿತ್ರ ಕುರ್‌ಆನ್ ಪ್ರವಾದಿಗಳ ಕರ್ತವ್ಯಗಳ ಕುರಿತು ಹೀಗೆ ವಿಶ್ಲೇಷಿಸಿದೆ:

**"ನೀವು ನಮ್ಮ ಹಾಗಿರುವ ಮನುಷ್ಯರಲ್ಲದೆ ಇನ್ನೇನೂ ಅಲ್ಲ. ನಮ್ಮ ಪೂರ್ವಿಕ ರಿಂದಲೇ ಆರಾಧಿಸಲ್ಪಡುತ್ತಾ ಬಂದಿರುವವುಗಳ ದಾಸ್ಯ-ಆರಾಧನೆಯಿಂದ ನೀವು ನಮ್ಮನ್ನು ತಡೆಯಲಿಚ್ಛಿಸುತ್ತೀರಿ. ಹಾಗಿದ್ದರೆ ಸುವ್ಯಕ್ತ ಆಧಾರ ಪ್ರಮಾಣ ತನ್ನಿರಿ. ಅವರ ರಸೂಲರು ಅವರೊಡನೆ ಹೇಳಿದರು; ನಿಜಕ್ಕೂ ನಾವು ನಿಮ್ಮಂತಹ ಮನುಷ್ಯರೇ ವಿನಾ ಇನ್ನೇನೂ ಅಲ್ಲ.**

**ಆದರೆ ಅಲ್ಲಾಹನು ತನ್ನ ದಾಸರ ಪೈಕಿ ತನಗಿಷ್ಟ ಬಂದವರನ್ನು ಅನುಗ್ರಹಿಸುತ್ತಾನೆ ಮತ್ತ ನಿಮಗೇನಾದರೂ ಆಧಾರ ಪ್ರಮಾಣ ತರುವುದು ನಮ್ಮ ಅಧಿಕಾರದಲ್ಲಿಲ್ಲ. ಆಧಾರ ಪ್ರಮಾಣ ಅಲ್ಲಾಹನ ಅನುಜ್ಞೆಯಿಂದಲೇ ಬರಬಲ್ಲುದು ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೆ ಭರವಸೆ ಇಡಬೇಕು." (ಪವಿತ್ರ ಕುರ್‌ಆನ್, 14:10-11)**

ಪವಿತ್ರ ಕುರ್‌ಆನಿನ ಈ ವಚನಗಳು ಪವಾಡವನ್ನು ತೋರಿಸುವುದು ಅಲ್ಲಾಹ ಕೆಲಸವಾಗಿದೆ ಮತ್ತು ಪ್ರವಾದಿಗಳ ಪ್ರವಾದಿತ್ವದ ಪುಷ್ಟೀಕರಣಕ್ಕಾಗಿ ಅದನ್ನು ಅಲ್ಲಾಹ ತೋರಿಸುತ್ತಾನೆ. ಪವಾಡ ತೋರಿಸುವುದು ಪ್ರವಾದಿಗಳ ಕೆಲಸವಲ್ಲವೆಂದು ಸ್ಪಷ್ಟಪಡಿಸುತ್ತ ಪ್ರವಾದಿಗಳು ಜನರಿಗೆ ದೇವನ ಏಕತ್ವವನ್ನು ಸ್ವೀಕರಿಸುವಂತೆ ಕರೆ ನೀಡುತ್ತಾರೆ. ಆ ದೇವನಿ ತಮ್ಮನ್ನು ಅರ್ಪಿಸಿಕೊಳ್ಳಿ ಎಂಬ ಸಂದೇಶವನ್ನು ಜನರಿಗೆ ತಲುಪಿಸುತ್ತಾರೆ. ಜನರ ಕರ್ಮಫ ಚಾರಿತ್ರ್ಯಗಳ ಲೆಕ್ಕ ಮಾಡುವ (ಲೋಕಾಂತ್ಯದ) ದಿನ ಎದುರಾಗುವುದಕ್ಕಿಂತ ಮುಂ ದೇವನಲ್ಲಿ ವಿಶ್ವಾಸವಿರಿಸಬೇಕೆಂದು ಜನರನ್ನು ಎಚ್ಚರಿಸುವ ಕಾರ್ಯ ಮಾಡುತ್ತಾರೆ.

ಪವಾಡವನ್ನು ನೋಡಿಯೂ ಪ್ರವಾದಿಗಳ ಮೇಲೆ ವಿಶ್ವಾಸವಿರಿಸದಿರುವ ಜನಾಂಗಗ ತಮ್ಮ ಧಿಕ್ಕಾರ ನೀತಿಯಲ್ಲೇ ಉಳಿದುಕೊಂಡರೆ ಆ ಜನಾಂಗಗಳೇ ಸ್ವಯಂ ವಿನಾಶವನ್ನು ತಮ ಮೇಲೆ ಆಹ್ವಾನಿಸಿದಂತಾಗುವುದು. ಆದರೆ ಬಹಿರಂಗ ನಿದರ್ಶನಗಳು ಅಥವಾ ಪವಾಡಗ ಒಮ್ಮೆ ಪ್ರಕಟವಾದರೆ ಅಲ್ಲಿಗೇ ಜನರಿಗೆ ಸುಧಾರಿಸಿಕೊಳ್ಳುವ ಅವಕಾಶವೇ ಮುಗಿಯಿತೆಂ ಅರ್ಥವಾಗಿದೆ. ಆಮೇಲೆ ಅವರನ್ನು ವಿನಾಶವು ಆವರಿಸಿಕೊಳ್ಳುವುದು.

ಸಾಮಾನ್ಯ ಪವಾಡಗಳು ಮತ್ತು ನಿರ್ಣಾಯಕ ಹಾಗೂ ಬೃಹತ್ತಾದ ಪವಾಡಗ ನಡುವೆ ಸಮಯದ ಅಂತರವಿರುವುದು. ದೇವನು ನಿಶ್ಚಯಿಸಿದ ಅವಧಿಯಲ್ಲಿ ಅದು ಪ್ರಕ ಗೊಳ್ಳುವುದು. ವಿಶ್ವಾಸವಿರಿಸಲು ಅದನ್ನು ಕಾದು ಕುಳಿತವರು ಅದನ್ನು ನೋಡಿದ ಮೇ ವಿಶ್ವಾಸವಿರಿಸಿದ ಘಟನೆ ಬಹಳ ವಿರಳವಾಗಿದೆಯೆಂದು ಇತಿಹಾಸದಿಂದ ಸ್ಪಷ್ಟವಾಗುವುದ

ಆದರೆ ಈ ಪವಾಡ ಪ್ರಕಟವಾಗುವ ಅವಧಿ ಯಾವುದೆಂದು ದೇವನು ಬಹಿರಂ ಗೊಳಿಸಿಲ್ಲ, ಅಂತ್ಯ ದಿನದಂತೆ ಅದನ್ನೂ ಅವನು ರಹಸ್ಯವಾಗಿರಿಸಿದ್ದಾನೆ. ದೇವನು ಪ್ರವಾ ಗಳಿಗೂ ಅದು ಪ್ರಕಟಗೊಳ್ಳುವ ಅವಧಿಯನ್ನು ತಿಳಿಸಿಲ್ಲ.

**"ಈ ಪ್ರವಾದಿಯ ಮೇಲೆ ಇವನ ಪ್ರಭುವಿನ ಕಡೆಯಿಂದ ಒಂದು ದೃಷ್ಟಾಂತವೇ ಅವತೀರ್ಣಗೊಳಿಸಲ್ಪಡಲಿಲ್ಲವೆಂದು ಇವರು ಕೇಳುತ್ತಾರಲ್ಲ, ಅವರೊಡನೆ, 'ನಿಶ್ಚಯವಾಗಿಯ ಅದೃಶ್ಯ ಜ್ಞಾನದ ಒಡೆಯ ಅಲ್ಲಾಹನೇ ಆಗಿರುತ್ತಾನೆ. ನೀವು ಕಾಯುತ್ತಿರಿ, ನಾನೂ ನಿಮ್ಮೊಂದಿ ಕಾದುಕೊಂಡಿರುತ್ತೇನೆ' ಎಂದು ಹೇಳಿರಿ." (ಪವಿತ್ರ ಕುರ್‌ಆನ್, 10:20)**

ಪವಿತ್ರ ಕುರ್‌ಆನ್ ವಿವರಿಸಿರುವ ಈ ಪವಾಡವು ಶಾಶ್ವತವಾದ ಹಾಗೂ ಸ್ಮೃತಿಪಟಲದ ಉಳಿಯುವಂತಹ ಘಟನೆಯಾಗಿದೆ. ಆದರೆ ಸ್ವಯಂ ಪವಿತ್ರ ಕುರ್‌ಆನ್ ಒಂದು ಜೀವಂ

ಾಡವಾಗಿದ್ದು ಈಗಲೂ ನಮ್ಮೊಂದಿಗಿಲ್ಲವೇ?

ಈ ಜಗತ್ತು ಯಾವತ್ತೂ ಪವಿತ್ರ ಕುರ್‌ಆನಿಗೆ ಸರಿಸಾಟಿಯಾದ ವಚನಗಳನ್ನು ತಂದಿಲ್ಲ. ಮ (ಪವಿತ್ರ ಕುರ್‌ಆನಿನ) ಪವಾಡವಲ್ಲವೇ? ಪವಿತ್ರ ಕುರ್‌ಆನ್‌ನಂತಹ ವಚನಗಳನ್ನು ಾರೂ ಎಂದಿಗೂ ತರುವುದು ಅಸಾಧ್ಯವಾಗಿದೆ. ಯಾಕೆಂದರೆ ದೈವಿಕ ವಚನಗಳವು. ದಯ ತಂತಿಯನ್ನು ಮೀಟಿ ಆತ್ಮವನ್ನು ಜಾಗ್ರತಗೊಳಿಸುವ ಶಕ್ತಿ ಅದಕ್ಕೆ ಮಾತ್ರ ಇದೆ. ಮ ಮಾನವರ ನಿರ್ಲಕ್ಷ್ಯವನ್ನು ಕೊಡವಿಕೊಳ್ಳುವಂತಹ ಅದ್ವಿತೀಯ ಶಕ್ತಿಯಾಗಿದೆ. ಅದರ ಾರ್ಗದರ್ಶನವನ್ನು ಮೀರಿ ನಿಲ್ಲಲು ಯಾವ ಗ್ರಂಥಕ್ಕೂ ಸಾಧ್ಯವಿಲ್ಲ. ಪವಿತ್ರ ಕುರ್‌ಆನಿನ ಾರ್ಥ ಅಲಂಕಾರವನ್ನು ದೊಡ್ಡ ದೊಡ್ಡ ವಿಚಾರವಾದಿಗಳು, ಸಾಹಿತಿಗಳು ಕೂಡಾ ್ಯಯನ ನಡೆಸಿದ್ದಾರೆ. ಆದರೂ ಪವಿತ್ರ ಕುರ್‌ಆನಿನ ವಿಶೇಷತೆ, ಸಾಹಿತ್ಯಿಕ ಸರಳತನಗಳನ್ನು ಪೂರ್ಣವಾಗಿ ವ್ಯಕ್ತಪಡಿಸಲು ಅವರಿಂದ ಸಾಧ್ಯವಾಗಿಲ್ಲ.

ಜನರ ಬುದ್ಧಿ, ವಿವೇಕ, ಸೂಕ್ಷ್ಮದರ್ಶಿತ್ವ ಹಾಗೂ ಸೌಂದರ್ಯ ಪ್ರಜ್ಞೆಗಳಿಗೆ ಪವಾಡ ೃಶ ಆಹ್ವಾನವು ಅದರ ಗುಣವಾಗಿದೆ.

ಜನರಲ್ಲಿರುವ ಅಜ್ಞಾನ ಕೊನೆಗೊಂಡು ಸಮಾನತೆ, ಸದ್ವಿವೇಕವನ್ನು ಅವರು ಆದರ್ಶವಾಗಿ ಕರಿಸಬೇಕೆಂದು ಪವಿತ್ರ ಕುರ್‌ಆನ್ ಬಯಸುತ್ತಿದೆಯೇ ಹೊರತು ಜನರು ಯಾವುದೋ ಾಡಗಳ ಬೆನ್ನು ಬಿದ್ದು ವಿನಾಶವನ್ನು ಆಹ್ವಾನಿಸದಿರಲಿ ಎಂದು ಅದು ಆಗ್ರಹಿಸುತ್ತದೆ.

## ವತಾರವಾದ

ಕ್ರೈಸ್ತರು ಮತ್ತು ಯಹೂದಿಯರಲ್ಲಿ ಕೂಡಾ ನೆಬಿ, ರಸೂಲ್ ಅಥವಾ ಪೈಗಂಬರ್ ವಾದಿತ್ವದ) ಎಂಬ ನಂಬಿಕೆಗಳು ಕಂಡು ಬಂದಿದೆ. ಬನೀ ಇಸ್ರಾಈಲ್ ಸಮುದಾಯದಲ್ಲಿ ್ಯಧಿಕ ಪ್ರವಾದಿಗಳು ಆಗಿ ಹೋಗಿದ್ದಾರೆ. ಭಾರತದ ಧರ್ಮಗಳಲ್ಲಿ ಕೂಡಾ ಪ್ರವಾದಿತ್ವದ ್ಪನೆಯಿದ್ದು ಅದು ಅವತಾರವಾದದ ರೂಪದಲ್ಲಿ ಪ್ರಚಲಿತವಾಗಿದೆ.

ಅವತಾರವಾದವೆಂದರೆ ಧರ್ಮಕ್ಕೆ ಹಾನಿ ಸಂಭವಿಸಿದಾಗ ದುಷ್ಟರ ಸಂಹಾರಕ್ಕಾಗಿ ವನು ಯಾವುದಾದರೊಂದು ಅವತಾರದಲ್ಲಿ ಪ್ರಕಟವಾಗುತ್ತಾನೆ ಎಂಬ ನಂಬಿಕೆಯಾಗಿದೆ. ನರೆ ಚಿಂತಿಸಿದಂತೆ ಅದು ಅವತಾರ ಎಂಬುದರ ತಪ್ಪು ಅರ್ಥವೆಂದು ಮನವರಿಕೆ ಾಗುವುದು. 'ಅವತಾರ' ಶಬ್ದಕ್ಕೆ ದೇವನು ಸ್ವಯಂ ಪ್ರಕಟಗೊಳ್ಳುತ್ತಾನೆಂಬ ಅರ್ಥವಿಲ್ಲ. ವನ ಮುಖಾಂತರ ಅವತೀರ್ಣವಾಗಿರುವುದು ಅಥವಾ ದೇವನಿಂದ ನಿಯೋಜಿಸಲ್ಪಟ್ಟಿರು ಮ ಎಂದು ಅದರ ನಿಜಾರ್ಥವಾಗಿದೆ.

'ಪಾಣಿನಿ'ಯು ಈ ಶಬ್ದದ ವ್ಯಾಖ್ಯಾನವನ್ನು ರಚಿಸಿದ್ದಾರೆ. ಅವತಾರ್ ಅಂದರೆ

'ಅವತರಣ್ ಅವತಾರಂ' ಎಂದಾಗುವುದು. ಅರ್ಥಾತ್ ಕೆಳಗೆ ಇಳಿಸಿರುವುದೆಂದಾಗುವುದೆಂ ಅವರು ವಿಶ್ಲೇಷಿಸಿದ್ದಾರೆ. 'ಕಲ್ಕಿ ಅವತಾರ್' ಎಂಬ ಗ್ರಂಥದಲ್ಲಿ ಡಾ। ವೇದಪ್ರಕ ಉಪಾಧ್ಯಾಯರು ಭಾರತದಲ್ಲಿ ಪ್ರಚಲಿತದಲ್ಲಿರುವ ಅವತಾರ ನಂಬಿಕೆಯನ್ನು ವಿರೊ ಸಿದ್ದಾರೆ. ಅವತಾರಕ್ಕೆ ದೇವನು ದೂತರನ್ನು ಕಳಿಸುವುದೆಂಬ ಅರ್ಥ ನೀಡಿದ್ದಾರೆ. ಅರ್ಥಾ ಜನರ ಮಾರ್ಗದರ್ಶನಕ್ಕಾಗಿ ಪ್ರವಾದಿಗಳನ್ನು ದೇವನು ನಿಯೋಜಿಸುವನು. ಈ ಪ್ರವಾದಿಗ ಪ್ರವಾದಿ ಮುಹಮ್ಮದ್‌ರು(ಸ) ಕೊನೆಯ ಕೊಂಡಿಯೆಂದು ವೇದಪ್ರಕಾಶರು ಬರೆದಿದ್ದಾ

ಸರ್ವವ್ಯಾಪಿ, ಸರ್ವಶಕ್ತ, ಅದ್ವಿತೀಯ, ಸರ್ವಾಧಾರ, ಕರ್ತಾರ, ನಿಯಂತ್ರಕ, ಅಗೋಚ ಆದಿಗಳಂತಹ ದೇವನ ಗುಣಗಳನ್ನು ಅವಲೋಕಿಸಿದರೆ ಮಾನವನ ಅಥವಾ ಸಿಂ ರೂಪದಲ್ಲಿ ದೇವನು ಅವತಾರವೆತ್ತುತ್ತಾನೆಂಬ ವಿಚಾರ ಬುದ್ಧಿಗೆ ನಿಲುಕುವುದಿಲ್ಲ... ದೇವ ಜೀವಿಗಳ ರೂಪದಲ್ಲಿರುತ್ತಾನೆಂಬ ಅವತಾರವಾದದ ನಂಬಿಕೆಯಿಂದ ದೇವನು ಸರ್ವ ವ್ಯಾಪಕ ಎಂದಂತಾಗುವುದು ಮತ್ತು ಅಸೀಮನಲ್ಲ, ಮಿತಿಯಿರುವವನು, ಒಂದು ದೇಶಕ್ಕೆ ಸೀಮಿತನ ಬಿಡುವವನು. ಆಮೇಲೆ ದೇವನನ್ನು ಹೇಗೆ ಸರ್ವಜ್ಞನೆಂದು ಕರೆಯುವುದು? ಹಾಗಾ ದೇವನನ್ನು ಆದಿ, ಅನಾದಿಯೆಂದು ಹೇಗೆ ಕರೆಯಲು ಸಾಧ್ಯ?

ಒಂದು ವಿಚಿತ್ರವನ್ನು ನೋಡಿ. ರಾಮಚಂದ್ರ ಮತ್ತು ಪರಶುರಾಮರು ಒಂದೇ ಕಾ ಅವತಾರ ಪುರುಷರೆಂದು ಹೇಳಲಾಗುತ್ತದಷ್ಟೇ. ಪರಸ್ಪರ ಯುದ್ಧಕ್ಕೂ ಅವರಿಬ್ಬ ಸಿದ್ಧರಾಗಿದ್ದಾರೆಂದು ವಿವರಿಸಲಾಗುತ್ತದೆ. ಒಬ್ಬ ದೇವನು ಇನ್ನೊಬ್ಬ ದೇವನಲ್ಲಿ ಯು ಹೊರಡುವುದೆಂದರೆ ಆ ಇನ್ನೊಬ್ಬನನ್ನು ಮತ್ತೊಬ್ಬ ಪರಮಾತ್ಮನೆಂದು ತಿಳಿದಿರ ಎಂದಾಗುವುದು. ಹೀಗೆ ದೇವನೇ ದೇವನಲ್ಲಿ ಕಾದಾಡುವ ಸ್ಥಿತಿ ವಿಚಿತ್ರವಾಗಿಲ್ಲವೇ? ಪ್ರಚ ಅವತಾರವಾದ ಬುದ್ಧಿ ಸಂಗತವಲ್ಲ, ಧರ್ಮ ಸಂಗತವೆಂದೂ ಹೇಳಲು ಸಾಧ್ಯವಿಲ್ಲ, ಮಾತ್ರವ ಈ ವಾದವು ದೇವನ ಮಹಾತ್ಮೆಗೆ ವಿರುದ್ಧವಾಗಿದೆ. ದೇವನನ್ನು ಪೂರ್ಣನಲ್ಲ ಅ ಅವತಾರವೆಂದು ಒಪ್ಪಿಕೊಂಡಂತಾಗುವುದು. ದೇವನ ಅಖಂಡ ಪ್ರಭುತ್ವದ ಖಂಡನೆ ಯೆಂ ಇದನ್ನು ವಿಶ್ಲೇಷಿಸಬಹುದಾಗಿದೆ.

ದೇವನು ಮಾನವ ಮತ್ತು ಬೇರೆ ರೂಪದಲ್ಲಿಯೂ ಅವತಾರವೆತ್ತುವನೆಂಬುದು ಸರಿಯ ಅದು ದೇವಚರರ ಕುರಿತ ಊನ ನಂಬಿಕೆಯಾಗಿರಬಹುದು. ಭಾರತದಲ್ಲಿ ದೇವಚರರ ದೇವತೆಗಳೆಂದು ಹೆಸರಿಸಲಾಗುವಂತೆ ಪ್ರವಾದಿ ಮತ್ತು ಸಂದೇಶವಾಹಕರ ನಂಬಿಕೆ ದೇವಾವತಾರವಾಗಿ ರೂಪಾಂತರಗೊಂಡಿರಬಹುದು. ಇಂದು ಪ್ರಚಲಿತ ದಲ್ಲಿರುವ ಅವತ ವಾದದ ರೂಪದಲ್ಲಿ ಪ್ರವರ್ಧಮಾನಕ್ಕೆ ಬಂದಿರಬಹುದು ಎಂದು ಅರ್ಥವಾಗುತ್ತದೆ. ಆ ದೇವನ ಅವತಾರದಿಂದ ದೇವನನ್ನು ವಿಕಾರಗೊಳಿಸಿದಂತಾಗು ವುದೆಂಬ ವಿಚ ಗಮನಿಸಲ್ಪಟ್ಟಿಲ್ಲವೆಂದು ವ್ಯಕ್ತಗೊಂಡಿದೆ.

ವಿದ್ವಾಂಸರು ಅವತಾರ ಶಬ್ದವನ್ನು ಪ್ರವಾದಿಗೆ ಹೋಲಿಸಿದ್ದಾರೆ. ಮುಹಮ್ಮದ್ ಗಜನಿಯ ನಾಣ್ಯದಲ್ಲಿರುವ ಸಂಸ್ಕೃತ ಉಲ್ಲೇಖದಲ್ಲಿ ಇದು ಸ್ಪಷ್ಟವಾಗಿದೆ. ಗಜನಿಯ ನಾಣ್ಯದಲ್ಲಿ ಇಸ್ಲಾಮಿನ ಸಾಕ್ಷ್ಯ ವಚನ (ಕಲಿಮಾ) 'ಲಾ ಇಲಾಹ ಇಲ್ಲಲ್ಲಾಹ್' ಮುದ್ರಣ ವಾಗಿದ್ದು ಅದನ್ನು 'ಅವ್ಯಕ್ತಮ್ ಏಕಮ್, ಮುಹಮ್ಮದ್ ಔತಾರಮ್' ಎಂದು ಸಂಸ್ಕೃತಕ್ಕೆ ಭಾಷಾಂತರಿಸಲಾಗಿದೆ.

ಇಲ್ಲಿ ಅಲ್ಲಾಹನನ್ನು 'ಅವ್ಯಕ್ತಮ್' ಎಂದು ಪ್ರವಾದಿಯನ್ನು 'ಔತಾರಮ್' ಎಂದೂ ಸಂಬೋಧಿಸಿರುವುದನ್ನು ನಾವು ಕಾಣಬಹುದು. 'ಅವ್ಯಕ್ತಮ್' ಶಬ್ದ ಅಲ್ಲಾಹನಿಗೆ ಅರ್ಥ ಪೂರ್ಣವಾದ ಶಬ್ದ ಬಳಕೆಯಾಗಿದೆ. ಅತ್ಯಂತ ರಹಸ್ಯ ಪ್ರಭುತ್ವವೆಂಬುದು ಅಲ್ಲಾಹನ ಅರ್ಥ ಗಳಲ್ಲಿ ಒಂದಾಗಿದೆ. ರಹಸ್ಯ ಪ್ರಭುತ್ವವೆಂದರೆ ಅದು ಅವ್ಯಕ್ತವಾಗಿರುತ್ತದೆಯಷ್ಟೇ.

'ಔತಾರಮ್' ಎಂದರೆ ವಿದ್ವಾಂಸರ ಪ್ರಕಾರ ಪ್ರವಾದಿಗಳಿಗೆ ದೂತ-ಸಂದೇಶವಾಹಕ ಎಂಬ ಬಳಕೆಯಾಗಿದೆ. ಹೀಗಾಗಿ ಪ್ರವಾದಿಗಳಿಗೆ 'ಔತಾರಿ ಪುರುಷ್' ಎಂಬ ಸಂಕೇತವನ್ನು ನೀಡಿರಬಹುದು. ಅಂದರೆ 'ಪ್ರವಾದಿ' ಶಬ್ದದ ವಾಸ್ತವಿಕ ಅಭಿವ್ಯಕ್ತಿಯೇ ಎಂದು ಅದನ್ನು ಹೇಳಬಹುದು.

ಸ್ವರ್ಗ-ನರಕ-ಪರಲೋಕ ಎಂಬ ನಂಬಿಕೆಯು ವೇದಗಳಲ್ಲಿವೆ. ಅದು ಪವಿತ್ರ ಕುರ್‌ಆನ್ ಮತ್ತು ವೇದಗಳಲ್ಲಿ ಸಮಾನ ಪ್ರತಿಪಾದನೆಯಾಗಿದೆ. ಸಂಸ್ಕೃತದ ವಿದ್ವಾಂಸರಾದ ದುರ್ಗಾ ಶಂಕರ ಸತ್ಯಾರ್ಥಿಯವರು ರಿಸಾಲತ್ ಅಥವಾ ಪ್ರವಾದಿತ್ವ ನಂಬಿಕೆಗಳು ವೇದಗಳಲ್ಲಿಯೂ ಇವೆ ಎಂದು ಸಾಧಿಸಿರುವರು. ಅವರು ಉದ್ಧರಿಸಿರುವ ವೇದದ ಕೆಲವು ಮಂತ್ರಗಳನ್ನು ಇಲ್ಲಿ ನೀಡಲಾಗುವುದು.

**ಅಗ್ನಿಂ ದೂತಂ ವೃಣೀಮಹೆ ಹೋತಾರಮ್ ವಿಶ್ವ ವೇದಸಂ(ಋ. 1/4/12/1)**

ಅರ್ಥಾತ್ "ನಾವು ವಿಶ್ವದ ವೇದನೆಗಳ ಹವನ ಮಾಡುವ ಅಗ್ನಿಯನ್ನು ದೂತನೆಂದು ಆಯ್ದುಕೊಳ್ಳುತ್ತೇವೆ." ವೇದಗಳ ಈ ಶ್ಲೋಕಗಳು ಪ್ರವಾದಿತ್ವಕ್ಕೆ ಒಂದು ಸಮರ್ಥನೆಯಾಗಿದೆ ಯೆಂದು ಸತ್ಯಾರ್ಥಿಯವರ ಅಭಿಪ್ರಾಯವಾಗಿದೆ.

**ತಾಂ ಅಶತೋ ವಿ ಭೋದಯ ಯದಗ್ನೆ ಯಾಸಿದ್ದೂತಮ್ (ಋ. 1/12/4)**

**ತ್ವಾಮಿದಸ್ಯ ಉಷಸೋ ವ್ಯುಷ್ಟಿಷು ದೂತಂ (ಋ. 10/122/7)**

**ತ್ವಂ ದೂತಃ ಪ್ರಥಮೋವರಣ್ಯೇಯಃ (ಋ. 10/1/22/5)**

**ಶಾಶ್ವತ್ತಮ್ ಮಿಳತೆ ದೂತ್ಯಾಯ (ಋ 10/70/3)**

ಈ ಶ್ಲೋಕಗಳನ್ನು ಉಲ್ಲೇಖಿಸುತ್ತಾ ಸತ್ಯಾರ್ಥಿಯವರು ಈ ರೀತಿ ಬರೆದಿದ್ದಾರೆ.

"ವೇದಗಳಲ್ಲಿ ಇಂತಹ ಹಲವಾರು ಶ್ಲೋಕಗಳಿದ್ದು 'ದೂತ್' ಶಬ್ದವು ವೇದಗಳ ಸಾಮಾನ್ಯ (Common) ಪದ ಪ್ರಯೋಗವಾಗಿದೆ. ಅನೇಕ ಕಡೆಗಳಲ್ಲಿ ಅವು ಪ್ರಯೋಗ ವಾಗಿರುವುದನ್ನು

ನಾವು ಕಾಣಬಹುದು." ಒಂದು ವೇಳೆ ವೇದದ ಶ್ಲೋಕಗಳ 'ದೂತ್' ಶಬ್ದವು ಪ್ರವಾದಿಯನ್ನೆ ಅಭಿಸಂಬೋಧಿಸದಿದ್ದರೂ ಅಭಿಸಂಬೋಧಿಸಿದರೂ ದೇವನ ಪ್ರವಾದಿಗಳು ಬೇರೆ ಬೇ ದೇಶಗಳಲ್ಲಿ ಬೇರೆ ಬೇರೆ ಯುಗಗಳಲ್ಲಿ ಆಗಮಿಸುತ್ತಿದ್ದರು ಎಂಬುದಕ್ಕೆ ಪವಿತ್ರ ಕುರ್‌ಆನಿನ ಸಾಕ್ಷಿಯಿದೆ.

ಪ್ರವಾದಿ ಮುಹಮ್ಮದರು(ಸ) ಪ್ರವಾದಿಗಳ ಸರಣಿಯಲ್ಲಿ ಅಂತಿಮ ಕೊಂಡಿ ಯಾಗಿದ್ದಾ ಅವರು ಇಡೀ ಪ್ರಪಂಚಕ್ಕೆ ಅಂತಿಮ ಪ್ರವಾದಿ ಮತ್ತು ಸಂದೇಶವಾಹಕರಾ ನಿಯೋಜಿಸಲ್ಪಟ್ಟಿದ್ದಾರೆ. ಅವರ ನಂತರ ಯಾವ ಪ್ರವಾದಿಯು ಆಗಮಿಸುವುದಿಲ್ಲವೆಂ ಸತ್ಯವನ್ನು ಪವಿತ್ರ ಕುರ್‌ಆನ್ ಸ್ಪಷ್ಟವಾಗಿ ಘೋಷಿಸಿದೆ.

✧ ✧ ✧

ಅಧ್ಯಾಯ-7

# ಚಾರಿತ್ರಿಕ ನಾಯಕ: ಪ್ರವಾದಿ ಮುಹಮ್ಮದ್(ಸ)

ಅಂತಿಮ ಪ್ರವಾದಿ ಮುಹಮ್ಮದ್‌ರ(ಸ) ಜೀವನ ಮತ್ತು ಅವರು ಮಾಡಿರುವ ಕಾರ್ಯಗಳನ್ನು ಅವಲೋಕಿಸುವುದಕ್ಕಿಂತ ಮೊದಲಾಗಿ ಜಗತ್ತು ಮತ್ತು ಜನಜೀವನದತ್ತ ವಿಹಂಗಮ ನೋಟ ಹರಿಸಬೇಕಾಗಿದೆ.

ಜಗತ್ತು ಹೇಗೆ ಚಲಿಸುವುದು ಮತ್ತು ಅದರಲ್ಲಿರುವ ಪ್ರಾಕೃತಿಕ ನಿಯಮಗಳು (Natural Laws) ಯಾವ ರೀತಿ ಕಾರ್ಯ ನಿರತವಾಗಿದೆ ಎಂದು ಅರಿತು ಕೊಳ್ಳುವ ಪ್ರಯತ್ನವನ್ನು ವಿಜ್ಞಾನವು ನಡೆಸುತ್ತಿದೆ.

ವಿಜ್ಞಾನವು ಪ್ರಪಂಚದಲ್ಲಿ ವಸ್ತುಗಳ ಬಳಕೆಯನ್ನು ತಿಳಿಸಿಕೊಡಬಹುದು. ಮಾನವನು ಆರೋಗ್ಯವನ್ನು ಕಾಪಾಡುವುದು ಹೇಗೆ, ರೋಗ ಉಪಚಾರ ನಡೆಸುವುದು ಹೇಗೆ, ಶತ್ರುಗಳ ವಿರುದ್ಧ ಗೆಲ್ಲಲು ಯಾವ ಅಸ್ತ್ರಗಳನ್ನು ಸಂಶೋಧಿಸಬಹುದು, ವಾಯುಮಂಡಲ ಮಲಿನಗೊಳ್ಳದಂತೆ ಹೇಗೆ ತಡೆಯುವುದು ಎಂಬಿತ್ಯಾದಿ ಜ್ಞಾನವನ್ನು ವಿಜ್ಞಾನವು ಕಲಿಸುತ್ತದೆ. ಜನರ ಬಳಿಗೆ ಅತಿ ಶೀಘ್ರದಲ್ಲಿ ಸಂದೇಶಗಳನ್ನು ಕಳಿಸಲೆಂದು ಟೆಲಿಗ್ರಾಫ್, ಫ್ಯಾಕ್ಸ್, ಇಂಟರ್‌ನೆಟ್‌ಗಳನ್ನು ವಿಜ್ಞಾನವು ಸಂಶೋಧಿಸಿದೆ. ದೂರದ ಸ್ಥಳಕ್ಕೆ ಶೀಘ್ರದಲ್ಲಿ ತಲುಪಲು ವಾಯುಯಾನವನ್ನು ವಿಜ್ಞಾನವು ಕಂಡು ಹುಡುಕಿತು. ಅದು ವಿವಿಧ ರೀತಿಯ ಶಸ್ತ್ರಾಸ್ತ್ರಗಳನ್ನು, ಅಟಂಬಾಬುಗಳನ್ನು, ಹೈಡ್ರೋಜನ್ ಬಾಂಬುಗಳನ್ನು ತಯಾರಿಸಿದೆ.

ಇಷ್ಟೆಲ್ಲ ಸಾಧನೆಯ ಬಳಿಕವೂ ಜಗತ್ತು ಮತ್ತು ಜೀವಿಗಳ ವಾಸ್ತವಿಕ ಉದ್ದೇಶವೇನೆಂದು ವಿವರಿಸಲು ವಿಜ್ಞಾನವು ವಿಫಲವಾಗಿದೆ. ಮಾನವರು ಭೂಮಿಯಲ್ಲಿ ಹುಟ್ಟಲು ಕಾರಣವೇನು? ಅವರ ಜೀವನದ ಗುರಿಯೇನು? ಸಾವು ಅಂತಿಮ ವಿಧಿಯೇ? ಅಥವಾ ಅವರ ಜೀವನಕ್ಕೆ ಬೇರೆ ಗುರಿಯಿದೆಯೇ? ಮಾನವರ ಕರ್ತವ್ಯವೇನು? ಅವರು ಏನನ್ನು ಸಾಧಿಸಬೇಕಾಗಿದೆ. ಜಗತ್ತು ಮತ್ತು ಮಾನವ ಜೀವಿಗಳಿಗೆ ಭೌತಿಕೇತರ ಯಾವುದಾದರೂ ಉದ್ದೇಶಗಳಿವೆಯೇ ಮುಂತಾದ ಪ್ರಶ್ನೆಗಳಿಗೆ ವಿಜ್ಞಾನದಿಂದ ಉತ್ತರ ಲಭಿಸಿಲ್ಲ.

ಇವು ವಿಜ್ಞಾನದ ವ್ಯಾಪ್ತಿಯಿಂದ ಹೊರಗಿರುವ ಪ್ರಶ್ನೆಗಳಾಗಿವೆ. ಧರ್ಮವೇ ಮಾನವರ ಈ ಮೂಲಭೂತ ಪ್ರಶ್ನೆಗಳನ್ನು ಉತ್ತರಿಸಬೇಕು. ಆದರೆ ಇಂದು ಧರ್ಮಗಳು ಈ ಪ್ರಶ್ನೆಯನ್ನು

ಬಿಡಿಸುವ ಬದಲು ಅವು ಇನ್ನಷ್ಟು ಜಟಿಲಗೊಂಡಿರುವುದನ್ನು ಕಾಣುತ್ತೇವೆ. ಧರ್ಮ ಮೂಲಭೂತ ಪ್ರಶ್ನೆಗಳಿಗಿಂತ ಬೇರೆಯೇ ವಿಚಾರಗಳಿಗೆ ಒತ್ತು ನೀಡಿ ಜನರ ಉತ್ತೇಜಿಸುವುದನ್ನು ನೋಡುವಾಗ ಇಂದು ಒಂದು ಒಗಟಿನಂತೆ ಕಾಣಿಸುತ್ತಿದೆ.

ನಿಜವಾಗಿ ಜಗತ್ತಿಗೆ ಏಕೈಕ ಧರ್ಮ ಇರಬೇಕಾದುದು ನ್ಯಾಯವಾಗಿದೆ. ಆದರೆ ಒಂದು ನೈಜ ಧರ್ಮವು ವಿವಿಧ ಧರ್ಮ ಸಂಪ್ರದಾಯಗಳಾಗಿ ಇಂದು ಹಂಚಿ ಹೋಗಿ ಈ ರೀತಿ ಜಗತ್ತಿನಲ್ಲಿ ಹಲವು ಧರ್ಮಗಳಾಗಿರುವುದು ಸ್ಪಷ್ಟವಾದ ಅಧರ್ಮವಾಗಿದೆ.

ಮೂಲ ಧರ್ಮದಲ್ಲಿ ಅನೇಕ ರೀತಿಯ ಉತ್ತರವಿರಲು ಸಾಧ್ಯವೇ? ಧರ್ಮದಿಂ ಮಾನವರ ಪ್ರತಿಷ್ಠೆ, ಸೂಕ್ತ ನ್ಯಾಯ ಮತ್ತು ಸತ್ಯಾಧಾರಿತವಾದ ಉತ್ತರ ದೊರಕಬೇಕ ಯಾಕೆಂದರೆ ಮೂಲದಲ್ಲಿ ಮಾನವ ಪ್ರಕೃತಿ ಒಂದೇ ಆಗಿದೆ. ಆದುದರಿಂದ ಅದಕ್ಕೆ ಬೇ ಬೇರೆ ಉತ್ತರಗಳಿಲ್ಲ. ಅನೇಕ ಧರ್ಮಗಳ ಅನೇಕ ಉತ್ತರ ಹೇಗೆ ನಮಗೆ ಸ್ವೀಕಾರಾರ್ಹವಾದೀತ

ಭೂಮಿಯಲ್ಲಿ ದೇವನು ಮಾನವರ ಜೀವನಕ್ಕೆ ಅವಶ್ಯಕವಾಗಿರುವ ಸಕಲ ಸಾಧ ಗಳನ್ನು ಸಂಗ್ರಹಿಸಿದ್ದಾನೆ. ಅಲ್ಲಿ ಮಾನವ ವಾಸಕ್ಕೆ ವಿಶಾಲವಾದ ವ್ಯವಸ್ಥೆಯಿದೆ. ಭೂಮಿಯ ಧಾನ್ಯ ಮೊಳಕೆಯೊಡೆಯುತ್ತದೆ. ಮಳೆಯಿಂದ ಗದ್ದೆಗೆ ನೀರಾವರಿಯೂ ಸೂರ್ಯನಿಂ ಹಗಲು ರಾತ್ರಿಗಳೂ ಉಂಟಾಗುತ್ತವೆ, ಗದ್ದೆಯ ಪೈರುಗಳು ಮಾಗುತ್ತವೆ. ಭೂಮಿಂ ಗುರುತ್ವಾಕರ್ಷಣಾ ಶಕ್ತಿಯಿಂದಾಗಿಯೇ ನಾವು ಭೂಮಿಯಲ್ಲಿ ಗಟ್ಟಿಯಾಗಿ ನೆಲೆಯೂರಿದ್ದೇ ಭೂಮಿಯ ಪಥ ಸಂಚಲನದಿಂದ ರಾತ್ರಿ ಹಗಲುಗಳಾಗುವುದು. ಮಾನವರು ಹಗಲಿನ ದುಡಿಯುತ್ತಾರೆ, ರಾತ್ರಿ ವೇಳೆ ವಿಶ್ರಾಂತಿ ಪಡೆಯುತ್ತಾರೆ. ಇಂತಹ ಅದ್ಭುತ ಸುವ್ಯವಸ್ ವ್ಯವಸ್ಥೆ ಮಾಡಿಕೊಟ್ಟ ದೇವನು ನಮ್ಮ ಜೀವನದ ಉದ್ದೇಶವನ್ನು ತಿಳಿಸಿಕೊಡುವ ವ್ಯವಸ್ಥೆಯ ನಮಗೆ ಮಾಡದಿರುತ್ತಾನೆಯೇ?

## ದೈವಿಕ ಮಾರ್ಗದರ್ಶನ

ಮಾನವನು ಭೂಮಿಯ ಸರ್ವ ಶ್ರೇಷ್ಠ ಮತ್ತು ನಿಗೂಢ ಸೃಷ್ಟಿಯಾಗಿದ್ದಾನೆ. ಈ ರಿ ಮಾನವನನ್ನು ಸೃಷ್ಟಿಸಲು ಸಾಧ್ಯವಿರುವ ದೇವನಿಗೆ ಮಾನವನ ಮಾರ್ಗದರ್ಶನ ಮಾಡುವು ಅಸಂಭವವಲ್ಲ? ಮಾನವರ ಮಾರ್ಗದರ್ಶನಕ್ಕಾಗಿ ದೇವನು ಆರಂಭದಿಂದಲೇ ಸಂದೇ ವಾಹಕರನ್ನು ನಿಯೋಜಿಸುತ್ತಾ ಬಂದಿದ್ದಾನೆ. ನಾವು ಅವರನ್ನು ನೆಬಿ, ಪೈಗಂಬರ್, ರಸೂ (ಪ್ರವಾದಿ) ಇತ್ಯಾದಿ ಹೆಸರಿನಲ್ಲಿ ಕರೆಯುತ್ತೇವೆ. ಅಸಂಖ್ಯಾತ ಪ್ರವಾದಿಗಳು ಜಗತ್ತಿ ಆಗಮಿಸಿದ್ದು ಆಯಾ ಕಾಲದ ಮಾನವರಿಗೆ ಮಾರ್ಗದರ್ಶನ ನೀಡಿರುವರು. ಮಾನವರ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಿರುವರು. ಮಾನವರ ಮಾರ್ಗದರ್ಶನಕ ದೈವಿಕ ವಚನಗಳು ಅವತೀರ್ಣವಾಯಿತು. ದೈವಿಕ ಗ್ರಂಥವೂ ಅವತೀರ್ಣಗೊಂಡಿತು. ಆಯ ಕಾಲದ ಮಾನವರ ಭಾಷೆಯಲ್ಲಿಯೇ ಎಲ್ಲ ಪ್ರವಾದಿಗಳು ಜನರನ್ನು ಸಂಬೋಧಿಸಿರುವರ

## ,ವಾದಿ ಮುಹಮ್ಮದರಿಗಿಂತ(ಸ) ಮೊದಲು

ಮುಹಮ್ಮದರು(ಸ) ಅಂತಿಮ ಪ್ರವಾದಿಯಾಗಿದ್ದಾರೆ. ಧರ್ಮವು ಸಂಪೂರ್ಣ ಕ್ಷಯಿಸಿ ತುಮಾತಿನಂತಾಗಿದ್ದಾಗ ಪ್ರವಾದಿವರ್ಯರು(ಸ) ಆಗಮಿಸಿದ್ದಾರೆ. ಅಂದು ನಾನಾ ರೀತಿಯ ದಾಚಾರಗಳನ್ನು ಧರ್ಮವೆಂದು ಹೆಸರಿಸಲಾಗಿತ್ತು. ವಿಧ ವಿಧದ ಕೆಟ್ಟ ಆಚರಣೆಗಳು ಿಢಿಯಲ್ಲಿದ್ದವು. ಧರ್ಮವು ಅಂದು ನೈಜರೂಪವನ್ನು ಕಳೆದುಕೊಂಡಿತ್ತು. ಪರಸ್ಪರ ೋಧಾಭಾಸಗಳ ಆಗರವಾಗಿತ್ತು. ಒಂದು ಆಟ-ವಿನೋದವಾಗಿ ಜನರ ನಡುವೆ ಧರ್ಮವಿತ್ತು. ಟ್ಟ ಆಚಾರಗಳು ಧಾರ್ಮಿಕ ರೂಪವನ್ನು ಪಡೆದುಕೊಂಡಿತ್ತು. ಕೆಲವರಂತೂ ಅಂದು ವನನ್ನೂ ಆತ್ಮವನ್ನೂ ನಿರಾಕರಿಸುತ್ತಿದ್ದರು. ಧಾರ್ಮಿಕ ಮತ್ತು ಆಧ್ಯಾತ್ಮಿಕ ಉನ್ನತಿಯು ನ್ನತ ಕುಲದಲ್ಲಿ ಜನಿಸಿದವರ ಪಾಲಾಗಿತ್ತು.

ಕೆಲವರಿಗೆ ಒಬ್ಬನೇ ದೇವನು ಸಾಕಾಗಲಿಲ್ಲ. ಅವರು ತ್ರಿಏಕತ್ವಕ್ಕೆ ಗಂಟು ಬಿದ್ದರು. ಇನ್ನು ವರು ಅಸಂಖ್ಯಾತ ದೇವರುಗಳನ್ನು ಮಾಡಿಕೊಂಡು ಪೂಜೆ ಅರ್ಚನೆ ಸಲ್ಲಿಸು ತ್ತಿದ್ದರು. ತ್ತಾಗಿ ಆ ದಿನಗಳಲ್ಲಿ ಬಹುದೇವತ್ವವೇ ಗಟ್ಟಿಯಾಗಿ ತಳವೂರಿತ್ತು ಎನ್ನಬಹುದು. ದೇವನ ಕ್ಕ ಅಧಿಕಾರಗಳನ್ನೇ ಅಂದಿನ ಜನರು ಮರೆತು ಬಿಟ್ಟರು. ಜನರಿಗೆ ನೈತಿಕ ಕರ್ತವ್ಯಗಳ ಧಗಾಳಿಯೇ ಗೊತ್ತಿರಲಿಲ್ಲ. ಮಾನವರು ಮಾನವರ ನಡುವೆ ಪರಸ್ಪರ ಭೇದಭಾವದ ೀಡೆ ಎದ್ದು ನಿಂತಿತ್ತು. ಮಹಿಳೆಯರೊಡನೆ ಸದ್ವರ್ತನೆ ತೋರಬೇಕು. ನ್ಯಾಯದಿಂದ ್ತಿಸಬೇಕು ಎಂಬ ಕಲ್ಪನೆಯಿರಲಿಲ್ಲ. ಅಂದಿನ ಪುರುಷರಲ್ಲಿ ಮಹಿಳೆಯರಿಗೆ ಗೌರವ ೀರಿಸುವ ಮನೋಭಾವಗಳಿರಲಿಲ್ಲ. ಅದು ಒಂದು ಆವಶ್ಯಕತೆಯೆಂದು ಅವರಿಗೆ ಅಂದು ್ನಿಸಿರಲಿಲ್ಲ.

ಪುರೋಹಿತಶಾಹಿಯು (Pristhood) ಧರ್ಮದೊಳಗೆ ತಲೆ ಎತ್ತಿ ನಿಂತಿತ್ತು. ಧಾರ್ಮಿಕ ಿಮೆಯು ಅದೊಂದೇ ವರ್ಗಕ್ಕೆ ಮೀಸಲಾಗಿತ್ತು. ಅವರಿಗೆ ಹೆಚ್ಚು ಮಹತ್ವ ನೀಡ ಗುತ್ತಿತ್ತು. ಈ ಮಂದಿ ಧರ್ಮದ ಗುತ್ತೇದಾರರಾಗಿದ್ದರು. ಅಂದು ಪುರೋಹಿತರ ಮೂಲಕ ವಸಾನಿಧ್ಯ ಪಡೆಯ ಬಹುದಾಗಿತ್ತು. ಆದರೆ ಮೋಕ್ಷ ಸಂಪಾದನೆಯ ಸ್ಪಷ್ಟವಾದ ವಿಚಾರ ರರಲ್ಲಿರಲಿಲ್ಲ. ಒಂದು ವರ್ಗ ಕೇವಲ ತಮ್ಮ ಪಾಲಿಗೆ ಮಾತ್ರ ಮುಕ್ತಿ-ಬಿಡುಗಡೆ ılvation)ಗಳಿವೆ ಎಂದು ಪ್ರಬಲವಾಗಿ ವಾದಿಸುತ್ತಿತ್ತು. ಆದರೆ ಅವರು ಪ್ರತಿಪಾದಿಸುತ್ತಿದ್ದ ರ್ಮದಲ್ಲಿ ಧರ್ಮದ ಸಹಜ ಗುಣಗಳೇ ಲೋಪಗೊಂಡಿದ್ದವು. ಒಟ್ಟಾರೆ ಅವರ ನಡುವೆ ರ್ಮವು ತನ್ನ ಸಹಜ ಗುಣವನ್ನೇ ಕಳೆದುಕೊಂಡಿತ್ತೆನ್ನಬಹುದು.

ಅವರು ಕೆಲವು ಉತ್ತಮವೂ ಮತ್ತು ಕೆಟ್ಟವೂ ಆದ ಸಂಪ್ರದಾಯಗಳನ್ನು ಧರ್ಮ ಿದು ಕರೆಯುತ್ತಿದ್ದರು. ಅಂದು ಹೆಚ್ಚು ಅಧರ್ಮವೆಸಗುತ್ತಿದ್ದವರು ಧಾರ್ಮಿಕ

ವಕ್ತಾರರಾಗಿದ್ದರು. ಅಧಾರ್ಮಿಕ ಕಾರ್ಯಗಳಲ್ಲಿ ಅವರು ಪಾಲ್ಗೊಂಡು ಅದರಲ್ಲೇ ಮುಳು ಬಿಡುತ್ತಿದ್ದರು. ದಾನ ಕೊಡುವ ಯೋಗ್ಯತೆಯೂ ಅವರಿಗೇ ಇತ್ತು.

ಈ ಎಲ್ಲದರ ನಡುವೆ ಅವರಲ್ಲಿ ಪರಲೋಕದ ಕುರಿತು ನಾನಾ ರೀತಿಯ ನಂಬಿಕೆ ಗಳ ಅಸ್ತಿತ್ವದಲ್ಲಿದ್ದವು. ಇಂತಹ ಉದಾಹರಣೆಗಳನ್ನು ನಾವಿಂದೂ ಕಾಣಬಹುದಾಗಿದೆ. ಅವ ಧರ್ಮವು ಇಚ್ಛೆ, ಸ್ವಾರ್ಥ, ಲಾಲಸೆಯ ಭೌತಿಕ ರೂಪಾಂತರವಾಗಿತ್ತು. ಧರ್ಮ ಜನರ ಅಂದು ಜಾಗೃತಿ ಮೂಡಿಸುವ ಬದಲಾಗಿ ಅಜ್ಞಾನವನ್ನು ಹರಡುತ್ತಿತ್ತೆಂದ ಆಶ್ಚರ್ಯವಾಗುವುದಿಲ್ಲವೇ? ಹೌದು, ಅಂದು ಧರ್ಮ ಒಂದು ಅಂಧ ವಿಶ್ವಾಸದ ಉಪಯೋಗಗೊಂಡಿತ್ತು. ಧರ್ಮದಲ್ಲಿ ನೈಜ ಧಾರ್ಮಿಕತೆಯಾಗಲಿ, ವಿವೇಕವಾಗಲಿ ಅಂದ ಗೋಚರಿಸುತ್ತಿರಲಿಲ್ಲ. ಅದರಲ್ಲಿ ಅಧ್ಯಾತ್ಮಿಕತೆಯ ಪ್ರಶ್ನೆಯೇ ಇರಲಿಲ್ಲ. ಧಾರ್ಮಿ ಮಾರ್ಗವನ್ನು ಅತಿ ಜಟಿಲಗೊಳಿಸಲಾಗಿತ್ತು. ಧರ್ಮ ಒಣ(ಶುಷ್ಕ) ಆಚರಣೆಯಾ ಮಾರ್ಪಟ್ಟಿತ್ತು. ಜನರಲ್ಲಿ ಧರ್ಮದ ಬಗ್ಗೆ ಜಿಗುಪ್ಸೆ ಹುಟ್ಟಿಕೊಂಡಿತ್ತು.

ಜನರ ಮನಸ್ಸಿನಲ್ಲಿ ಕೋಮಲ ಮತ್ತು ಮಧುರ ಭಾವನೆಗಳಿರಲಿಲ್ಲ. ಒರಟುತ ಮೈವೆತ್ತವರಂತೆ ವರ್ತಿಸುತ್ತಿದ್ದರು. ದೇವ ಸಮರ್ಪಣೆಯ ಜೀವನ ಅಥವಾ ದೇವ ಭಯಭ ಇವೆಲ್ಲವೂ ಗ್ರಂಥಗಳಿಗೆ ಸೀಮಿತವಾಗಿತ್ತು. ಅವು ಜನರ ನಡುವೆ ಆಚರಣೆಯಲ್ಲಿರಲಿಲ್ಲ.

ಕುತೂಹಲವೆಂದರೆ ಅವರ ಧರ್ಮ ಸಂತರು ಮತ್ತು ಗುರುಗಳಿಗೆ ನೈಜ ಧಮ ಜ್ಞಾನವಿರಲಿಲ್ಲ. ಕೆಲವು ಪಾರಿಭಾಷಿಕ ಧಾರ್ಮಿಕ ಶಬ್ದಗಳನ್ನು ಅವರು ತಿಳಿದಿದ್ದರು. ಅಂಧರಿ ಬೆಳಕಿನ ಬಗ್ಗೆ ಹೇಳಿದರೆ ಅರ್ಥವಾಗುವುದು. ಆದರೆ ಬೆಳಕನ್ನು ಅಂಧರು ಅನುಭವಿ ತಿಳಿಯಲಾರರಷ್ಟೇ. ಒಟ್ಟಾರೆ ಇಂತಹ ಅಜ್ಞಾನದ ವಾತಾವರಣದಲ್ಲಿ ಮುಹಮ್ಮದರು( ಆಗಮಿಸಿದರು. ಅಂದು ಸತ್ಯಸಂಧವಾದ ಧಾರ್ಮಿಕ ಜೀವನ ಯಾರೂ ನಡೆಸುತ್ತಿರ ಧರ್ಮದೊಳಗೆ ಅನುಚಿತವಾದ ಮಿಶ್ರಣ ಮತ್ತು ಲೋಪಗಳು ತಲೆಯೆತ್ತಿದ್ದವು.

ಆದುದರಿಂದ ಸತ್ಯವೆಂಬುದು ಸಹಜವಾಗಿ ಮರೆಗೆ ಸೇರಿತ್ತು. ಇಂತಹ ಜನರನ ತರಬೇತಿ ಮಾರ್ಗದರ್ಶನಗಳ ಮೂಲಕ ಸನ್ಮಾರ್ಗದಲ್ಲಿ ಮುನ್ನಡೆಸುವ ಹೊಣೆಯೊಂದಿ ಮುಹಮ್ಮದರನ್ನು(ಸ) ಪ್ರವಾದಿಯಾಗಿ ನಿಯೋಜಿಸಲಾಯಿತು. ಅವರು ಯಾವುದೋ ವಿಶಿ ಜನಾಂಗಕ್ಕೆ ಮಾತ್ರ ಪ್ರವಾದಿಯಾಗಿರಲಿಲ್ಲ ಬದಲಾಗಿ ಅವರು ಸಕಲ ಮಾನವರಿಗ ಮಾರ್ಗದರ್ಶನ ನೀಡಬೇಕಾಗಿತ್ತು. ಮಾನವರಿಗೆ ನೈಜ ಗುರಿ, ನೈಜ ಉದ್ದೇಶ ಗಳನ ಹೇಳಿಕೊಡುವುದು ಪ್ರವಾದಿವರ್ಯರ(ಸ) ಹೊಣೆಯಾಗಿತ್ತು. ಮಾನವರಿಗೆ ದೇವ ಶಿಕ್ಷಣಗಳೇನು? ದೇವನ ಸಂಪ್ರೀತಿ ಗಳಿಸಬೇಕಾದರೆ ಮಾನವರು ಯಾವ ರೀತಿ ಬದು ಬೇಕಾಗಿದೆಯೆಂದು ಅವರು(ಸ) ತಿಳಿಸಬೇಕಾಗಿತ್ತು.

# ಪ್ರವಾದಿಯ ವ್ಯಕ್ತಿತ್ವ ಮತ್ತು ಕರ್ತವ್ಯಗಳ ಹೊಳಪು

ಪ್ರವಾದಿ ಮುಹಮ್ಮದರು(ಸ) ತಮ್ಮ ಈ ಕರ್ತವ್ಯವನ್ನು ನಿರ್ವಹಿಸಲು ನಾನಾ ಸಂಕಷ್ಟ ಗಳನ್ನು ಎದುರಿಸಿದರು. ಜನರು ಅವರ ಬದ್ಧ ವೈರಿಗಳಾದರು. ಪ್ರವಾದಿಯ(ಸ) ಮೇಲೆ ವಿಶ್ವಾಸವಿರಿಸಿದ ಜನರನ್ನು ಸತಾಯಿಸಿದರು. ವಿರೋಧಿಗಳ ಕಿರುಕುಳ ಮಿತಿ ಮೀರಿದಾಗ ಪ್ರವಾದಿವರ್ಯರು(ಸ) ಹುಟ್ಟೂರು ತೊರೆಯ ಬೇಕಾಯಿತು. ಸಂಗಡಿಗರೊಂದಿಗೆ ಮದೀನಾ ದಲ್ಲಿ ಆಶ್ರಯ ಪಡೆಯಬೇಕಾಯಿತು. ಹೀಗಿದ್ದರೂ ಪ್ರವಾದಿ ವರ್ಯರು(ಸ) ತಮ್ಮ ಕರ್ತವ್ಯದಲ್ಲಿ ಸ್ವಲ್ಪವೂ ಚ್ಯುತಿ ಮಾಡಲಿಲ್ಲ. ಕರ್ತವ್ಯ ನಿರ್ವಹಿಸಲು ಅವರು ನಿರಂತರವಾಗಿ ಶ್ರಮಿಸಿದರು.

ಪ್ರವಾದಿವರ್ಯರು(ಸ) ದೇವನಿಂದ ಮಹಾನತೆ ಲಭಿಸಿದ್ದ ವ್ಯಕ್ತಿಯಾಗಿದ್ದಾರೆ. ಅವರು ಅತ್ಯಂತ ವಿಶಾಲ ಹೃದಯಿಯಾಗಿದ್ದರು ಪರಿಶುದ್ಧವೂ ಕೋಮಲವೂ ಆದ ಸ್ವಭಾವ ಅವರದ್ದಾಗಿತ್ತು. ಅವರು ಕರುಣೆ-ಮಮತೆಗಳ ಆಗರವಾಗಿದ್ದರು. ಅವರ ನೆರವಿಗೆ ದೇವನಿದ್ದನು. ಅವನು ಅವರಿಗೆ ಸಹಾಯವೊದಗಿಸುತ್ತಿದ್ದನು. ಆದುದರಿಂದ ಅದ್ಭುತಾದ್ಭುತವಾದ ಮಹಾ ಕಾರ್ಯಗಳನ್ನು ಅವರು ಸಾಧಿಸಿದರು.

ಮುಖ್ಯವಾಗಿ ವ್ಯಕ್ತಿಯ ಮಹಾನತೆಗಳನ್ನು ಎರಡು ವಿಧದಿಂದ ನಾವು ಗುರುತಿಸ ಬಹುದಾಗಿದೆ. ಮಹಾನ್ ವ್ಯಕ್ತಿಗಳಾಗಿರುವವರು ಉದಾರ ದಾನಿಗಳಾಗಿರುವರು. ಪ್ರವಾದಿ ವರ್ಯರು(ಸ) ಮಹಾದಾನಿಯಾಗಿದ್ದರು. 'ನನಗೆ ಉಹುದ್ ಬೆಟ್ಟದಷ್ಟು ಬಂಗಾರ ಲಭಿಸಿದರೆ ಸಾಲ ಸಂದಾಯಕ್ಕೆ ಅವಶ್ಯಕವಾದುದನ್ನು ಹೊರತು ಅದರ ಒಂದು ದೀನಾರ್ ಕೂಡಾ ನನ್ನ ಬಳಿ ಮೂರು ದಿವಸಕ್ಕಿಂತ ಹೆಚ್ಚು ಕಾಲ ಉಳಿಯುವುದನ್ನು ಬಯಸಲಾರೆ' ಎಂದು ಪ್ರವಾದಿ ವರ್ಯರು(ಸ) ಹೇಳಿದ್ದಾರೆ. ಇಂತಹ ಮಹಾನ್ ದಾನಶೀಲ ವ್ಯಕ್ತಿ ಪ್ರವಾದಿಯಾಗಿದ್ದಾರೆ(ಸ).

ಪ್ರವಾದಿಯು(ಸ) ಜಗತ್ತಿಗೆ ವಿದಾಯ ಹೇಳುವ ಸಂದರ್ಭದಲ್ಲಿ ಅವರ ಬಳಿಯಿದ್ದ ಒಂದು ಚಿನ್ನದ ಗಟ್ಟಿಯನ್ನು ಸದಕಾ(ದಾನ) ನೀಡುವಂತೆ ಹೇಳಿದ್ದರು.

ಮರಣದ ವೇಳೆ ಪ್ರಜ್ಞೆ ತಪ್ಪಿ ಮರುಕಳಿಸಿದಾಗಲೆಲ್ಲ "ಸದಕಾ(ದಾನ) ನೀಡಿದ್ದೀರಾ ನಾನು ಮನೆಯಲ್ಲಿ ಸಂಪತ್ತು ಉಳಿಸಿಕೊಂಡ ಸ್ಥಿತಿಯಲ್ಲಿ ದೇವನನ್ನು ಭೇಟಿಯಾಗಲು ಇಚ್ಛಿಸುವುದಿಲ್ಲ" ಎಂದು ಪ್ರವಾದಿವರ್ಯರು(ಸ) ಹೇಳುತ್ತಿದ್ದರು.

ಅವರು ಸಜ್ಜನ ವ್ಯಕ್ತಿಯಾಗಿದ್ದರು. ಬಹಳ ಸರಳವಾಗಿ ಬದುಕಿದರು. ಕೇವಲ ಒಂದು ಜೋಡಿ ಬಟ್ಟೆ ಮಾತ್ರ ಅವರಲ್ಲಿತ್ತು. ನಿಧನಗೊಂಡ ಸಮಯದಲ್ಲಿ ಅವರು ತೇಪೆ ಹಚ್ಚಿದ್ದ ಬಟ್ಟೆಯನ್ನು ಧರಿಸಿದ್ದರು. ಅವರ ಮನೆಯಲ್ಲಿ ಸಾಮಾನ್ಯವಾದ ಒಂದು ಮಂಚವಿತ್ತು. ಮರಣದ ವೇಳೆ ಚರ್ಮದ ಹೂಜಿ, ಸ್ವಲ್ಪ ಜೋಳ ಬಿಟ್ಟರೆ ಅವರ ಮನೆಯಲ್ಲಿ ಬೇರೇನೂ ಇರಲಿಲ್ಲ.

ಆದರೆ ಮರಣದ ವೇಳೆ ಅವರು 10 ಲಕ್ಷ ಮೈಲು ವಿಸ್ತೀರ್ಣವಾದ ಭೂಭಾಗದ ಆಡಳಿತಗಾರರಾಗಿದ್ದರು. ಯಮನ್‌ನಿಂದ ಸಿರಿಯಾದ ವರೆಗಿನ ಇಸ್ಲಾಮೀ ಸಾಮ್ರಾಜ್ಯದ ಅಧಿಕಾರ ಅವರ ಕೈಯಲ್ಲಿತ್ತು.

ತಮ್ಮ ಪತ್ನಿಯರಿಗೆ ಗಟ್ಟಿಮುಟ್ಟಾದ ಕೋಣೆಯನ್ನು ಕೂಡಾ ಅವರು(ಸ) ಕಟ್ಟಿಸಿರಲಿಲ್ಲ, ಒಬ್ಬ ವ್ಯಕ್ತಿ ನೆಟ್ಟಗೆ ನಿಂತರೆ ಅದರ ಛಾವಣಿ ತಲೆಗೆ ತಾಗುತ್ತಿತ್ತು. ಅದನ್ನು ನಂತರ ಉಮಯ್ಯ ವಂಶದ ಖಲೀಫ ಅಬ್ದುಲ್ ಮಲಿಕ್‌ರು ಪ್ರವಾದಿವರ್ಯರ(ಸ) ಮಸೀದಿ ವಿಸ್ತರಣೆಗಾಗಿ ಅನಿವಾರ್ಯವಾಗಿ ಕೆಡವಿದರು. ಅಂದು ಮದೀನಾ ನಿವಾಸಿಗಳು ಅತ್ತರು. ಅವರಿಗೆ ಅದನ್ನು ಉಳಿಸಿಕೊಳ್ಳಬೇಕಾಗಿತ್ತು. 10 ಲಕ್ಷ ಮೈಲು ವಿಸ್ತೀರ್ಣದ ಭೂಭಾಗಕ್ಕೆ ಆಡಳಿತಗಾರ ನಾಗಿದ್ದ ಪ್ರವಾದಿವರ್ಯರ(ಸ) ಸರಳ ಬದುಕನ್ನು ನಂತರದ ತಲೆಮಾರು ನೋಡಬೇಕೆಂದು ಅವರು ಬಯಸಿದರು. ಪ್ರವಾದಿವರ್ಯರ(ಸ) ಬದುಕು ಅಷ್ಟು ಸರಳವಾಗಿತ್ತು. "ನಾನು ಹಂಚುವವನು ಮತ್ತು ಅಲ್ಲಾಹನು ನೀಡುವವನು" ಎಂದು ಹೇಳುತ್ತಿದ್ದರು.

ಮಹಾನ್ ವ್ಯಕ್ತಿಗಳಲ್ಲಿ ಅಪಾರ ಕ್ಷಮಾ ಗುಣವಿರುತ್ತದೆ. ಪ್ರವಾದಿವರ್ಯರಲ್ಲಿ(ಸ) ಈ ಗುಣ ಪರಿಪೂರ್ಣ ರೂಪದಲ್ಲಿತ್ತು. ತಾಯಿಫ್‌ನ ಜನರು ಕಲ್ಲೆಸೆದು ಅವರಿಗೆ(ಸ) ಕಿರುಕುಳಕೊಟ್ಟರು. ಕಾಲಿಗೆ ಗಾಯವಾಗಿ ರಕ್ತ ಒಸರುತ್ತಿತ್ತು. ಅವರ ಚಪ್ಪಲಿ ರಕ್ತದಿಂದ ತೊಯ್ದಿತ್ತು. ಇಂತಹ ಕಿರುಕುಳವನ್ನು ಅವರು ಸಹಿಸಿದರು. ಆದರೂ ಅವರು ತಾಯಿಫ್‌ನ ಜನರನ್ನು ಕ್ಷಮಿಸಿದರು. "ಓ ಅಲ್ಲಾಹ್! ಇವರನ್ನು ಕ್ಷಮಿಸು. ಇವರು ಅಜ್ಞಾನಿಗಳಾಗಿದ್ದಾರೆ" ಎಂದು ಅಲ್ಲಾಹನನ್ನು ಪ್ರಾರ್ಥಿಸಿದರು.

ಮಕ್ಕಾ ವಿಜಯದ ವೇಳೆಯೂ ಪ್ರವಾದಿವರ್ಯರ(ಸ) ಅಪಾರ ಕ್ಷಮಾಗುಣ ಪ್ರದರ್ಶನ ಗೊಂಡಿತ್ತು. ಅವರನ್ನು ಕೊಲ್ಲಲು ಆ ಜನರು ತಯಾರಿ ನಡೆಸಿದ್ದರು. ಅಂತಹ ಜನ ಸಮೂಹವನ್ನು ಕ್ಷಮಿಸಿ ಪ್ರವಾದಿವರ್ಯರು(ಸ) ಹೇಳಿದರು- "ಹೋಗಿರಿ, ನೀವು ಸ್ವತಂತ್ರ ರಾಗಿದ್ದೀರಿ." ಪ್ರವಾದಿವರ್ಯರನ್ನು(ಸ) ಮತ್ತು ಸಂಗಡಿಗರನ್ನು ಇದೇ ಜನರು ಸತಾಯಿ ಸಿದ್ದರು. ಅವರು ಪ್ರವಾದಿವರ್ಯರನ್ನು(ಸ) ಕೊಲೆಗೈಯಲೆಂದು ಅದೊಂದು ದಿನ ಸಕಲ ಸಿದ್ಧತೆಗಳೊಂದಿಗೆ ಪ್ರವಾದಿವರ್ಯರ(ಸ) ಮನೆಗೆ ಮುತ್ತಿಗೆ ಹಾಕಿದ್ದರು. ಪ್ರವಾದಿವರ್ಯರು(ಸ) ಇಂತಹ ಪ್ರಾಣ ಶತ್ರುಗಳಿಗೂ ಕ್ಷಮೆ ನೀಡಿದ್ದು ಮಾತ್ರವಲ್ಲ ಅವರನ್ನು ಗೌರವಿಸಿದರು.

ಹಜ್ಜ್‌ನ ಸಂದರ್ಭದಲ್ಲಿ ಮಕ್ಕಾದ ಅರಫಾತ್ ಮೈದಾನದಲ್ಲಿ ನೀಡಿದ ಪ್ರವಾದಿವರ್ಯರ(ಸ) ಭಾಷಣವು ಹೀಗಿದೆ-

"ಜನರೇ, ಈ ವರ್ಷದ ಬಳಿಕ ನಾವು ಪರಸ್ಪರ ಇಲ್ಲಿ ಭೇಟಿಯಾಗುತ್ತೇವೋ ಇಲ್ಲವೋ ಎಂದು ನನಗೆ ತಿಳಿಯದು. ಜನರೇ, ಖಂಡಿತವಾಗಿಯೂ ನಿಮ್ಮ ರಕ್ತ, ನಿಮ್ಮ ಸೊತ್ತು ಮತ್ತು ನಿಮ್ಮ ಮಾನವು ನೀವು ನಿಮ್ಮ ಪ್ರಭುವಿನ ಬಳಿ ಹಾಜರಾಗುವ ತನಕ ಪವಿತ್ರವೂ

ಉಲ್ಲಂಘನೀಯವೂ ಆಗಿದೆ ನಿಮ್ಮ ಈ ದಿನ, ನಿಮ್ಮ ಈ ತಿಂಗಳು, ನಿಮ್ಮ ಈ ನಗರವು ಪವಿತ್ರವೂ ನಿಷಿದ್ಧವೂ ಆಗಿರುವಂತೆ. ಖಂಡಿತವಾಗಿಯೂ ನೀವು ಸದ್ಯವೇ ನಿಮ್ಮ ಪ್ರಭುವನ್ನು ಭೇಟಿಯಾಗುವಿರಿ. ಹೌದು! ನಿಮ್ಮ ಕರ್ಮಗಳಿಗಾಗಿ ಅಲ್ಲಿ ವಿಚಾರಣೆ ಗೊಳಗಾಗುವಿರಿ. ಕೇಳಿರಿ! ಅಜ್ಞಾನ ಕಾಲದ ಎಲ್ಲ ಸಂಪ್ರದಾಯಗಳು ನನ್ನ ಪಾದಗಳಡಿ ಯಲ್ಲಿವೆ. ಅಜ್ಞಾನ ಕಾಲದ ಎಲ್ಲ ಕೊಲೆಯ ಪ್ರತೀಕಾರಗಳನ್ನು ಅನೂರ್ಜಿತಗೊಳಿಸಲಾಗಿದೆ. ಆ ಪೈಕಿ ಮೊದಲ ಕೊಲೆಯ ಪ್ರತೀಕಾರವನ್ನು ಅನೂರ್ಜಿತಗೊಳಿಸುವುದಾಗಿ ನಾನು ಘೋಷಿಸುತ್ತೇನೆ. ಅದು ಸಅದ್ ಗೋತ್ರಕ್ಕೆ ಸೇರಿದ ರಬೀಅ ಬಿನ್ ಹಾರಿಸ್‌ರ ಕೊಲೆಯ ಪ್ರತೀಕಾರವಾಗಿದೆ. ಅವರನ್ನು ಹುಝೈಲರು ಕೊಂದಿದ್ದರು. ಅಜ್ಞಾನ ಕಾಲದ ಎಲ್ಲ ಬಡ್ಡಿ ಗಳನ್ನು ಮನ್ನಾ ಮಾಡಲಾಗಿದೆ. ಆ ಪೈಕಿ ಮೊದಲನೆಯದಾಗಿ ನಾನು (ನನ್ನ ಪಿತೃ ಸಹೋದರ) ಅಬ್ಬಾಸ್ ಬಿನ್ ಮುತ್ತಲಿಬ್‌ರಿಗೆ ಸಿಗಬೇಕಾದ ಎಲ್ಲ ಬಡ್ಡಿಗಳನ್ನು ಮನ್ನಾ ಮಾಡಿರುವುದಾಗಿ ಘೋಷಿಸುತ್ತೇನೆ. ಖಂಡಿತವಾಗಿಯೂ ಅದು ಸಂಪೂರ್ಣವಾಗಿ ಮನ್ನಾ ಆಯಿತು.

ಜನರೇ, ನಿಮಗೆ ನಿಮ್ಮ ಪತ್ನಿಯರ ಮೇಲೆ ಕೆಲವು ಹಕ್ಕುಗಳು ಇವೆ ಮತ್ತು ನಿಮ್ಮ ಪತ್ನಿಯರಿಗೆ ನಿಮ್ಮ ಮೇಲೂ ಹಕ್ಕುಗಳಿವೆ. ನಿಮ್ಮ ದಾಂಪತ್ಯ ಸಂಬಂಧದ ಪಾವಿತ್ರ್ಯವನ್ನು ಕಾಪಾಡಬೇಕಾದುದು ಮತ್ತು ನಿಮ್ಮ ಹೊರತು ಇತರ ಯಾರನ್ನೂ ನಿಮ್ಮ ಹಾಸಿಗೆಗೆ ಬರಗೊಡದಿರುವುದು ಅವರ ಮೇಲೆ ನಿಮ್ಮ ಹಕ್ಕಾಗಿದೆ. ಆದರಲ್ಲಿ ಅವರು ಚ್ಯುತಿ ಮಾಡಿದರೆ ಅವರನ್ನು ನಿಮ್ಮ ಹಾಸಿಗೆಯಿಂದ ಬೇರ್ಪಡಿಸಬಹುದು. ಗಾಯ ಅಥವಾ ಕಲೆ ಆಗದ ರೀತಿಯಲ್ಲಿ ಅವರನ್ನು ಹೊಡೆಯಬಹುದು ಮತ್ತು ಅದರಿಂದ ಅವರು ತಿದ್ದಿಕೊಂಡು ನಿಮಗೆ ವಿಧೇಯರಾದರೆ ಅವರಿಗೆ ನಿಮ್ಮ ಸಾಮರ್ಥ್ಯಾನುಸಾರ ಉಣಿಸಿರಿ ಹಾಗೂ ತೊಡಿಸಿರಿ ಕೇಳಿರಿ! ಪತಿಯ ಸಂಪತ್ತಿನಿಂದ ಅವನ ಅನುಮತಿಯಿಲ್ಲದೆ ಏನನ್ನೂ ದಾನ ಮಾಡುವುದು ಸ್ತ್ರೀಗೆ ಧರ್ಮ ಸಮ್ಮತವಲ್ಲ. ಖಂಡಿತಾ ನಾನು ನಿಮ್ಮ ಬಳಿ ನಿಮ್ಮನ್ನೆಂದೂ ದಾರಿ ತಪ್ಪಿಸದ ವಸ್ತುವನ್ನು ಬಿಟ್ಟಗಲುತ್ತೇನೆ. ಅಲ್ಲಾಹನ ಗ್ರಂಥ ಮತ್ತು ಆತನ ಪ್ರವಾದಿಯ ಸುನ್ನತ್. (ಜೀವನ ವಿಧಾನ) ಅವುಗಳನ್ನು ನೀವು ಬಿಗಿ ಹಿಡಿದರೆ ನೀವೆಂದೂ ದಾರಿ ತಪ್ಪಲಾರಿರಿ. ಜಾಗ್ರತೆ! ಧರ್ಮದ ವಿಷಯದಲ್ಲಿ ಅತಿರೇಕ ಎಸಗಬೇಡಿರಿ. ಧಾರ್ಮಿಕ ವಿಷಯದಲ್ಲಿ ಅತಿರೇಕವೆಸಗಿಯೇ ನಿಮ್ಮ ಪೂರ್ವಜರಲ್ಲಿ ಅನೇಕರು ನಾಶ ಹೊಂದಿದರು.

ಜನರೇ, ನನ್ನ ನಂತರ ಯಾವ ಪ್ರವಾದಿಯೂ ನಿಯುಕ್ತನಾಗುವುದಿಲ್ಲ, ನಿಮ್ಮ ನಂತರ ಯಾವ ಸಮುದಾಯವೂ ರಚಿಸಲ್ಪಡುವುದಿಲ್ಲ. ಕೇಳಿರಿ! ನಿಮ್ಮ ಪ್ರಭುವನ್ನು ಆರಾಧಿಸಿರಿ. ದಿನಕ್ಕೆ ಐದು ಬಾರಿ ನಮಾಝ್ ನಿರ್ವಹಿಸಿರಿ. ರಮಝಾನ್ ತಿಂಗಳಲ್ಲಿ ಉಪವಾಸ ಆಚರಿಸಿರಿ. ನಿಮ್ಮ ಸಂಪತ್ತಿನ ಮೇಲಿನ ಝಕಾತನ್ನು ಸಂತೋಷದಿಂದ ಪಾವತಿ ಮಾಡಿರಿ. ಅಲ್ಲಾಹನ ಭವನದ ಹಜ್ಜ್ ಯಾತ್ರೆಯನ್ನು ಕೈಗೊಳ್ಳಿರಿ. ನಿಮ್ಮ ಆಜ್ಞಾಧಿಕಾರಿ ಗಳನ್ನು

ಅನುಸರಿಸಿರಿ. ನೀವು ನಿಮ್ಮ ಪ್ರಭುವಿನ ಸ್ವರ್ಗದಲ್ಲಿ ಪ್ರವೇಶಿಸಲ್ಪಡುವಿರಿ.

ನನ್ನ ಬಗ್ಗೆ ಕಿಯಾಮತ್‌ನ ದಿವಸ ನಿಮ್ಮನ್ನು ವಿಚಾರಿಸಿದಾಗ ನೀವು ಏನೆಂ ಹೇಳುವಿರಿ?

ಜನರು ಹೇಳಿದರು! ನೀವು ಧರ್ಮದ ಅಮಾನತನ್ನು ತಲುಪಿಸಿರುವಿರಿ. ನಿ ಪ್ರವಾದಿತ್ವ ರಾಯಭಾರವನ್ನು ಸಂಪೂರ್ಣ ನಿರ್ವಹಿಸಿರುವಿರಿ ಮತ್ತು ನಮ್ಮ ಕಲ್ಯಾಣದ ಕಾಳಜಿ ವಹಿಸಿರುವಿರಿ ಎಂದು ನಾವು ಸಾಕ್ಷ್ಯ ವಹಿಸುತ್ತೇವೆ.

ಆಗ ಅಲ್ಲಾಹನ ಸಂದೇಶವಾಹಕರು ತನ್ನ ತೋರ್ಬೆರಳನ್ನು ಆಕಾಶದತ್ತ ತೋರಿಸು ಜನರೆಡೆಗೆ ತೋರಿಸಿ ಹೀಗೆ ಹೇಳಿದರು.

ನೀನು ಸಾಕ್ಷಿಯಾಗಿರು. ಓ ಅಲ್ಲಾಹ್! ನೀನು ಸಾಕ್ಷಿಯಾಗಿರು.

ಕೇಳಿರಿ! ಇಲ್ಲಿ ಹಾಜರಿರುವವರು ಹಾಜರಿಲ್ಲದವರಿಗೆ ಇದನ್ನು (ಸಂದೇಶವನ ತಲುಪಿಸಬೇಕು. ನೀವು ತಲುಪಿಸುವವರ ಪೈಕಿ ಅನೇಕ ಜನರು ಅದರ ಬಗ್ಗೆ ನಿಮಗಿ ಕಾಳಜಿಯಿರುವವರಾಗಿರಬಹುದು.

✧ ✧ ✧

ಧ್ಯಾಯ-8

# ಮುಹಮ್ಮದ್(ಸ)ರ ಪ್ರವಾದಿತ್ವದ ಸ್ಪಷ್ಟ ಪ್ರಮಾಣಗಳು

**ಮು**ಹಮ್ಮದರು(ಸ) ದೇವನ ಪ್ರವಾದಿಯಾಗಿದ್ದಾರೆ ಮತ್ತು ಅವರು ಪ್ರವಾದಿಗಳ ರಣಿಯ ಕೊನೆಯ ಕೊಂಡಿಯಾಗಿದ್ದಾರೆ. ಪ್ರವಾದಿತ್ವವು ಅವರೊಂದಿಗೆ ಕೊನೆಯಾಗಿದೆ. ುಹಮ್ಮದರು(ಸ) ಪ್ರವಾದಿಯೆನ್ನುವ ಅಸಂಖ್ಯಾತ ಆಧಾರ ಪ್ರಮಾಣಗಳು ನಮ್ಮ ಮುಂದೆ ಭ್ಯವಿದೆ. ಅವರು ಜೀವಿಸಿದ ಪ್ರತಿಯೊಂದು ಕ್ಷಣಗಳೂ ಮುಹಮ್ಮದರು(ಸ) ತ್ಯಸಂಧರೆಂಬುದಕ್ಕೆ ಸಾಕ್ಷ್ಯವೊದಗಿಸುತ್ತಿವೆ. ಆದ್ದರಿಂದ ಅವರ ಸತ್ಯ ಸಂಧ ಜೀವನವು ್ರವಾದಿತ್ವದ ಘೋಷಣೆಯಲ್ಲಿಯೂ ಅವರು ಸತ್ಯ ಸಂಧರಾಗಿದ್ದಾರೆ ಎಂಬ ಬಗ್ಗೆ ಸಾಕ್ಷಿಯಾಗಿದೆ.

ಒಂದು ವೇಳೆ ಮುಹಮ್ಮದರಿಗೆ(ಸ) ಪ್ರವಾದಿಯೆಂಬ ಭ್ರಮೆಯಾಗಿದೆ ಎಂದು ಾವಿಸುವವರಿಗೆ ಅವರ ಸತ್ಯಸಂಧ ಬದುಕು ಪ್ರವಾದಿತ್ವದ ಸಾಕ್ಷಿಯಾಗಿರುವುದು. ಾಮಾನ್ಯವಾಗಿ ಯಾವುದೇ ವಿಷಯದಲ್ಲಿ ಸಂದೇಹಗಳುಂಟಾದರೆ ಆಧಾರ ಪ್ರಮಾಣಗಳನ್ನು ೇಳಲಾಗುವುದಷ್ಟೇ. ಆದರೆ ನಮ್ಮ ಶಕ್ತಿ ಸಾಮರ್ಥ್ಯಗಳ ಬಗ್ಗೆ ನಮಗೆ ಆಧಾರ ಪ್ರಮಾಣಗಳ ಾವಶ್ಯಕತೆಯಿಲ್ಲ. ಅದು ಸ್ವಯಂ ಪ್ರಮಾಣವಾಗಿದೆ. ಪ್ರವಾದಿಗಳಿಗೆ ಅವರ ಜೀವನವೇ ್ರವಾದಿತ್ವದ ಪ್ರಮಾಣವಾಗಿದೆ. ತಮ್ಮ ಎದುರಿನ ಅನುಭವಗಳ ಮೇಲೆ ವಿಶ್ವಾಸವಿರಿಸಲು ್ರವಾದಿಗಳಿಗೆ ಬಾಹ್ಯ ಪ್ರಮಾಣಗಳ ಆವಶ್ಯಕತೆಯಿಲ್ಲ.

ದಿವ್ಯವಾಣಿಯು ಅವರಿಗೆ ಕನಸಿನ ರೂಪದಲ್ಲಿ ಅಥವಾ ಜಾಗೃತ ಸ್ಥಿತಿಯಲ್ಲಿ ಅವತೀರ್ಣ ಾದರೂ ಅವರು ಅದನ್ನು ನಿಸ್ಸಂದೇಹವಾಗಿ ಗುರುತಿಸಬಲ್ಲರು. ಪ್ರವಾದಿಗಳು ಸಾಮಾನ್ಯ ನಸುಗಳು ಮತ್ತು ದಿವ್ಯವಾಣಿಯಾಗಿರುವ ಕನಸುಗಳ ಅಂತರವನ್ನು ಅರಿಯಲು ಸಮರ್ಥರಾಗಿ ದ್ದಾರೆ. ಅದೇ ವೇಳೆ ಕನಸಿನ ಮೂಲಕ ಪರೋಕ್ಷದ ಸೂಚನೆಗಳು ಸಾಮಾನ್ಯ ಜನರಿಗೂ ಲಭಿಸು ುದಿದೆ ಎಂಬ ವಿಚಾರ ಇಲ್ಲಿ ಗಮನಾರ್ಹವಾಗಿದೆ. ಏಕೆಂದರೆ ಸಾಮಾನ್ಯರಿಗೆ ಮಾರ್ಗದರ್ಶನದ ಿವಿಧ ವಿಧಾನಗಳಿವೆ ಎಂದು ಅನುಭವವಾಗಲೆಂದು ಇಂತಹ ಕನಸುಗಳು ತೋರಿಸಲ್ಪಡುತ್ತವೆ. ೀಗೆಲ್ಲ ಇರುವುದರಿಂದ ಪ್ರವಾದಿಗಳ ವಹ್ಯನ್ನು ನಿರಾಕರಿಸುವುದು ಸರಿಯಲ್ಲ.

# ಪ್ರವಾದಿವರ್ಯರ(ಸ) ಜೀವನ

ಪ್ರವಾದಿಗಳು ನಿಷ್ಕಳಂಕ ಚಾರಿತ್ರ್ಯವಂತರು. ಜೀವನದಲ್ಲಿ ಅವರೆಂದೂ ಸುಳ್ಳು- ಮೋಸ ಕಪಟತನ ತೋರಲಾರರು. ಅಂತಹ ವಿಚಾರಗಳನ್ನು ಅವರ ಬದುಕಿನಲ್ಲಿ ಕಾಣಲು ಸಾಧ್ಯವಿಲ್ಲ

ಪ್ರವಾದಿ ಮುಹಮ್ಮದ್‌ರಿಗೆ(ಸ) 40ನೆಯ ವಯಸ್ಸಿನಲ್ಲಿ ಪ್ರವಾದಿತ್ವವು ಲಭಿಸಿತು. ಈ ನಲ್ವತ್ತು ವರ್ಷಗಳ ವರೆಗೂ ಅವರ ಜೀವನವು ತೆರೆದ ಗ್ರಂಥದಂತೆ ಜನರ ಮುಂದಿತ್ತು ಅವರು ಪ್ರಾಮಾಣಿಕ ವ್ಯಕ್ತಿಯೆಂದು ಜನರು ವಿಶ್ವಾಸವಿರಿಸಿದ್ದರು. ಸಣ್ಣ ದೊಡ್ಡ ಯಾವ ವಿಷಯ ವಿದ್ದರೂ ಅವರಲ್ಲಿ ಕಪಟತನವಿರಲಿಲ್ಲ. ಯಾರನ್ನೂ ಅವರೆಂದೂ ವಂಚಿಸಲಿಲ್ಲ. ಯಾವುದೇ ಷಡ್ಯಂತ್ರಗಳಲ್ಲಿ ಮುಹಮ್ಮದರು(ಸ) ಭಾಗಿಯಾಗಿಲ್ಲವೆಂದು ಜನರಲ್ಲಿ ಸ್ಪಷ್ಟ ಅರಿವಿತ್ತು.

ಎಂದೂ ತಮ್ಮ ನಾಲಗೆಯಿಂದ ಯಾವುದೇ ತಪ್ಪು ನುಡಿಯದ ವ್ಯಕ್ತಿ ದಿಢೀರನೆ ಒಂದು ಸುಳ್ಳಿನೊಂದಿಗೆ ಎದ್ದು ನಿಲ್ಲಲು ಹೇಗೆ ಸಾಧ್ಯ? ಅವರು ಸುಳ್ಳು ಹೇಳುತ್ತಾರೆ ಎನ್ನುವುದೇ ಮಹಾ ಸುಳ್ಳಾಗುವುದು. ಯಾಕೆಂದರೆ ಎಂದೂ ಸುಳ್ಳೇ ಹೇಳದ ಮನುಷ್ಯ ತನ್ನನ್ನು ದೇವನ ಪ್ರವಾದಿ ತಾನು ದೇವನಿಂದ ನಿಯುಕ್ತನಾಗಿದ್ದೇನೆ ಎಂದು ಯಾಕೆ ಸುಳ್ಳು ಹೇಳುತ್ತಾರೆ? ದೇವನ ವತಿಯಿಂದ ಜ್ಞಾನ, ನಾಗರಿಕತೆ ಮುಂತಾದ ಶಿಕ್ಷಣವು ಅವತೀರ್ಣವಾಗದೆ ದೇವನಿಂದ ಅವತೀರ್ಣವಾದುದನ್ನು ಜನರಿಗೆ ಹೇಳಿದ್ದೇನೆಂದು ಪ್ರವಾದಿಗಳು ಹೇಳುವುದಾದರೂ ಹೇಗೆ?

ಆ ವರೆಗೂ (ಅರ್ಥಾತ್ 40 ವಯಸ್ಸಿನ ವರೆಗೂ) ಎಲ್ಲಿಯೂ ಸ್ವಲ್ಪವೂ ಪ್ರವಾದಿ ಮುಹಮ್ಮದರು(ಸ) ಶಿಕ್ಷಣವನ್ನು ಪಡೆದಿರಲಿಲ್ಲ. ಅವರು ಯಾರಿಂದಲೂ ಎಲ್ಲಿಂದಲೂ ಐತಿಹಾಸಿಕ ಮಾಹಿತಿಗಳನ್ನು ತಿಳಿದುಕೊಂಡಿರಲಿಲ್ಲ. ಇಂತಹ ವ್ಯಕ್ತಿಯು ಜ್ಞಾನದ ಯಾವುದಾದ ರೊಂದು ಮೂಲವಿಲ್ಲದೆ ಜನರಿಗೆ ತತ್ವಾದರ್ಶ ಹೇಳಿಕೊಡಲಾರರು. ಪ್ರವಾದಿ ಮುಹಮ್ಮದ ರಿಗೆ(ಸ) ಈ ಜ್ಞಾನ ತತ್ವಾದರ್ಶಗಳು ಎಲ್ಲಿಂದ ದೊರೆಯುತ್ತಿತ್ತು? ಒಬ್ಬ ಅಶಿಕ್ಷಿತ ವ್ಯಕ್ತಿ ಮಾನವ ಜೀವನದ ಜಟಿಲಾತಿ ಜಟಿಲ ಸಮಸ್ಯೆಗಳ ಸಮೂಹವನ್ನೇ ಬಗೆಹರಿಸಲು ಹೇಗೆ ಸಾಧ್ಯ? ಈ ಎಲ್ಲ ಜ್ಞಾನವೂ ಅವರಿಗೆ ದೇವನಿಂದ ಲಭ್ಯವಾಗಿತ್ತು. ನನಗೆ ದೇವನ ದಿವ್ಯವಾಣಿ ಅವತೀರ್ಣ ಗೊಳ್ಳುತ್ತಿದೆಯೆಂದು ಅವರು ಹೇಳುತ್ತಿದ್ದರು. ಆದರೆ ಆ ವರೆಗೂ ಸತ್ಯಸಂಧ ನಾಗಿದ್ದ ವ್ಯಕ್ತಿ ಈಗಲೂ ಸತ್ಯವನ್ನೇ ಹೇಳುತ್ತಿದ್ದಾರೆಂದು ಮಾತ್ರ ಅವರ ವಿರೋಧಿಗಳಿಗೆ ಜ್ಞಾನೋದಯ ವಾಗಿರಲಿಲ್ಲ.

ಆದುದರಿಂದ ಈ ವ್ಯಕ್ತಿ ಯಾರಿಂದಲೋ ಕಲಿತು ಹೀಗೆಲ್ಲ ಹೇಳುತ್ತಿರುವನೆಂದು ಪ್ರವಾದಿವರ್ಯರ(ಸ) ವಿರೋಧಿಗಳು ಹೇಳ ತೊಡಗಿದರು. ಪ್ರವಾದಿತ್ವ ಘೋಷಣೆಯ ವರೆಗೂ ಸತ್ಯರೆಂದಿದ್ದ ಅದೇ ಜನರು ಆನಂತರ ಅವರನ್ನು ಸುಳ್ಳುಗಾರರೆಂದರೆ ಹೇಗೆ? ನಂತರ ಹಾಗೆ ಹೇಳುವವರೇ ಸುಳ್ಳುಗಾರರೆಂಬ ಬಗ್ಗೆ ಯಾರೂ ಸಂದೇಹಪಡಲಾರರು. ಪ್ರವಾದಿ ಮುಹಮ್ಮದರು(ಸ) ಪ್ರಸ್ತುತ ಪಡಿಸುವಂತಹ ದೈವಿಕ ವಾಣಿಯನ್ನು ತರುವ ಸಾಮರ್ಥ್ಯವಿದ್ದವರು

ರೇಬಿಯಾದಲ್ಲಿರಲಿಲ್ಲ. ಪ್ರವಾದಿವರ್ಯರು(ಸ) ಮಂಡಿಸಿದ ಪವಿತ್ರ ಕುರ್‌ಆನ್ ವಚನಗಳು ಅವರ ಸ್ವರಚಿತ ಕೃತಿಯೆಂದು ಸಾಬೀತುಪಡಿಸುವ ಯೋಗ್ಯತೆಯಿ ದ್ದವರು ಅಂದು ಯಾರೂ ಇರಲಿಲ್ಲ. ಅನಂತರ ಸುದೀರ್ಘ ಕಾಲ ಸಂದು ಹೋದರೂ ಪ್ರವಾದಿವರ್ಯರು(ಸ) ಮಂಡಿಸಿದ ದೇವನ ವಚನಗಳಿಗೆ (ಪವಿತ್ರ ಕುರ್‌ಆನ್‌ಗೆ) ಸರಿಸಾಟಿ ಯಾದ ಕೃತಿಯನ್ನು ರಚಿಸಲು ಯಾರಿಗೂ ಈ ವರೆಗೆ ಸಾಧ್ಯವಾಗಿಲ್ಲ. ಅಂತಹ ವ್ಯಕ್ತಿ ಈ ವರೆಗೆ ಯಾರೂ ಹುಟ್ಟಿಲ್ಲ ಮತ್ತು ಹುಟ್ಟುವುದೂ ಇಲ್ಲ.

## ನಿಸ್ವಾರ್ಥ ಪ್ರವಾದಿ

ಕಪಟ ವ್ಯಕ್ತಿಗಳು ಯಾವುದೋ ಪ್ರಾಪಂಚಿಕ ಲಾಭಕ್ಕಾಗಿ ಸುಳ್ಳು ಹೇಳುವವರೆಂದು ನಮಗೆ ತಿಳಿದಿದೆ. ಇಂತಹವರು ತಮ್ಮ ಲಾಭಕ್ಕಾಗಿ ಸುಳ್ಳುವಾದ ಹೂಡುತ್ತಾರೆ. ಆದರೆ ಪ್ರವಾದಿ ಮುಹಮ್ಮದರ(ಸ) ಸಂಪೂರ್ಣ ಜೀವನದಲ್ಲಿ ಅಂತಹ ಯಾವುದೇ ಸುಳಿವು ಕೂಡಾ ಲಭಿಸದು. ಅವರು ತಮ್ಮ ವಾರೀಸುದಾರರ ಹಿತಕ್ಕಾಗಿ ಯಾವುದೇ ಭೌತಿಕ ಸಾಧನಗಳನ್ನು ಶೇಖರಿಸಿಲ್ಲ. ಕೇವಲ ದೇವನಿಂದ ನಿಯುಕ್ತಿಯಾದ (ಸಂದೇಶ ಪ್ರಚಾರ ಕಾರ್ಯದಲ್ಲಿ) ಕೆಲಸದಲ್ಲಿ ತನ್ನನ್ನು ಸಂಪೂರ್ಣವಾಗಿ ನಿಸ್ವಾರ್ಥದಿಂದ ತೊಡಗಿಸಿಕೊಂಡರೇ ಹೊರತು ಇನ್ನೇನೂ ಅವರ ಮುಂದಿರಲಿಲ್ಲ. ಅವರು ಹೇಳಿದರು- "ಪ್ರವಾದಿಗೆ ಯಾವುದೇ ವಾರೀಸುದಾರರಿಲ್ಲ. ಅವರು ಬಿಟ್ಟು ಹೋಗುವುದನ್ನು ಮುಸ್ಲಿಮರು, ಬಡವರು, ಆಶ್ರಿತರಿಗೆ ವಿತರಿಸಬೇಕು." (ಮುಸ್ನದ್ ಅಹ್ಮದ್) ಅವರ ನಿಸ್ವಾರ್ಥತೆ ಈ ಘೋಷಣೆಯಲ್ಲಿ ಅನಾವರಣಗೊಂಡಿದೆಯಲ್ಲವೇ?

ಪ್ರತಿಯೋರ್ವ ಪ್ರವಾದಿಯೂ ತಮ್ಮ ಕೆಲಸವನ್ನು ಸ್ಪಷ್ಟವಾಗಿ ಘೋಷಿಸಿದ್ದಾರೆಂದು ಪವಿತ್ರ ಕುರ್‌ಆನ್ ತಿಳಿಸಿದೆ. **"ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವ ಪ್ರತಿಫಲವನ್ನೂ ಬಯಸುವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಿನ ಬಳಿ ಇದೆ. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು (ನಿಸ್ಸಂಕೋಚವಾಗಿ) ನನ್ನನ್ನು ಅನುಸರಿಸಿರಿ." (ಪವಿತ್ರ ಕುರ್‌ಆನ್, 26:109-110)**

ಪ್ರವಾದಿಗಳನ್ನು ನಿಸ್ವಾರ್ಥಿಗಳೆಂದು ಪವಿತ್ರ ಕುರ್‌ಆನಿನ ಈ ವಚನವು ಸ್ಪಷ್ಟಪಡಿಸುತ್ತಿದೆ. ಹೌದು, ಪ್ರವಾದಿಗಳ ಪರಿಶ್ರಮದಲ್ಲಿ ಎಂದೂ ಸ್ವಾರ್ಥವನ್ನು ಕಾಣಲು ಯಾರಿಂದಲೂ ಸಾಧ್ಯವಿಲ್ಲ. ಪ್ರವಾದಿಗಳ ಪರಿಶ್ರಮದಲ್ಲಿ ವೈಯಕ್ತಿಕ ಉದ್ದೇಶಗಳಿವೆಯೆಂದು ಯಾರಿಗೂ ಆರೋಪಿಸಲು ಸಾಧ್ಯವಿಲ್ಲ.

ಪ್ರವಾದಿ ಮುಹಮ್ಮದರನ್ನು(ಸ) ಅವರ ಜನಾಂಗ ಪ್ರವಾದಿತ್ವ ಲಭಿಸುವುದಕ್ಕಿಂತ ಮೊದಲು ಅತ್ಯಾದರದಿಂದ ಗೌರವಿಸುತ್ತಿತ್ತು. ಅವರು ಪತ್ನಿ ಮಕ್ಕಳೊಂದಿಗೆ ಸಂತೋಷಪೂರ್ವಕ ವಾಗಿಯೇ ಈ ಜನರ ನಡುವೆ ವಾಸಿಸುತ್ತಾ ಬಂದಿದ್ದರು. ಆದರೆ ತನ್ನನ್ನು ಪ್ರವಾದಿಯಾಗಿ

ನಿಯುಕ್ತಿಗೊಳಿಸಲಾಗಿದೆ ಎಂದು ಮುಹಮ್ಮದರು(ಸ) ಹೇಳಿದೊಡನೆ ಇಡೀ ಅರೇಬಿಯಾ ಅವರ ವಿರುದ್ಧ ತಿರುಗಿ ಬೀಳಬೇಕೇ? ಅವರನ್ನು ವಿರೋಧಿಸಬೇಕೇ? ಸ್ವಂತ ಸಂಬಂಧಿಕ ಅವರ ರಕ್ತದಾಹಿಗಳಾಗಬೇಕೆ?

ಯಾವತ್ತು ಭೌತಿಕವಾದಿ ವ್ಯಕ್ತಿ ಎಲ್ಲರನ್ನು ಎದುರು ಹಾಕಿಕೊಳ್ಳಲು ಬಯಸುವುದಿ ಎಲ್ಲರೂ ಶತ್ರುವಾಗುವಂತಹ ತಪ್ಪನ್ನು ಮಾಡಲಾರ. ವಿನಾಕಾರಣ ತನ್ನ ಸುಖ ನೆಮ್ಮ ಕಳೆದುಕೊಳ್ಳಲು ಎಂದೂ ಸಿದ್ಧನಾಗಲಾರ. ಆದರೆ ಪ್ರವಾದಿ ಮುಹಮ್ಮದ ರನ್ನು(ಸ) ಪ್ರವಾದಿ ಘೋಷಣೆಯೊಂದಿಗೆ ಎಲ್ಲರೂ ವಿರೋಧಿಸತೊಡಗಿದರು. ಯಾವನೇ, ಸುಳ್ಳುಗಾರ-ಸ್ವಾರ್ಥಿ ಸತ್ಯ-ಅಸತ್ಯಗಳಿಂದ ಏನೂ ಲಾಭವಿಲ್ಲ, ಸುಳ್ಳಾದರೇನು ಸತ್ಯ ವಾದರೇನು? ಅವನಿಗೆ ತ ಹಿತವೇ ಮುಖ್ಯವಾಗಿರುತ್ತದೆ. ಅವನಿಗೆ ಜನರ ನಂಬಿಕೆಯಿಂದ ಲಾಭವೇನಿದೆ? ಅವರ ನಂ ತಪ್ಪಾಗಿರಲಿ, ಸರಿಯಾಗಿರಲಿ ಯಾವತ್ತೂ ಅದಕ್ಕೆ ಆಘಾತ ಉಂಟು ಮಾಡುವ ಗೋಜಿಗೆ ಅ ತಪ್ಪಿಯೂ ಹೋಗಲಾರನು. ಅವನಿಗೆ ತನ್ನ ಕೆಲಸ ಆದರೆ ಮುಗಿಯಿತು. ಅದಕ್ಕಾಗಿ ತನ್ನ ಶಕ್ತಿಯಿಂದ ಶ್ರಮಿಸುವನು. ಅವನಿಗೆ ಪ್ರಾಪಂಚಿಕ ಲಾಭ. ಸುಖಗಳೇ ಮುಖ್ಯವೆಂದಿರುವ ಸಂಕಷ್ಟದ ದಾರಿಯನ್ನೇಕೆ ಆಯ್ದುಕೊಳ್ಳುತ್ತಾನೆ? ಹಾಗೆ ಮಾಡುವುದರಿಂದ ಭೌತಿಕ ಲಾಭವ ಕಳೆದುಕೊಳ್ಳುವುದಲ್ಲದೆ ಅವನ ಪ್ರಾಣಕ್ಕೂ ಅಪಾಯವಿದೆ. ಆದ್ದರಿಂದ ಓರ್ವ ಕಪಟಿ ಎಂದಿ ಇಂತಹ ಅಪಾಯಕ್ಕೆ ಕೈಹಾಕಲಾರ. ಆದುದರಿಂದ ಪ್ರವಾದಿವರ್ಯರ(ಸ) ಪರಿಶ್ರಮದ ಸ್ವಾರ್ಥವನ್ನು ಆರೋಪಿಸಲು ಯಾರಿಗೂ ಸಾಧ್ಯವಾಗಿಲ್ಲ.

ಜಗತ್ತಿನಲ್ಲಿ ಕಂಡು ಬರುವ ದೊಡ್ಡ ದೊಡ್ಡ ಮಹಾನುಭಾವರು ಸಾಮಾನ್ಯವಾ ಪರಿಸರದ ಕೊಡುಗೆಯಾಗಿರುತ್ತಾರೆ. ಅವರ ವ್ಯಕ್ತಿತ್ವ ನಿರ್ಮಾಣ ಮತ್ತು ನಿರ್ನಾಮಗಳ ಅವರಿರುವ ವಾತಾವರಣದ ಪಾತ್ರವಿರುವುದು. ಯಾವನೇ ಐತಿಹಾಸಿಕ ವ್ಯಕ್ತಿಯ ಕುರಿ ನಾವು ಅಧ್ಯಯನಕ್ಕಿಳಿದಾಗ ಅವನ ವ್ಯಕ್ತಿತ್ವ ನಿರ್ಮಾಣದಲ್ಲಿ ಯಾರಿಗೆ ಏನೆಲ್ಲ ಪಾತ್ರವಿ ಎಂಬುದನ್ನು ವಿವರಿಸ ಬಹುದಾಗಿದೆ.

ಪ್ರವಾದಿ ಮುಹಮ್ಮದರು(ಸ) ತಾನು ಜನಿಸಿದ ವಾತಾವರಣದ ಪ್ರಭಾವಕ್ಕೊಳ ದವರಲ್ಲ ಎಂಬುದನ್ನು ನಾವು ಕಾಣುತ್ತೇವೆ. ಇದು ಅವರ ವ್ಯಕ್ತಿತ್ವದ ವಿಶೇಷವಾಗಿದೆ. ಅಂ ಉದ್ವಿಗ್ನ ವಾತಾವರಣಕ್ಕೆ ಉತ್ತಮ ಮೌಲ್ಯಗಳನ್ನು ಅವರು ಕಲಿಸಿಕೊಡಬೇಕಾಗಿತ್ತು. ಆದುದರಿ ಅವರು ಜನಿಸಿರುವ ಪರಿಸರದಲ್ಲಿ ಅವರ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾಗಿದ್ದ ಯಾವು ಅಂಶಗಳನ್ನು ನಾವು ಕಾಣಲಾರೆವು.

ಪ್ರವಾದಿಯವರ(ಸ) ವ್ಯಕ್ತಿತ್ವವು ಪಾರದರ್ಶಕವಾಗಿತ್ತು. ಆದರೆ ಅವರ ಈ ವ್ಯಕ್ತಿ ನಿರ್ಮಾಣದ ಮೂಲವನ್ನು ಅರೇಬಿಯಾದಲ್ಲಿ ಕಂಡು ಹುಡುಕಲಾರೆವು. ನೆರೆಯ ರಾಷ್ಟ್ರಗ ಮತ್ತು ಸಮಾಜವು ಅವರ ಮೇಲೆ ಪ್ರಭಾವ ಬೀರಿರುವುದನ್ನು ಕಾಣಲಾರೆವು. ಯಾಕೆಂ

ವರದ್ದು ದೇವದತ್ತ ವ್ಯಕ್ತಿತ್ವವಾಗಿದೆ. ಪ್ರವಾದಿ ನೂಹ್‌ರ(ಅ) ಚರಿತ್ರೆಯನ್ನು ವಿವರಿಸಿದ
ಯವಾಯ ಪವಿತ್ರ ಕುರ್‌ಆನ್ ಹೀಗೆ ವಿವರಿಸಿದೆ-

**"ಓ ಪೈಗಂಬರರೇ, ನಿಮಗೆ 'ದಿವ್ಯವಾಣಿಯ' ಮೂಲಕ ಕೊಡುತ್ತಿರುವ ಅದೃಶ್ಯದ ರ್ತಮಾನಗಳಿವು. ಇದಕ್ಕೆ ಮುಂಚೆ ಇವುಗಳನ್ನು ನೀವಾಗಲಿ ನಿಮ್ಮ ಜನಾಂಗವಾಗಲಿ ಿತಿರಲಿಲ್ಲ..." (ಪವಿತ್ರ ಕುರ್‌ಆನ್, 11:49)**

ಅಂದರೆ ಈ ವಚನದಿಂದ ಪ್ರವಾದಿಗಳ ವ್ಯಕ್ತಿತ್ವವನ್ನು ಪರಿಸರ ಪೋಷಿಸಿಲ್ಲ, ಬದಲಾಗಿ ವನೇ ಪೋಷಿಸುತ್ತಾನೆ ಎಂದು ತಿಳಿಯಬಹುದಾಗಿದೆ.

ಈ ರೀತಿ ಹಲವು ಪ್ರವಾದಿಗಳ ಚರಿತ್ರೆ ಪವಿತ್ರ ಕುರ್‌ಆನ್‌ನಲ್ಲಿದೆ. ಬನೀ ಇಸ್ರಾಈಲ್ ಮುದಾಯದ ವಿದ್ವಾಂಸರೊಳಗಿನ ಭಿನ್ನಾಭಿಪ್ರಾಯವನ್ನು ಪವಿತ್ರ ಕುರ್‌ಆನ್ ತಿದ್ದಿ ಪಡಿಸಿತ್ತು.[1] ಅದು ದೇವನಿಂದ ಅವತೀರ್ಣವಾಗಿರುವ ಕಾರಣ ಸಾಧ್ಯವಾಗಿದೆ. ಇನ್ನೂ ನೇಕ ಜನಾಂಗಗಳನ್ನು ಅವರ ಚರಿತ್ರೆಯನ್ನು ಪವಿತ್ರ ಕುರ್‌ಆನ್ ಉದ್ಧರಿಸಿದೆ. ಆದರೆ ವೆಲ್ಲವೂ ಪ್ರವಾದಿವರ್ಯರ(ಸ) ಮೂಲಕ ತಿಳಿಸಿದ ವಿಚಾರಗಳಷ್ಟೇ. ಪ್ರವಾದಿ ವರ್ಯರಿಗೆ(ಸ) ವನಿಂದ ಈ ಜ್ಞಾನ ಅವತೀರ್ಣವಾಗದಿದ್ದರೆ ಸಾವಿರಾರು ವರ್ಷಗಳ ಹಿಂದಿನ ಘಟನೆಯನ್ನು ವರು ವಿವರಿಸುವುದು ಅಸಾಧ್ಯವಾಗಿತ್ತು. ಅವರು ಓದು ಬರಹವನ್ನು ಅರಿತಿರಲಿಲ್ಲ. ದರೆ ದಿವ್ಯವಾಣಿಯು ಪ್ರವಾದಿವರ್ಯರ(ಸ) ವ್ಯಕ್ತಿತ್ವವನ್ನು ರೂಪಿಸಿತ್ತು.

ಹಝ್ರತ್ ಮರ್ಯಮ್‌ರಿಗೆ(ಅ) ಈಸಾ(ಅ) ಜನಿಸಿರುವ ಘಟನೆಯನ್ನು ಉಲ್ಲೇಖಿಸುತ್ತಾ ವಾದಿ ಮುಹಮ್ಮದರನ್ನು ಉದ್ದೇಶಿಸಿ ಪವಿತ್ರ ಕುರ್‌ಆನ್ ಹೀಗೆಂದಿದೆ: **"ಓ ಪೈಗಂಬರರೇ, ವು ನಿಮಗೆ ದಿವ್ಯವಾಣಿಯ ಮೂಲಕ ನಾವು ನೀಡುತ್ತಿರುವ ಅಗೋಚರ ವೃತ್ತಾಂತಗಳು. ಥಾ ಹೈಕಲ್‌ನ (ಮಹಾ ಆರಾಧನಾಲಯದ) ಸೇವಕರು ಮರ್ಯಮರ ಪಾಲಕ ಾರಾಗಬೇಕೆಂಬ ಬಗ್ಗೆ ಲೇಖನಿಗಳನ್ನೆಸೆಯುತ್ತಿದ್ದಾಗ ನೀವು ಅಲ್ಲಿ ಉಪಸ್ಥಿತರಿದ್ದಿಲ್ಲ ಮತ್ತು ವರೊಳಗೆ ಜಗಳವಾಗುತ್ತಿದ್ದಾಗಲೂ ನೀವು ಅಲ್ಲಿರಲಿಲ್ಲ." (ಪವಿತ್ರ ಕುರ್‌ಆನ್, 3:44)** ವಾದಿ ಮುಹಮ್ಮದರ(ಸ) ವ್ಯಕ್ತಿತ್ವದ (ಮೂಲವು ಪವಿತ್ರ ಕುರ್‌ಆನೆಂದೂ, ಸ್ವಯಂ ದೇವನೇ ರ ಮಾರ್ಗದರ್ಶನಗಳಿಂದ ಅವರ ವ್ಯಕ್ತಿತ್ವವನ್ನು ರೂಪಿಸಿದನೆಂದೂ ಅದರ ರೂಪಣೆಯಲ್ಲಿ ಿಸರ, ವಾತಾವರಣಗಳ ಪ್ರಭಾವವಿಲ್ಲವೆಂದು ನಮಗೆ ಮೇಲಿನ ಪವಿತ್ರ ಕುರ್‌ಆನ್ ಚನದಿಂದ ತಿಳಿದು ಬರುತ್ತದೆ.)

ಪ್ರವಾದಿ ಯೂಸುಫ್‌ರ(ಅ) ಚರಿತ್ರೆಯನ್ನು ವಿವರಿಸುತ್ತಾ ಪವಿತ್ರ ಕುರ್‌ಆನ್ ಈ ರೀತಿ ದ್ಧರಿಸಿದೆ.

**"ಓ ಪೈಗಂಬರರೇ, ನಿಮ್ಮ ಮೇಲೆ ಅವತೀರ್ಣಗೊಳಿಸುತ್ತಿರುವ ಈ ಚರಿತ್ರೆಯು ಅದೃಶ್ಯ**

---

[1] ನೋಡಿರಿ, ಪವಿತ್ರ ಕುರ್‌ಆನ್‌ನ 27ನೇ ಅಧ್ಯಾಯದ ಪ್ರಾರಂಭದ ಭಾಗವನ್ನು.

ವೃತ್ತಾಂತಗಳಲ್ಲಾಗಿದೆ. ಅನ್ಯಥಾ ಯೂಸುಫರ ಸಹೋದರರು ಪರಸ್ಪರ ಒಮ್ಮತದೊಂ ಕುತಂತ್ರ ಹೂಡಿದಾಗ ನೀವು ಅಲ್ಲಿರಲಿಲ್ಲ." (ಪವಿತ್ರ ಕುರ್‌ಆನ್, 12:102)

ಅಂದರೆ ದೇವ ಜ್ಞಾನವೇ ಪ್ರವಾದಿ ಮುಹಮ್ಮದರ(ಸ) ವ್ಯಕ್ತಿತ್ವದ ಮೂಲವಾಗಿ

## ಇದು ಹೇಗೆ ಸಂಭವಿಸಿತು?

ಪವಿತ್ರ ಕುರ್‌ಆನಿನಲ್ಲಿ ಪೂರ್ವ ದೈವಿಕ ಗ್ರಂಥಗಳ ಶಿಕ್ಷಣಗಳಿವೆ. ಪೂರ್ವ ಪ್ರವಾದಿ ಚರಿತ್ರೆಗಳಿವೆ. ಪೂರ್ವ ಜನಾಂಗಗಳ ಧರ್ಮ ಮತ್ತು ವಿಚಾರಗಳು ಅದರಲ್ಲಿದೆ. ಪ ಕುರ್‌ಆನಿನಲ್ಲಿಯೇ ನಮಗೆ ಪ್ರಾಚೀನ ಇತಿಹಾಸವೂ ದೊರೆಯುವುದು. ಇವೆಲ್ಲವೂ ಹ ಪ್ರವಾದಿ ಮುಹಮ್ಮದರಿಗೆ(ಸ) ತಿಳಿಯಿತು? ಇಷ್ಟೇ ಅಲ್ಲ, ಪವಿತ್ರ ಕುರ್‌ಆನಿನಲ್ಲಿ ನೈ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಇತ್ಯಾದಿಗಳ ಆಳ ವ್ಯಾಪಿ ಜ್ಞಾನಭಂಡಾರವೇ ಇ ಪ್ರವಾದಿವರ್ಯರ(ಸ) ಜ್ಞಾನ ಮತ್ತು ಪವಿತ್ರ ಕುರ್‌ಆನಿನ ಮೂಲವು ದೇವನ ದಿವ್ಯವ ಆಗಿದೆಯೆಂಬ ವಿಚಾರಕ್ಕೆ ಇವೆಲ್ಲವೂ ಕನ್ನಡಿಯಾಗಿದೆ. ಪವಿತ್ರ ಕುರ್‌ಆನ್ ಉಲ್ಲೇಖಿ ಪೂರ್ವ ಜನಾಂಗಗಳ ಚರಿತ್ರೆಗಳು, ಪ್ರಾಚ್ಯ ವಸ್ತು ಸಂಶೋಧಕರು ಬೇರೆ ಪುರಾ ಗ್ರಂಥಗಳಲ್ಲಿ ಸಂಶೋಧನೆ ನಡೆಸಿದ್ದಾರೆ. ಹಿಬ್ರೂ (Hebrow), ಸಿರಿಯನ್ (Syric) ಹಾ ಗ್ರೀಕ್ ಗ್ರಂಥಗಳಲ್ಲಿ ಅವು ಲಭ್ಯವೆಂದು ಸಂಶೋಧಕರು ಹೇಳಿಕೊಂಡಿದ್ದಾರೆ. ಆ ಸಂಶೋಧಕರು ಪರಿಶೀಲಿಸಿದ ಯಾವ ಗ್ರಂಥವನ್ನೂ ಅರಬರು ಅರಿತಿರಲಿಲ್ಲ.

ಮುಹಮ್ಮದರು(ಸ) ಓರ್ವ ಓದು ಬರಹವನ್ನು ಅರಿಯದ ವ್ಯಕ್ತಿಯಾಗಿದ್ದ ಆದುದರಿಂದ ಅರಬರಿಗೆ ಅಪರಿಚಿತವಾದ ಗ್ರಂಥಗಳ ಅಧ್ಯಯನ ನಡೆಸಲು ಅವ ಸಾಧ್ಯವಿರಲಿಲ್ಲ. ಅಲ್ಲದೆ ಯಾವ ಅನುವಾದಕರ ತಂಡವೂ ಅವರ ಬಳಿ ಇರಲಿಲ್ಲ. ಆದ್ದರಿ ಗ್ರಂಥಗಳಿದ್ದ ಐತಿಹಾಸಿಕ ವಿಚಾರಗಳನ್ನು ಅರಿಯುವ ಪ್ರಶ್ನೆ ಉದ್ಭವವಾಗದು. ಅದೇ ಅಂದು ಮಕ್ಕಾದಲ್ಲಿ ಯಾವುದೇ ಗ್ರಂಥಾಲಯವೂ ಇರಲಿಲ್ಲ.

ಆದರೆ ವ್ಯಾಪಾರಾರ್ಥ ಪ್ರವಾದಿವರ್ಯರು(ಸ) ಮಕ್ಕಾದಿಂದ ಹೊರಗೆ ಸಂಚರಿಸಿದ್ದಾ ಆಗ ಯಾವುದೇ ಗ್ರಂಥಾಲಯಗಳಿಗೆ ಭೇಟಿಯಿತ್ತು, ಧಾರ್ಮಿಕ, ಐತಿಹಾಸಿಕ ಜ್ಞಾನವ ಸಂಪಾದಿಸಿರುವರೆಂಬುದಕ್ಕೆ ಆಧಾರಗಳಿಲ್ಲ. ಆ ಜ್ಞಾನದ ಮೂಲದಿಂದ ಪ್ರವಾದಿತ್ವ ವ ನಿರ್ವಹಿಸಿದ್ದಾರೆಂಬುದಕ್ಕೂ ಪುರಾವೆಯಿಲ್ಲ. ಅದಲ್ಲದೆ ಪ್ರವಾದಿತ್ವಕ್ಕಿಂತ ಮುಂಚೆ ಕೂಡಾ ಪೂ ಜನಾಂಗಗಳು ಮತ್ತು ಅವರ ಚರಿತ್ರೆಗಳನ್ನು ಪ್ರವಾದಿವರ್ಯರು(ಸ) ಎಂದೂ ಉಲ್ಲೇಖಿಸಿರಲಿ

ಒಂದು ವೇಳೆ, ವ್ಯಾಪಾರಕ್ಕೆ ಹೋಗಿದ್ದ ವೇಳೆ ಕ್ರೈಸ್ತ ಅಥವಾ ಯಹೂದಿ ಪುರೋಹಿತರಿ ಜ್ಞಾನ ಸಂಪಾದಿಸಿ ಪ್ರವಾದಿತ್ವವನ್ನು ನಿರ್ವಹಿಸಿದ್ದರೆ, ಯಹೂದಿ ಮತ್ತು ಕ್ರೈಸ್ತ ಜ ಪ್ರವಾದಿ ಎಂದು ಹೇಳುವ ಮುಹಮ್ಮದ್(ಸ) ಸಕಲ ಜ್ಞಾನವನ್ನು ನಮ್ಮಿಂದ

ಮೋಚಿಕೊಂಡಿದ್ದಾನೆ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿತ್ತು!

ಪ್ರವಾದಿ ಮುಹಮ್ಮದರು(ಸ) ಓರ್ವ ನಿರಕ್ಷರಿ ವ್ಯಕ್ತಿಯಾಗಿದ್ದರು. ಆದರೂ ಅವರು ಪೂರ್ವಿಕ ದೈವಿಕ ಗ್ರಂಥಗಳ ಅಂಶಗಳನ್ನು ಜನರ ಮುಂದಿರಿಸಿದರು. ಅವರ ಪ್ರವಾದಿತ್ವಕ್ಕೆ ಇದು ಒಂದು ಬಹಿರಂಗ ಪುರಾವೆಯಾಗಿದೆ. ಮಾನವರ ಮಾರ್ಗದರ್ಶನಕ್ಕೆ ಅಗತ್ಯವಾದ ಎಲ್ಲ ಸಾಮಗ್ರಿಗಳು ಅವರಲ್ಲಿತ್ತು. ಪೂರ್ವ ದೈವಿಕ ಗ್ರಂಥದಲ್ಲಿ ನಡೆದಿರುವ ಮಾನವ ಹಸ್ತಕ್ಷೇಪಗಳನ್ನು ಎತ್ತಿ ತೋರಿಸಿದರು. ಅವುಗಳ ಬಗ್ಗೆ ವಿವರಣೆ ನೀಡಿದರು. ಅವುಗಳಲ್ಲಿ ಎಂತಹ ಪರಿವರ್ತನೆಗಳಾಗಿವೆ ಮತ್ತು ದೇವ ಗ್ರಂಥದ ವಾಸ್ತವಿಕತೆಗಳೇನು ಎಂದು ತಿಳಿಸಿದರು. ನಿಜಾಂಶಗಳನ್ನು ಜನರಿಗೆ ಸ್ಪಷ್ಟಪಡಿಸಿದರು.

ಮುಹಮ್ಮದರು(ಸ) ಮಾಡಿರುವುದು ಮರುಭೂಮಿಯ ಯಾವುದೇ ಧರ್ಮ ದರ್ಶನಗಳೊಂದಿಗೂ ಸಂಬಂಧವಿಲ್ಲದ ಓರ್ವ ವ್ಯಕ್ತಿ ಮಾಡಿರುವ ಕೆಲಸವಾಗಿದೆ.

ಪ್ರವಾದಿವರ್ಯರ(ಸ) ಮೇಲೆ ವಿರೋಧಿಗಳು ಹೊರಿಸುತ್ತಿದ್ದ ಆರೋಪಗಳನ್ನು ಪವಿತ್ರ ಕುರ್‌ಆನ್ ಈ ರೀತಿ ವಿವರಿಸಿದೆ.

**"ಈ ವ್ಯಕ್ತಿ ತನ್ನ ಪ್ರಭುವಿನ ಕಡೆಯಿಂದ ನಿದರ್ಶನ(ಪವಾಡ)ವನ್ನೇನೂ ತರುವುದಿಲ್ಲವೇಕೆ ಎಂದು ಅವರು ಕೇಳುತ್ತಾರೆ. ಅವರ ಬಳಿಗೆ ಹಿಂದಿನ ಗ್ರಂಥಗಳ ಸಕಲ ಶಿಕ್ಷಣಗಳ ಸುಸ್ಪಷ್ಟ ವಿವರಣೆ ಬರಲಿಲ್ಲವೇ?" (ಪವಿತ್ರ ಕುರ್‌ಆನ್, 20:133)**

ಹೀಗೆ ಪೂರ್ವ ಗ್ರಂಥಗಳ ಸಕಲ ಶಿಕ್ಷಣಗಳು ನಿದರ್ಶನ(ಪವಾಡ)ವಾಗಿದೆ ಎಂದು ಪವಿತ್ರ ಕುರ್‌ಆನ್ ವಿಶ್ಲೇಷಿಸುತ್ತಿದೆ. ಯಾಕೆಂದರೆ ದೇವಗ್ರಂಥಗಳ ಕುರಿತು (Scripture) ಕಿಂಚಿತ್ತೂ ಜ್ಞಾನವಿಲ್ಲದ ಓರ್ವ ವ್ಯಕ್ತಿ ಅವರಾಗಿದ್ದರು. ಧಾರ್ಮಿಕ ಗುರುಗಳ ಸಹವಾಸ ಅರಿಯದಿರುವ ವ್ಯಕ್ತಿಯಾಗಿದ್ದರು. ಅವರು ಪೂರ್ವ ಗ್ರಂಥಗಳ ಶಿಕ್ಷಣವನ್ನು ಹೇಳುವುದು ಪವಾಡವಲ್ಲದೆ ಮತ್ತೇನು?

ಜಗತ್ತಿಗೆ ಮುಹಮ್ಮದರು(ಸ) ಧಾರ್ಮಿಕ ಶಿಕ್ಷಣ ನೀಡತೊಡಗಿದ್ದು ಒಂದು ಅನಿರೀಕ್ಷಿತವಾಗಿದೆ. ಅವರು ಪೂರ್ವ ಗ್ರಂಥಗಳು ಮತ್ತು ಪ್ರವಾದಿಗಳ ನಿಜವೂ ಹೃದ್ಯವೂ ಆದ ಶಿಕ್ಷಣ ನೀಡತೊಡಗಿರುವುದು ಆಕಸ್ಮಿಕವಾಗಿತ್ತು. ಈ ಅನಿರೀಕ್ಷಿತ ಸಾಧನೆ ಮತ್ತು ಮಹಾನ್ ಕಾರ್ಯಗಳೆಲ್ಲವೂ ಮುಹಮ್ಮದರ(ಸ) ಪ್ರವಾದಿತ್ವಕ್ಕೆ ಬಹಿರಂಗ ಪ್ರಮಾಣಗಳಾಗಿವೆ.

## ಮುಹಮ್ಮದರ(ಸ) ಪರೀಕ್ಷೆ

ಇದಾದ ಮೇಲೆ ಮಕ್ಕಾದ ವಿರೋಧಿಗಳು ಯಹೂದಿಗಳ ಸಲಹೆಯಂತೆ ಮುಹಮ್ಮದರನ್ನು(ಸ) ಪರೀಕ್ಷಿಸಲು ಮುಂದಾದರು. ಅವರು ಪ್ರವಾದಿವರ್ಯರ(ಸ) ಮುಂದೆ ಕಗ್ಗಂಟಾದ ಪ್ರಶ್ನೆಗಳನ್ನಿರಿಸಿದರು. ಬನೀ ಇಸ್ರಾಈಲ್ ಸಮುದಾಯ ಈಜಿಪ್ಟ್‌ಗೆ ಯಾಕೆ ವಲಸೆ

ಹೋಯಿತೆಂದು ಪ್ರವಾದಿವರ್ಯರು(ಸ) ಹೇಳಬೇಕಾಗಿತ್ತು. ಫೆಲೆಸ್ತೀನ್ ಇತಿಹಾಸವು ಅರಬ ಜನತೆಗೆ ಸಂಪೂರ್ಣ ಅಪರಿಚಿತವಾದುದು. ಮಾತ್ರವಲ್ಲ, ಈ ವೃತ್ತಾಂತವನ್ನು ಯಾರು ಪ್ರವಾದಿವರ್ಯರಿಂದ(ಸ) ಆ ಮೊದಲು ಕೇಳಿರಲಿಲ್ಲ. ಪ್ರವಾದಿವರ್ಯರು(ಸ) ಈ ಪ್ರಶ್ನೆ ಉತ್ತರಿಸುವುದು ಸಾಧ್ಯವಿಲ್ಲವೆಂಬ ಭರವಸೆ ವಿರೋಧಿಗಳದ್ದಾಗಿತ್ತು. ಆದುದರಿಂದ ಪ್ರವಾದಿ(ಸ ತನ್ನ ಅಸಹಾಯಕತೆ ತೋಡಿಕೊಳ್ಳುತ್ತಾರೆ, ಆನಂತರ ಮುಹಮ್ಮದ್‌ರನ್ನು(ಸ) ದೇವ ಪ್ರವಾದಿಯಲ್ಲವೆಂದು ಸಾರಬಹುದೆಂದು ಅವರು ಯೋಚಿಸಿದ್ದರು.

ಆದರೆ ಈ ಪ್ರಶ್ನೆಗೆ ಉತ್ತರವಾಗಿ ದೇವನಿಂದ ಪವಿತ್ರ ಕುರ್‌ಆನಿನ ಸೂರಃ ಯೂಸುಫ ಎಂಬ ಅಧ್ಯಾಯವೇ ಅವತೀರ್ಣಗೊಂಡಿತು. ಅದರಲ್ಲಿ ಮಕ್ಕಾ ನಿವಾಸಿಗಳು ಇಂದ ಪ್ರವಾದಿವರ್ಯರೊಡನೆ(ಸ) ತೋರಿಸುವ ದುರ್ವರ್ತನೆ ಪ್ರವಾದಿ ಯೂಸುಫ್‌ರ(ಅ) ಮೇಲು ತೋರಿಸಲಾಗಿತ್ತು ಆದರೆ ಅಲ್ಲಾಹನು ಪ್ರವಾದಿ ಯೂಸುಫ್‌ರಿಗೆ(ಅ) ಔನ್ನತ್ಯವನ್ನು ನೀಡಿದನು ಅವರಿಗೆ ಕಿರುಕುಳ ಕೊಟ್ಟ ಸಹೋದರರು ಲಜ್ಜೆ ಅನುಭವಿಸ ಬೇಕಾಯಿತು ಎಂ ಎಚ್ಚರಿಕೆಗಳೊಂದಿಗೆ ಪವಿತ್ರ ಕುರ್‌ಆನ್ ಅವತೀರ್ಣವಾಯಿತು.

ಇದೇ ರೀತಿ ಮಕ್ಕಾದ ಬಹುದೇವ ವಿಶ್ವಾಸಿಗಳು ಕೇಳಿದ ಮೂರು ಪ್ರಶ್ನೆಗಳಿಗೆ ಉತ್ತ ರೂಪದಲ್ಲಿ ಪವಿತ್ರ ಕುರ್‌ಆನಿನ ಸೂರಃ ಅಲ್ ಕಹ್ಫ್ ಅಧ್ಯಾಯ ಅವತೀರ್ಣವಾಗಿತ್ತು ಮಕ್ಕಾದ ಬಹುದೇವ ವಿಶ್ವಾಸಿಗಳು, ಯಹೂದಿಗಳು ಮತ್ತು ಕ್ರೈಸ್ತರೊಡನೆ ಸಮಾಲೋಚಿ ಪ್ರವಾದಿವರ್ಯರನ್ನು(ಸ) ಪರೀಕ್ಷಿಸಲು ಸಿದ್ಧರಾಗಿ ಈ ಮೂರು ಪ್ರಶ್ನೆಗಳನ್ನು ಕೇಳಿದ್ದರು.

1. ಕಹ್ಫ್‌ನವರೆಂದರೆ (ಗುಹಾವಾಸಿಗಳು) ಯಾರು?
2. ದುಲ್ಕರ್ನೈನ್ ಎಂದರೆ ಯಾರು? ಅವರ ಚರಿತ್ರೆಯೇನು?
3. ಖಿಝ್ರ್‌ರ ವೃತ್ತಾಂತವೇನು?

ಮುಹಮ್ಮದರು ತಮ್ಮ ಈ ಮೂರೂ ಪ್ರಶ್ನೆಗಳನ್ನು ಉತ್ತರಿಸಲಾರರು ಎಂದೆ ವಿರೋಧಿಗಳು ಮತ್ತು ಯಹೂದಿಯರು ಭಾವಿಸಿದ್ದರು. ಆ ಮೂಲಕ ಪ್ರವಾದಿಗೆ ಅಲೌಕಿ ಜ್ಞಾನ ಮೂಲವಿಲ್ಲವೆಂದು ಅವರು ಸಾಬೀತುಪಡಿಸಬೇಕಾಗಿತ್ತು. ಮುಹಮ್ಮದರನ್ನು(ಸ ಪ್ರವಾದಿಯಲ್ಲವೆಂದು ಸಿದ್ಧಪಡಿಸಬೇಕಾಗಿತ್ತು. ಆದರೆ ವಿರೋಧಿಗಳ ಇಚ್ಛೆ ಈಡೇರಿತೇ ವಿರೋಧಿಗಳ ಪ್ರಶ್ನೆಗೆ ಉತ್ತರವಾಗಿ ಅಲ್ಲಾಹನು ಒಂದು ದೀರ್ಘ ಅಧ್ಯಾಯವನ್ನೆ ಅವತೀರ್ಣಗೊಳಿಸಿದನು. ಪವಿತ್ರ ಕುರ್‌ಆನಿನ ಸೂರಃ ಅಲ್ ಕಹ್ಫ್‌ನ ಮೂಲಕ ಅವರಿ ಉತ್ತರ ನೀಡಲಾಯಿತು. ಮುಹಮ್ಮದರ(ಸ) ವಿರೋಧಿಗಳ ಪ್ರಶ್ನೆಯು ಕೂಡಾ ಪ್ರವಾದಿತ್ವ ಪುರಾವೆಯಾಗಿ ಪರಿಣಮಿಸಿದೆ.

ಪವಿತ್ರ ಕುರ್‌ಆನ್‌ನಲ್ಲಿರುವ ಭವಿಷ್ಯವಾಣಿಗಳು ಪ್ರವಾದಿವರ್ಯರು(ಸ) ಜ್ಞಾನ ಅಲೌಕಿಕ ಮೂಲವನ್ನು ಹೊಂದಿದ್ದಾರೆ ಎಂಬುದಕ್ಕೆ ಒಂದು ಪ್ರಮಾಣವಾಗಿದೆ. ಭವಿಷ್ಯವೆಂದ

ಭಾವ್ಯ ಸತ್ಯವನ್ನು ಹೇಳುವುದಾಗಿದೆ. ಪವಿತ್ರ ಕುರ್‌ಆನಿನಲ್ಲಿ ಇಂತಹ ಭವಿಷ್ಯ ನುಡಿಗಳಿವೆ. ೀವ ಮೂಲದಿಂದಲ್ಲದೇ ಇಂತಹ ವಾಣಿಗಳನ್ನು ಕಲ್ಪಿಸಿ ಊಹಿಸಿ ಯಾರಾದರೂ ಹೇಳುವುದು ಧ್ಯವೇ? ಒಂದು ವೇಳೆ ಹೇಳಿದರೂ ಅದು ನಿಜವಾದೀತೆ?

ಕೇವಲ ಊಹೆಯ ಆಧಾರದಲ್ಲಿ ಒಬ್ಬನು ಮುಂದೆ ಆಗಲಿರುವ ಘಟನೆಗಳನ್ನು ೀಳಹೋದರೆ ಅಪಾಯವನ್ನು ಮೈಮೇಲೆ ಎಳೆದುಕೊಂಡಂತಾಗುವುದು. ಯಾಕೆಂದರೆ ಅವನ ಂದಾಜು ಒಂದು ವೇಳೆ ತನ್ನ ಊಹೆಗಳಂತೆ ಘಟನೆ ನಡೆಯದೆ, ವಿರುದ್ಧವಾದರೆ ಅವನ ದ ತಪ್ಪಾಗುವುದು. ತನ್ನನ್ನು ಪ್ರವಾದಿಯೆಂದು ಹೇಳುವುದು. ದೇವನ ವತಿಯ ಜ್ಞಾನದಿಂದ ಭವನೀಯ ಘಟನೆಗಳನ್ನು ತಿಳಿಸುತ್ತಿದ್ದೇನೆ ಎನ್ನುವುದು. ಆನಂತರ ಆ ಘಟನೆಯು ಭವಿಸದಿದ್ದರೆ ಅವನ ಪ್ರವಾದಿತ್ವವು ಕಪಟವೆಂದು ಸಾಬೀತಾಗುತ್ತದೆ.

ಪ್ರವಾದಿ ಮುಹಮ್ಮದರ(ಸ) ಮೂಲಕ ಪವಿತ್ರ ಕುರ್‌ಆನ್ ತಿಳಿಸಿರುವ ಎಲ್ಲ ವಿಷ್ಯವಾಣಿಗಳು ಸತ್ಯವೆಂದು ಸಾಬೀತಾಗಿವೆ. ಒಮ್ಮೆ ರೋಮನ್ನರು ಇರಾನಿಯರ ವಿರುದ್ಧ ೀಲನುಭವಿಸಿದರು. ಪವಿತ್ರ ಕುರ್‌ಆನ್ ಮತ್ತೆ ರೋಮನ್ನರು ಗೆಲ್ಲುತ್ತಾರೆಂದು ಭವಿಷ್ಯ ಡಿಯಿತು. ಅದರ ಭವಿಷ್ಯವಾಣಿಯು ಕೆಲವು ವರ್ಷಗಳ ನಂತರ ನಿಜವಾಯಿತು. ೀಮನ್ನರು ಪರ್ಶಿಯನ್ನರನ್ನು (ಇರಾನಿಯನ್ನರನ್ನು) ಸೋಲಿಸಿದರು.

ರೋಮನ್ನರು ಮರಳಿ ಗೆಲ್ಲುವ ಬಗ್ಗೆ ಪವಿತ್ರ ಕುರ್‌ಆನ್ ಸೂಚನೆ ನೀಡಿದಾಗ ಮತ್ತೆ ೀಮ್ ಗೆಲ್ಲುವ ಯಾವ ಲಕ್ಷಣಗಳೂ ಗೋಚರಿಸುತ್ತಿರಲಿಲ್ಲ. ಅಂದಿನ ಅತಂತ್ರ ಸ್ಥಿತಿಯನ್ನು ಡ್ವರ್ಡ್ ಗಿಬ್ಬನ್ (Edward Gibbon)ರಂತಹ ಪ್ರಸಿದ್ಧ ಇತಿಹಾಸಕಾರರೇ ಒಪ್ಪಿಕೊಂಡಿದ್ದಾರೆ. ಂದಿದ್ದಂತಹ ಸನ್ನಿವೇಶಗಳನ್ನು ಅವರು ತಮ್ಮ "The History of the Decline and ll of the Roman Empire" ಎಂಬ ಕೃತಿಯಲ್ಲಿ ನಮೂದಿಸಿದ್ದಾರೆ.

## ಂದು ಪಾರ್ಶ್ವ (ನೋಟ)

ಪ್ರವಾದಿವರ್ಯರನ್ನು(ಸ) ಇನ್ನೊಂದು ಪಾರ್ಶ್ವದಿಂದಲೂ ನಾವು ವೀಕ್ಷಿಸಬಹುದಾಗಿದೆ. ವಾದಿವರ್ಯರು(ಸ) ವಿಭಿನ್ನ ಪರಿಸ್ಥಿತಿಗಳನ್ನು ಅತೀ ಕಠಿಣ ಸ್ಥಿತಿಯಲ್ಲಿ ಎದುರಿಸಿ ದಾಟ ೀಕಾಗಿತ್ತು. ಇಂತಹ ಸಂದರ್ಭಗಳಲ್ಲಿ ಎಂತಹ ಉನ್ನತ ವ್ಯಕ್ತಿಗೂ ಯಾವುದಾದರೊಂದು ಕೆಟ್ಟ ಚಾರದ ಪ್ರಭಾವಕ್ಕೊಳಗಾಗದಿರಲು ಸಾಧ್ಯವಿಲ್ಲ, ಅದು ಸಹಜವಾಗಿದೆ.

ಅದರಲ್ಲೂ ತನ್ನ ಮಾನ ಮರ್ಯಾದೆಗಳ ಮೇಲೆ ದಾಳಿಯಾದಾಗ ಯಾವ ವ್ಯಕ್ತಿಯೂ ಮ್ಮನಿರುವುದಿಲ್ಲ, ತತ್ತರಿಸಿ ಹೋಗುತ್ತಾರೆ. ಆದರೆ ಪ್ರವಾದಿ ಮುಹಮ್ಮದರಿಗೆ(ಸ) ಇಂತಹ ಡವಟ್ಟಿನ ಪರಿಸ್ಥಿತಿ ಎದುರಾಗಿರಲಿಲ್ಲ, ಅವರು ಹೇಳುತ್ತಿದ್ದ ದೇವ ವಚನಗಳಲ್ಲಿ ಯಾವುದೇ ೀಪಗಳಿರಲಿಲ್ಲ ಮತ್ತು ಪ್ರತಿಕೂಲ ಪ್ರತಿಕ್ರಿಯೆಯಿಂದ ಅದು ಮುಕ್ತವಾಗಿತ್ತು. ಆದುದರಿಂದ

ಜನರನ್ನು ಅಭಿಸಂಬೋಧಿಸಿದಾಗ ಪ್ರವಾದಿವರ್ಯರು(ಸ) ಎಲ್ಲಿಯೂ ತಡವರಿಸಿರಲಿ ಮಾನಸಿಕ ದೌರ್ಬಲ್ಯವನ್ನೂ ಎದುರಿಸಲಿಲ್ಲ. ಇದು ಪವಿತ್ರ ಕುರ್‌ಆನ್ ಮಾನವ ರಚನೆಯ ಎಂಬುದಕ್ಕೆ ಪುರಾವೆಯಾಗಿದೆ. ಅದು ಸಕಲರ ಪ್ರಭುವಾದ ಅಲ್ಲಾಹನ ವಚನ ಗಳಾಗಿ ಈ ರೀತಿ ಪವಿತ್ರ ಕುರ್‌ಆನ್, ಮುಹಮ್ಮದರು(ಸ) ನೈಜ ಪ್ರವಾದಿಯೆಂಬುದಕ್ಕೂ ಸ ಪುರಾವೆಯಾಗಿದೆ. ಯಾಕೆಂದರೆ ಎಂದೂ ದೈವಿಕ ವಚನಗಳು ಕೇವಲ ಪ್ರವಾದಿಗಳ ಮೆ ಮಾತ್ರ ಅವತೀರ್ಣವಾಗುವುದು.

## ಪ್ರವಾದಿಗಳ ಎಚ್ಚರಿಕೆಗಳು

ಪ್ರವಾದಿಗಳೊಡನೆ ಯಾಕೆ ದೈವಿಕ ಯಾತನೆಗಳನ್ನು ಇಳಿಸುವುದಿಲ್ಲ ಎಂದು ಕೇಳ ವರೆಗೂ ಜನಾಂಗಗಳ ವಿದ್ರೋಹ ಅಂದು ಹದಮೀರುತ್ತಿತ್ತು. ಆ ಸಂದರ್ಭದಲ್ಲಿ ಪ್ರವ ಗಳು ಶೀಘ್ರವೇ ದೈವಿಕ ಯಾತನೆ ಎರಗಲಿದೆ. ಆವರೆಗೂ ನೀವು ಸುಖಭೋಗವ ಅನುಭವಿಸುತ್ತೀರಿ. ಆದರೆ ದೇವನ ಪ್ರಕೋಪದಿಂದ ನೀವೆಂದೂ ಪಾರಾಗಲಾರಿರಿ ಎಂ ಜನರಿಗೆ ಹೇಳುತ್ತಿದ್ದರು. ಇದು ಅವರ ಪ್ರವಾದಿತ್ವಕ್ಕೆ ಮಹತ್ವಪೂರ್ಣ ಸಾಕ್ಷ್ಯವಾಗಿ ಏಕೆಂದರೆ ಪ್ರವಾದಿಗಳು ಹೇಳಿದಂತೆ ಆ ಜನಾಂಗಗಳು ನಾಶಗೊಂಡವು. ಪ್ರವಾದಿಗಳು ಆ ಗಳ ನಾಶವನ್ನು ಸೂಚಿಸಿದ್ದಾಗ ದೈವಿಕ ಯಾತನೆಯೆರಗುವ ಯಾವ ಕುರುಹುಗಳೂ ಗೋ ಸುತ್ತಿರಲಿಲ್ಲ ಎಂಬಂಶ ಇಲ್ಲಿ ಗಮನಾರ್ಹವಾಗಿದೆ. ಇಂತಹ ಅನೇಕ ಉದಾಹರಣೆ ಗಳ ಪವಿತ್ರ ಕುರ್‌ಆನಿನಲ್ಲಿ ಕಾಣಬಹುದಾಗಿದೆ.

ಇಂದಿನ ಜನರು ದೇವನ ಆಜ್ಞೆಯನ್ನು ಉಲ್ಲಂಘಿಸುವುದಿಲ್ಲವೇ? ದೇವನ ವಿರು ಬಂಡೆದ್ದಿಲ್ಲವೇ? ಹೀಗಿದ್ದೂ ದೇವನ ಯಾತನೆ ಯಾಕೆ ಎರಗಿಲ್ಲ ಎಂದು ಪ್ರಶ್ನಿಸಬಹುದಾಗಿ ಪ್ರವಾದಿಗಳಿರುವಾಗಲೆಲ್ಲ ಅವರ ವಿರುದ್ಧ ಸಂಚು ತಾರಕಕ್ಕೇರಿತ್ತು. ಅವರ ಸಂದೇಶಗಳ ನೇರವಾಗಿ ವಿರೋಧಿಸಲಾಗುತ್ತಿತ್ತು. ಮಾತ್ರವಲ್ಲ ದೈವಿಕ ಯಾತನೆಯನ್ನೇ ತನ್ನಿ ಎನ್ನಲು ಜನ ಹೇಸಿರಲಿಲ್ಲ, ಅಂದಿನ ಜನಾಂಗ ಪ್ರವಾದಿಯನ್ನು ಮತ್ತು ಪ್ರವಾದಿಯ ಸಂದೇಶ ಪ್ರಚ ಕಾರ್ಯಗಳನ್ನು ಪ್ರತ್ಯಕ್ಷ ತಡೆಯುತ್ತಿದ್ದರು. ಈ ಜನಾಂಗಗಳ ಅಪರಾಧಗಳು ಮತ್ತು ಪ್ರವಾದಿ ಉಪಸ್ಥಿತರಿಲ್ಲದ ಇಂದಿನ ಸಮಾಜದ ಅಪರಾಧಗಳು ಸಮಾನವಲ್ಲ. ಹಾಗಾಗಿ ಇಂದಿನ ಜ ದೇವಾಜ್ಞೆ ಉಲ್ಲಂಘನೆಯನ್ನು ಹಿಂದಿನ ಜನಾಂಗಗಳ ಆಜ್ಞೋಲ್ಲಂಘನೆಗೆ ಸಮಾನವ ಹೋಲಿಸುವಂತಿಲ್ಲ. ಆದುದರಿಂದ ಇಂದು ಇಂತಹ ಯಾತನೆಗಳೇಕೆ ಎರಗುವುದಿಲ್ಲ ಎ ಪ್ರಶ್ನೆಯೇ ಉದ್ಭವಿಸದು. ಯಾಕೆಂದರೆ ಪ್ರವಾದಿಗಳಿದ್ದ ಜನಾಂಗಗಳಿಗಿಂತ ಪ್ರವಾದಿ ಉಪಸ್ಥಿತರಿಲ್ಲದ ಜನರಿಗೆ ಹೆಚ್ಚು ಸುಧಾರಣೆಯ ಅವಕಾಶವನ್ನು ದೇವನು ನೀಡುತ್ತಾನೆ.

ಆದರೆ ಅವರು ಶಿಕ್ಷೆಯಿಂದ ಪಾರಾಗುವರೆಂದು ಇದರ ಅರ್ಥವಲ್ಲ. ಅವರು ಶಿಕ್ಷೆಯಿ

ಶ್ಕಾಲಿಕವಾಗಿ ದೂರವಿದ್ದಾರೆ. ಅವರನ್ನು ಎಂದೂ ಶಿಕ್ಷಿಸಲಾಗದು ಎಂದು ಇದರ ಅರ್ಥವಲ್ಲ. ;ಕ್ಕಾದರೆ ಯಾವುದೇ ಜನಾಂಗಕ್ಕೆ ಪರಲೋಕದ ಶಿಕ್ಷೆಯೊಂದೇ ಸಾಕಾಗುವುದು. ಅದೂ ಲ್ಲದೆ ಭೌತಿಕವಾಗಿಯೂ ದೈವಿಕ ಶಿಕ್ಷೆ ಮತ್ತು ಯಾತನೆಗಳ ವಿಭಿನ್ನ ರೂಪಗಳು ಕೂಡಾ ;ತ್ವದಲ್ಲಿವೆ. ಅಪರಾಧಿ ಜನಾಂಗಗಳನ್ನು ನಿಂದಕ ಸ್ಥಿತಿಯಲ್ಲಿ ಇನ್ನಷ್ಟು ಕಾಲ ಳಿಸಿಕೊಳ್ಳುವುದು ಶಿಕ್ಷೆಯಾಗಿದೆ. ಅದರ ಪಾಲಿಗೆ ಅವರು ಎದುರಿಸುತ್ತಿರುವ ನಿಂದ್ಯತೆಯೇ ಯಾಗಿದೆ. ಯಾವುದಾದರೂ ಜನಾಂಗ ಸತ್ಯ ಪ್ರಕಾಶದಿಂದ ವಂಚಿತರಾಗಿ, ಪ್ರಾಣಿಗಳಂತೆ ಕುವುದು ಮತ್ತು ಉನ್ನತ ಜೀವನ ಮೌಲ್ಯವನ್ನೇ ಅವರು ಅರಿಯದಿರು ವುದು ಕೂಡಾ ಯೇ ಅಲ್ಲವೇ? ಇದಲ್ಲದೆ ಪ್ರಪಂಚದಲ್ಲಿ ಶಿಕ್ಷಾ ರೂಪದಲ್ಲಿ ಸಣ್ಣ ಮತ್ತು ದೊಡ್ಡ ಾತನೆಗಳು ಎರಗುತ್ತಿರುವುದು. ಆದರೆ ಜನರು ಅದನ್ನು ಗಮನಿಸುವುದಿಲ್ಲ. ಪ್ರಪಂಚದಲ್ಲಿ ಭವಿಸುವ ಸಣ್ಣಪುಟ್ಟ ಯಾತನೆಗಳು ಎಚ್ಚರಿಕೆಯಾದರೆ ದೊಡ್ಡ ರೂಪದ ಯಾತನೆಗಳು ಾಶಕಾರಿಯಾಗಿರುತ್ತದೆ.

ಪ್ರಪಂಚದೊಳಗೆ ಕೇವಲ ಪ್ರಕೃತಿ ನಿಯಮ(Law of Nature)ಗಳೇ ಅಲ್ಲ, ನೈತಿಕ ನೂನು ಕೂಡಾ ಅಸ್ತಿತ್ವದಲ್ಲಿದೆ. ಆದರೆ ಜನರಿಗೆ ಅದನ್ನು ಗುರುತಿಸುವ ಸಾಮರ್ಥ್ಯವಿಲ್ಲ. ್ಟ ಯೋಚಿಸಿದರೆ ಪ್ರಪಂಚದಲ್ಲಿ ಸಂಭವಿಸುವ ದುರ್ಘಟನೆಗಳು ಯಾತನಾಕಾರಿಯೆಂದು ುಗೆ ಅರಿವಾಗುವುದು. ದುರ್ಘಟನೆಗಳು ಮತ್ತು ಪ್ರಕೃತಿ ವಿಕೋಪಗಳ ಸಮೀಕ್ಷೆ ನಡೆಸು ರು ಅವುಗಳಲ್ಲಿ ನೈಸರ್ಗಿಕ ನಿಯಮಗಳ ಕಾರಣವನ್ನು ಹುಡುಕುತ್ತಾರೆ. ಅದನ್ನು ಅವರು ವನೆಡೆಯಿಂದ ಬರುತ್ತಿರುವ ಅಪಾಯಗಳೆಂದೋ ಯಾತನೆಗಳೆಂದೋ ಗುರುತಿಸುವುದಿಲ್ಲ. ತ್ತು ಇವೆಲ್ಲವೂ ದೌರ್ಜನ್ಯಕೋರರಿಗೆ ಮತ್ತು ಅಂಥ ಜನ ವಿಭಾಗಗಳಿಗೆ ದೇವನಿಂದ ದಿರುವ ಎಚ್ಚರಿಕೆಯೆಂದೂ ಚಿಂತಿಸುವುದಿಲ್ಲ. ಆದರೆ ಇವೆಲ್ಲವೂ ಭೂಮುಖಿಕ್ಕೆ ಎರಗುವ ವಿಕ ಎಚ್ಚರಿಕೆಗಳು, ಯಾತನೆಗಳಾಗಿವೆ.

ಕೆಲವೊಮ್ಮೆ ಎಚ್ಚರಿಕೆಯ ಸ್ವರೂಪವನ್ನು ಮೀರಿ ಯಾತನೆಯೇ ಆದ ಘಟನೆಗಳು ದಿಯಾಗಿವೆ. ಸಂಪೂರ್ಣ ನಗರಗಳೇ ನಾಶವಾದ ಘಟನೆಗಳು ಕೂಡಾ ಇತಿಹಾಸದಲ್ಲಿ ಭವಿಸಿದೆ. ಸರ್ವನಾಶದ ನಂತರವೂ ಅಲ್ಲಿ ಜನರು ಪಾಠ ಕಲಿಯಲೆಂದೇ ಏನಾದರೂ ುಹುಗಳು ಉಳಿದಿರುತ್ತವೆ. ಹಿಂದೊಮ್ಮೆ ರೋಮ್‌ನ ಪೊಂಪೇ (Pompai) ನಗರದಲ್ಲಿ ಗಿಕ ದುರಾಚಾರ ತುಂಬಿ ತುಳುಕುತ್ತಿತ್ತು. ತತ್ಪರಿಣಾಮವಾಗಿ ಆ ನಗರವು ಪ್ರವಾದಿ ತ್‌ರ(ಅ) ಜನಾಂಗದ ಮೇಲೆರಗಿದ್ದ ದುರಂತವನ್ನೇ ಅನುಭವಿಸಿತು. ಅಲ್ಲಿನ ಜ್ವಾಲಾಮುಖಿ ರ್ವತಗಳು ಸ್ಫೋಟಗೊಂಡವು. ಲಾವಾರಸವು ಇಡೀ ನಗರವನ್ನು ಸುಟ್ಟು ಕರಕಲುಗೊಳಿಸಿತು. ರು ತಮ್ಮ ದಿನಚರಿಯಲ್ಲಿ ಮುಳುಗಿದ್ದರು. ಜನರು ಮೋಜಿನಲ್ಲಿ ಮೈಮರೆತಿದ್ದರು. ುದರಿಂದ ಜ್ವಾಲಾಮುಖಿ ಸ್ಫೋಟವನ್ನು ಅವರು ಗಮನಿಸಲಿಲ್ಲ. ಸದ್ದು ಕೇಳಿದರೂ ಓಡಿ

ಹೋಗಿ ಜೀವ ಉಳಿಸಬೇಕೆಂದು ಅವರಿಗೆ ಅನಿಸಲಿಲ್ಲ. ಅಲ್ಲಿನ ಒಂದು ಕುಟುಂಬವಂತ ಊಟ ಮಾಡುವ ಸ್ಥಿತಿಯಲ್ಲಿ ಕಲ್ಲಾಗಿ ಮಾರ್ಪಟ್ಟಿತ್ತು. ಸಂಭೋಗ ನಿರತ ಜೋಡಿಗ ಲಾವರಸದಿಂದಾಗಿ ಅದೇ ಸ್ಥಿತಿಯಲ್ಲಿ ಕಲ್ಲಾಗಿ(Fossil) ಹೋಗಿದ್ದರು. ಇವರಲ್ಲಿ ಹೆಚ್ಚಿನವ ಸಲಿಂಗ ಕಾಮಿಗಳಾಗಿದ್ದರು. ಈ ಸ್ವೇಚ್ಛಾಚಾರಿಗಳ ಮುಖದಲ್ಲಿ ದಿಗ್ಭ್ರಮೆ ಗೋಚರಿಸುತ್ತಿತ ಭಯ ವ್ಯಾಕುಲತೆಗಳು ಹೊರಸೂಸುತ್ತಿದ್ದವು. ಈ ದೃಶ್ಯಗಳು ಅಲ್ಲಿನ ಜನರು ಕೆಟ್ಟ ಕಾರ್ಯಗಳ ನಿರಂತರವಾಗಿ ವ್ಯಸ್ತರಾಗುತ್ತಿದ್ದರೆಂದು ಸೂಚಿಸುವಂತಿದೆ. ಇಂತಹ ದುರಂತಗಳನ್ನು (ಸವ ನಾಶವನ್ನು) ಪವಿತ್ರ ಕುರ್‌ಆನ್ ಅನಿರೀಕ್ಷಿತ ವಿಪತ್ತೆಂದು ವಿಶ್ಲೇಷಿಸಿದೆ.

**"ಅನಂತರ ನಾವು ಅವನ ಜನಾಂಗದ ಮೇಲೆ ಆಕಾಶದಿಂದ ಸೈನ್ಯವನ್ನೇನೂ ಇಳಿಸಲೀ ನಮಗೆ ಸೇನೆಯನ್ನು ಕಳುಹಿಸುವ ಅಗತ್ಯವೂ ಇರಲಿಲ್ಲ. ಕೇವಲ ಒಂದು ಘನಸ್ಫೋಟವಾಯಿ ಮತ್ತು ಅವರೆಲ್ಲರೂ ಹಠಾತ್ತನೆ ನಂದಿ ಹೋದರು." (ಪವಿತ್ರ ಕುರ್‌ಆನ್, 36:28-29**

✧ ✧ ✧

ಅಧ್ಯಾಯ-9

# ಪ್ರವಾದಿ ಮುಹಮ್ಮದರ(ಸ) ವೈಶಿಷ್ಟ್ಯಗಳು

ಇತರ ಪ್ರವಾದಿಗಳಂತೆ ಮುಹಮ್ಮದರು(ಸ) ದೇವನಿಂದ ನಿಯುಕ್ತರಾದ ಪ್ರವಾದಿಯಾದರೂ ಅವರಿಗೆ ಪ್ರತ್ಯೇಕ ಕೆಲವು ವೈಶಿಷ್ಟ್ಯತೆಗಳನ್ನು ನೀಡಲಾಗಿತ್ತು. ಅವರ ಪ್ರವಾದಿತ್ವ ಅರಬರ ಒಂದು ಜನಾಂಗಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಸಂಪೂರ್ಣ ಪ್ರಪಂಚಕ್ಕೆ ಅವರು ಪ್ರವಾದಿಯಾಗಿದ್ದರು. ಈ ಕುರಿತು ಪವಿತ್ರ ಕುರ್‌ಆನಿನ ವಚನಗಳು ಹೀಗಿವೆ.

"ಈ ಫುರ್ಕಾನನ್ನು ಸಮಸ್ತ ಜಗತ್ತಿನವರಿಗೆ ಎಚ್ಚರಿಕೆಯಾಗಲಿಕ್ಕಾಗಿ- ತನ್ನ ದಾಸನ ಮೇಲೆ ಅವತೀರ್ಣಗೊಳಿಸಿದವನು ಪರಮ ಸುಮಂಗಲನು." (ಪವಿತ್ರ ಕುರ್‌ಆನ್, 25:1)

"ಇದಂತು ಸಮಸ್ತ ಲೋಕದವರಿಗೊಂದು ಉಪದೇಶವಾಗಿರುತ್ತದೆ."

(ಪವಿತ್ರ ಕುರ್‌ಆನ್, 81:27)

"ಓ ಮುಹಮ್ಮದರೇ, ಹೇಳಿರಿ: ಓ ಮಾನವರೇ, ನಾನು ನಿಮ್ಮೆಲ್ಲರ ಕಡೆಗೆ ಭೂಮಿ ಆಕಾಶಗಳ ಸಾರ್ವಭೌಮನಾಗಿರುವ ಅಲ್ಲಾಹನ ಸಂದೇಶವಾಹಕನಾಗಿರುತ್ತೇನೆ."

(ಪವಿತ್ರ ಕುರ್‌ಆನ್, 7:158)

"(ಪೈಗಂಬರರೇ,) ನಾವು ನಿಮ್ಮನ್ನು ಸಕಲ ಮಾನವರಿಗೆ ಸುವಾರ್ತೆ ಕೊಡುವವ ರಾಗಿಯೂ ಎಚ್ಚರಿಕೆ ನೀಡುವವರಾಗಿಯೂ ಮಾಡಿ ಕಳುಹಿಸಿರುತ್ತೇವೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ."

(ಪವಿತ್ರ ಕುರ್‌ಆನ್, 34:28)

"...ಓ ಮುಹಮ್ಮದ್‌ರೇ, ನಾವು ನಿಮ್ಮನ್ನು ಸಕಲ ಮಾನವರಿಗಾಗಿ ಸಂದೇಶವಾಹಕರಾಗಿ ರವಾನಿಸಿರುತ್ತೇವೆ. ಇದರ ಬಗ್ಗೆ ಅಲ್ಲಾಹನ ಸಾಕ್ಷ್ಯವೇ ಸಾಕು." (ಪವಿತ್ರ ಕುರ್‌ಆನ್, 4:79)

"ಪೈಗಂಬರರೇ, ನಾವು ನಿಮ್ಮನ್ನು ಸಕಲ ಲೋಕದವರಿಗೆ ಅನುಗ್ರಹವಾಗಿ ಮಾಡಿ ಕಳುಹಿಸಿರುತ್ತೇವೆ." (ಪವಿತ್ರ ಕುರ್‌ಆನ್, 21:107)

ಪವಿತ್ರ ಕುರ್‌ಆನಿನ ಹೊರತಾಗಿ ಸ್ವಯಂ ಪ್ರವಾದಿವರ್ಯರೇ(ಸ) ತನ್ನನ್ನು ಸಕಲ ಮಾನವರಿಗೆ ಪ್ರವಾದಿಯಾಗಿ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ. ಅವರ ವಚನಗಳು ಹೀಗಿವೆ- "ಪ್ರವಾದಿ(ಸ) ಹೇಳಿದರು- ಕರಿಯರು, ಬಿಳಿಯರು ಮತ್ತು ಸಕಲರ ಕಡೆಗೂ ನನ್ನನ್ನು ಪ್ರವಾದಿಯಾಗಿ ಮಾಡಿ ಕಳುಹಿಸಲಾಗಿದೆ." (ಮುಸ್ನದ್ ಅಹ್ಮದ್)

"ಮೊದಲು ಓರ್ವ ಪ್ರವಾದಿಯನ್ನು ವಿಶೇಷ ರೂಪದಲ್ಲಿ ತನ್ನ ಜನಾಂಗದ ಕಡೆಗೆ ಕಳುಹಿಸಲಾಗುತ್ತಿತ್ತು. ಆದರೆ ನಾನು ಸಕಲ ಮಾನವರ ಕಡೆಗೆ ಕಳುಹಿಸಲ್ಪಟ್ಟಿದ್ದೇನೆ."

(ಬುಖಾರಿ, ಮುಸ್ಲಿಮ್)

"ನಾನು ಸಕಲ ಜನರೆಡೆಗೆ ಕಳುಹಿಸಲ್ಪಟ್ಟವನಾಗಿದ್ದೇನೆ. ಮತ್ತು ನನ್ನೊಂದಿಗೆ ಪ್ರವಾದಿಗಳ ಆಗಮನ ಕ್ರಮವು ಸಮಾಪ್ತವಾಗಿದೆ." (ಮುಸ್ಲಿಮ್)

ಸೂರ್ಯನ ಪ್ರಕಾಶ ಇಡೀ ಪ್ರಪಂಚಕ್ಕೆ ಸಾಕಾದಂತೆ ಪ್ರವಾದಿವರ್ಯರ(ಸ) ಮಾರ್ಗದರ್ಶನವು ಇಡೀ ಪ್ರಪಂಚಕ್ಕೆ ಧಾರಾಳ ಸಾಕಾಗುವುದು. ದೇವನಿಚ್ಛಿಸುತ್ತಿದ್ದರೆ ಪ್ರತಿಯೊಂದು ಓಣಿಗೊಬ್ಬರಂತೆ ಬೇರೆ ಬೇರೆ ಪ್ರವಾದಿಗಳನ್ನು ಕಳುಹಿಸುತ್ತಿದ್ದನು. ಪ್ರಪಂಚ ಒಂದಾಗಿದೆ ಮತ್ತು ಪ್ರಪಂಚಕ್ಕೆ ಓರ್ವನೇ ಪ್ರವಾದಿಯಿರಬೇಕು. ಅರ್ಥಾತ್ ಸಕಲ ಜನರಿಗೆ ಓರ್ವ ಪ್ರವಾದಿ ಮತ್ತು ಮಾರ್ಗದರ್ಶಕನಿರುವುದು ದೇವೇಚ್ಛೆಯಾಗಿತ್ತು. ಆ ಮೂಲಕ ಸಕಲ ಮಾನವರಲ್ಲಿ ಐಕ್ಯ ಬೆಳೆದು ಬರಬೇಕಾಗಿದೆ. ಅವರಲ್ಲಿ ಏಕತೆ(ಒಗ್ಗಟ್ಟನ್ನು) ಸ್ಥಾಪಿಸಲು ಇದು ಸಹಾಯಕವೆಂದು ಪವಿತ್ರ ಕುರ್‌ಆನ್‌ನಿಂದ ತಿಳಿದು ಬರುತ್ತದೆ.

**"ನಾವಿಚ್ಛಿಸುತ್ತಿದ್ದರೆ ಪ್ರತಿಯೊಂದು ನಾಡಿನಲ್ಲಿಯೂ ಒಬ್ಬೊಬ್ಬ ಎಚ್ಚರಿಕೆ ನೀಡುವಾತನನ್ನು ನಿಯೋಗಿಸುತ್ತಿದ್ದೆವು." (ಪವಿತ್ರ ಕುರ್‌ಆನ್, 25:51)**

ಹೀಗೆ ಸಕಲ ಮಾನವರಿಗೆ ಪ್ರವಾದಿಯಾಗಿರುವುದು ಮುಹಮ್ಮದರ(ಸ) ವೈಶಿಷ್ಟ್ಯವಾಗಿದೆ.

## ಮಾನವತೆಯ ಸಂಪೂರ್ಣ ಆದರ್ಶ

ಈ ಕುರಿತು ಪವಿತ್ರ ಕುರ್‌ಆನಿನ ವಿವರಣೆ ಹೀಗಿದೆ–

**"ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು. (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ." (ಪವಿತ್ರ ಕುರ್‌ಆನ್, 33:21)**

ಅಲ್ಲಾಹನ ಪ್ರವಾದಿಯಾಗಿರುವ ಮುಹಮ್ಮದರ(ಸ) ಜೀವನದಲ್ಲಿ ಸಕಲ ಮಾನವರಿಗೂ ಉತ್ತಮ ಆದರ್ಶವಿದೆಯೆಂದು ಮೇಲಿನ ವಚನವು ಸ್ಪಷ್ಟವಾಗಿ ತಿಳಿಸುತ್ತಿದೆ. ಆದರೆ ಸತ್ಯ ಮಾರ್ಗದಲ್ಲಿ ಜೀವನ ನಡೆಸಲಿಚ್ಛಿಸುವವರಿಗಿರುವ ಮತ್ತು ದೇವನನ್ನು ಒಂದು ದಿನ ಭೇಟಿಯಾಗಲಿಕ್ಕಿದೆ ಎಂಬ ವಿಶ್ವಾಸವಿರುವವರಿಗೆ ಇದು ಆದರ್ಶವಾಗಿದೆ. ದೇವನ ಭೇಟಿ ಅವರ ಪಾಲಿಗೆ ಸಂತೋಷಕರ ವೆನಿಸಬೇಕೆಂದಾದರೆ ದೇವನ ಸಂಪ್ರೀತಿ ಗಳಿಸಬೇಕೆಂದು ಅವರು ಅರಿತಿರುತ್ತಾರೆ. ಆದುದರಿಂದ ದೇವ ಕ್ರೋಧಕ್ಕೆ ಪಾತ್ರವಾಗುವ ವಿಚಾರಗಳಿಂದ ಅವರು ದೂರವಿರಲು ಪ್ರಯತ್ನಿಸುತ್ತಾರೆ. ದೇವಾದೇಶಗಳನ್ನು ಪಾಲಿಸುತ್ತಾರೆ. ದೇವಾದೇಶಗಳು ಮತ್ತು ಶಿಕ್ಷಣಗಳಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಲು ಪ್ರಯತ್ನಿಸುತ್ತಾರೆ.

ಉತ್ತಮ ಆದರ್ಶವು ದೋಷರಹಿತ ಮತ್ತು ಆಕರ್ಷಕವಾಗಿರುವುದು. ಇಷ್ಟೇ ಅಲ್ಲ ಅದು ಪೂರ್ಣ ಆದರ್ಶವಾಗಿರಬೇಕು. ಅದರ ಪೂರ್ಣತೆಯಲ್ಲಿ ಯಾವು ಲೋಪವಿರು ವುದಿಲ್ಲ. ದೃಷ್ಟಿಯಲ್ಲಿ ಪ್ರವಾದಿ ಮುಹಮ್ಮದರ(ಸ) ಆದರ್ಶವು ಉತ್ತಮವೂ ಪರಿಪೂರ್ಣವೂ ತ್ತು. ಆದುದರಿಂದ ಅದು ಸಕಲ ಮಾನವರಿಗೆ ಉತ್ತಮ ಆದರ್ಶವಾಗಿದೆ. ಪ್ರವಾದಿ ುಹಮ್ಮದರ(ಸ) ಚಾರಿತ್ರ್ಯದಿಂದ, ಶಿಕ್ಷಣದಿಂದ ಮಾನವರ ಸಕಲ ಪಾರ್ಶ್ವಗಳಿಗೆ ಸಂಪೂರ್ಣ ರ್ಗದರ್ಶನವಿದೆ. ಅದನ್ನು ಸ್ವೀಕರಿಸಲು ವ್ಯಕ್ತಿ ಪ್ರಜ್ಞಾವಂತನಾಗಿದ್ದು ವಿವೇಕಿಯಾಗಿ ುವುದಷ್ಟೇ ಇಲ್ಲಿ ಒಂದು ಶರತ್ತಾಗಿದೆ. ಮಾತ್ರವಲ್ಲ ಅವರ ಜೀವನ ಚರಿತ್ರೆಯಿಂದ ರ್ಗದರ್ಶನ ಪಡೆಯುವುದನ್ನು ಅವನು ತಿಳಿದಿರಬೇಕಾಗಿದೆ.

ಇನ್ನು ಯಾರಾದರೂ ಪ್ರವಾದಿವರ್ಯರ(ಸ) ಆದರ್ಶ ಉತ್ತಮವಾಗಿದೆ. ಆದರೆ ಪೂರ್ಣ ಆದರ್ಶವಲ್ಲವೆಂದು ಹೇಳುವುದಾದರೆ ಅದು ತಿಳಿಗೇಡಿತನವಾಗಿದೆ. ಪ್ರವಾದಿ ರ್ಯರು(ಸ) ಒಂದು ವಿಶೇಷ ಕಾಲದಲ್ಲಿ ವಿಶೇಷ ಪರಿಸ್ಥಿತಿಯಲ್ಲಿ ಜನಿಸಿದರು. ವಿಶೇಷವೆನ್ನಲಾದ ಷೆಯನ್ನಾಡಿದರು. ಆ ಭಾಷೆಯನ್ನು ಎಲ್ಲ ಮಾನವರು ಮಾತಾಡುತ್ತಿ ರಲಿಲ್ಲ. ತಂದೆಯನ್ನೇ ವರು ನೋಡಿರಲಿಲ್ಲ. ಬರೇ ತಾಯಿ, ಅಜ್ಜ, ತಂದೆಯ ಸಹೋದರರನ್ನು ನೋಡುವ ಭಾಗ್ಯವಷ್ಟೇ ಅವರಿಗೆ ದೊರಕಿತ್ತು.

ಪ್ರವಾದಿ ಮುಹಮ್ಮದರು(ಸ) ಕೇವಲ ಹೆಣ್ಮಕ್ಕಳ ತಂದೆಯಾಗಿದ್ದರು. ಅವರ ಗಂಡು ಕ್ಕಳು ಬದುಕಿರಲಿಲ್ಲ. ಆದುದರಿಂದ ಅವರು ಪುರುಷರಿಗೆ ಮಾತ್ರ ಆದರ್ಶವಾಗಬಹುದು. ಯರಿಗಲ್ಲ ಎಂದು ಯಾರಾದರೂ ಹೇಳುವುದಾದರೆ ಅದನ್ನು ತಿಳಿಗೇಡಿತನ ಮತ್ತು ಳಿಗೇಡಿ ಮನೋಸ್ಥಿತಿಯೆನ್ನಬಹುದಾಗಿದೆ.

ಪ್ರವಾದಿವರ್ಯರು(ಸ) ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರಕ್ಕೂ ಆದರ್ಶವಾದ್ದ ಂದ ಅವರನ್ನು ಮಾನವರ ಪರಿಪೂರ್ಣ ಆದರ್ಶವೆನ್ನುವುದು. ನಮ್ಮ ವೈಯಕ್ತಿಕ, ಸಾಮಾಜಿಕ, ರ್ಥಿಕ, ರಾಜಕೀಯವೇ ಮುಂತಾದ ಸಕಲ ವಿಚಾರಗಳಿಗೂ ಪ್ರವಾದಿವರ್ಯರು(ಸ) ರಿಪೂರ್ಣ ಆದರ್ಶವಾಗಿದ್ದಾರೆ. ಅವರ ಜೀವನದಿಂದ ನಮ್ಮ ಈ ಎಲ್ಲ ಕ್ಷೇತ್ರಗಳಿಗೂ ಾರ್ಗದರ್ಶನ ಪಡೆಯಬಹುದಾಗಿದೆ.

ಅವರಿಂದ ವಿಶ್ವಾಸಪರ, ವೈಚಾರಿಕ ಭಾವನಾತ್ಮಕ ಹಾಗೂ ಮನಸ್ಸಿಗೆ ಸಂಬಂಧಿಸಿದ ಸಕಲ ಚಾರಗಳಿಗೂ ಮಾರ್ಗದರ್ಶನ ಪಡೆಯಬಹುದು. ಅಧ್ಯಾತ್ಮಿಕ, ನೈತಿಕ ವಿಚಾರಕ್ಕೂ ಅವರಿಂದ ಾರ್ಗದರ್ಶನ ದೊರೆಯುತ್ತಿದೆ. ಸಕಲ ವಿಚಾರಗಳಿಗೂ ಪ್ರವಾದಿವರ್ಯರು(ಸ) ಾರ್ಗದರ್ಶಕರಾಗಿದ್ದಾರೆ. ಪ್ರವಾದಿವರ್ಯರಲ್ಲಿ(ಸ) ಯಾವ ವಿಚಾರದಲ್ಲಿಯೂ ನಾವು ರಾಶೆಯನ್ನು ಅನುಭವಿಸಲಾರೆವು.

ಅವರು ಅರಬಿ ಭಾಷೆಯನ್ನು ಆಡುತ್ತಿದ್ದರು. ಅವರಿಗೆ ಅರಬಿ ಭಾಷೆಯಲ್ಲಿ ದೈವಿಕ

ಗ್ರಂಥ ಅವತೀರ್ಣವಾಯಿತು. ಅರಬಿ ಭಾಷೆಯನ್ನು ಅರಿಯುವವರು ಜಗತ್ತಿನಲ್ಲಿದ್ದಾ ಹಾಗಾಗಿ ಅದೊಂದು ಮೃತ ಭಾಷೆಯಲ್ಲ. ನಮಗೆ ಪ್ರವಾದಿ ಮುಹಮ್ಮದರ(ಸ) ಶಿಕ್ಷ ಗಳನ್ನು ತಿಳಿಯುವುದು ಕಷ್ಟವಲ್ಲ.

ಒಂದು ವಿಶೇಷ ಯುಗದಲ್ಲಿ ಪ್ರವಾದಿವರ್ಯರು(ಸ) ಆಗಮಿಸಿದರೇನೋ ನಿಜ. ಆ ಅವರ ಶಿಕ್ಷಣ ಸಂಪೂರ್ಣ ವಿಶ್ವಕ್ಕಿರುವುದಾಗಿದೆ ಮತ್ತು ಸಾರ್ವಕಾಲಿಕ ಶಿಕ್ಷಣ ವಾಗಿದೆ. ನಾ ಪ್ರವಾದಿ ವಚನಗಳು ಮತ್ತು ಪ್ರವಾದಿಗೆ(ಸ) ಅವತೀರ್ಣಗೊಂಡ ಪವಿತ್ರ ಕುರ್‌ಆನ್ ಹಾ ಅವುಗಳ ನಿಯಮ ಸಿದ್ಧಾಂತಗಳ ಆಧಾರದಲ್ಲಿ ಮಾರ್ಗದರ್ಶನ ಪಡೆಯಬಹುದಾಗಿ ಪ್ರತಿಯೊಂದು ಕಾಲದಲ್ಲಿ ಪ್ರತಿಯೊಂದು ಪರಿಸ್ಥಿತಿಯಲ್ಲಿ ಉದ್ಭವಿಸ ಬಹುದಾದ ಹೊಸಾತಿಹೊ ಮತ್ತು ಜಟಿಲಾತಿಜಟಿಲ ಸಮಸ್ಯೆಗಳಿಗೂ ಅದರಿಂದ ಪರಿಹಾರವನ್ನು ಪಡೆಯಬಹುದಾಗಿ ಅವರ ಮಾರ್ಗದರ್ಶನದ ಮೂಲಕ ಪರಿಹಾರ ವಾಗಿರುವ ಸಮಸ್ಯೆಗಳ ಕುರಿತು ನಾ ಇತಿಹಾಸದಿಂದ ಅರಿತುಕೊಳ್ಳಬಹುದಾಗಿದೆ. ಅವರಿಗೆ ಇಸ್ಲಾಮ್ ಅದ್ಭುತವಾಗಿ ಸ್ಪಂದಿಸಿ ನೆರವಾಯಿತು. ಈ ಎಲ್ಲವುಗಳನ್ನು ಇತಿಹಾಸವು ಸ್ಪಷ್ಟವಾಗಿ ವಿವರಿಸಿದೆ. ಮಾರ್ಗದರ್ಶನಗ ಈಗಲೂ ನಮ್ಮ ಜೊತೆಯಲ್ಲಿವೆ. ಆದುದರಿಂದ ಈ ಅರ್ಥದಲ್ಲಿ ಪ್ರವಾದಿವರ್ಯರು( ಈಗಲೂ ನಮ್ಮೊಂದಿಗಿದ್ದು ಮಾರ್ಗದರ್ಶನ ಮಾಡಿದಂತಾಗುವುದು. ಮಾತ್ರವ ಪ್ರವಾದಿವರ್ಯರ(ಸ) ಕಾಲ ಮತ್ತು ಇಂದಿನ ಯುಗಕ್ಕೂ ಅಜಗಜಾಂತರ ವ್ಯತ್ಯಾಸಗಳಿ ಅಂದಿನ ಸಮಸ್ಯೆಗಳೂ ಇಂದಿನ ಸಮಸ್ಯೆಗಳೂ ಸಮಾನವಲ್ಲ. ಜಗತ್ತನ್ನು ಇಂದು ಒಂ ಗ್ರಾಮಕ್ಕೆ ಹೋಲಿಸಲಾಗುತ್ತಿದೆ. ಇಂದು ಮಾನವನು ಅನ್ಯಗ್ರಹಗಳ ಮೇಲೆ ಅಧಿಪ ಸಾಧಿಸುವ ನಿಟ್ಟಿನಲ್ಲಿ ಸಾಗುತ್ತಿದ್ದಾನೆ. ಇಷ್ಟೆಲ್ಲ ಪ್ರಗತಿಯ ನಂತರವೂ ಮಾನವನ ಮೂಲಭೂ ಸಮಸ್ಯೆ ಏಕ ರೀತಿಯಲ್ಲಿ ಮುಂದುವರಿಯುತ್ತಿದೆ, ಮುಂದಕ್ಕೂ ಈ ಸಮಸ್ಯೆಗಳು ರೀತಿಯಲ್ಲಿಯೇ ಇರುವುದು. ಅದರ ಬಾಹ್ಯ ರೂಪದಲ್ಲಷ್ಟೇ ಬದಲಾವಣೆಯಾಗಬಹುದ ಆದರೆ ನಾವು ಪ್ರವಾದಿವರ್ಯರ(ಸ) ಮಾರ್ಗದರ್ಶನದಿಂದ ಮಾನವರ ಮೂಲಭೂ ಸಮಸ್ಯೆಗಳಿಗೆ ಸಾರ್ವಕಾಲಿಕ ಪ್ರಯೋಜನ ಪಡೆಯಬಹುದಾಗಿದೆ.

ಪ್ರವಾದಿವರ್ಯರು(ಸ) ತಮ್ಮ ತಂದೆಯನ್ನು ನೋಡಿಲ್ಲವಾದರೂ ಚಿಕ್ಕಪ್ಪಂದಿರೊಂದಿ ಅವರು ಪಿತೃಸಮಾನವಾಗಿ ವರ್ತಿಸಿರುವರು. ಇತರ ಹಿರಿಯರೊಡನೆಯೂ ಅವ ಒಡನಾಟವಿತ್ತು. ಮೊಲೆ ಹಾಲುಣಿಸಿರುವ ತಾಯಿಯಿದ್ದರು. ಇವರೆಲ್ಲರೊಂದಿಗೆ ಅವರು ಹೇ ವರ್ತಿಸಿದರು. ಅದರಿಂದ ನಮ್ಮ ತಂದೆ ತಾಯಿಯರೊಡನೆ ವರ್ತಿಸುವುದನ್ನು ನಾ ಕಲಿಯಬಹುದಾಗಿದೆ. ಮಾತ್ರವಲ್ಲ ತಂದೆ ತಾಯಿಯರೊಂದಿಗೆ ಹೇಗೆ ವರ್ತಿಸಬೇಕೆಂ ಪ್ರವಾದಿವರ್ಯರು(ಸ) ಕಲಿಸಿದ್ದಾರೆ. ಪವಿತ್ರ ಕುರ್‌ಆನ್‌ನಲ್ಲಿಯೂ ಅದರ ಶಿಕ್ಷಣವಿ ಮಾತ್ರವಲ್ಲ ಪವಿತ್ರ ಕುರ್‌ಆನ್‌ನಲ್ಲಿರುವ ಮಾರ್ಗದರ್ಶನಗಳು ನಮಗೆ ಪಾಠದಾಯಕವಾಗಿ

ಪ್ರವಾದಿವರ್ಯರ(ಸ) ಗಂಡು ಮಕ್ಕಳು ಬದುಕುಳಿಯದಿದ್ದರೂ ಅವರು ಸಾಕಿ

ಖ್ಯದ್‌ರೊಂದಿಗೆ(ಸ) ತೋರಿಸಿದ ಪುತ್ರ ವಾತ್ಸಲ್ಯಗಳು ಅಪಾರ. ನಾವು ನಮ್ಮ ಗಂಡು ಕ್ಕಳೊಂದಿಗೆ ವರ್ತಿಸಬೇಕಾದ ಮಾದರಿಯಿದು. ಆದುದರಿಂದ ಗಂಡು ಮಕ್ಕಳ ಬಗ್ಗೆ ವಾದಿವರ್ಯರಿಂದ(ಸ) ಮಾರ್ಗದರ್ಶನ ದೊರೆಯುವುದಿಲ್ಲವೆಂದರೆ ತಿಳಿಗೇಡಿತನ ವಾದೀತು.

ಪ್ರವಾದಿವರ್ಯರು(ಸ) ಓರ್ವ ಪುರುಷರಲ್ಲವೇ. ಮಹಿಳೆಯರು ಅವರಿಂದ ಆದರ್ಶವನ್ನು ೀಗೆ ಕಲಿಯಬಹುದೆಂಬ ವಾದವೂ ಹಾಸ್ಯಾಸ್ಪದವಾಗಿದೆ. ಯಾಕೆಂದರೆ ಅವರೋರ್ವ ದರ್ಶ ಪತಿಯಾಗಿದ್ದರು. ತಮ್ಮ ಧರ್ಮಪತ್ನಿಯರೊಂದಿಗೆ ಅವರ ಒಡನಾಟ ಮತ್ತು ಕ್ಷಣಗಳು ಹಾಗೂ ಮಹಿಳೆಯರನ್ನುದ್ದೇಶಿಸಿ ಆಡಿದ ಮಾತುಗಳು ಈಗಲೂ ಸತ್ಯ ಸಂಧವಾಗಿ ಗತ್ತಿನ ಮುಂದಿವೆ. ಅವರಲ್ಲಿ ನಾವು ಓರ್ವ ಆದರ್ಶ ಪತಿಯನ್ನಷ್ಟೇ ಅಲ್ಲ, ಅವರ ತ್ನಿಯರಿಂದ ಆದರ್ಶ ಮಹಿಳೆಯರನ್ನು ಅರಿತುಕೊಳ್ಳಲು ಸಾಧ್ಯವಿದೆ. ಹೌದು, ಅವರ ಕ್ಷಣದಿಂದಲೇ ಅವರ ಪತ್ನಿಯರು ಆದರ್ಶ ನಾರಿಯರಾಗಿ ರೂಪುಗೊಂಡಿದ್ದಾರೆ. ಪವಿತ್ರ ರ್‌ಆನ್ ಕೂಡಾ ಅದನ್ನು ಪುಷ್ಟೀಕರಿಸಿದೆ. ಅದು ಈ ರೀತಿ ವಿವರಿಸುತ್ತದೆ-

"ಪೈಗಂಬರರ ಪತ್ನಿಯರೇ, ನೀವು ಸಾಮಾನ್ಯ ಸ್ತ್ರೀಯರಂತಲ್ಲ."

**(ಪವಿತ್ರ ಕುರ್‌ಆನ್, 33:32)**

ಈ ರೀತಿ ಪ್ರವಾದಿವರ್ಯರ(ಸ) ಜೀವನವು ಕೇವಲ ಉತ್ತಮವಷ್ಟೇ ಅಲ್ಲ, ಪರಿಪೂರ್ಣ ಾದ ಆದರ್ಶ ಜೀವನವಾಗಿದೆ. ಈ ದೃಷ್ಟಿಯಿಂದ ನಮ್ಮ ಅಧ್ಯಯನವನ್ನು ಆರಂಭಿಸ ಬೇಕು. ಡವೇ ಕಾಣದ ಒಂದು ಬೃಹತ್ ಸಾಗರದಂತೆ ಅವರ ಜೀವನದಲ್ಲಿ ಅಪಾರ ದರ್ಶಗಳಿರುವುದನ್ನು ನಾವು ಅರಿಯಬಹುದು. ಅಂದರೆ ಅವರ ಜೀವನದ ವೈಶಿಷ್ಟ್ಯ ಳನ್ನು ಹೇಳುತ್ತಾ ಸಾಗಿದಂತೆ ಅದಕ್ಕೊಂದು ಕೊನೆಯೆಂಬುದಿರುವುದಿಲ್ಲ. ನಮಗೆ ಅದು ನ್ನಷ್ಟು ವಿಸ್ತಾರವಾಗಿದೆ ಎಂದು ಅನ್ನಿಸುವುದು.

ಇನ್ನು ಸ್ತ್ರೀ ಪುರುಷರ ವಿಚಾರವಾದರೆ ಜೀವನದ ಮೂಲಭೂತ ಶಿಕ್ಷಣಗಳು ಅವರಿಗೆ ಮಾನವೆಂಬುದನ್ನು ನಾವು ಅರಿತಿರಬೇಕು. ಈಮಾನ್(ವಿಶ್ವಾಸ) ದೇವ ಭಕ್ತಿ, ಸುಶೀಲತೆ ುತ್ತು ಸದ್ವರ್ತನೆ ಇತ್ಯಾದಿ ಶಿಕ್ಷಣಗಳೆಲ್ಲವೂ ಸ್ತ್ರೀಯರಿಗೂ ಪುರುಷರಿಗೂ ಸಮಾನವಾದುದು ುತ್ತು ಬದುಕಿನಲ್ಲಿ ವಿಶ್ವಾಸ ಮತ್ತು ಚಾರಿತ್ರ್ಯಗಳಷ್ಟೆ ಪ್ರಾಮುಖ್ಯತೆ ಇರುವುದು. ನೈತಿಕ ದ್ಗುಣಗಳನ್ನು ಪರಾಕಾಷ್ಠೆಗೆ ತಲುಪಿಸಲೆಂದೇ ನನ್ನನ್ನು ನಿಯೋಜಿಸ ಲಾಗಿದೆಯೆಂಬ ಪ್ರವಾದಿ ವಚನವನ್ನು ಇಲ್ಲಿ ಉಲ್ಲೇಖಿಸಬಹುದು.

ಸ್ತ್ರೀ ಪುರುಷರಲ್ಲಿ ಅವಲೋಕಿಸುವ ವಿಚಾರಗಳು ಅವರ ಈಮಾನ್(ಸತ್ಯವಿಶ್ವಾಸ) ಮತ್ತು ಉತ್ತಮ ಕರ್ಮಗಳು(ಸಚ್ಚಾರಿತ್ರ್ಯ) ಎಂದು ಪವಿತ್ರ ಕುರ್‌ಆನ್‌ನಿಂದ ತಿಳಿಯಬಹುದು. ಅರ್ಥಾತ್ ನೈಜ ಮೌಲ್ಯ ಮನುಷ್ಯನ ಆತ್ಮಕ್ಕೆ ಇರುವುದು ಮತ್ತು ಆತ್ಮದೊಂದಿಗೆ ನೇರ ಸಂಬಂಧವನ್ನು ಈಮಾನ್ ಮತ್ತು ನೈತಿಕ ಗುಣಗಳು ಹೊಂದಿರುತ್ತವೆ ಎಂದು ನಾವು ತಿಳಿಯ ಬಹುದು. ಹೀಗೆ ಮಾನವರ ಚಾರಿತ್ರ್ಯಕ್ಕೆ ಮಹತ್ವ ದೊರೆಯಿತು. ಪವಿತ್ರ ಕುರ್‌ಆನಿನ

ವಿಶ್ಲೇಷಣೆಯೂ ಅದನ್ನೇ ಸ್ಪಷ್ಟಪಡಿಸಿದೆ, **"ಸತ್ಕರ್ಮವೆಸಗಿದವನು ಪುರುಷನಿರಲಿ, ಸ್ತ್ರೀ ಇರಲಿ ಸತ್ಯವಿಶ್ವಾಸಿಯಾಗಿದ್ದರೆ ಇಂತಹವ ರೆಲ್ಲರೂ ಸ್ವರ್ಗವನ್ನು ಪ್ರವೇಶಿಸುವರು, ಅಲ್ಲಿ ಅವರಿ ಅಪಾರ ಜೀವನಾಧಾರ ನೀಡಲ್ಪಡುವುದು."** (ಪವಿತ್ರ ಕುರ್‌ಆನ್, 40:40)

ಮಹಿಳೆಯರ ಮಾರ್ಗದರ್ಶನಕ್ಕೆ ಬೇರೆಯೇ ಮಹಿಳಾ ಪ್ರವಾದಿಯ ಆವಶ್ಯಕತೆಯಿ ವೆಂದು ಪವಿತ್ರ ಕುರ್‌ಆನಿನ ಈ ವಚನವು ಸ್ಪಷ್ಟಪಡಿಸಿದೆಯಷ್ಟೇ. ಆದುದರಿಂದ ಪುರುಷರಂ ಮಹಿಳೆಯರಿಗೂ ಓರ್ವ ಪ್ರವಾದಿಯನ್ನಾಗಿ ಪ್ರವಾದಿ ಮುಹಮ್ಮದ್‌ರನ್ನು(ಸ) ನಿಯೋಜಿ ಲಾಯಿತೆಂದು ಸ್ಪಷ್ಟವಾಗುವುದು.

## ಲೋಕಾಂತ್ಯದ ವರೆಗೆ

ಲೋಕಾಂತ್ಯದ ವರೆಗೂ ಮುಹಮ್ಮದರು(ಸ) ಪ್ರವಾದಿಯಾಗಿ ನಿಯೋಜಿಸಲ್ಪಟ್ಟಿದ್ದಾರೆ ಯಾವುದಾದರೊಂದು ವಿಶೇಷ ಯುಗಕ್ಕೆ ಅವರ ಪ್ರವಾದಿತ್ವವು ಸೀಮಿತಗೊಳ್ಳುವುದಿಲ್ಲ ಲೋಕಾವಸಾನದ ವರೆಗೂ ಅವರೇ ಸಕಲರಿಗೂ ಪ್ರವಾದಿಯಾಗಿರುವರು. ಅವರ ಸಮಕಾಲೀ ರಂತೆ ಜಗತ್ತಿನ ಅವಸಾನದ ವರೆಗೂ ಅವರಿಂದ ಮಾನವರು ಮಾರ್ಗದರ್ಶನ ಪಡೆಯುತ್ತಾರೆ ಆದರೆ ಹೃದಯ ಊನಗೊಂಡ ಪಕ್ಷಪಾತಿಗಳು ಮತ್ತು ಪೂರ್ವಗ್ರಹ ಪೀಡಿತರು ಅಥವಾ ನೈತಿಕ ರೋಗಿಗಳು ಅವರ ಶಿಕ್ಷಣದಿಂದ ಮಾರ್ಗದರ್ಶನವನ್ನು ಸ್ವೀಕರಿಸಲು ವಿಫಲರಾಗುತ್ತಾರೆ

ದೇವನ ಅನುಗ್ರಹ ವಂಚಿತರನ್ನು ಹೊರತುಪಡಿಸಿದರೆ ಅವರು ಸಕಲ ಮಾನವರಿಗೂ ಮಾರ್ಗದರ್ಶಕರಾಗಿದ್ದಾರೆ. ಈ ಕುರಿತು ಪವಿತ್ರ ಕುರ್‌ಆನ್ ಹೀಗೆ ಹೇಳಿದೆ. **"ಮತ್ತು (ಇವರ ಸಂದೇಶವಾಹಕತ್ವವು) ಅವರನ್ನಿನ್ನೂ ಭೇಟಿಯಾಗಿರದ ಇತರ ಜನರಿಗೂ ಅನ್ವಯಿಸುತ್ತದೆ. ಅಲ್ಲಾಹನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ."** (ಪವಿತ್ರ ಕುರ್‌ಆನ್, 62:3)

ಲೋಕಾಂತ್ಯದ ವರೆಗೂ ಸೌಭಾಗ್ಯವಂತರು ಅವರ ಪ್ರವಾದಿತ್ವದಲ್ಲಿ ವಿಶ್ವಾಸವಿರಿಸುತ್ತಾರೆ. ಅವರ ಮಾರ್ಗದರ್ಶನದ ಪ್ರಯೋಜನ ಪಡೆಯುತ್ತಾ ಇರುತ್ತಾರೆ ಎಂದು ಪವಿತ್ರ ಕುರ್‌ಆನ್ ನಿಂದ ನಾವು ತಿಳಿದೆವಷ್ಟೆ. ಪ್ರವಾದಿವರ್ಯರ(ಸ) ಶಿಕ್ಷಣವು ಲೋಕಾಂತ್ಯದ ವರೆಗೂ ಸಾಕಾಗದಿರುತ್ತಿದ್ದರೆ ಪ್ರವಾದಿತ್ವದ ಸರಣಿ ಕೊನೆಗೊಳ್ಳುತ್ತಿರಲಿಲ್ಲ?

## ಅಂತಿಮ ಪ್ರವಾದಿ

ಪ್ರವಾದಿ ಮುಹಮ್ಮದರು(ಸ) ದೇವನ ಕೊನೆಯ ಪ್ರವಾದಿಯಾಗಿರುವರು. ಅವರ ನಂತರ ಯಾವ ಪ್ರವಾದಿಯೂ ಇಲ್ಲ. ಅವರೇ ಪ್ರವಾದಿತ್ವ ಶೃಂಖಲೆಯ ಕೊನೆಯ ಕೊಂಡಿ. ಈ ಕುರಿತು ಪವಿತ್ರ ಕುರ್‌ಆನ್ ಈ ರೀತಿ ವಿವರಿಸುವುದನ್ನು ನಾವು ಕಾಣಬಹುದು–

**"(ಜನರೇ) ಮುಹಮ್ಮದ್‌ರು ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ, ವಾಸ್ತವದಲ್ಲಿ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವರಾಗಿರುತ್ತಾರೆ.**

ಅಲ್ಲಾಹನು ಸಕಲ ವಸ್ತುಗಳ ಪರಿಜ್ಞಾನವುಳ್ಳವನು." (ಪವಿತ್ರ ಕುರ್‌ಆನ್, 33:40)

ಹೌದು, ಪ್ರವಾದಿವರ್ಯರ(ಸ) ಕಾಲಾನಂತರವೂ ಸಂಪೂರ್ಣ ಜಗತ್ತಿಗೆ ಅವರ ಮಾರ್ಗದರ್ಶನ ತಲುಪುತ್ತಿರುವುದನ್ನು ನಾವು ನೋಡುತ್ತೇವೆ. ಆದುದರಿಂದ ಅವರ ನಂತರ ಬೇರೆ ಬೇರೆ ಸಮುದಾಯಗಳಿಗಾಗಿ ಬೇರೆ ಬೇರೆ ಪ್ರವಾದಿಯನ್ನು ನಿಯೋಜಿಸಬೇಕಾದ ಆವಶ್ಯಕತೆಯೇ ಉದ್ಭವಿಸುವುದಿಲ್ಲ. ಅಷ್ಟೇ ಅಲ್ಲ, ಅವರಿಗೆ ಅವತೀರ್ಣಗೊಂಡಿರುವ ಗ್ರಂಥ ಯಾವುದೇ ಬದಲಾವಣೆಯಾಗದೆ (Distortion) ಸುರಕ್ಷಿತವಾಗಿ ಮೂಲ ರೂಪದಲ್ಲಿ ಸುರಕ್ಷಿತವಾಗಿದೆ. ಈ ಕುರಿತು ಪ್ರವಾದಿವರ್ಯರೇ(ಸ) ಭವಿಷ್ಯ ನುಡಿದಿದ್ದಾರೆ.

ಅವರ ನಂತರ ನಿರಂತರವಾಗಿ ಸಮಾಜ ವ್ಯವಸ್ಥೆಯನ್ನು ಸರಿಯಾಗಿ ನಿಭಾಯಿಸಿ ಅದರಲ್ಲಿ ಉದ್ಭವಿಸಬಹುದಾದ ಅಡ್ಡಿ ಆತಂಕಗಳನ್ನು ದೂರಗೊಳಿಸುವ ಸುಧಾರಕರು, ಆಡಳಿತಗಾರರು ಆಗುತ್ತಾ ಬಂದಿದ್ದಾರೆ. ಪ್ರವಾದಿವರ್ಯರು(ಸ) ಒಮ್ಮೆ ಹೀಗೆ ಹೇಳಿದರು-

"ನನಗೆ ಹಲವು ಹೆಸರುಗಳಿವೆ. ನಾನು ಮುಹಮ್ಮದ್ ಮತ್ತು ಅಹ್ಮದ್ ಆಗಿರುವೆನು. ನಾನು ಮಾಹಿ(ಅಳಿಸುವವನು) ಆಗಿರುವೆನು. ನನ್ನ ಮೂಲಕ ದೇವನು ಕುಫ್ರನ್ನು (ಸತ್ಯ ನಿಷೇಧವನ್ನು) ಅಳಿಸುವನು ಮತ್ತು ನಾನು ಹಾಶಿರ್ ಆಗಿರುವೆನು. ಆ ಹಾಶಿರ್‌ನ ಬಳಿಕವೇ ಜನರು ಹಶ್ರ್(ಪ್ರಳಯ ಕ್ಷೇತ್ರ)ನಲ್ಲಿ ಒಗ್ಗೂಡುವರು ಮತ್ತು ನಾನು ಆಕಿಬ್(ಎಲ್ಲರಿಗಿಂತ ಕೊನೆಗೆ ಬರುವವನು) ಆಗಿರುವೆನು. ನನ್ನ ನಂತರ ಯಾವ ಪ್ರವಾದಿಯೂ ಇಲ್ಲ." (ಬುಖಾರಿ, ಮುಸ್ಲಿಮ್)

ಅವರು ಹೇಳಿದರು- "ನಾನು ಪ್ರವಾದಿಗಳಲ್ಲಿ ಕೊನೆಯವನು. ನನ್ನ ನಂತರ ಯಾವ ಪ್ರವಾದಿಯೂ ಇಲ್ಲ." (ಮುಸ್ಲಿಮ್)

"ನಾನು ಯಾವ ಸಮಯದಲ್ಲಿ ಕಳುಹಿಸಲ್ಪಟ್ಟೆನೆಂದರೆ ನನಗೂ ಕಿಯಾಮತ್ ದಿವಸಕ್ಕೂ (ಲೋಕಾಂತ್ಯದ ದಿವಸಕ್ಕೂ) ಈ ಬೆರಳುಗಳ ರೀತಿ ಅಂತರವಿರುವುದು. (ಅರ್ಥಾತ್ ಅತಿ ನಿಕಟವಾಗಿದೆ.)" (ಬುಖಾರಿ, ಮುಸ್ಲಿಮ್)

ಈ ಎಲ್ಲ ವಿವರಣೆಗಳು ಇನ್ನು ಲೋಕಾಂತ್ಯದ ವರೆಗೂ ಬೇರೆ ಯಾವ ಪ್ರವಾದಿಯೂ ಆಗಮಿಸುವುದಿಲ್ಲವೆಂದು ಸ್ಪಷ್ಟಪಡಿಸುತ್ತಿವೆ.

## ಸುರಕ್ಷಿತ ಜೀವನ ಚರಿತ್ರೆ

ಪ್ರವಾದಿ(ಸ) ಅವರ ಜೀವನದ ಪ್ರತಿಯೊಂದು ಮಜಲು ಕೂಡಾ ಅತ್ಯಂತ ಸೂಕ್ಷ್ಮವಾಗಿ ಸುರಕ್ಷಿತವಾಗಿದೆ. ಅವರ ಬಗ್ಗೆ ನಾವು ಅತಿ ವ್ಯಾಪಕವಾಗಿ ತಿಳಿಯಲು ಸಾಧ್ಯವಾಗಿರುವುದು ಪ್ರವಾದಿ ಮುಹಮ್ಮದರ(ಸ) ಜೀವನದ ಒಂದು ವೈಶಿಷ್ಟ್ಯವಾಗಿದೆ.

ಪ್ರವಾದಿತ್ವಕ್ಕಿಂತ ಮೊದಲು ಪ್ರವಾದಿವರ್ಯರ(ಸ) ಜೀವನ ಹೇಗಿತ್ತು? ಯಾವ ರೀತಿ ಅವರಿಗೆ ವಹ್ಯ್ (ಪ್ರಕಾಶನ) ಅವತೀರ್ಣಗೊಳ್ಳಲಾರಂಭವಾಯಿತು. ಜನರನ್ನು ಸತ್ಯ ಮಾರ್ಗದೆಡೆಗೆ ಯಾವ ರೀತಿ ಕರೆದಿದ್ದಾರೆ. ವಿರೋಧಿಗಳು ಮತ್ತು ಶತ್ರುಗಳನ್ನು ಅವರು ಹೇಗೆ

ನಿಭಾಯಿಸಬೇಕಾಯಿತು. ಅವರು ಅನುಯಾಯಿಗಳಿಗೆ ಎಂತಹ ಶಿಕ್ಷಣ ಕೊಟ್ಟರು. ಯಾ ರೀತಿ ತರಬೇತಿಗೊಳಿಸಿದರು. ಯಾವುದರಿಂದ ತಡೆದರು. ಯಾವುದನ್ನು ಮಾಡಲು ಆಜ್ಞಾಪಿ ದರು. ಅವರ ಆರಾಧನೆಗಳು ಯಾವ ರೀತಿಯಿತ್ತು, ದೇವನನ್ನು ವಂದಿಸುತ್ತಿದ್ದರೆ, ಅವ ಯಾವ ರೀತಿ ದೇವಸ್ಮರಣೆಯನ್ನಿಟ್ಟುಕೊಳ್ಳುತ್ತಿದ್ದರು. ದೇವನನ್ನು ಹೇಗೆ ಭಯ ಪಡುತ್ತಿದ್ದರ ಪರಲೋಕದ ಬಗ್ಗೆ ಯೋಚಿಸುತ್ತಿದ್ದರೇ, ಜನರು ಸನ್ಮಾರ್ಗವನ್ನು ಸ್ವೀಕರಿಸ ಬೇಕು. ದೇ ಶಿಕ್ಷೆಯಿಂದ ಪಾರಾಗಬೇಕೆಂದು ಅವರು ಎಷ್ಟು ಚಿಂತಿಸುತ್ತಿದ್ದರು, ತನ್ನ ಮೇಲಿದ್ದ ದೇವಾನುಗ್ರಹ ಬಗ್ಗೆ ಎಷ್ಟು ಜ್ಞಾನಿಯಾಗಿದ್ದರು, ದೇವನಿಗೆ ಹೇಗೆ ಕೃತಜ್ಞತೆ ಅರ್ಪಿಸಿದರು, ಹಗಲಿನ ಹೊರತ ರಾತ್ರಿಯನ್ನು ಹೇಗೆ ಕಳೆದರು, ಅವರಿಂದ ಹೊರಡುತ್ತಿದ್ದ ದೇವನ ಪ್ರಶಂಸೆಯ ವಾಕ್ಯ ಶಾಶ್ವತ ಮಹಾ ವಾಕ್ಯವಾಯಿತೆ, ಅವರ ಗುಣ ಸ್ವಭಾವ ಗಳು ಹೇಗಿತ್ತು?

ಈ ಎಲ್ಲಾ ವಿಷಯಗಳ ಕುರಿತು ಪ್ರವಾದಿ ಮುಹಮ್ಮದರ(ಸ) ಜೀವನದ ಪ್ರತಿಯೊಂದ ಭಾಗವು ಅತ್ಯಂತ ವಿಸ್ತಾರವಾಗಿ ತೆರೆದ ಪುಟಗಳಂತೆ ಇಂದಿಗೂ ಸುರಕ್ಷಿತವಾಗಿದೆ. ಯು ಮಾಡುವುದು ಅನಿವಾರ್ಯವಾದರೆ ಅವರು ಪಾಲಿಸಿದ ನಿಯಮಗಳು ಯಾವುವು ವಿರೋಧಿಗಳೊಡನೆ ಸಂಧಿ ಮಾಡಿಕೊಂಡರೆ? ಯಾವ ರೀತಿ ಸಂಧಿಯನ್ನು ನಿರ್ವಹಿಸಿದ್ದಾರೆ ಅವರ ಆಡಳಿತದ ಪ್ರಣಾಳಿಕೆ ಯಾವ ರೀತಿ ಇರುತ್ತಿತ್ತು? ಅವರು ಮೊಕದ್ದಮೆಗ ವಿಲೇವಾರಿಯನ್ನು ಹೇಗೆ ನಡೆಸುತ್ತಿದ್ದರು. ತೀರ್ಪು ಹೇಗೆ ನೀಡಿದರು? ಅವರ ಕೊಡು-ಕೊಳ್ಳುವಿಕೆ, ಕ್ರಯ-ವಿಕ್ರಯ, ವ್ಯವಹಾರದಲ್ಲಿ ಯಾವ ಅಂಶಕ್ಕೆ ಗಮನ ಹರಿಸುತ್ತಿದ್ದರು ಈ ರೀತಿ ಒಟ್ಟು ಅವರ ಜೀವನದ ಪ್ರತಿಯೊಂದು ವಿಷಯಗಳಲ್ಲಿ ಅವರು ನೀಡಿರು ಆಜ್ಞಾದೇಶ ಮತ್ತು ಮಾರ್ಗದರ್ಶನಗಳು ಇಂದಿಗೂ ಸುರಕ್ಷಿತವಾಗಿ ಉಳಿದಿದೆ. ಮಾತ್ರವ ದೇವನಿಂದ ಅವತೀರ್ಣಗೊಂಡ ಪವಿತ್ರ ಕುರ್‌ಆನ್ ಕೂಡಾ ಅದೇ ಮೂಲ ಶಬ್ದಗಳಲ್ಲಿ ಮತ ದೈವಿಕ ಸಂದೇಶಗಳನ್ನು ನೀಡಿದ ಅದೇ ಕ್ರಮದಲ್ಲಿ ಇಂದೂ ಯಾವುದೇ ಬದಲಾವಣೆಗಳಿಲ್ಲ ನಮ್ಮ ಮುಂದಿದೆ. ಈ ಕುರಿತು ಅಸಾಮಾನ್ಯ ಮತ್ತು ಶ್ಲಾಘನಾರ್ಹ ಸಂಶೋಧನೆ ಗಳನ ಮುಸ್ಲಿಮ್ ವಿದ್ವಾಂಸರು ನಡೆಸಿರುತ್ತಾರೆ. ಮುಸ್ಲಿಮರಲ್ಲಿ ನಡೆದಿರುವ ವ್ಯಾಖ್ಯಾನದ ಮತ ಸಂಶೋಧನೆಯ ಕೆಲಸಗಳ ಬಗ್ಗೆ ಉದಾಹರಣೆಯನ್ನು ಜಗತ್ತಿನ ಇತರ ಯಾವ ಸಮುದಾಯಕ ನೀಡಲು ಸಾಧ್ಯವಿಲ್ಲ.

## ಪ್ರವಾದಿವರ್ಯರ(ಸ) ಶಿಕ್ಷಣದ ಸತ್ಯಸಂಧತೆ

ಅಂತಿಮ ಪ್ರವಾದಿ ಮುಹಮ್ಮದರ(ಸ) ಜೀವನ-ಚರಿತ್ರೆ, ಶಿಕ್ಷಣಗಳು ಮತ್ತು ಆಜ್ಞಾದೇ ಗಳು ಸವಿಸ್ತಾರವಾಗಿ ಇಂದೂ ಲಭ್ಯವಿದೆ. ಇದೊಂದೇ ಅವರ ವಿಶೇಷತೆಯಲ್ಲ. ಬದಲಾ ಅದನ್ನು ಅದೇ ಸ್ವರೂಪದಲ್ಲಿ ತಲುಪಿಸಲು ಒಂದು ಲಕ್ಷದಷ್ಟು ಜನರು ಕೆಲಸ ಮಾಡಿದರು ಪ್ರವಾದಿವರ್ಯರ(ಸ) ಚರ್ಯೆ, ಶಿಕ್ಷಣಗಳು ಒಬ್ಬರಿಂದ ಇನ್ನೊಬ್ಬರಿಗೆ ಸತ್ಯಸಂಧವಾಗಿ ಕ

ತಿ ತಲುಪುವ ವ್ಯವಸ್ಥೆಯು ಪ್ರವಾದಿ ಮುಹಮ್ಮದರಿಗೆ(ಸ) ಮಾತ್ರ ಲಭಿಸಿರುವ ಶಿಷ್ಟ್ಯವಾಗಿದೆ. ಸ್ವತಃ ಪ್ರವಾದಿವರ್ಯರೇ(ಸ) ಕೆಲವು ಆದೇಶಗಳನ್ನು ಬರೆಯಿಸಿ ದೂತರ ೂಲಕ ಜನರಿಗೆ ತಲುಪಿಸಿದರು.

ಪ್ರವಾದಿ ಮುಹಮ್ಮದರ(ಸ) ಸುಮಾರು ಆರು ಮಂದಿ ಸಂಗಡಿಗರು (ಸಹಾಬಿಗಳು) ರಿಂದ ವಚನಗಳನ್ನು ಆಲಿಸಿ ದಾಖಲಿಸಿಡುತ್ತಿದ್ದರು. ತಾವು ದಾಖಲಿಸಿರುವುದನ್ನು ಓದಿ ಸುತ್ತಿದ್ದರು. ಅದರ ನೈಜತೆಯನ್ನು ಪ್ರವಾದಿವರ್ಯರ(ಸ) ಮೂಲಕ ಖಾತ್ರಿಪಡಿಸುವುದು ದಿಗಾರರ ಉದ್ದೇಶವಾಗಿತ್ತು. ಆದುದರಿಂದ ಪ್ರವಾದಿ ಸಂಗಾತಿಗಳು(ರ) ಬರೆದಿರಿಸಿದ ವಾದಿ ವಚನಗಳು(ಹದೀಸ್ ಜ್ಞಾನಭಂಡಾರವು) ನಂತರ ಕಾಲದಲ್ಲಿ ಅದಕ್ಕೆ ಗ್ರಂಥ ರೂಪ ಡಿದ ಯೋಗ್ಯ ಮಹಾಪುರುಷರ ವರೆಗೂ ಮೂಲ ರೂಪದಲ್ಲಿ ಉಳಿದಿತ್ತು. ಇದು ಅಂತಿಮ ವಾದಿಗೆ ದೊರೆಕಿರುವ ವೈಶಿಷ್ಟ್ಯಗಳಲ್ಲೊಂದಾಗಿದೆ.

ಪ್ರಾರಂಭದಿಂದಲೂ ಹದೀಸ್ ಸಂಗ್ರಹ ಕಾರ್ಯವು ವೈಜ್ಞಾನಿಕ ರೀತಿಯಿಂದ ನಡೆಯಿತು. ವಾದಿ ವಚನವನ್ನು (ಪ್ರವಾದಿ(ಸ) ಆಡಿರುವ ಮಾತು) ಯಾರಾದರೂ ಹೇಳುವುದಾದರೆ, ನ್ನು ಆತನು ಯಾರ ಮುಖಾಂತರ ಹೇಳಿದ್ದಾನೆಂಬುದನ್ನು ಸ್ಪಷ್ಟ ಪಡಿಸಬೇಕಾಗಿತ್ತು. ವಾದಿವರ್ಯರಿಂದ(ಸ) ಅವನಿಗೆ ಯಾರ ಮೂಲಕ ತಲುಪಿದೆ. ಆ ವ್ಯಕ್ತಿಗೂ ವಾದಿವರ್ಯರಿಗೂ(ಸ) ನಡುವೆ ಎಷ್ಟು ವರದಿಗಾರರಿದ್ದಾರೆ. ಅವರು ಪ್ರಾಮಾಣಿಕರೇ, ರು ನಂಬಲರ್ಹರೇ? ಈ ರೀತಿ ವರದಿಯ ಸರಣಿಯು ಪ್ರವಾದಿ ವರ್ಯರ(ಸ) ವರೆಗೆ ಕಳಂಕವಾಗಿ ತಲುಪುವುದೇ ಎಂದು ಪರಿಶೀಲಿಸಲಾಗುತ್ತಿತ್ತು. ವರದಿಗಾರನು ನೈಜ ದಿಗಾರನೇ ಅಲ್ಲವೇ, ಅವನ ಮಾತುಗಳು ಸತ್ಯಸಂಧವೇ, ಅಧಿಕೃತವೇ ಎಂದು ತಿಳಿದು ಳ್ಳುವುದು ಇದರ ಉದ್ದೇಶವಾಗಿದೆ.

ವರದಿಯ ಮತ್ತು ವರದಿಗಾರರ ನಡುವೆ ಯಾವುದಾದರೂ ಕೊಂಡಿ (ವರದಿಗಾರನ ಪಣಿ) ತುಂಡಾದರೆ ಅದು ಸಂದೇಹಾಸ್ಪದ ವರದಿಯಾಗುತ್ತಿತ್ತು ಮತ್ತು ಹದೀಸ್ ವರದಿ ರರಲ್ಲಿ ಯಾರಾದರೊಬ್ಬರು ಭರವಸೆಗೆ ಅನರ್ಹವಾದರೆ ವರದಿ ಅಸ್ವೀಕೃತವೆಂದು ೀಷಿಸಲ್ಪಡುತ್ತಿತ್ತು. ಇಷ್ಟೊಂದು ಎಚ್ಚರಿಕೆ ವಹಿಸಿ ವಚನಗಳು (ಹದೀಸ್ ವಚನಗಳು) ಗ್ರಹಿಸಲ್ಪಟ್ಟಿರುವುದು ಪ್ರವಾದಿ ಮುಹಮ್ಮದರಿಗೆ(ಸ) ಸಂದ ವೈಶಿಷ್ಟ್ಯವಾಗಿದೆ.

ಹದೀಸ್ ವರದಿಗಾರರ ಜೀವನ ಮತ್ತು ಚಾರಿತ್ರ್ಯದ ಕುರಿತು ಬಹಳಷ್ಟು ಗ್ರಂಥಗಳು ಸಲ್ಪಟ್ಟಿವೆ. ಯಾವ ಹದೀಸ್ ವರದಿಗಾರರು ಯಾರಿಂದ ವರದಿ ಮಾಡಿದ್ದಾರೆ, ಅವರನ್ನು ದು ಭೇಟಿಯಾದರು, ಅವರು ಎಂತಹ ಚಾರಿತ್ರ್ಯವಿರುವ ವ್ಯಕ್ತಿಗಳಾಗಿದ್ದರು, ಅವರ ಪಕ ಶಕ್ತಿ ಹೇಗಿತ್ತು ಎಂದು ಗ್ರಂಥದಲ್ಲಿ ನಮೂದಿಸಲಾಗಿದೆ. ಪ್ರವಾದಿ ವಚನಗಳ ಸತ್ಯ ಧತೆಯನ್ನು ದೃಢಪಡಿಸುವ ಸಲುವಾಗಿ ಸಾವಿರಾರು ವ್ಯಕ್ತಿಗಳ (ವರದಿಗಾರರ) ಜೀವನ

ಚರಿತ್ರೆಯು ರಚಿಸಲ್ಪಟ್ಟಿವೆ. ಅಸ್ಮಾವುರ್-ರಿಜಾಲ್[1] ಎಂಬ ಗ್ರಂಥದಲ್ಲಿ ಹದೀಸ್ ವರದಿಗಾ ಜೀವನ ಚರಿತ್ರೆಯು ಸುರಕ್ಷಿತವಾಗಿರುವುದು ಒಂದು ಅದ್ಭುತವಾಗಿದೆ.

ಪ್ರಪಂಚದಲ್ಲಿರುವ ಇತರ ಪ್ರವಾದಿಗಳ ಬಗ್ಗೆ ಅಧ್ಯಯನ ನಡೆಸಿದಾಗ ಪ್ರವ ವರ್ಯರನ್ನು(ಸ) ಹೊರತು ಇಂತಹ ವ್ಯವಸ್ಥೆಯು ಬೇರೆ ಯಾರ ಬಗ್ಗೆಯೂ ಕಾಣ ವುದಿಲ್ಲ. ಪ್ರವಾದಿ ಮೂಸಾರ(ಅ) ತೌರಾತ್‌ನ ಮೂಲ ಗ್ರಂಥ ಇಂದು ಲಭ್ಯವಿಲ್ಲ. ಇ ಪ್ರವಾದಿಗಳ ಗ್ರಂಥವು ಸತ್ಯಸಂಧ ರೂಪದಲ್ಲಿ ಇಂದು ದೊರೆಯುವುದಿಲ್ಲ. ಬೈಬ ಉಲ್ಲೇಖಿಸಿದ ಪ್ರವಾದಿಗಳ ಸನದು ಕ್ರಮ ಪ್ರಕಾರ ತಲುಪುವುದಿಲ್ಲ. ಇಂದು ಲಭ್ಯವಿರ ತೌರಾತ್‌ನಲ್ಲಿ ಪ್ರವಾದಿ ಮೂಸಾರ(ಸ) ಜೀವನ ಚರಿತ್ರೆಯನ್ನು ಮತ್ತು ಇಂಜೀಲ್‌ನ (W of God) ಮಿಶ್ರಣಗಳಿಂದಾಗಿ ಅದರ ನೈಜ ದೈವಿಕ ವಚನಗಳನ್ನು ಪ್ರತ್ಯೇಕಿಸಲು ಅಸಾಧ್ಯವಾಗಿ

ಅಂದು ಇಂಜೀಲ್‌ನ ದೈವಿಕ ವಚನಗಳನ್ನು ದಾಖಲಿಸುವ ಸರಿಯಾದ ವ್ಯವಸ್ಥೆಯ ಇರಲಿಲ್ಲ. ಮೌಖಿಕ ರೂಪದಲ್ಲಿ ಅದು ಪ್ರಸಾರವಾಗಿತ್ತು. ಅದನ್ನು ಅಕ್ಷರಗಳಲ್ಲಿ ಬರೆದಿ ರಲಿಲ್ಲ. ಗ್ರೀಕ್ ಭಾಷೆಯಲ್ಲಿ ಅದನ್ನು ಬರೆದಿಡಲಾಯಿತು. ಗ್ರೀಕ್ ಕ್ರೈಸ್ತರು ಅದ ಲಿಪಿಯಲ್ಲಿ ಬರೆದಿದ್ದರು.

ಈಸಾ(ಏಸುಕ್ರಿಸ್ತ) ಮಸೀಹ್ ಮತ್ತು ಸಂಗಾತಿಗಳು ಸಿರಿಯನ್(Syri ಭಾಷೆಯನ್ನಾಡುತ್ತಿದ್ದರು ಅಥವಾ ಆರಾಮಿ ಭಾಷೆ ಮಾತನಾಡುತ್ತಿದ್ದರು.

ಇಂದು ಬೈಬಲ್‌ನ ಹೊಸ ನಿಯಮಗಳ (New Testment) ಸಾವಿರಾರು ಗ್ರಂಥ ಲಭಿಸುವುದು. ಆದರೆ ಮೂಲ ಇಂಜೀಲ್ ಅಥವಾ ನಾಲ್ಕನೆಯ ಶತಮಾನಕ್ಕಿಂತ ಮೊದ ಯಾವ ಗ್ರಂಥವೂ ಇಂದು ಕಂಡು ಬರುವುದಿಲ್ಲ. ಎಪ್ಪತ್ತು ಇಂಜೀಲ್ ಗ್ರಂಥಗಳನ್ನು ಬರೆ ಲಾಗಿತ್ತು. ಅವುಗಳಲ್ಲಿ ಕೇವಲ ನಾಲ್ಕು ಗ್ರಂಥಗಳಿಗೆ ಅಧಿಕೃತ ಮಾನ್ಯತೆ ನೀಡಲಾಯಿ ಉಳಿದ ಗ್ರಂಥಗಳೇಕೆ ಅಸ್ವೀಕೃತವಾಯಿತೆಂದು ಸಂಬಂಧಪಟ್ಟವರು ಕಾರಣಗಳನ್ನು ತಿಳಿಸಿ

ಇತರ ಪ್ರವಾದಿಗಳ ಚರಿತ್ರೆ ಮತ್ತು ಶಿಕ್ಷಣಗಳ ಸ್ಥಿತಿ ಕೂಡಾ ಇದೇ ರೀತಿ ಆ

---

1. 'ಅಸ್ಮಾವುರ್ರಿಜಾಲ್ ಗ್ರಂಥ'ದಲ್ಲಿ ಪ್ರತಿಯೋರ್ವ ವರದಿಗಾರನ ವಿವರವಾದ ಮಾಹಿತಿಗಳನ್ನು ಸಂಗ್ರ ಲಾಗಿದೆ. ಅದರಲ್ಲಿ ವರದಿಗಾರನ ಜನನ, ಮರಣದ ತಾರೀಕು, ಅವರಿಗಿದ್ದ ಸ್ಮರಣ ಶಕ್ತಿಯ ಉಲ್ಲೇಖಿಸಲಾಗಿದೆ. ಅವರ ಧಾರ್ಮಿಕತೆ ಅವರ ಸತ್ಯಸಂಧತೆಯ ಬಗ್ಗೆ ಅದರಲ್ಲಿ ಸವಿವರವಾಗಿ ವಿ ಲಾಗಿದೆ. ವರದಿಗಾರರಲ್ಲಿ ಯಾರಾದರೂ ಅಪನಂಬಿಕೆಯ ವ್ಯಕ್ತಿಯಿದ್ದರೆ ವರದಿಯನ್ನು ಸಂದೇಹಾ ವರದಿಯೆಂದು ಕರೆಯಲಾಗುತ್ತದೆ. ವರದಿಯಲ್ಲಿ ಯಾವುದೇ ತಡೆಗಳಿಲ್ಲ ಮತ್ತು ವರದಿಗಾರನು ವಿಶ್ವಾಸಾ ವ್ಯಕ್ತಿಯಾಗಿದ್ದರೆ ಆ ವರದಿಗಳು ವಿಶ್ವಸನೀಯ ಮತ್ತು ಸಹೀಹ್ ವರದಿಗಳೆಂದು ದಾಖಲಿಸ ಲಾ 'ಅಸ್ಮಾವುರ್ರಿಜಾಲ್' ಗ್ರಂಥ ಪ್ರವಾದಿ ವಚನಗಳ ವರದಿಗಾರರ ವಿವರ ಲಭ್ಯವಿರುವ ಗ್ರಂಥವಾಗಿದೆ. ಯ ಹದೀಸ್ ಯಾರಿಂದೆಲ್ಲ ವರದಿಯಾಗಿದೆ ಎಂದು ಅದರಲ್ಲಿ ದಾಖಲಾಗಿದೆ ಮತ್ತು ವರದಿಗಾರರ ಸರಣಿಯ ವಿವರವಾಗಿ ಬರೆಯಲಾಗಿದೆ. ಅಂತಿಮವಾಗಿ ಸರಣಿಯು ಪ್ರವಾದಿವರ್ಯರನ್ನು(ಸ) ಸೇರುವುದು.

ಹುದು. ಆದ್ದರಿಂದ ಅವರ ಜೀವನ ಚರಿತ್ರೆಯ ಸಂಶೋಧನೆ ನಡೆಸಲು ಹೊರಟವರು, ರಾಶರಾಗುವರು.

## ಅಂತಿಮ ಪ್ರವಾದಿಯ(ಸ) ಸಮುದಾಯದ ವೈಶಿಷ್ಟ್ಯಗಳು

ಪ್ರವಾದಿವರ್ಯರ(ಸ) ಜನಾಂಗವು ಇತರ ಪ್ರವಾದಿಗಳ ಜನಾಂಗಗಳಂತೆ ಸಂಪೂರ್ಣ ಾಶಗೊಳ್ಳುವುದಿಲ್ಲ. ಇದು ಅವರಿಗೂ ಅವರ ಸಮುದಾಯಕ್ಕೂ ಸಿಕ್ಕಿರುವ ವಿಶೇಷತೆಯಾಗಿದೆ.

ತಮ್ಮ ಸಮುದಾಯ ಪಥಭ್ರಷ್ಟಗೊಳ್ಳುವುದಿಲ್ಲ. ಸಂಪೂರ್ಣ ಸನ್ಮಾರ್ಗದಿಂದ ್ಯತಿಚಲಿಸದು. ಅಸತ್ಯದೊಂದಿಗೆ ಪೂರ್ಣ ಸಂಬಂಧ ಏರಿಸದು ಎಂದು ಪ್ರವಾದಿವರ್ಯರು(ಸ) ೀಳಿದ್ದಾರೆ. "ನನ್ನ ಸಮುದಾಯದಲ್ಲಿ ಸದಾ ಪ್ರಭಾವಿಯಾದ ಒಂದು ಕೂಟ ಸ್ತಿತ್ವದಲ್ಲಿರುವುದು." (ಬುಖಾರಿ, ಮುಸ್ಲಿಮ್)

"ದೇವನು ಮೂರು ವಸ್ತುಗಳನ್ನು ನಿಮಗೆ ಅಮಾನತನ್ನಾಗಿ ನೀಡಿದ್ದಾನೆ. ನಿಮ್ಮ ಪ್ರವಾದಿ ಮ್ಮ ಮೇಲೆ 'ನಾಶವಾಗಿರಿ' ಎಂದು ಶಾಪ ಹಾಕದಿರುವುದು, ಸತ್ಯವಾದಿಗಳ ಮೇಲೆ ಥ್ಯವಾದಿಗಳು ಪ್ರಭಾವ ಹೊಂದದಿರುವುದು. ನಿಮ್ಮಲ್ಲಿ ಎಲ್ಲರೂ ಪಥಭ್ರಷ್ಟರಾಗದಿರುವುದು."

(ಅಬೂದಾವೂದ್)

ಸತ್ಯವಿಶ್ವಾಸಿಗಳನ್ನು ಎಂದೂ ಧರ್ಮ ವಿರೋಧಿ ಜ್ಞಾನ, ತರ್ಕಗಳಿಗೆ ಸೋಲಿಸಲು ಧ್ಯವಿಲ್ಲ. ಸತ್ಯವಿರೋಧಿಗಳು ಸತ್ಯವಿಶ್ವಾಸಿಗಳ ಮೇಲೆ ಯುದ್ಧಕ್ಕಿಳಿದರೆ ಅಂತಿಮವಾಗಿ ಸತ್ಯ ಶ್ವಾಸಿಗಳು ವಿಜಯಿಗಳಾಗುವರು. ಆದರೆ ಇದಕ್ಕೆ ಕೆಲವು ಶರತ್ತುಗಳಿವೆ.

ಅವರು ಸತ್ಯವಿಶ್ವಾಸದಲ್ಲಿ ಸಂಪೂರ್ಣ ಸ್ಥಿರವಾಗಿರಬೇಕು. ದೇವನಿಂದ ಲಭ್ಯವಾದ ಎಲ್ಲ ಕರಣೆಯನ್ನು ದೇವ ಮಾರ್ಗದಲ್ಲಿ ಉಪಯೋಗಿಸಿ ಅವರು ಒಗ್ಗಟ್ಟಾಗಿ ಹೋರಾಡಬೇಕು ಬುದೇ ವಿಜಯದ ಶರ್ತವಾಗಿದೆ. ಈ ರೀತಿ ಪ್ರವಾದಿವರ್ಯರ(ಸ) ಸಮುದಾಯವು ಪೂರ್ಣವಾಗಿ ಎಂದೂ ಕೂಡಾ ಪಥಭ್ರಷ್ಟಗೊಳ್ಳದೆಂದು ಸ್ಪಷ್ಟವಾಗುತ್ತದೆ. ಅತಿ ಕಠಿಣ ರಿಸ್ಥಿತಿಗಳಲ್ಲಿ ಕೂಡಾ ಪ್ರವಾದಿವರ್ಯರ(ಸ) ಸಮುದಾಯದ ಯಾವುದಾದರೊಂದು ವಿಭಾಗವು ತ್ಯವಿಶ್ವಾಸದಲ್ಲಿ ದೃಢವಾಗಿರುತ್ತದೆ ಎಂದೂ ತಿಳಿದು ಬರುವುದು.

## ಂದು ಭವಿಷ್ಯವಾಣಿ

ಅರೇಬಿಯನ್ ಉಪಖಂಡವು ಪ್ರವಾದಿವರ್ಯರ(ಸ) ಅನುಗ್ರಹದಿಂದಾಗಿ ಮೂರ್ತಿ ೂಜೆ ಮತ್ತು ಬಹುದೇವತ್ವಗಳಿಂದ ಶಾಶ್ವತವಾಗಿ ಪವಿತ್ರವಾಗಿರುವುದು ಪ್ರವಾದಿವರ್ಯರ(ಸ) ಶೇಷತೆಯಾಗಿದೆ. ಪರಸ್ಪರ ಅಸಹಕಾರ, ಗುಂಪುಗಾರಿಕೆಯಂತಹ ಕೆಡುಕುಗಳು ಅಲ್ಲಿ ಹುಟ್ಟ ಹುದಾದರೂ ಅಲ್ಲಿಗೆ ಎಂದೂ ಬಹುದೇವತ್ವ-ಮೂರ್ತಿಪೂಜೆಗಳು ಪ್ರವೇಶಿಸದು. ಇದು ಾಚಿಯ ಶಾಶ್ವತ ನಿರಾಶೆಗೆ ಕಾರಣವಾಗಿದೆ.

# ಸ್ಪಷ್ಟ ಧರ್ಮ, ಸ್ಪಷ್ಟ ಮಾರ್ಗ

ಸತ್ಯ ಧರ್ಮಕ್ಕೆ ಅಂತಿಮ ಮತ್ತು ಪೂರ್ಣವಾದ ರೂಪು ನೀಡಿ ಜಗತ್ತಿನ ಮುಂ ಪ್ರವಾದಿವರ್ಯರ(ಸ) ಮೂಲಕ ಅದನ್ನು ಪ್ರಸ್ತುತಗೊಳಿಸಲಾಗಿದೆ. ಈ ಧರ್ಮದಲ್ಲಿ ನಿಗೂ ರಹಸ್ಯವಿಲ್ಲ. ದೇವನು ಮತ್ತು ಅವನ ದಾಸರ ನಡುವೆಯಿರುವ ಎಲ್ಲ ಅಡ್ಡಿ ಆತಂಕಗಳ ದೂರ ಸರಿಸಲಾಗಿದೆ. ಈ ಧರ್ಮದಲ್ಲಿ ಪುರೋಹಿತವಾದಗಳೆಂಬುದಿಲ್ಲ. ಪುರೋಹಿತರಿಲ್ಲ ದೇವನ ಸಾಮಿಪ್ಯ ಅಸಾಧ್ಯವೆನ್ನುವ ಯಾವುದೇ ಸ್ವಘೋಷಿತ ಮೇಲ್ವರ್ಗವೂ ಈ ಧರ್ಮದಲ್ಲಿ

ಪ್ರವಾದಿವರ್ಯರು(ಸ) ತಂದಿರುವ ಧರ್ಮ ವಿಧಾನವು ಪವಿತ್ರ ಕುರ್‌ಆನ್ ಮ ಪ್ರವಾದಿ ಚರ್ಯೆಯನ್ನು ಬಿಗಿಯಾಗಿ ಹಿಡಿದವರಿಗೆ ಇರುವುದಾಗಿದೆ. ಅವರು ಜ್ಞಾನಿಗ ಮತ್ತು ಕೆಚ್ಚೆದೆಯ ವ್ಯಕ್ತಿಗಳಾಗಿದ್ದು ತಮ್ಮ ಬುದ್ಧಿ, ವಿವೇಕ ಮತ್ತು ತಿಳುವಳಿಕೆಗಳನ್ನು ಬ ಕೊಳ್ಳುವರು. ಅವರು ಮಹತ್ವದ ವಿಚಾರಗಳಲ್ಲಿ ಪರಸ್ಪರ ಸಮಾಲೋಚಿಸುವರು. ಪ್ರವಾ ವರ್ಯರು(ಸ) ತಂದಿರುವ ಧರ್ಮವಿಧಾನವು ಸಂಘಟಿತರಾಗಿರುವುದರ ಮಹತ್ವವನ್ನು ಮ ಸಂಘಟನೆಯ ರಕ್ಷಣೆಯನ್ನು ಅರಿತವರಿಗಾಗಿದೆ.

ಪವಿತ್ರ ಕುರ್‌ಆನ್ ಸತ್ಯದ ಸ್ಪಷ್ಟ ಮಾರ್ಗವನ್ನು ತೋರಿಸಲು, ಸತ್ಯ ಧರ್ಮಕ್ಕೆ ಸ್ ರೂಪ ನೀಡಲು ಅದರ ಸಂರಕ್ಷಣೆಗಾಗಿ ಪ್ರವಾದಿವರ್ಯರಿಗೆ(ಸ) ಅವತೀರ್ಣವಾಗಿ ಆದುದರಿಂದ ಅದು ಇಂದಿನ ವರೆಗೂ ಸುರಕ್ಷಿತವಾಗಿ ಉಳಿದಿದೆ. ಮುಂದೆಯೂ ಅ ಸುರಕ್ಷಿತವಾಗಿರುವುದೆಂಬುದನ್ನು ಅಲ್ಲಾಹನೇ ಈ ರೀತಿ ತಿಳಿಸಿರುತ್ತಾನೆ.

**"ಈ 'ಉಪದೇಶ'ವನ್ನು ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮ ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ." (ಪವಿತ್ರ ಕುರ್‌ಆನ್, 15:9)**

ಮುಂದಿನ ಅಧ್ಯಾಯದಲ್ಲಿ ಪವಿತ್ರ ಕುರ್‌ಆನಿನ ವೈಶಿಷ್ಟ್ಯಗಳನ್ನು ತಿಳಿಯೋಣ.

✧ ✧ ✧

# ಪವಿತ್ರ ಕುರ್‌ಆನಿನ ಕೆಲವು ವೈಶಿಷ್ಟ್ಯಗಳು

ಪವಿತ್ರ ಕುರ್‌ಆನ್ ಒಂದು ಅನುಪಮ ಗ್ರಂಥ. ಅದರ ವಿಶಿಷ್ಟತೆಗಳು ಅಸೀಮ ಮತ್ತು ಣಿಸಲಸಾಧ್ಯವಾಗಿದೆ. ಅದು ದೈವಿಕವಾಣಿ. ಅದು ಸರ್ವ ಗುಣ ಸಂಪನ್ನವಾಗಿದೆ. ಆದುದರಿಂದ ದು ಸತ್ಯ ಸುಂದರವೆಂಬ ವಿಚಾರದಲ್ಲಿ ಸಂದೇಹವಿಲ್ಲ. ಸಕಲ ಒಳಿತು ಗಳನ್ನು ಅದರಲ್ಲಿ ಣಬಹುದು. ಇಲ್ಲಿ ಪವಿತ್ರ ಕುರ್‌ಆನಿನ ಕೆಲವು ವಿಶೇಷತೆಗಳನ್ನು ವಿವರಿಸಲಾಗುವುದು.

## . ದೇವವಾಣಿ

ಈ ಗ್ರಂಥ ಮಾನವ ರಚನೆಯಲ್ಲ. ನಿಸ್ಸಂದೇಹವಾಗಿಯೂ ಇದು ದೇವವಾಣಿ ಯಾಗಿದೆ. ದು ಸ್ವಯಂ ತನ್ನನ್ನು ಪದೇ ಪದೇ ದೇವನ ಕಡೆಯಿಂದ ಅವತೀರ್ಣ ಗೊಂಡಿರುವ ಂಥವೆಂದು ವಿವರಿಸುತ್ತಿದೆ. ಇದು ಯಾರೋ ಮನಸ್ಸಿನಲ್ಲಿ ಯೋಚಿಸಿ ಬರೆದಿರುವುದಲ್ಲ. ದ್ಧಿಕ ತರ್ಕಗಳೊಂದಿಗೆ ತಾನು ದೇವನವಾಣಿಯೆಂದು (Word of God) ಪದೇ ಪದೇ ದುವೇ ನೆನಪಿಸುತ್ತದೆ. ಸಂದೇಹವಿರುವವರು ಅದಕ್ಕೆ ಸಮಾನವಾದ ಗ್ರಂಥವನ್ನು ರಚಿಸಿ ನ್ನಿರಿ. ಅದಕ್ಕಾಗಿ ದೇವನ ಹೊರತು ಯಾರ ಸಹಾಯವನ್ನು ಬೇಕಾದರೂ ಪಡೆಯಿರಿ ಎಂದು ಯಂ ಸವಾಲೆಸೆಯುತ್ತಿದೆ. ಈ ಸವಾಲನ್ನು ಯಾರಿಂದಲೂ ಈ ವರೆಗೂ ಸ್ವೀಕರಿಸಲು ಧ್ಯವಾಗಿಲ್ಲ. ಇದರ ವಿರೋಧಿಗಳಿಗೆ ಈ ಸವಾಲನ್ನು ಇಂದಿಗೂ ಉತ್ತರಿಸಲು ಸಾಧ್ಯವಾಗಿಲ್ಲ.

## . ಸತ್ಯ ಆಂದೋಲನದ ಪೂರ್ಣ ವೃತ್ತಾಂತ

ಇದೊಂದು ಬೃಹತ್ ಗ್ರಂಥವಾಗಿದೆ. ಇದು ವಿಭಿನ್ನ ಪರಿಸ್ಥಿತಿಗಳಲ್ಲಿ ಮತ್ತು ಬೇರೆ ಬೇರೆ ಮಯದಲ್ಲಿ ಅವತೀರ್ಣವಾಗಿದೆ. ಇದು ಒಂದೇ ಬಾರಿಗೆ ಸಂಕಲನವಾಗಿ ಭೂಮಿಗೆ ವತೀರ್ಣವಾಗಿಲ್ಲ. ಆದರೂ ಇದರ ಭಾಷೆ ಮತ್ತು ತೇಜಸ್ಸು ಉನ್ನತ ಮಟ್ಟದ್ದಾಗಿದೆ. ದರಲ್ಲಿರುವ ಜ್ಞಾನವು ಉನ್ನತವಾಗಿದೆ. 23 ವರ್ಷಗಳಲ್ಲಿ ಎಲ್ಲಿಯೂ ಯಾವ ವ್ಯತ್ಯಾಸವೂ ಲ್ಲದೆ ಅವತೀರ್ಣವಾಗಿ ಸಂಪೂರ್ಣಗೊಂಡಿತ್ತು. ಪ್ರವಾದಿವರ್ಯರು(ಸ) ಸಾಗಿರುವ ಪರಿಸ್ಥಿತಿ, ಕಷ್ಟ, ಕಾಠಿಣ್ಯಗಳೆಲ್ಲವೂ ಆದರಲ್ಲಿವೆ. ಪವಿತ್ರ ಕುರ್‌ಆನನ್ನು ಅಧ್ಯಯನ ಮಾಡುತ್ತಾ ೋದಂತೆ ಪ್ರವಾದಿಯವರ(ಸ) ನೇತೃತ್ವದಲ್ಲಿ ಆರಂಭವಾದ ಇಸ್ಲಾಮೀ ಆಂದೋಲನ ನಮಗೆ

ಪರಿಚಯವಾಗುವುದು. ಅಂದು ಎಂತಹ ಪರಿಸ್ಥಿತಿಗಳನ್ನು ಇಸ್ಲಾಮೀ ಆಂದೋಲನ ಎದುರಿಸಿ ಯಶಸ್ಸು ಪಡೆಯಿತು. ಭೂಮುಖದಲ್ಲಿ ಏಕದೇವನ ಆಳ್ವಿಕೆ ಹೇಗೆ ಜಾರಿಗೆ ಬಂ ಮಿಥ್ಯವಾದ ಹೇಗೆ ಮುಖಭಂಗಕ್ಕೆ ಒಳಗಾಯಿತು. ದೇವವಾಣಿ ಸತ್ಯವೆಂದು ಹ ಸಾಬೀತಾಯಿತು. ಮಿಥ್ಯವಳಿದು ಸತ್ಯ ಉದಿಸಿತು ಎಂಬುದನ್ನು ಅರಿಯುತ್ತೇವೆ. ಪ ಕುರ್‌ಆನ್‌ನಲ್ಲಿರುವ ಚಿತ್ರಣಗಳಿಗೆ ಜಗತ್ತು ಸಾಕ್ಷಿಯಾಗಿದೆ.

ಪವಿತ್ರ ಕುರ್‌ಆನ್ ಸತ್ಯವಿಶ್ವಾಸಿಗಳ ಪಯಣದ ಸಂಪೂರ್ಣ ವೃತ್ತಾಂತವಾಗಿದೆ. ಆ ಪಯಣವು ಪ್ರವಾದಿವರ್ಯರ(ಸ) ನೇತೃತ್ವದಲ್ಲಿ ಗುರಿ ತಲುಪಿತು. ಅದು ದೈವಿಕ ಸಾಹಿತ್ಯವಾಗಿ ಅದಕ್ಕೆ ಸಾಟಿಯಾದ ಇನ್ನೊಂದು ಗ್ರಂಥವಿಲ್ಲ. ಇದಕ್ಕೆ ಸಮಾನವಾದ ಸಾಹಿತ್ಯ ರಚಿಸುವು ಕನಸಿನ ವಿಚಾರವಾಗಿದೆ. ಅಷ್ಟೇ ಯಾಕೆ, ಮಾನವರು ಪವಿತ್ರ ಕುರ್‌ಆನಿನ ಸಾಹಿತ್ ಸರಳತನವನ್ನು ಸಂಪೂರ್ಣವಾಗಿ ವರ್ಣಿಸಲು ಸಮರ್ಥವಾಗಿಲ್ಲ, ಅದರ ಆಳ ವಿಸ್ತಾರಗಳ ಪೂರ್ಣವಾಗಿ ಅಂದಾಜಿಸಲು ಅವರಿಂದ ಸಾಧ್ಯವೂ ಅಲ್ಲ.

## 3. ಸುರಕ್ಷಿತ ಗ್ರಂಥ

ಈ ಗ್ರಂಥ ತಾನು ಅವತೀರ್ಣವಾದಾಗ ಹೇಗಿತ್ತೋ ಅದೇ ರೀತಿ ಇಂದೂ ಇ ದೇವನೇ ಅದನ್ನು ಸಂರಕ್ಷಿಸುವ ಹೊಣೆಯನ್ನು ವಹಿಸಿಕೊಂಡಿರುವನು.[1] ಆದುದರಿ ಅದರಿಂದ ಯಾವ ಅಂಶವೂ ಸೋರಿ ಹೋಗಲಾರದು. ಪ್ರಾಮಾಣಿಕ ರೂಪದಲ್ಲಿ (ಸ್ವ ಸ್ಥಿತಿಯಲ್ಲಿ) ಈಗಲೂ ಅದು ದೊರೆಯುತ್ತಿದೆ. ಅದರ ನೈಜತೆಯ ಮೇಲೆ ಸವಾಲೆಸೆಯು ಸಾಮರ್ಥ್ಯ ಯಾರಲ್ಲೂ ಇಲ್ಲ. ಈ ಗ್ರಂಥದ ವಿರೋಧಿಯಾದ ವಿಲಿಯಂ ಮೂರ್, ನ ಕೈಯಲ್ಲಿರುವ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದರಿಗೆ(ಸ) ಅವತೀರ್ಣವಾ ಗ್ರಂಥವೂ ಒಂದೇ ಆಗಿದೆ ಎಂದು ಒಪ್ಪಿಕೊಳ್ಳುವುದು ಅನಿವಾರ್ಯವಾಗಿತ್ತು.

## 4. ಅತ್ಯಧಿಕ ಓದಲ್ಪಡುವ ಗ್ರಂಥ

ಜಗತ್ತಿನಲ್ಲಿ ಪವಿತ್ರ ಕುರ್‌ಆನ್‌ನಷ್ಟು ಅಧಿಕವಾಗಿ ಓದಲ್ಪಡುವ ಬೇರೆ ಗ್ರಂಥವಿ ಪದೇ ಪದೇ ಓದುವುದರಿಂದ ಈ ಗ್ರಂಥದ ಅಭಿರುಚಿಯು ಕಡಿಮೆಯಾಗುವುದಿ ಬದಲಾಗಿ ಹೆಚ್ಚುತ್ತಾ ಹೋಗುವುದು. ನಾವು ಅದಕ್ಕೆ ನಿಕಟವಾದಷ್ಟೇ ಅದರ ಮೇಲಿನ ಆ ಹೆಚ್ಚುವುದು. ಅದರಲ್ಲಿ ನಮ್ಮ ಆತ್ಮ ಮತ್ತು ಮೆದುಳನ್ನು ಮುದಗೊಳಿಸುವಂತಹ ಪ್ರಭಾವವಿ ಅದರ ಸ್ವರ ಮಾಧುರ್ಯದಲ್ಲಿ ನಮ್ಮ ಅಭಿರುಚಿ, ಪ್ರಜ್ಞೆಗೆ ತೃಪ್ತಿ ನೀಡುವ ಅಮೂ ಸಾಧನಗಳಿವೆ. ಅದರಲ್ಲಿ ಚಿತ್ರಿತವಾದ ಚಿತ್ರಣಗಳಲ್ಲಿರುವ ಸೂಕ್ಷ್ಮ ಮತ್ತು ಅದೃಶ್ಯ ಭಾವಗ ಮನಸೆಳೆಯುತ್ತವೆ ಮತ್ತು ಸತ್ಯವನ್ನು ಚಿತ್ರಿಸುವ ಅಪಾರ ಸಾಮರ್ಥ್ಯ ಅದಕ್ಕಿದೆ. ಅದರೊ

1. ಪವಿತ್ರ ಕುರ್‌ಆನ್, 15:9

ಸೆತಡೆಯಿಲ್ಲದೆ ಹರಿಯುವಂತಹ ನದಿಯಿದೆ. ಇಡೀ ಜಗತ್ತನ್ನೇ ಅದರ ನಾದದಲ್ಲಿ ಲಾಡಿಸುವ ಸಾಮರ್ಥ್ಯವಿರುವ ಧ್ವನಿಯಿದೆ.

## . ಜೀವಂತ ಭಾಷೆ

ಪವಿತ್ರ ಕುರ್‌ಆನಿನಲ್ಲಿ ಉಧೃತವಾದ ಭಾಷೆ ಜೀವಂತಿಕೆಯ ಉನ್ನತವಾದ ಭಾಷೆ ಾಗಿದೆ. ಆ ಭಾಷೆ ಅರೇಬಿಯಾದ ರಾಷ್ಟ್ರ ಭಾಷೆಯಾಗಿದೆ. ಸುಸ್ಪಷ್ಟ ಅರಬಿ ಭಾಷೆಯಲ್ಲಿ ನು ಅವತೀರ್ಣಗೊಂಡಿದೆ. ಅದರ ಆಳವನ್ನು ಸ್ಪರ್ಶಿಸಬಹುದು. ಪವಿತ್ರ ಕುರ್‌ಆನನ್ನು ರ್ನ ಚಿಂತಕ, ದಾರ್ಶನಿಕ ಮತ್ತು ಮೇಧಾವಿಯೂ ತನ್ನ ಮಟ್ಟಕ್ಕೆ ತಕ್ಕಂತೆ ಓದುತ್ತಾನೆ. ನನಿಗೆ ಅವನ ಮಟ್ಟದಲ್ಲಿ ಅದು ಉನ್ನತವಾಗಿಯೇ ಕಾಣಿಸುತ್ತದೆ. ಪವಿತ್ರ ಕುರ್‌ಆನನ್ನು ಟ್ಟರೆ ಸಾಮಾನ್ಯರು ಮತ್ತು ವಿಶಿಷ್ಟ ಶಿಕ್ಷಿತ ವರ್ಗ ಸಮಾನವಾಗಿ ಓದಿ ಲಾಭ ಪಡೆಯುವ ರೆ ಗ್ರಂಥ ಜಗತ್ತಿನಲ್ಲಿಲ್ಲ. ಅದು ಪವಿತ್ರ ಕುರ್‌ಆನಿನ ವೈಶಿಷ್ಟ್ಯವಾಗಿದೆ. ಅದು ಎಲ್ಲರಿಗಾಗಿ ವುದು. ಅದರಿಂದ ಎಲ್ಲರೂ ಪ್ರಯೋಜನ ಪಡೆಯಬಹುದು.

ಪವಿತ್ರ ಕುರ್‌ಆನಿನಲ್ಲಿ ಯಾರಿಗೂ ದುರ್ಲಭ ಅನಿಸುವಂತಹ ವರ್ಣನಾ ಶೈಲಿಯಿಲ್ಲ, ತಹ ವಾಕ್ಯ ರಚನೆಯೂ ಇಲ್ಲ. ಅದರೆಡೆಗೆ ದೃಷ್ಟಿ ಹಾಯಿಸುವವರನ್ನು ಅದು ಮರ್ಥರನ್ನಾಗಿಸುತ್ತದೆ. ಅಂತಹ ಯೋಗ್ಯತೆ ಪವಿತ್ರ ಕುರ್‌ಆನ್‌ನದ್ದಾಗಿದೆ. ಅದರ ಈ ಮರ್ಥ್ಯವು ಸಾಮಾನ್ಯರಿಗೆ ಅರಿವಾಗದು. ಆದರೆ ಅವರು ಓದುತ್ತಾ ಸಾಗಿದಂತೆ ಅವರು ವಿಲ್ಲದೆಯೇ ಅಪಾರ ಜ್ಞಾನ ಸಂಪಾದಿಸಿರುತ್ತಾರೆ. ಪವಿತ್ರ ಕುರ್‌ಆನ್ ಓದುತ್ತಾ ಓದುತ್ತಾ ಷ್ಟು ಮುಂದುವರಿದೆವೆಂದು ಕೂಡಾ ಅವರು ಯೋಚಿಸಲಾರರು. ಅಂದರೆ ಓದುಗರ ಟ್ಟಕ್ಕೆ ಸರಿಯಾಗಿ ಪವಿತ್ರ ಕುರ್‌ಆನ್ ಅನುಭವವಾಗುತ್ತದೆ. ಅವರ ಪಾಲಿಗೆ ಅದೇ ತ್ತಮವಾಗಿದೆ. ಸಾಮಾನ್ಯವಾಗಿ ತತ್ವಜ್ಞಾನಿಗಳು ಮತ್ತು ಸಾಮಾನ್ಯರ ಮಟ್ಟ ಬೇರೆ ಬೇರೆ ಾಗಿರುತ್ತದೆ. ತತ್ವಜ್ಞಾನಿಗಳ ಜ್ಞಾನ(Wisdom) ಎಂದೂ ಉನ್ನತವಾಗಿಯೇ ಇರುವುದು.

ಇರಲಿ, ಪವಿತ್ರ ಕುರ್‌ಆನ್ ಅವತೀರ್ಣವಾಗಿ ಬಹು ದೀರ್ಘಕಾಲ ಸಂದಿದೆಯಲ್ಲವೇ? ದಿಗೂ ಅದರ ಸಾಹಿತ್ಯ ಬೇರೆ ಗ್ರಂಥಗಳಿಗಿಂತ ಉನ್ನತವಾಗಿದೆ. ಉನ್ನತ ಆದರ್ಶವಾಗಿದೆ. ರೆ ಯಾವ ಕೃತಿಯೂ ಎಂದೂ ಅದಕ್ಕೆ ಸರಿಸಾಟಿಯಾಗಿಲ್ಲ. ಸಾಹಿತ್ಯಿಕ ಮೌಲ್ಯಗಳ ದೃಷ್ಟಿ ಲ್ಲಿ ಬೇರೆ ಗ್ರಂಥಗಳಿಗೆ ಅದರ ಸಮೀಪ ತಲುಪುವುದಕ್ಕೂ ಸಾಧ್ಯವಾಗಿಲ್ಲ. ಇಷ್ಟೇ ಅಲ್ಲ, ತ್ರ ಕುರ್‌ಆನ್ ಅವತೀರ್ಣಗೊಂಡು ಇಷ್ಟು ಸುದೀರ್ಘ ಸಮಯದಲ್ಲಿ ಅದರ ಭಾಷೆಯಲ್ಲಿ ಚಿತ್ತೂ ವ್ಯತ್ಯಾಸಗಳಾಗಿಲ್ಲ. ಈ ದೀರ್ಘ ಅವಧಿಯಲ್ಲಿ ಯಾವುದೇ ಭಾಷೆ ಎಲ್ಲಿಂದ ಎಲ್ಲಿಗೆ ೀಗಿ ಮುಟ್ಟುತ್ತವೆ. ಯಾವುದೇ ಭಾಷೆ ಅಥವಾ ಗ್ರಂಥಗಳ ಸಾಹಿತ್ಯಿಕ ಗುಣ, ಹೇಳಿಕೆ-ಕರಣ, ಅಲಂಕಾರ ಪ್ರಯೋಗಗಳು ಇಷ್ಟು ಸುದೀರ್ಘ ಕಾಲದಲ್ಲಿ ಮೂಲ ರೀತಿಯಲ್ಲಿ

ಉಳಿಯಲು ಸಾಧ್ಯವಿಲ್ಲ. ಆದರೆ ಪವಿತ್ರ ಕುರ್‌ಆನಿನಲ್ಲಿ ಒಂದಕ್ಷರವೂ ವ್ಯತ್ಯಾಸವಾಗಿಲ್ಲ.

ಅದರಲ್ಲಿ ಒಂದೇ ವಿಷಯ ಪದೇ ಪದೇ ಉಲ್ಲೇಖವಾಗುತ್ತದೆ. ಆದರೆ ಪ್ರತಿಯೊಂದ ಬಾರಿಯೂ ಅದರ ವಿವರಣಾ ಶೈಲಿ ಭಿನ್ನವಾಗಿರುತ್ತದೆ. ಆದುದರಿಂದ ಪುನರಾವರ್ತನೆಯ ನೀರಸತೆಯ ಅನುಭವ ನಮಗೆ ಆಗಲಾರದು. ಬದಲಾಗಿ ಅದು ಉದ್ಧರಿಸುವ ಪ್ರತಿಯೊಂದ ವಿಷಯಗಳಲ್ಲಿ ಹೊಸತನದ ಸ್ಪರ್ಶವು ಕಾಣಿಸುತ್ತದೆ ಮತ್ತು ವಿಷಯದಲ್ಲಿ ಯಾವುದಾದರೊಂದ ಹೊಸ ಆಯಾಮ ನಮ್ಮ ಮುಂದೆ ಪ್ರತ್ಯಕ್ಷಗೊಳ್ಳುವುದು. ಅದರ ತಾಜಾತನ ನಿರಂತರವಾ ಉಳಿಯುತ್ತದೆ. ಓದುಗ ನೀರಸತೆಯನ್ನು ಅನುಭವಿಸಲಾರ.

## 6. ವಿರೋಧಾಭಾಸ ರಹಿತ

ಈ ಗ್ರಂಥ ವೈಚಾರಿಕ, ಜ್ಞಾನಕ್ಕೆ ಸಂಬಂಧಿಸಿದ ಹಾಗೂ ಎಲ್ಲ ರೀತಿಯ ವಿರೋಧಾಭಾ ಗಳಿಂದ ಸಂಪೂರ್ಣ ಮುಕ್ತವಾಗಿದೆ. ಅದರಲ್ಲಿ ತೇಪೆ ಹಚ್ಚುವ ಮಾತುಗಳನ್ನು ನಾವು ಕಾ ಲಾರೆವು. ಅಪ್ರಾಸಂಗಿಕ ಮಾತುಗಳು ಅದರಲ್ಲಿ ಇಲ್ಲವೇ ಇಲ್ಲ. ಯಾವುದನ್ನೂ ಅದ ಮರೆಮಾಚುವುದಿಲ್ಲ. ಯಾವುದೇ ಕುಂದುಕೊರತೆಗಳಿಲ್ಲ. ಈ ಗ್ರಂಥದ ಶಬ್ದ ಅರ್ಥಗಳ ಯಾವುದೇ ಲೋಪಗಳಿಲ್ಲ. ಇದರ ಸಾಹಿತ್ಯಿಕ ಮಟ್ಟ ಎಲ್ಲಿಯೂ ಕುಂದಿಲ್ಲ.

## 7. ತಥ್ಯಾನುಕೂಲ

ಪವಿತ್ರ ಕುರ್‌ಆನಿನ ವಿಷಯಗಳು ಸಂಪೂರ್ಣ ಜಗತ್ತನ್ನು ಆದಿಯಿಂದ ಅಂತ್ಯ ವರೆಗೂ ತನ್ನ ಪರಿಧಿಯಿಲ್ಲಿರಿಸಿದೆ. ಅದು ಸತ್ಯವೆಂದಿರುವ ಎಲ್ಲ ವಿಷಯಗಳು ಸತ್ಯವಾಗಿದೆ ಜಗತ್ತು ಮತ್ತು ಮಾನವರ ಕುರಿತು ಅದು ಪ್ರಸ್ತಾಪಿಸಿರುವ ಎಲ್ಲ ವಿಚಾರಗಳ ಎಲ್ಲ ಪಾರ್ಶ್ವಗ ಮೇಲೆ ಅದು ಬೆಳಕು ಬೀರಿದೆ. ಯಾವುದೇ ಹಂತದಲ್ಲಿ ಯಾವುದೇ ಕೊರತೆಯನ್ನು ಅದರ ನಾವು ಕಾಣಲಾರೆವು.

ದಾರ್ಶನಿಕತೆ, ಸಾಮಾಜಿಕ ಸಮಸ್ಯೆಗಳು, ಸಕಲ ವಿಚಾರಗಳಿಗೂ ಅದರಲ್ಲಿ ಉತ್ತರವಿದ ಎಲ್ಲಿಯೂ ಯಾವುದೇ ದೋಷವಿಲ್ಲ. ಅದು ತಪ್ಪುಗಳಿಲ್ಲದ ಸಂಗ್ರಾಹ್ಯವಾಗಿದೆ. ಪವಿ ಕುರ್‌ಆನ್‌ನಿಂದ ವ್ಯಾಪಕ ದರ್ಶನವೊಂದು ಎದ್ದು ನಿಲ್ಲುವುದು. ನಮ್ಮ ಜೀವನದ ದೈನಂದಿ ವ್ಯವಹಾರಕ್ಕೆ ಅದರಲ್ಲಿ ಮಾರ್ಗದರ್ಶನವಿದೆ. ಮಾನವರಿಗೆ ಹೆಚ್ಚು ಬುದ್ಧಿ ಸಂಗತವ ನ್ಯಾಯಪೂರ್ಣವೂ ಲಾಭದಾಯಕವೆಂದೂ ಅದು ಸಾಬೀತಾಗಿದೆ.

## 8. ಅನುಪಮ ಶೈಲಿ

ಪವಿತ್ರ ಕುರ್‌ಆನಿನ ಭಾಷೆ ಮತ್ತು ಪ್ರವಾದಿವರ್ಯರ(ಸ) ಭಾಷೆಗಳೆರಡೂ ಅರ ಯಾದರೂ ಅವೆರಡರ ಭಾಷಾ ಶೈಲಿಗಳು ಸಂಪೂರ್ಣ ಭಿನ್ನವಾಗಿದೆ. ಪ್ರವಾದಿವರ್ಯರ(ಸ

ಾಷೆ ಉಚ್ಚ ಮಟ್ಟದಲ್ಲಿದೆ, ಸರಳವಾಗಿದೆ ಮತ್ತು ಅರ್ಥಗರ್ಭಿತವಾಗಿದೆ. ಆದರೆ ಮನುಷ್ಯನು ವಿತ್ರ ಕುರ್‌ಆನಿನ ಭಾಷೆ ಮತ್ತು ಸಾಹಿತ್ಯದ ಜ್ಞಾನಾತ್ಮಕ ಔನ್ನತ್ಯದೆಡೆಗೆ ಸಾಗಲಾರನು.

ನೋಡಿ, ಪ್ರವಾದಿವರ್ಯರು(ಸ) ಪ್ರವಚನ ನೀಡುವಾಗ ಯಾವುದಾದರೂ ಪವಿತ್ರ ರ್‌ಆನಿನ ವಚನಗಳನ್ನು ಉಲ್ಲೇಖಿಸಿದರೆ ಅವರ ಮಾತಿಗಿಂತ ಅದು ಭಿನ್ನವಾಗಿ ಕಾಣಿಸುತ್ತಿತ್ತು. ವರಾಡುವ ಮಾತಿಗೂ ಪವಿತ್ರ ಕುರ್‌ಆನಿನ ವಚನಕ್ಕೂ ಸ್ಪಷ್ಟ ವ್ಯತ್ಯಾಸವು ಗೋಚರಿಸುತ್ತಿತ್ತು. ದುದರಿಂದ ಪವಿತ್ರ ಕುರ್‌ಆನ್ ಮುಹಮ್ಮದರ(ಸ) ಭಾಷೆಯೆಂದು (ಮಾತುಗಳೆಂದೂ) ಾರೂ ಹೇಳುವಂತಿಲ್ಲ. ಆದರೂ ಅವೆರಡೂ ಅರಬಿ ಭಾಷೆಯಾಗಿದೆ. ಒಂದು ವೇಳೆ ಪವಿತ್ರ ರ್‌ಆನನ್ನು ಮುಹಮ್ಮದರ(ಸ) ಭಾಷೆಯೆಂದು ಆರೋಪಿಸಿದರೆ ಮುಹಮ್ಮದರಿಗೆ(ಸ) ಎರಡು ಾಷಾ ಶೈಲಿಗಳಿತ್ತು ಎಂದಂತಾಗುವುದು.

ಒಬ್ಬ ವ್ಯಕ್ತಿ ಸಂಪೂರ್ಣ 23 ವರ್ಷಗಳ ಕಾಲ ನಿರಂತರ ಎರಡು ವ್ಯತ್ಯಸ್ತ ಶೈಲಿಯಿಂದ ಾತಾಡುವುದೆಂದರೇನು? ಇದು ಸಾಧ್ಯವೇ ಇಲ್ಲ. ಅವರ ಮಾತು (ವಚನಗಳು) ಮತ್ತು ವಿತ್ರ ಕುರ್‌ಆನಿನ ಸೂಕ್ತಗಳಲ್ಲಿ ಭೂಮಿ–ಆಕಾಶದಷ್ಟು ಅಂತರವಿರುತ್ತಿತ್ತು. ಈ ರೀತಿ ಒಬ್ಬ ಕ್ತಿ ಎರಡೆರಡು ರೀತಿಯಲ್ಲಿ ಹೆಚ್ಚು ಕಾಲ ಮಾತಾಡಲಾರ. ಹಾಗೇನಾದರೂ ಉಪಾಯ ಾಡಿರುವುದಾದರೆ ಬಹುಕಾಲ ಅದು ಗುಟ್ಟಾಗಿ ಉಳಿಯಲಾರದು. ಯಾಕೆಂದರೆ ಸುಳ್ಳಾಡು ವನು ತನ್ನ ಸುಳ್ಳನ್ನು ಹೆಚ್ಚು ಸಮಯ ಸ್ಮರಣೆಯಲ್ಲಿ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಸುಳ್ಳಿಗೆ ದೀರ್ಘ ನೆನಪಿನ ಶಕ್ತಿಯೇ ಇಲ್ಲ. ಎಲ್ಲಿಯಾದರೂ ಅವನು ಸಿಕ್ಕಿ ಬೀಳುತ್ತಾನೆ ಮತ್ತು ವನಿಗೆ ಮುಖಭಂಗವಾಗುವುದು.

## . ಜ್ಞಾನ ಭಂಡಾರ

ಪವಿತ್ರ ಕುರ್‌ಆನ್ ವಿಶಾಲವಾದ ಜ್ಞಾನ ಭಂಡಾರವಾಗಿದೆ. ಇತಿಹಾಸ, ದರ್ಶನ ಶಾಸ್ತ್ರ, ನೋ ವಿಜ್ಞಾನ, ಜೀವ ವಿಜ್ಞಾನ, ಖಗೋಲ ಶಾಸ್ತ್ರ, ಇವೇ ಮುಂತಾದ ಎಲ್ಲ ಾರಗಳೊಂದಿಗೆ ಅದಕ್ಕೆ ಸಂಬಂಧವಿದೆ. ಪ್ರವಾದಿವರ್ಯರ(ಸ) ಕಾಲದಲ್ಲಿ ಪವಿತ್ರ ಕುರ್‌ಆನಿನ ರತು ಅಷ್ಟು ಬೃಹತ್ತಾದ ಬೇರೆ ಜ್ಞಾನ ಭಂಡಾರವಾಗಲಿ, ಜ್ಞಾನದ ಖಜಾನೆ ಯಾಗಲಿ ರಲಿಲ್ಲ. ಇಂದಿನ ವರ್ತಮಾನ ಕಾಲದಲ್ಲಿಯೂ ಅದನ್ನು ಮೀರಿದ ಬೇರೆ ಜ್ಞಾನ ಭಂಡಾರ–ಜಾನೆಗಳಾಗಲಿ, ಅಂತಹ ಜ್ಞಾನಿ ವ್ಯಕ್ತಿಯಾಗಲಿ ಕಂಡು ಬಂದಿಲ್ಲ.

ಪವಿತ್ರ ಕುರ್‌ಆನ್ ಮುಹೈಮಿನ್[2] ಎಂದು ತನ್ನನ್ನು ಸ್ವಯಂ ಸಂಬೋಧಿಸಿದೆ. ುಹೈಮಿನ್ ಎಂದರೆ ರಕ್ಷಕ, ಸಾಕ್ಷಿ, ಸಮರ್ಥಕ, ಅಮಾನತುದಾರ ಎಂದರ್ಥವಾಗಿದೆ. ವಿತ್ರ ಕುರ್‌ಆನ್ ಮುಹೈಮಿನ್ ಯಾಕೆಂದರೆ ಪೂರ್ವ ದೈವಿಕ ಗ್ರಂಥದಲ್ಲಿದ್ದ ಶಿಕ್ಷಣಗಳು ವರಲ್ಲಿ ಸುರಕ್ಷಿತವಾಗಿದೆ ಮತ್ತು ಇಂದು ಲಭಿಸುವ ಮತ್ತು ಲಭಿಸದಿರುವ ಪೂರ್ವ

ಪವಿತ್ರ ಕುರ್‌ಆನ್, 5:48

ಗ್ರಂಥಗಳನ್ನು ಅದು ಪುಷ್ಟೀಕರಿಸುವುದು ಎಂದು ಅರ್ಥವಾಗಿರುವುದು. ಪವಿತ್ರ ಕುರ್‌ಆನ ಸಾಕ್ಷಿಯಾಗಿದೆ. ಹಿಂದಿನ ಗ್ರಂಥಗಳ ಮೇಲೆ ಮಾನವನು ನಡೆಸಿರುವ ಹಸ್ತಕ್ಷೇಪಗಳನ್ನು ಮತ ಮಿಶ್ರಣಗಳನ್ನು ಪ್ರತ್ಯೇಕಿಸಿ ನೈಜ ದೈವಿಕ ಶಿಕ್ಷಣಗಳಾವುವು ಎಂದು ಅದು ತಿಳಿಸುತ್ತಿದೆ. ಪವಿ ಕುರ್‌ಆನ್ ರಕ್ಷಕವಾಗಿದೆ. ಪೂರ್ವ ಗ್ರಂಥಗಳ ನೈಜ ಶಿಕ್ಷಣಗಳನ್ನು ಅದು ತನ್ನೊಳ ಇರಿಸಿಕೊಳ್ಳುವ ಆ ಶಿಕ್ಷಣಗಳಿಗೆ ರಕ್ಷಣೆ ನೀಡಿದೆ. ಆದುದರಿಂದ ಪೂರ್ವ ದೈವಿಕ ಶಿಕ್ಷಣಗಳಿ ವಿನಾಶ ಸಂಭವಿಸದು.

## 10. ಸಕಲ ಮಾನವರಿಗಾಗಿ

ಪವಿತ್ರ ಕುರ್‌ಆನ್ ಸಕಲ ಮಾನವರನ್ನು ಸಂಬೋಧಿಸಿದೆ. ಯಾಕೆಂದರೆ ಅದು ಸಕ ಮಾನವರ ಮಾರ್ಗದರ್ಶನಕ್ಕಾಗಿ ಅವತೀರ್ಣವಾಗಿದೆ. ನಿಜವಾದ ವಿಶ್ವಾಸ ಯಾವುದು ನಿಜವಾದ ಸತ್ಯ ಯಾವುದೆಂದು ಮಾನವರಿಗೆ ಅದು ತಿಳಿಸುವುದು. ಪವಿತ್ರ ಕುರ್‌ಆನಿನ ಸಕಲ ದೇಶಗಳ ಸಕಲ ಜನಾಂಗಗಳಿಗೆ ಸಮಾನವಾಗಿ ಅನ್ವಯವಾಗುವ ನೈತಿಕ ಸಿದ್ಧಾಂತವಿ ಮತ್ತು ಸಕಲರಿಗೆ ಕಲ್ಯಾಣಕಾರಿಯಾದ ಕಾನೂನು-ಸಿದ್ಧಾಂತಗಳನ್ನು ಅದರಿಂದ ನಾ ತಿಳಿಯಬಹುದು. ಅದರ ಎಲ್ಲ ಶಿಕ್ಷಣಗಳು ಸಾರ್ವಕಾಲಿಕ ಮತ್ತು ಸಾರ್ವತ್ರಿಕ (Universal ವಾಗಿದೆ. ಈ ಬಗ್ಗೆ ಪವಿತ್ರ ಕುರ್‌ಆನ್ ಹೀಗೆ ಉದ್ಧರಿಸುತ್ತಿದೆ.

**"ವಾಸ್ತವದಲ್ಲಿ ಇದು ಸಕಲ ವಿಶ್ವದವರಿಗೆ ಒಂದು ಉಪದೇಶವಾಗಿದೆ."**

**(ಪವಿತ್ರ ಕುರ್‌ಆನ್, 68:52, 81:27**

## 11. ಸಂಗ್ರಾಹ್ಯ ಗ್ರಂಥ

ಪವಿತ್ರ ಕುರ್‌ಆನಿನ ವಿಶೇಷತೆಯೆಂದರೆ ಪೂರ್ವ ದೈವಿಕ ಗ್ರಂಥಗಳ ಜ್ಞಾನ ತತ್ವಾದರ್ಶಗಳು ಮತ್ತು ಸಕಲ ವಾಸ್ತವಿಕತೆಗಳನ್ನು ಇದು ಹೊಂದಿದೆ.

ಪೂರ್ವಿಕ ಗ್ರಂಥದಲ್ಲಿರುವ ಸತ್ಯ, ಒಳಿತಿನ ಆದೇಶಗಳು-ವಚನಗಳು ಪವಿತ್ರ ಕುರ್‌ಆನ ನಲ್ಲಿ ಲಭಿಸದು ಎಂದು ಯಾರೂ ಹೇಳಲಾರರು. ಯಾಕೆಂದರೆ ಪವಿತ್ರ ಕುರ್‌ಆನ್‌ನಲ್ಲಿಲ್ಲ ಸತ್ಯ ಒಳಿತುಗಳಿವು ಎಂದು ಇತರ ಪೂರ್ವ ಗ್ರಂಥಗಳಿಂದ ಏನನ್ನೂ ಎತ್ತಿ ತೋರಿಸಲು ಸಾಧ ವಾಗಿಲ್ಲ. ಆದುದರಿಂದ ಪವಿತ್ರ ಕುರ್‌ಆನಿನ ಉಪಸ್ಥಿತಿಯ ಮುಂದೆ ಇತರೆಲ್ಲ ಗ್ರಂಥಗಳು ಕಾಲಹರಣಗೊಂಡಿವೆ. ಮತ್ತು ಅದರ ಆವಶ್ಯಕತೆಯೇ ಉದ್ಭವಿಸುವುದಿಲ್ಲ. ಈ ರೀ ಮಾನವರಿಗೆ ಪವಿತ್ರ ಕುರ್‌ಆನ್ ಏಕೈಕ ಅವಲಂಬನೆಯಾಗಿದೆ. ಪವಿತ್ರ ಕುರ್‌ಆನ್ ಇರುವಾ ನಮ್ಮ ಪೂರ್ವಿಕ ದೈವಿಕ ಗ್ರಂಥವಿಲ್ಲವಲ್ಲ ಎಂದು ನಿರಾಶೆಗೊಳ್ಳುವ ಆವಶ್ಯಕತೆ ಯಾರಿಗು ಉದ್ಭವಿಸುವುದಿಲ್ಲ. ಯಾಕೆಂದರೆ ಹಿಂದಿನ ದೈವಿಕ ಗ್ರಂಥಗಳ ಶಿಕ್ಷಣಗಳು ಅದರಲ್ಲಿ ಸುರಕ್ಷಿ ವಾಗಿದೆ. ಆದ್ದರಿಂದ ಪವಿತ್ರ ಕುರ್‌ಆನ್ ಮುಹೈಮಿನ್ (ರಕ್ಷಕ) ಆಗಿದೆ.

## 2. ದೇವ ಶಿಕ್ಷಣದ ನವೀನ ಆವೃತ್ತಿ

ಪವಿತ್ರ ಕುರ್‌ಆನ್ ದೇವಾದೇಶಗಳ ಹೊಸ (Latest Edition) ಆವೃತ್ತಿಯಾಗಿದೆ. ದರಲ್ಲಿ ಪೂರ್ವ ಗ್ರಂಥಗಳ ತಾತ್ಕಾಲಿಕ ಮತ್ತು ಅಲ್ಪಕಾಲೀನ (Temporary) ಶಿಕ್ಷಣ ಗಳಿಲ್ಲ. ದರಂತೆ ವಿಶೇಷ ಸಂದರ್ಭದಲ್ಲಿ ಅಂದು ನೀಡಲಾದ ಶಿಕ್ಷಣಗಳಿಲ್ಲ. ಆದರೆ ಪೂರ್ವ ದೈವಿಕ ,ಂಥಗಳ ಧಾರಾಳ ಶಿಕ್ಷಣಗಳು ಅದರಲ್ಲಿವೆ. ಅದರ ಆದೇಶಗಳು ಮತ್ತು ಶಿಕ್ಷಣಗಳು ಕಲರಿಗೆ ಮಾರ್ಗದರ್ಶಕವಾಗಿದೆ. ಆದ್ದರಿಂದ ಅದರಲ್ಲಿರುವುದು ಸಕಲರಿಗೂ ನಿವಾರ್ಯವಾಗುತ್ತದೆ. ಅಂದರೆ ಎಲ್ಲ ಕಾಲದಲ್ಲಿ ಜಗತ್ತಿಗೆ ಉಪಯುಕ್ತ ವಾಗುವ ಶಿಕ್ಷಣ ದೇಶಗಳು ಅದರಲ್ಲಿ ದೊರೆಯುವುದು. ಮಾತ್ರವಲ್ಲ ಹೊಸ ಆದೇಶಗಳು ಕೂಡಾ ಇವೆ. ತ್ಯಧರ್ಮದ ಆತ್ಮಕ್ಕೆ ಸಹಕಾರಿಯಾದ ಆದೇಶಗಳಿವು. ಆದುದರಿಂದ ಅವುಗಳನ್ನು ಯಾರಿಗೂ Jnfamiliar) ಅಸಹಜ ಎಂದು ಹೇಳಲು ಸಾಧ್ಯವಿಲ್ಲ.

## 3. ಒಂದು ವಿಶೇಷ ಗುಣ

ಪವಿತ್ರ ಕುರ್‌ಆನ್ ಎಲ್ಲ ಜನಾಂಗಗಳ ಆವಶ್ಯಕತೆಯಾಗಿದೆ. ಈ ಒಂದೇ ಕಾರಣಕ್ಕಾಗಿ ನರು ತನ್ನಲ್ಲಿ ವಿಶ್ವಾಸವಿರಿಸಬೇಕು. ಜೀವನ ಸಂಹಿತೆಯಾಗಿ ಸ್ವೀಕರಿಸಬೇಕೆಂಬ ಕರೆ ಅದು ಡಿಲ್ಲ. ಪೂರ್ವ ಗ್ರಂಥಗಳ ಜನಾಂಗಗಳೂ ತನ್ನಲ್ಲಿ ವಿಶ್ವಾಸವಿರಿಸಬೇಕು. ತನ್ನ ಆದೇಶಗಳಂತೆ ವಿಸಬೇಕು. ಅವರಿಗೆ ಪವಿತ್ರ ಕುರ್‌ಆನ್ ಮೂಲಕ ಪರಿಪೂರ್ಣತೆಯು ಲಭ್ಯವಾಗು ದೆಂದು ಅದು ತಿಳಿಸಿದೆ. ಅವರ ಗ್ರಂಥಗಳನ್ನು ಪವಿತ್ರ ಕುರ್‌ಆನ್ ಸಮರ್ಥಿಸಿದೆ. ದುದರಿಂದ ಪವಿತ್ರ ಕುರ್‌ಆನಿನಲ್ಲಿ ಅವರು ವಿಶ್ವಾಸವಿರಿಸುವುದು ಆವಶ್ಯಕವೆಂದು ಷ್ಟವಾಗುವುದು.

ಪೂರ್ವ ಗ್ರಂಥಗಳು ಮೂಲ ರೂಪದಲ್ಲಿ ಇಂದು ಉಳಿದಿಲ್ಲ. ಅದರಲ್ಲಿ ಮಾನವ ಸ್ತಕ್ಷೇಪ ಗಳಾಗಿವೆ. ಅದನ್ನು ಶುದ್ಧೀಕರಿಸಲು ಪವಿತ್ರ ಕುರ್‌ಆನಿನ ಮಾರ್ಗದರ್ಶನದ ಗತ್ಯವಿದೆ. ಪವಿತ್ರ ಕುರ್‌ಆನೊಂದಕ್ಕೆ ಮಾತ್ರ ಪೂರ್ವ ಗ್ರಂಥಗಳ ಸತ್ಯಾಸತ್ಯಗಳನ್ನು ಳಿಸಿಕೊಡುವ ಸಾಮರ್ಥ್ಯವಿರುವುದು. ಆದುದರಿಂದ ಅವರು ಅದರ ಮೂಲಕ ಪರಿಪೂರ್ಣ ಶ್ವಾಸವನ್ನು ಪಡೆಯಬಹುದಾಗಿದೆ.

ಪವಿತ್ರ ಕುರ್‌ಆನ್ ಹೀಗೆ ವಿವರಿಸುತ್ತಿದೆ. "ಓ ಗ್ರಂಥದವರೇ, ನೀವು ದೇವಗ್ರಂಥ **ಂದ ಮರೆಮಾಚುತ್ತಿದ್ದ ಅನೇಕ ವಿಷಯುಗಳನ್ನು ನಿಮ್ಮೆದುರು ಪ್ರಕಟಪಡಿಸುತ್ತಿರುವ ನಮ್ಮ ಂದೇಶ ವಾಹಕರೊಬ್ಬರು ನಿಮ್ಮ ಬಳಿಗೆ ಬಂದು ಬಿಟ್ಟಿರುತ್ತಾರೆ ಮತ್ತು ಅವರು ಅನೇಕ ಷಯುಗಳನ್ನು ಕ್ಷಮಿಸಿ ಬಿಡುತ್ತಾರೆ. ಅಲ್ಲಾಹನ ವತಿಯಿಂದ ಒಂದು ಪ್ರಕಾಶ ಮತ್ತು ಒಂದು ವ್ಯಕ್ತ ಗ್ರಂಥವು ನಿಮ್ಮ ಬಳಿಗೆ ಬಂದು ಬಿಟ್ಟಿದೆ. ಅದರ ಮೂಲಕ ಅಲ್ಲಾಹನು ತನ್ನ**

ಸಂಪ್ರೀತಿಯನ್ನು ಅಪೇಕ್ಷಿಸುವವರಿಗೆ ರಕ್ಷಾಮಾರ್ಗವನ್ನು ತೋರಿಸಿ ತನ್ನ ಇಚ್ಛೆಯಿಂದ ಅವರನ್ನು ಅಂಧಕಾರಗಳಿಂದ ಹೊರತೆಗೆದು ಪ್ರಕಾಶದ ಕಡೆಗೆ ಒಯ್ಯುತ್ತಾನೆ ಮತ್ತು ಸನ್ಮಾರ್ಗದತ್ತ ಅವರಿಗೆ ಮಾರ್ಗದರ್ಶನ ಮಾಡುತ್ತಾನೆ." (ಪವಿತ್ರ ಕುರ್‌ಆನ್, 5:15-16)

## 14. ಸತ್ಯ ಗ್ರಂಥ

ಪವಿತ್ರ ಕುರ್‌ಆನ್ ಸತ್ಯವಾಗಿರುವುದು ಮತ್ತು ಸತ್ಯವಾಗಿಯೇ ಉಳಿಯುವುದು ಅದರ ವಿಶೇಷತೆಯಾಗಿದೆ.

"ಪೈಗಂಬರರೇ, ನಿಮ್ಮ ಪ್ರಭುವಿನ ವತಿಯಿಂದ ನಿಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟಿರುವುದೆಲ್ಲಾ ಪರಮ ಸತ್ಯವೆಂದೂ ಪ್ರಬಲನೂ ಪ್ರಶಂಸಾರ್ಹನೂ ಆದ ಅಲ್ಲಾಹನ ಮಾರ್ಗವನ್ನು ಅದು ತೋರಿಸುತ್ತದೆಂದೂ ಜ್ಞಾನ ನೀಡಲ್ಪಟ್ಟವರು ಚೆನ್ನಾಗಿ ತಿಳಿದಿರುತ್ತಾರೆ." (ಪವಿತ್ರ ಕುರ್‌ಆನ್, 34:6)

ಪವಿತ್ರ ಕುರ್‌ಆನ್ ಸತ್ಯವಾಗಿದೆ. ಆದುದರಿಂದ ಅದರಲ್ಲಿರುವುದೆಲ್ಲವೂ ಸತ್ಯದ ವಿಶೇಷತೆಗಳೆಂದು ಮೇಲಿನ ವಚನದಿಂದ ತಿಳಿದು ಬರುತ್ತದೆ. ಪವಿತ್ರ ಕುರ್‌ಆನ್ ಸತ್ಯವೇಕೆಂದರೆ, ಅದು ದೇವನಿಂದ ಅವತೀರ್ಣವಾಗಿರುವುದು ಮತ್ತು ದೈವಿಕ ಮಾರ್ಗವನ್ನು ತೋರಿಸಿಕೊಡುತ್ತಿರುವುದು ಕಾರಣವಾಗಿದೆ. ಅದರೊಳಗಿನ ಸೌಂದರ್ಯ, ತೇಜಸ್ಸು, ಪ್ರಕಾಶಗಳೆಲ್ಲವೂ ಸತ್ಯದ ಪ್ರತೀಕಗಳಾಗಿವೆ. ಅದಕ್ಕೂ ಮಿಥ್ಯಕ್ಕೂ ಯಾವುದೇ ಸಂಬಂಧವಿಲ್ಲ. ಎಂತಹ ಪರಿಸ್ಥಿತಿಯಲ್ಲಿಯೂ ಅದು ಸುಳ್ಳನ್ನು ಸಮರ್ಥಿಸದು.

ಉದಾರತೆಯೆಂದರೆ ಸುಳ್ಳು ಹೇಳಿ ಸಮರ್ಥಿಸುವುದಲ್ಲ, ಜನರು ಪಥಭ್ರಷ್ಟಗೊಳ್ಳದಂತೆ ನೋಡಿಕೊಳ್ಳುವುದು ಉದಾರತೆಯಾಗಿವೆ. ಪಥಭ್ರಷ್ಟತೆ ಮಹಾಪಾಪವಾಗಿದೆ.

ಪಥಭ್ರಷ್ಟರನ್ನು ಪವಿತ್ರ ಕುರ್‌ಆನ್ ಹೀಗೆ ಉದ್ಧರಿಸಿದೆ- "ಇವರು, ಬೋಧನೆಯು ತಮ್ಮ ಮುಂದೆ ಬಂದಾಗ ಅದನ್ನು ತಿರಸ್ಕರಿಸಿದವರಾಗಿದ್ದಾರೆ. ಆದರೆ ಇದೊಂದು ಪ್ರತಾಪವುಳ್ಳ ಗ್ರಂಥವೆಂಬುದೇ ವಾಸ್ತವಿಕತೆ. ಮಿಥ್ಯವು ಇದರ ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಇದರೊಳಗೆ ಬರಲಾರದು. ಇದು ಯುಕ್ತಿಪೂರ್ಣನೂ ಪ್ರಶಂಸಾರ್ಹನೂ ಆದವನಿಂದ ಅವತೀರ್ಣಗೊಂಡುದಾಗಿದೆ." (ಪವಿತ್ರ ಕುರ್‌ಆನ್, 41:41-42)

✧ ✧ ✧

ಧ್ಯಾಯ-11

# ಗ್ರಂಥದವರ ಕುಚೇಷ್ಟೆಗಳು ಪವಿತ್ರ ಕುರ್‌ಆನಿನ ಪ್ರತಿಕ್ರಿಯೆಗಳು

**ಬೈ**ಬಲ್‌ನಲ್ಲಿರುವ ಅದರ ಉಲ್ಲೇಖಗಳು ಮತ್ತು ಪ್ರವಾದಿಗಳ ಚರಿತ್ರೆಗಳಲ್ಲಿ ಬಹಳಷ್ಟು ರೋಧಾಭಾಸಗಳು ಗೋಚರಿಸಿವೆ. ಅದನ್ನು ನೋಡಿದವರಾರೂ ಅವು ಸತ್ಯವೆಂದು ಒಪ್ಪ ಾರರು. ಬೈಬಲ್‌ನ ಪ್ರವಾದಿಗಳ ಚರಿತ್ರೆಗೂ ಅದೇ ಪ್ರವಾದಿಗಳ ನೈಜ ಚರಿತ್ರೆಗೂ ಸ್ವಲ್ಪವೂ ಂಬಂಧವಿಲ್ಲ. ಪವಿತ್ರ ಕುರ್‌ಆನ್ ಖಂಡಿಸಿರುವ ಮತ್ತು ಸತ್ಯವಾದುದೆಂದು ತಿಳಿಸಿರುವ ಷ್ಟೋ ಇಸ್ರಾಈಲೀ ನಂಬಿಕೆಗಳು ಕೂಡಾ ಬೈಬಲ್‌ನೊಳಗೆ ಸೇರಿಕೊಂಡಿವೆ. ಹಿಂದಿನ ದೈವಿಕ ಂಥದ ಮೇಲೆ ಅದರ ಅನುಯಾಯಿಗಳು ನಡೆಸಿದ ಕುತಂತ್ರಗಳು, ಧರ್ಮಾಧಿಕಾರಿಗಳು ಡೆಸಿರುವ ಕುಚೇಷ್ಟೆಗಳನ್ನು ಪವಿತ್ರ ಕುರ್‌ಆನ್ ಬಹಿರಂಗಪಡಿಸಿದೆ. ಪಥಭ್ರಷ್ಟ ನಾದ ಾನವನು ಎಷ್ಟು ಪ್ರಪಾತಕ್ಕೆ ಕುಸಿಯುತ್ತಾನೆಂದು ಈ ಚರಿತ್ರೆಗಳಲ್ಲಿ ನಡೆದ ಹಸ್ತಕ್ಷೇಪ ದಿಂದ ನವರಿಕೆಯಾಗುವುದು. ತಮ್ಮ ಪೂರ್ವಿಕರು ಮತ್ತು ಮಹಾ ಪುರುಷರ ಮೇಲೆಯೇ ಅವರ ನುಯಾಯಿಗಳು ಎಷ್ಟು ಅನ್ಯಾಯವೆಸಗಿದ್ದರು, ಮಾನ ಮರ್ಯಾದೆಯ ಮೇಲೆ ಎಷ್ಟು ೊಳಕು ಎರಚಿದ್ದಾರೆ ಎಂಬುದು ಪವಿತ್ರ ಕುರ್‌ಆನ್ ಮೂಲಕ ಸ್ಪಷ್ಟವಾಗಿದೆ.

ಇಸ್ರಾಈಲೀ ಧರ್ಮ ಗುರುಗಳು ತಮ್ಮ ಮಹಾ ಪುರುಷರೊಡನೆ ಯಾವ ಅಕ್ರಮ ಸಗಿದರು ಮತ್ತು ಚಾರಿತ್ರ್ಯವನ್ನು ಹೇಗೆ ಕೆಡಿಸಿದರು ಎಂಬ ತಾರ್ಕಿಕ ಅವಲೋಕನದಿಂದ ಪವಿತ್ರ ಕುರ್‌ಆನ್ ಆ ಕೊಳಕುಗಳನ್ನು ಶುಚೀಕರಿಸುವುದನ್ನು ಗಮನಿಸಬಹುದಾಗಿದೆ. ಪೂರ್ವಜರ ಾನಮರ್ಯಾದೆಯ ಮೇಲೆ ಅಪಚಾರವೆಸಗಿದ ಉದಾಹರಣೆಗಳು ಇಸ್ರಾಈಲಿ ಇತಿಹಾಸಕ್ಕೆ[1] ಾತ್ರ ಸೀಮಿತವಲ್ಲ, ಇತರ ಜನಾಂಗಗಳಲ್ಲಿಯೂ ಇಂತಹ ಅಪರಾಧ ಕೃತ್ಯಗಳು ನಡೆದಿವೆ. ೈಬಲ್‌ನಿಂದ ಕೆಲವು ಉದಾಹರಣೆಗಳನ್ನು ಇಲ್ಲಿ ನೀಡುತ್ತೇವೆ.

## ಂದನೆಯ ಉದಾಹರಣೆ

ಭೂಮಿ ಮತ್ತು ಆಕಾಶಗಳನ್ನು ದೇವನು ಆರು ದಿವಸಗಳಲ್ಲಿ ಸೃಷ್ಟಿಸಿ ಏಳನೆಯ ದಿವಸ

. ಯಹೂದಿಗಳು ಮತ್ತು ಕ್ರೈಸ್ತರ ಇತಿಹಾಸ.

ವಿಶ್ರಮಿಸಿದನೆಂದು ಬೈಬಲ್‌ನಲ್ಲಿದೆ. ನಂತರ ಮಸೀಹಿ (ಕ್ರೈಸ್ತ) ಪಾದ್ರಿಗಳಿಗೆ ಈ ತಪ್ಪಿನ ಅರಿವಾಯಿತು. ಅವರು ಬೈಬಲ್‌ನ ಉರ್ದು ಅನುವಾದದಲ್ಲಿ ಏಳನೇ ದಿವಸ ವಿಶ್ರಮಿಸಿದನು ಎಂಬುದರ ಬದಲಾಗಿ ಫಾರಿಗ್‌ಹುವಾ (ಮಾಡಿ ಮುಗಿಸಿದನು) ಎಂದು ಅದನ್ನು ಬದಲಿಸಿದರು.

ಆಂಗ್ಲ ಭಾಷೆಯಲ್ಲಿರುವ ಕಿಂಗ್ ಜೇಮ್ಸ್‌ರ ಮೂಲ ಬೈಬಲ್‌ನಲ್ಲಿ ಇದೇ ಶಬ್ದವಿರುವುದನ್ನು ಕಾಣಬಹುದು.

"And he rested on the seventh day" (ಮತ್ತು ದೇವನು ಏಳನೇ ದಿನ ವಿಶ್ರಾಂತಿ ಪಡೆದನು) ಕ್ರಿ.ಶ. 1924ನೇ ಇಸವಿಯಲ್ಲಿ ಯಹೂದಿಗಳು ಪ್ರಕಟಿಸಿರುವ ಬೈಬಲ್ ಅನುವಾದದಲ್ಲಿಯೂ ಇದೇ ಶಬ್ದವಿದೆ. ಅರಬಿ ಭಾಷೆಯ ಅನುವಾದದಲ್ಲಿಯೂ "ಅವನು ಏಳನೇ ದಿವಸ ವಿಶ್ರಮಿಸಿದನು" ಎಂದು ಬರೆಯಲಾಗಿತ್ತು.

ಬೈಬಲ್‌ನ ಕಥನಗಳು ದೇವನು ಕೆಲಸ ಮಾಡಿ ಆಯಾಸಗೊಳ್ಳುವನು. ಅವನಿಗೂ ವಿಶ್ರಾಂತಿಯ ಅಗತ್ಯವಿದೆಯೆಂದು ತಿಳಿಸುತ್ತವೆ. ಆದರೆ ಇದು ದೇವನ ಗುಣಗಳಿಗೆ ಸಂಪೂರ್ಣ ವಿಪರೀತವಾಗಿದೆ. ಬೈಬಲ್‌ನ ಈ ತಪ್ಪುಗಳನ್ನು ಪವಿತ್ರ ಕುರ್‌ಆನ್ ತಿದ್ದಿ ಸರಿಪಡಿಸಿದೆ.

**"ನಾವು ಭೂಮಿ-ಆಕಾಶಗಳನ್ನೂ ಅವುಗಳ ನಡುವೆ ಇರುವ ಸಕಲ ವಸ್ತುಗಳನ್ನೂ ಆರು ದಿನಗಳಲ್ಲಿ ಸೃಷ್ಟಿಸಿದೆವು. ನಮಗೇನೂ ದಣಿವಾಗಲಿಲ್ಲ." (ಪವಿತ್ರ ಕುರ್‌ಆನ್, 50:38)**

## ಎರಡನೆಯ ಉದಾಹರಣೆ

ಬೈಬಲ್‌ನಲ್ಲಿ ಹೀಗಿದೆ-

"ಆಗ ಮೂಸಾ, ಹಾರೂನ್, ನಾದಾಬ್, ಅಬಿಹೂ ಮತ್ತು ಇಸ್ರಾಈಲರ ಎಪ್ಪತ್ತು ಧರ್ಮ ವೃದ್ಧರು ಮೇಲೆ ಹೋದರು ಮತ್ತು ಇಸ್ರಾಈಲರ ಪರಮೇಶ್ವರನನ್ನು ದರ್ಶನ ಮಾಡಿದರು. ಅವನ ಚರಣಗಳ ಕೆಳಗೆ ನೀಲ ಮಣಿಯಂತಹ ಯಾವುದೋ ವಸ್ತುವಿತ್ತು. ಅದು ಆಕಾಶಕ್ಕೆ ಸಮಾನವಾಗಿ ಸ್ವಚ್ಛವಾಗಿತ್ತು. ಪರಮೇಶ್ವರನು ಇಸ್ರಾಈಲರ ಪ್ರಧಾನರ ಮೇಲೆ ಕೈ ಎತ್ತಲಿಲ್ಲ. ಅವರು ಪರಮೇಶ್ವರ ದರ್ಶನ ಮಾಡಿದರು ಮತ್ತು ತಿಂದರು ಕುಡಿದರು.

ಇದೇ ನಿರ್ಗಮನ ಅಧ್ಯಾಯದಲ್ಲಿ ಮುಂದುವರಿದು ಬರೆಯಲಾಗಿದೆ- ಮೂಸಾ ಹೇಳಿದರು, ನೀನು ನನಗೆ ನಿನ್ನ ಪ್ರಕಾಶವನ್ನು ತೋರಿಸು. ಪ್ರಭು ಹೇಳಿದನು, ನಾನು ನಿನ್ನ ಸಮ್ಮುಖದಲ್ಲಿ ಚಲಿಸುವೆನು. ಸಕಲ ಒಳಿತುಗಳನ್ನು ತೋರಿಸುವೆನು ಮತ್ತು ನಿನ್ನ ಸಮ್ಮುಖ ದಲ್ಲಿ ಪ್ರಭು ನಾಮದ ಪ್ರಚಾರ ಮಾಡುವೆನು, ನಾನು ಯಾರನ್ನು ಅನುಗ್ರಹಿಸಲು ಬಯಸುವೆನೋ ಅವರ ಮೇಲೆ ಅನುಗ್ರಹ ತೋರಿಸುವೆನು ಮತ್ತು ಯಾರ ಮೇಲೆ ದಯೆ ತೋರಲು ಬಯಸುವೆನೋ ಅವರಿಗೆ ದಯೆ ನೀಡುವೆನು. ಆಮೇಲೆ ಪರಮೇಶ್ವರನು ಮುಂದುವರಿದು ಹೇಳಿದನು. ನೀನು ನನ್ನ ಮುಖದರ್ಶನ ಮಾಡಲಾರೆ. ಯಾಕೆಂದರೆ ನನ್ನ ಮುಖ ದರ್ಶನ ಮಾಡಿ ಮನುಷ್ಯನು ಜೀವಂತವಾಗಿ ಉಳಿಯಲಾರನು. **(ನಿರ್ಗಮನ/33/18/20)**

ಒಂದೆಡೆ ಬೈಬಲ್ ಇಸ್ರಾಈಲರ 70 ಧರ್ಮ ವೃದ್ಧರು ದೇವನನ್ನು ಬರಿಗಣ್ಣಿನಿಂದ ನೋಡಿದರು ಎಂದರೆ, ಇನ್ನೊಂದೆಡೆ ಬರಿಗಣ್ಣಿನಿಂದ ದೇವನನ್ನು ನೋಡಲಾಗದೆಂದು ಮೂಸಾರ ಕಥಾನಕ ಪ್ರಸ್ತುತಪಡಿಸಿದೆ.

ಪರಮೇಶ್ವರನನ್ನು ಪ್ರವಾದಿ ಮೂಸಾರು(ಅ) ಪ್ರಾರ್ಥಿಸಿದಾಗ, "ನೀನು ನನ್ನ ಮುಖ ದರ್ಶನವನ್ನು ಮಾಡಲಾರೆ. ನನ್ನ ಮುಖ ದರ್ಶನ ಮಾಡಿ ಮನುಷ್ಯ ಉಳಿಯಲಾರ" ಎಂದು ಬೈಬಲ್‌ನಲ್ಲಿ ವಿವರಿಸಲಾಗಿದೆ.

ದೇವನನ್ನು ನೇರ ಕಣ್ಣುಗಳಿಂದ ಮಾನವನು ನಿಜವಾಗಿಯೂ ನೋಡ ಲಾರನು. ದೇವನ ತೇಜಸ್ಸು, ಅಂದಗಳನ್ನು ಸಹಿಸುವ ಶಕ್ತಿ ಮಾನವರಲ್ಲಿಲ್ಲ. ಬೈಬಲ್‌ನ ಎರಡು ರೀತಿಯ ವಿರೋಧಾಭಾಸಕರ ಹೇಳಿಕೆಗಳತ್ತ ಗಮನ ಸೆಳೆದು ಪವಿತ್ರ ಕುರ್‌ಆನ್ ವಾಸ್ತವಿಕತೆಯನ್ನು ನಮ್ಮ ಮುಂದಿರಿಸಿದೆ. **"ನಾವು ನಿಶ್ಚಯಿಸಿದ ಸಮಯಕ್ಕೆ ಸರಿಯಾಗಿ ಅವರು ತಲಪಿ ಅವರ ಪ್ರಭು ಅವರೊಡನೆ ಮಾತನಾಡಿದಾಗ ಅವರು, 'ಓ ಪ್ರಭೂ, ನನಗೆ ನಿನ್ನ ದರ್ಶನಕ್ಕೆ ಬೇಕಾದ ದೃಕ್ಶಕ್ತಿ ಪ್ರದಾನ ಮಾಡು' ಎಂದು ಬಿನ್ನವಿಸಿದಾಗ, 'ನೀನು ನನ್ನನ್ನು ನೋಡಲಾರೆ. ಅದೋ ಮುಂದಿರುವ ಪರ್ವತವನ್ನು ನೋಡು. ಅದು ತನ್ನ ಸ್ಥಾನದಲ್ಲಿ ಸ್ಥಿರವಾಗಿ ನಿಂತರೆ ನೀನು ನನ್ನನ್ನು ನೋಡಬಲ್ಲೆ' ಎಂದನು..." (ಪವಿತ್ರ ಕುರ್‌ಆನ್, 7:143)**

ಪವಿತ್ರ ಕುರ್‌ಆನಿನ ಈ ಸೂಕ್ತವು ಮಾನವನಿಗೆ ಐಹಿಕ ಜೀವನದಲ್ಲಿ ದೇವನನ್ನು ಬರಿ ಗಣ್ಣಿಂದ ನೋಡುವ ಸಾಮರ್ಥ್ಯ ದೊರೆತಿಲ್ಲವೆಂದು ವಿವರಿಸುತ್ತಿದೆ. ಮಾನವನು ದೇವನ ಅಸ್ತಿತ್ವವನ್ನು ಪರೋಕ್ಷವಾಗಿ ಗುರುತಿಸಬೇಕು. ಇದು ಅವನ ಪಾಲಿಗೆ ಪರೀಕ್ಷೆಯಾಗಿದೆ. ದೇವನ ಅಸ್ತಿತ್ವದ ಅಪಾರವಾದ ಸಂಕೇತಗಳು ಜಗತ್ತಿನಾದ್ಯಂತ ಹರಡಿವೆ. ಮಾನವನ ವ್ಯಕ್ತಿತ್ವವೇ ದೇವನ ಅಸ್ತಿತ್ವಕ್ಕೆ ಒಂದು ಪುರಾವೆಯಾಗಿದೆ. ಐಹಿಕ ಜೀವನದಲ್ಲಿ ನೇರ ಕಣ್ಣುಗಳಿಂದ ದೇವ ನನ್ನು ನೋಡುವುದು ದೇವ ಪ್ರತಿಷ್ಠೆಗೆ ವಿಪರೀತವಾದ ವಿಷಯವಾಗಿದೆ. ಪವಿತ್ರ ಕುರ್‌ಆನ್ ಇಂತಹ ದುಸ್ಸಾಹಸವನ್ನು ಪ್ರದರ್ಶಿಸಲು ಹೊರಟವರು ಸರ್ವನಾಶವಾಗಿ ದ್ದಾರೆಂದು ತಿಳಿಸಿದೆ.

**"ನೀವು ಮೂಸಾರೊಡನೆ, 'ಓ ಮೂಸಾ, ಅಲ್ಲಾಹನನ್ನು (ಅವನು ನಿಮ್ಮೊಡನೆ ಮಾತಾಡುತ್ತಿರುವುದನ್ನು) ನಾವು ಕಣ್ಣಾರೆ ಕಾಣುವ ತನಕ ನಿಮ್ಮ ಮಾತಿನ ಮೇಲೆ ನಾವು ವಿಶ್ವಾಸವಿಡಲಾರೆವು' ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ. ಆಗ, ನೀವು ನೋಡುತ್ತಿ ದ್ದಂತೆಯೇ ನಿಮ್ಮ ಮೇಲೊಂದು ಭೀಕರ ಸಿಡಿಲೆರಗಿತ್ತು. ನೀವು ನಿರ್ಜೀವಿಗಳಾಗಿ ನೆಲಕ್ಕುರುಳಿದಿರಿ." (ಪವಿತ್ರ ಕುರ್‌ಆನ್, 2: 55)**

## ಮೂರನೆಯ ಉದಾಹರಣೆ

ಬೈಬಲಿನಲ್ಲಿ ಹೀಗೆಯೂ ವಿವರಿಸಲಾಗಿದೆ-

"ಮತ್ತು ಪ್ರಭು ಭೂಮಿಯಲ್ಲಿ ಮನುಷ್ಯನ ಕೆಡುಕುಗಳು ಹೆಚ್ಚುತ್ತಿರುವುದನ್ನು ನೋಡಿದನು

ಮತ್ತು ಅವರ ಮನಸ್ಸಿನಲ್ಲಿ ನಿರಂತರವಾಗಿ ಕೆಟ್ಟ ವಿಚಾರಗಳು ಉತ್ಪನ್ನ ವಾಗುತ್ತವೆ ಮತ ಪ್ರಭು ಭೂಮಿಯಲ್ಲಿ ಮಾನವನನ್ನು ಸೃಷ್ಟಿಸಿರುವುದಕ್ಕಾಗಿ ಪಶ್ಚಾತ್ತಾಪ ಪಟ್ಟನು ಮತ್ತು ಅವನ ಮನಸ್ಸಿನಲ್ಲಿ ಅತಿ ದುಃಖಿತನಾದನು." ಪ್ರಭು ಹೇಳಿದನು, "ನಾನು ಸೃಷ್ಟಿಸಿರುವ ಮಾನವನನ ಪೃಥ್ವಿಯ ಮೇಲ್ಭಾಗದಿಂದ ನಾಶಪಡಿಸುವೆನು. ಮಾನವ, ಪಶು, ತೆವಳುವ ಜಂತು, ಆಕಾಶ ಹಕ್ಕಿ ಎಲ್ಲವನ್ನೂ ನಾಶಪಡಿಸುವೆನು. ಯಾಕೆಂದರೆ ಅವರನ್ನು ಸೃಷ್ಟಿಸಿದ್ದಕ್ಕಾಗಿ ನಾನ ಪಶ್ಚಾತ್ತಾಪಪಡುತ್ತೇನೆ." (ಉತ್ಪತ್ತಿ 6/5-7)

ದೇವನಿಗೆ ಮಾನವನನ್ನು ಸೃಷ್ಟಿಸಿ ಪಶ್ಚಾತ್ತಾಪವಾಗಿದೆ ಎಂಬ ಬೈಬಲ್ ವಿವರಣೆಗಿಂ ಭಿನ್ನವಾದ ದೇವನ ಗುಣವನ್ನು ಪವಿತ್ರ ಕುರ್‌ಆನ್ ಜಗತ್ತಿನ ಮುಂದಿರಿಸಿದೆ.

**"ನಿಮ್ಮ ಪ್ರಭುವು ಮಲಾಯಿಕಃ(ದೇವಚರ)ರೊಡನೆ, 'ನಾನು ಭೂಮಿಯಲ್ಲಿ ಒ ಖಲೀಫನನ್ನು (ಪ್ರತಿನಿಧಿ) ನೇಮಿಸಲಿದ್ದೇನೆ' ಎಂದು ಹೇಳಿದ ಸಂದರ್ಭವನ್ನು ಕೊಂ ಊಹಿಸಿರಿ. ಅವರು, (ಹೀಗೆ) ನಿವೇದಿಸಿದರು: 'ಭೂಮಿಯಲ್ಲಿ ಅದರ ವ್ಯವಸ್ಥೆಯನ್ನು ಕೆಡಿಸು ಹಾಗೂ ರಕ್ತಪಾತವೆಸಗುವವನನ್ನು ನೀನು ನೇಮಿಸುವೆಯಾ? ನಾವಂತೂ ನಿನ್ನ ಗುಣಗಾ ಮಾಡುತ್ತಿರುವುದರೊಂದಿಗೆ ನಿನ್ನನ್ನು ಸ್ತುತಿಸುತ್ತಲೂ ನಿನ್ನ ಪರಿಶುದ್ಧತೆಯನ್ನು ಕೊಂಡಾಡುತ್ತಲ ಇದ್ದೇವೆ.' ಆಗ ಆತನು ಹೇಳಿದನು, ವಾಸ್ತವದಲ್ಲಿ ನೀವು ಅರಿಯದುದನ್ನು ನಾನು ಅರಿತಿದ್ದೇನೆ.**

**(ಪವಿತ್ರ ಕುರ್‌ಆನ್, 2:3(**

ಸಕಲ ವಸ್ತುವಿನ ಕುರಿತು ದೇವನಿಗೆ ಆದಿಯಿಂದ ಅಂತ್ಯದ ವರೆಗೂ ತಿಳಿದಿದೆಯೆಂದ ಪವಿತ್ರ ಕುರ್‌ಆನ್ ವಿವರಿಸುತ್ತಿದೆ. ಬೈಬಲಿನಲ್ಲಿರುವಂತೆ ಮಾನವನನ್ನು ಉಂಟು ಮಾ ದೇವನು ಪಶ್ಚಾತ್ತಾಪ ಪಡುತ್ತಾನೆಂದರೇನು? ಪವಿತ್ರ ಕುರ್‌ಆನಿನ ಪ್ರಕಾರ ದೇವನಿಗೆ ಸಕ ವಸ್ತುವಿನ ಅರಿವಿದೆ. ಅವನ ಅರಿವಿಗೆ ಹೊರತಾದ ಯಾವುದೂ ಇಲ್ಲ. ಆದ್ದರಿಂದ ಬೈಬಲಿನಲ್ಲಿ ವಂತೆ ಅವನು ಪಶ್ಚಾತ್ತಾಪಪಡುತ್ತಾನೆ ಎಂಬ ಪ್ರಶ್ನೆ(ಅಧಿಕ ಪ್ರಸಂಗ)ಯೇ ಉದ್ಭವಿಸುವುದಿ ಯಾವುದೇ ಜನಾಂಗ ನಾಶವಾದರೂ ದೇವನಲ್ಲಿ ಯಾವ ಪರಿಣಾಮವೂ ಆಗುವುದಿಲ್ಲ ಎಂದ ಪವಿತ್ರ ಕುರ್‌ಆನಿನಲ್ಲಿ ಹೀಗೆ ವಿವರಿಸಲಾಗಿದೆ.

**"ಆದರೆ ಅವರು ಅವರ ಮಾತನ್ನು ಸುಳ್ಳೆಂದು ಸಾರಿದರು ಮತ್ತು ಒಂಟೆಯನ್ನು ಕೊಂದ ಬಿಟ್ಟರು. ಕೊನೆಗೆ ಅವರ ಪಾಪದ ಫಲವಾಗಿ ಅವರ ಪ್ರಭು ಅವರ ಮೇಲೆ, ಏಕಕಾಲದ ಎಲ್ಲರನ್ನೂ ಮಣ್ಣುಗೂಡಿಸುವಂತಹ ವಿಪತ್ತನ್ನು ಎರಗಿಸಿದನು- ಮತ್ತು ಅವನಿಗೆ (ತನ್ನ ಕೃತ್ಯದ) ಯಾವುದೇ ದುಷ್ಪರಿಣಾಮದ ಭಯವಿಲ್ಲ." (ಪವಿತ್ರ ಕುರ್‌ಆನ್, 91:14-15)**

## ನಾಲ್ಕನೆಯ ಉದಾಹರಣೆ

ಸತ್ಯಕ್ಕೆ ವಿರುದ್ಧವಾದ ಬಹಳಷ್ಟು ವಚನಗಳು ಕ್ರೈಸ್ತ ಧರ್ಮದಲ್ಲಿ ಪ್ರಚಲಿತದಲ್ಲಿ ಕ್ರೈಸ್ತರ ಮೂಲಭೂತ ವಿಶ್ವಾಸಗಳಲ್ಲಿ ಕೆಲವು ಸತ್ಯಕ್ಕೆ ಸಂಪೂರ್ಣ ವಿರುದ್ಧವಾಗಿರುವುದೆಂದ

ಪವಿತ್ರ ಕುರ್‌ಆನ್ ಬಹಿರಂಗಗೊಳಿಸಿದೆ. ಕ್ರೈಸ್ತ ಸಂಪ್ರದಾಯವು ಇಸ್ರಾಈಲರಲ್ಲಿ ಒಂದು ಶಾಖೆಯಾಗಿದೆ. ಹರ್ಝ್ರುತ್ ಈಸಾರ(ಅ) ಆರಂಭದ ಅನುಯಾಯಿಗಳು ಈಸಾರನ್ನು(ಅ) ಪೂರ್ವ ಪ್ರವಾದಿಯೆಂದು ಮಾತ್ರ ವಿಶ್ವಾಸವಿರಿಸಿದ್ದರು. ಈಸಾರನ್ನು(ಅ) ಪ್ರವಾದಿಯಾಗಿ ಸ್ವೀಕರಿಸಿಲ್ಲ ಎಂಬ ಕಾರಣಕ್ಕಾಗಿ ಯಹೂದಿಯರೊಡನೆ ಮಾತ್ರ ಅವರ ವಿರೋಧವಿತ್ತು. ಹರ್ಝ್ರುತ್ ಮೂಸಾರ(ಅ) ಶರೀಅತನ್ನು ಅವರೂ ಅಂದು ಅನುಸರಿಸುತ್ತಿದ್ದರು.

ಇದೇ ವೇಳೆ, ಸೈಂಟ್ ಪಾಲ್ ಕ್ರೈಸ್ತ ಧರ್ಮ ಅಥವಾ ಕ್ರೈಸ್ತ ಸಂಪ್ರದಾಯದೊಳಗೆ ಪ್ರವೇಶಿಸಿದರು. ಕ್ರೈಸ್ತೇತರ ರೋಮನ್ನರು ಗ್ರೀಕರ ನಡುವೆ ಅವರು ಧರ್ಮ ಪ್ರಚಾರ ಕಾರ್ಯವನ್ನು ಆರಂಭಿಸಿದರು. ಕ್ರೈಸ್ತ ಧರ್ಮದಲ್ಲಿ ಬದಲಾವಣೆ ತಂದರು. ತನ್ನ ದಿವ್ಯ ದರ್ಶನ(Vision)ಗಳು ಮತ್ತು ಅಲೌಕಿಕ ಸಂಕೇತಗಳನ್ನು ಕ್ರೋಢೀಕರಿಸಿ ಹೊಸ ಕ್ರೈಸ್ತವತೆ(ಧರ್ಮ ವಿಧಾನವನ್ನು)ಯನ್ನು ಆವಿಷ್ಕರಿಸಿದರು. ಅಂದಿನ ವರೆಗೆ ಜಾರಿಯಲ್ಲಿದ್ದ ಪ್ರವಾದಿ ಮೂಸಾರ ಶರೀಅತನ್ನು ಅವರು ನಿಸ್ತೇಜ ಗೊಳಿಸಿದರು.

ಅವರು ಏಸುಕ್ರಿಸ್ತರನ್ನು(ಮಸೀಹರನ್ನು) ದೈವತ್ವಕ್ಕೇರಿಸಿದರು. ದೇವ ಪುತ್ರನೆಂಬ ನಂಬಿಕೆಯನ್ನು ಹುಟ್ಟು ಹಾಕಿದರು. ಏಸುಕ್ರಿಸ್ತರು ಶಿಲುಬೆಯಲ್ಲಿ ಪ್ರಾಣ ಬಿಡುವ ಮೂಲಕ ಪ್ರವಾದಿ ಆದಮರ ಸಂತತಿಗಳ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಟ್ಟಿದ್ದಾರೆಂಬ ಸೈಂಟ್ ಪೌಲ್‌ರ ಚಿಂತನೆಯನ್ನು ಪ್ರಚಾರ ಮಾಡಿದರು. ಏಸುಕ್ರಿಸ್ತರ (ಮಸೀಹರ) ಆರಂಭದ ಅನುಯಾಯಿಗಳು ಸೈಂಟ್ ಪೌಲರ ಕ್ರೈಸ್ತ ಧರ್ಮದ ಆವಿಷ್ಕಾರವನ್ನು ವಿರೋಧಿಸುತ್ತಿದ್ದರು. ನಂತರ ಸೈಂಟ್ ಪೌಲರ ಅನುಯಾಯಿಗಳು ಅಧಿಕಗೊಂಡರು. ಸೈಂಟ್ ಪೌಲ್‌ರ ಪ್ರಾಬಲ್ಯ ಹೆಚ್ಚಿತು ಮತ್ತು ಮಸೀಹರ ನೈಜ ಅನುಯಾಯಿಗಳು ಸೋಲನುಭವಿಸಿದರು.

ಆದರೂ 3ನೆಯ ಶತಮಾನದ ಕೊನೆಯ ವರೆಗೂ ಈಸಾ ಮಸೀಹರನ್ನು (ಏಸುಕ್ರಿಸ್ತರನ್ನು) ಪ್ರವಾದಿ ಮಾತ್ರ ಎಂದು ನಂಬುವ ಕ್ರೈಸ್ತರಿದ್ದರು. ಈಸಾರ ಮೇಲೆ ಆರೋಪಿಸಲಾದ ದೈವತ್ವವನ್ನು ಇವರು ಒಪ್ಪುತ್ತಿರಲಿಲ್ಲ ಎಂದು ಇತಿಹಾಸದಿಂದ ಸ್ಪಷ್ಟವಾಗಿದೆ.

ಆದರೆ ನಿಸಿಯಾ(Necacea)ದ ಕೌನ್ಸಿಲ್ ನಾಲ್ಕನೆಯ ಶತಮಾನದಲ್ಲಿ (ಕ್ರಿ.ಶ. 325ರಲ್ಲಿ) ಸೈಂಟ್ ಪೌಲ್‌ರು ಆವಿಷ್ಕರಿಸಿರುವ ನಂಬಿಕೆಯನ್ನು ಅಧಿಕೃತ ಈಸಾಯಿ ಧರ್ಮ (ಕ್ರೈಸ್ತ ಧರ್ಮ) ಎಂದು ಘೋಷಿಸಿತು. ರೋಮ್‌ನ ಸಾಮ್ರಾಟನು ಕ್ರೈಸ್ತಧರ್ಮವನ್ನು ಸ್ವೀಕರಿಸಿದನು. ಹೀಗ ಪೌಲ್‌ರ ಕ್ರೈಸ್ತವತೆ ಸರಕಾರಿ ಧರ್ಮವೆನ್ನಿಸಿಕೊಂಡಿತು. ಅದಲ್ಲದೆ ಪ್ರಥಮ ಮೂರು ಇಂಜೀಲ್‌ಗಳ ರಚನಕಾರರು ಮಸೀಹರಲ್ಲಿ ದೈವಿಕತೆಯನ್ನು ಆರೋಪಿಸಿಲ್ಲ. ಅವರೆಲ್ಲರೂ ಈಸಾ ಮಸೀಹರನ್ನು(ಅ) ದೇವಸಂಪ್ರೀತಿಗೆ ಪಾತ್ರರಾದ ಮತ್ತು ದೇವನೊಂದಿಗೆ ನಿಕಟ ಸಂಬಂಧ ಹೊಂದಿರುವ ವ್ಯಕ್ತಿಯೆಂದೇ ಭಾವಿಸಿದ್ದರು. ಏಸುಗ್ರಂಥದವರ ಕುಚೇಷ್ಟೆಗಳು ಪವಿತ್ರ

ಕುರ್‌ಆನಿನ ಪ್ರತಿಕ್ರಿಯೆಗಳುಕ್ರಿಸ್ತರಿಗೆ ದೇವ ಎಂಬ ಶಬ್ದವೇ ಲೂಕ, ಮತ್ತಾಯ, ಮಾರ್ಕ್ಸ್ ಇಂಜೀಲುಗಳಲ್ಲಿ ಬಳಕೆಯಾಗಿಲ್ಲ. ಬದಲಾಗಿ ಆ ಶಬ್ದದ ಮೂಲಕ ದೇವನನ ಸಂಬೋಧಿಸಲಾಗಿದೆ ಮತ್ತು ಮಾನವರ ಪಾಪಗಳಿಗಾಗಿ ಏಸು ಜೀವದಾನ ನೀಡಿದ್ದಾರೆಂ ಅವುಗಳಲ್ಲಿ ಉಲ್ಲೇಖಿಸಿಲ್ಲ. ಬೈಬಲಿನಲ್ಲಿ ನಂತರ ನಡೆದಿರುವ ಮಿಶ್ರಣಗಳ ಬಗ್ಗೆ ಪವಿ ಕುರ್‌ಆನ್ ಈ ರೀತಿ ಎಚ್ಚರಿಸಿದೆ.

**"ಓ ಗ್ರಂಥದವರೇ, ನಿಮ್ಮ ಧರ್ಮದಲ್ಲಿ ನೀವು ಹದಮೀರಬೇಡಿರಿ, ಸತ್ಯದ ಹೊರ ಇನ್ನೇನನ್ನೂ ಅಲ್ಲಾಹನ ಮೇಲೆ ಹೊರಿಸಬೇಡಿರಿ. ಮರ್ಯಮರ ಪುತ್ರ ಈಸಾ ಮಸೀಹ ಅಲ್ಲಾಹನ ಸಂದೇಶವಾಹಕರಾಗಿದ್ದರೇ ವಿನಾ ಇನ್ನೇನೂ ಆಗಿರಲಿಲ್ಲ. ಅವರು, ಅಲ್ಲಾಹ ಮರ್ಯಮರ ಕಡೆಗೆ ಕಳುಹಿಸಿದ ಒಂದು ಫರಮಾನು (ಆಜ್ಞೆ) ಆಗಿದ್ದರು ಮತ್ತು ಅಲ್ಲಾಹ ಕಡೆಯಿಂದ (ಮರ್ಯಮರ ಗರ್ಭಾಶಯದಲ್ಲಿ ಶಿಶುವಿನ ರೂಪ ಧಾರಣೆ ಮಾಡಿದ) ಒಂ ಆತ್ಮವಾಗಿದ್ದರು. ಆದುದರಿಂದ ಅಲ್ಲಾಹ್ ಮತ್ತು ಸಂದೇಶ ವಾಹಕರ ಮೇಲೆ ವಿಶ್ವಾಸ ವಿಡಿ ಮೂವರಿದ್ದಾರೆನ್ನಬೇಡಿರಿ- ಇದನ್ನು ತೊರೆಯಿರಿ. ಇದು ನಿಮಗೇ ಉತ್ತಮ. ಅಲ್ಲಾಹನಂತ ಏಕಮಾತ್ರ ಆರಾಧ್ಯನಾಗಿರುವನು. ಅವನಿಗೊಬ್ಬ ಪುತ್ರನಿದ್ದಾನೆನ್ನಲು, ಅವನು ಅದರಿಂ ಪರಿಶುದ್ಧನಾಗಿರುತ್ತಾನೆ. ಭೂಮಿ-ಆಕಾಶಗಳ ಸಕಲ ವಸ್ತುಗಳೂ ಅವನ ಸೊತ್ತು ಮತ ಅವುಗಳ ಸಂರಕ್ಷಣೆಗೆ ಅಲ್ಲಾಹನೇ ಸಾಕು. ತಾನು ಅಲ್ಲಾಹನ ದಾಸನಾಗಿರುವ ಬಗ್ಗೆ ಮಸೀಹ ಎಂದೆಂದೂ ಸಂಕೋಚಪಡಲಿಲ್ಲ. ಅತ್ಯಂತ ನಿಕಟವರ್ತಿ ದೇವಚರರೂ ಈ ಬ ಸಂಕೋಚಪಡುವುದಿಲ್ಲ..." (ಪವಿತ್ರ ಕುರ್‌ಆನ್, 4:171-172)**

ಹಝ್ರತ್ ಮಸೀಹರನ್ನು ಕಲೀಮ್ ಎಂದು ಪವಿತ್ರ ಕುರ್‌ಆನ್ ಸಂಬೋಧಿಸಿ ಕಲೀಮ್ ಎಂದರೆ ದೇವಾದೇಶವೆಂದು ಅರ್ಥವಾಗಿದೆ. ಇಲ್ಲಿ ಪಿತನಿಲ್ಲದೆ ಈಸಾ ಮಸೀಹರು( ಜನಿಸಿದ್ದರು. ಅವರ ಜನನವು ದೇವಾದೇಶವಾಗಿತ್ತು ಎಂದು ಅರ್ಥವಾಗಿದೆ. ಹಝ್ರ ಮರ್ಯಮ್(ಅ) ದೇವನ ಅಪ್ಪಣೆಯಂತೆ ಗರ್ಭ ಧರಿಸಿದರು. ಈಸಾ ಮಸೀಹರಿಗೆ(ಅ) ಜನ ನೀಡಿದ್ದರು. ಆದರೆ ಕ್ರೈಸ್ತರು ಕಲೀಮೆಂಬುದನ್ನು ಕಲಾಮ್ ಎಂದು ಭಾವಿಸಿದರು. ಆ ರೀ ಅವರಲ್ಲಿ ಕಲೀಮ್ (ಆದೇಶ), ಕಲಾಮ್ (Atterance) ಆಯಿತು. ಈಸಾ ಮಸೀಹ ದೇವ ಗುಣವಾಗಿರುವರು ಎಂದು ಕ್ರೈಸ್ತರು ಪ್ರತಿಪಾದಿಸತೊಡಗಿದರು. ಹಝ್ರತ್ ಮರ್ಯ ರೊಳಗೆ(ಅ) ದೇವಗುಣ ಪ್ರವೇಶಿಸಿ ಶರೀರದ ರೂಪ ಧರಿಸಿತು. ಆನಂತರ ಮಸೀಹರ( ರೂಪದಲ್ಲಿ ಜನಿಸಿತು ಎಂದು ಕ್ರೈಸ್ತರು ಭಾವಿಸಿದರು. ಈ ರೀತಿ ಏಸುಕ್ರಿಸ್ತರು ದೇವ ಪ್ರಭುತ್ವ ಸೇರಿದವರೆಂಬ ನಂಬಿಕೆ ಬೆಳೆದು ಬಂದಿದೆ.

ಹಝ್ರತ್ ಮಸೀಹರನ್ನು ಪವಿತ್ರ ಕುರ್‌ಆನ್ ಈ ರೀತಿ ಉಲ್ಲೇಖಿಸಿದೆ- **"...ಕೊನೆ ವ್ಯಕ್ತವಾದ ದೃಷ್ಟಾಂತಗಳನ್ನು ಕೊಟ್ಟು, 'ಮರ್ಯಮ'ರ ಪುತ್ರ 'ಈಸಾ'ರನ್ನು ಕಳುಹಿಸಿ, ಪವಿತ್ರಾತ್ಮ**

ಮೂಲಕ ಅವರಿಗೆ ಸಹಾಯ ನೀಡಿದೆವು..." (ಪವಿತ್ರ ಕುರ್‌ಆನ್, 2:87 ಮತ್ತು 253)

ಕೆಡುಕಿಗೆ ಅಪರಿಚಿತವಾದ ಶುದ್ಧಾತ್ಮವನ್ನು ಹಝ್ರತ್ ಮಸೀಹರಿಗೆ [ಏಸುಕ್ರಿಸ್ತರಿಗೆ(ಅ)] ೀಡಲಾಯಿತೆಂದು ಪವಿತ್ರ ಕುರ್‌ಆನಿನ ಈ ವಚನಗಳು ವಿವರಿಸುತ್ತಿದೆ. 'ಕಲೀಮ್' ಎಂದು ವರ ಜನನದ ವಿಶೇಷತೆಯನ್ನು ವಿವರಿಸಲಾಗಿದ್ದರೆ, ಅನುಯಾಯಿಗಳು ದೇವನ ವಿಶೇಷ ಅನುಗ್ರಹವನ್ನು ತಪ್ಪಾಗಿ ಭಾವಿಸಿಕೊಂಡರು. ಹಝ್ರತ್ ಮಸೀಹರು(ಅ) ದೇವನ ಕಡೆ ಯಿಂದ ಬಂದಿರುವ ಆತ್ಮವೆಂಬುದರ ಬದಲಾಗಿ ದೇವನ ಆತ್ಮವೆಂದು ಹೇಳುವ ಅತಿಶಯಕ್ಕಿಳಿ ರು. ಅನಂತರ Holy Ghost (ಪವಿತ್ರಾತ್ಮ)ವೆಂದು ಕರೆದರು. ಏಸುಕ್ರಿಸ್ತರು(ಅ) ಮಸೀಹ ೀವನ ಆತ್ಮ ಮತ್ತು ದೇವನೆಂದು ಮೂರು ರೀತಿಯ ದೈವಿಕ ವಾದಗಳು ಕ್ರೈಸ್ತರೊಳಗೆ ಳೆದವು. ಇದು ಕ್ರೈಸ್ತರ ಎರಡನೆಯ ಅತಿಶಯವೆಂದು ಹೇಳಬಹುದು.

## ಂದನೆಯ ಉದಾಹರಣೆ

ಹಝ್ರತ್ ಆದಮ್(ಅ) ಮತ್ತು ಹಝ್ರತ್ ಹವ್ವಾರನ್ನು ಪಿಶಾಚಿಯು(ಶೈತಾನನು) ಂಚಿಸಿತ್ತೆಂದು ಪವಿತ್ರ ಕುರ್‌ಆನಿನ ವಿವರಣೆಯಿಂದ ತಿಳಿದು ಬರುತ್ತದೆ. ಆದರೆ ಬೈಬಲಿನಲ್ಲಿ ತಾನನು ಹಝ್ರತ್ ಹವ್ವಾರಿಂದ ಉಪಾಯವಾಗಿ ನಿಷಿದ್ಧ ಕಾರ್ಯ ಮಾಡಿಸಿದ ನೆಂದು ವರಿಸಲಾಗಿದೆ. ಅಂದರೆ ಶೈತಾನನ ಕಾಪಟ್ಯಕ್ಕೆ ಸಿಲುಕಲು ಮತ್ತು ಆದಮ್‌ರು(ಅ) ಆ ರ್ಯವೆಸಗಲು ಮಹಿಳೆ ಕಾರಣವಾಗಿದ್ದಾಳೆ. ಆದುದರಿಂದ ಮಹಿಳೆಯನ್ನು ತಪ್ಪಿತಸ್ಥಳೆಂದು ದು ಸೂಚಿಸಿದೆ. ಪವಿತ್ರ ಕುರ್‌ಆನ್ ಈ ಘಟನೆಯನ್ನು ಹೀಗೆ ಸ್ಪಷ್ಟಪಡಿಸಿದೆ: "ಆ ಬಳಿಕ ಾವು ಆದಮರೊಡನೆ, 'ನೀನು ಮತ್ತು ನಿನ್ನ ಪತ್ನಿ-ಇಬ್ಬರೂ ಸ್ವರ್ಗದಲ್ಲಿರಿ ಮತ್ತು ಅಲ್ಲಿ ನೀವು ಚ್ಛಿಸಿದ್ದೆಲ್ಲವನ್ನೂ ಬೇಕಷ್ಟು ಉಣ್ಣಿರಿ. ಆದರೆ, ಆ ವೃಕ್ಷವನ್ನು ಸಮೀಪಿಸ ಬಾರದು. ಅನ್ಯಥಾ ಕ್ರಮಿಗಳಾಗುವಿರಿ' ಎಂದೆವು. ಕೊನೆಗೆ ಶೈತಾನನು ಅವರಿಬ್ಬರನ್ನೂ ಆ ವೃಕ್ಷದ ಕಡೆಗೆ ಪ್ರೇರೇಪಿಸಿ ಮ್ಮ ಆಜ್ಞಾಪಾಲನೆಯಿಂದ ತಡೆದುದಲ್ಲದೆ, ಅವರು ಹಿಂದೆ ಇದ್ದ ಸ್ಥಿತಿಯಿಂದ ಅವರನ್ನು ೂರತಂದುಬಿಟ್ಟನು. ಆಗ, 'ನೀವಿನ್ನು ಇಲ್ಲಿಂದ ಹೊರಗಿಳಿಯಿರಿ. ನೀವು ಪರಸ್ಪರ ಶತ್ರುಗಳಾಗಿ ತ್ತೀರಿ ಮತ್ತು ನಿಮಗೆ ಒಂದು ನಿರ್ದಿಷ್ಟ-ಕಾಲದವರೆಗೆ ಭೂಮಿಯ ಮೇಲಿದ್ದು ಅಲ್ಲಿ ಜೀವಿಸ ೇಕಾದೀತು' ಎಂದು ನಾವು ಆಜ್ಞಾಪಿಸಿದೆವು." (ಪವಿತ್ರ ಕುರ್‌ಆನ್, 2:35-36)

ಈ ರೀತಿ ಮಹಿಳೆ ಮತ್ತು ಪುರುಷರಿಬ್ಬರೂ ಪಿಶಾಚಿಯ ವಂಚನೆಗೀಡಾದುದು ತಿಳಿದು ರುತ್ತದೆ.

## ರನೆಯ ಉದಾಹರಣೆ

ಪ್ರವಾದಿ ನೂಹರ(ಅ) ಕಾಲದಲ್ಲಿ ಬಂದಿರುವ ಪ್ರವಾಹದಲ್ಲಿ ನೂಹರು, ಅವರ ಪತ್ನಿ,

ಅವರ ಮೂವರು ಮಕ್ಕಳು ಮತ್ತು ಮಕ್ಕಳ ಪತ್ನಿಯರು ಮಾತ್ರ ಪಾರಾಗಿದ್ದಾರೆ. ಆದುದರಿ ಜಗತ್ತಿನಲ್ಲಿರುವುದು ಬರೇ ನೂಹರ(ಅ) ಸಂತಾನವಾಗಿದೆ ಎಂದು ಬೈಬಲ್ ವಿವರಿಸಿರುತ್ತ ಆದರೆ ಪವಿತ್ರ ಕುರ್‌ಆನ್ ಇದನ್ನು ಖಂಡಿಸಿದ್ದು, ನೂಹರು, ಅವರ ಮಕ್ಕಳು ಮ ಸೊಸೆಯಂದಿರು ಮಾತ್ರವಲ್ಲ ಇತರ ವಿಶ್ವಾಸಿಗಳು ಕೂಡಾ ನೂಹರ ನೌಕೆಯ ಪಾರಾಗಿರುವವರೆಂದು ಹೇಳಿದೆ. ಜಗತ್ತಿನಲ್ಲಿರುವ ಆನಂತರದ ಮಾನವರು ಕೇವಲ ಪ್ರವಾ ನೂಹರ ಸಂತತಿಯಲ್ಲ, ನಾವೆಯಲ್ಲಿದ್ದ ಇತರರ ಸಂತಾನ ಕೂಡಾ ಜಗತ್ತಿನಲ್ಲಿವೆಯೆಂ ಪವಿತ್ರ ಕುರ್‌ಆನ್‌ನಿಂದ ಸ್ಪಷ್ಟವಾಗುತ್ತಿದೆ.

**"ನೂಹರ ಸಂಗಡ ನಾವು ನಾವೆಯಲ್ಲಿ ಏರಿಸಿದ್ದವರ ಸಂತತಿ ನೀವಾಗಿರುತ್ತೀರಿ ಮ ನೂಹ್ ಓರ್ವ ಕೃತಜ್ಞ ದಾಸರಾಗಿದ್ದರು."** (ಪವಿತ್ರ ಕುರ್‌ಆನ್, 17:3)

ಪವಿತ್ರ ಕುರ್‌ಆನ್‌ನಲ್ಲಿ ಇನ್ನೊಂದೆಡೆ ಈ ರೀತಿಯಿದೆ-

**"ಈ ಪ್ರವಾದಿಗಳು ಅಲ್ಲಾಹನು ಅನುಗ್ರಹಿಸಿದವರಾಗಿದ್ದು, ಆದಮರ ಸಂತತಿ ಯಿಂದ ನಾವು ನೂಹರೊಂದಿಗೆ ನಾವೆಯಲ್ಲಿ ಏರಿಸಿದ್ದವರ ಸಂತತಿಯಿಂದಲೂ ಇಬ್‌ರಾಹೀ ಸಂತತಿಯಿಂದಲೂ ಇಸ್ರಾಈಲರ ಸಂತತಿಯಿಂದಲೂ ಆಗಿದ್ದರು..."**

(ಪವಿತ್ರ ಕುರ್‌ಆನ್, 19:5

ಆದರೆ ಬಹಳಷ್ಟು ಯಹೂದಿ ವಿದ್ವಾಂಸರ ತಪ್ಪು ಕಲ್ಪನೆಗಳಿಂದಾಗಿ ಮಾ ವಂಶಾವಳಿಯನ್ನು ಪ್ರವಾದಿ ನೂಹರ(ಅ) ಮೂವರು ಮಕ್ಕಳಿಗೆ ಜೋಡಿಸಲಾಗುತ್ತಿದೆ. ನೂ ನೌಕೆ ತಂಗಿದ ಸ್ಥಳದ ಬಗ್ಗೆ ಬೈಬಲ್ ಮತ್ತು ಪವಿತ್ರ ಕುರ್‌ಆನಿನಲ್ಲಿ ಭಿನ್ನ ಭಿನ್ನ ಉಲ್ಲೇಖಗಳ ಪ್ರಾಚೀನ ನಂಬಿಕೆ ಮತ್ತು ಹೊಸ ಸಂಶೋಧನೆಗಳಿಂದ ಪವಿತ್ರ ಕುರ್‌ಆನಿನ ವಿವರಣೆಗೆ ಹೆ ಒತ್ತು ಲಭಿಸುತ್ತಿದೆ. ಪವಿತ್ರ ಕುರ್‌ಆನ್ ನೂಹರ ನೌಕೆ ತಂಗಿರುವ ಸ್ಥಳವನ್ನು 'ಜೂದಿ' ಪವ ಎಂದು ಹೇಳಿದ್ದು ಆಧುನಿಕ ಸಂಶೋಧನೆಗಳಿಂದಲೂ ನೂಹ್‌ರ(ಅ) ನೌಕೆಯ ಪಡಿಯ ಜೂದಿ ಬೆಟ್ಟದ ತುದಿಯಲ್ಲೇ ಪತ್ತೆಯಾಗಿದೆ.

## ಏಳನೆಯ ಉದಾಹರಣೆ

ಪ್ರವಾದಿ ಇಬ್ರಾಹೀಮರ(ಅ) ಚರಿತ್ರೆಯಲ್ಲಿ ಅವರನ್ನು ವಿರೋಧಿಗಳು ಬೆಂಕಿಗೆಸ ಉರಿಸಿ ಕೊಲ್ಲಲೆತ್ನಿಸಿದ ಘಟನೆಯು ಪ್ರಾಮುಖ್ಯವಾಗಿದೆ. ಆದರೆ ಇದು ಬೈಬಲ್ ಎಲ್ಲಿಯೂ ಉದ್ಧರಿಸಲ್ಪಟ್ಟಿಲ್ಲ. ಅಲ್ಲಾಹನು ಪ್ರವಾದಿ ಇಬ್ರಾಹೀಮರ ವಿರೋಧಿಗಳ ಕೃತ್ಯವ ವಿಫಲ ಗೊಳಿಸಿದ್ದನು. ಅಂದಿನ ಸಾಮ್ರಾಟನಾದ ನಮ್ರೂದ್ ಮತ್ತು ಪ್ರವಾದಿ ಇಬ್ರಾಹೀ ನಡುವಿನ ಸಂವಾದ ಹಾಗೂ ಅಂತಿಮವಾಗಿ ನಮ್ರೂದ್‌ನು ಸೋಲನುಭವಿಸಿರುವ

2. ಉ/6/12; 7/7; 011; 9/19

ಉಲ್ಲೇಖವಾಗಿಲ್ಲ.

ಪ್ರವಾದಿ ಇಬ್ರಾಹೀಮರು ದೇವ ಸಂಪ್ರೀತಿಗಾಗಿ ಹಿಜ್‌ರಾ (ದೇಶ ತ್ಯಾಗ) ನಡೆಸಿದ್ದರು. ಅವರ ಚರಿತ್ರೆಯಲ್ಲಿ ಇವು ಮುಖ್ಯಾಂಶಗಳಾಗಿವೆ. ಬೈಬಲಿನಲ್ಲಿ ಇಂತಹ ಮಹತ್ವಪೂರ್ಣ ಘಟನೆಗಳೇ ಇಲ್ಲ.

ಆದರೆ ಪವಿತ್ರ ಕುರ್‌ಆನಿನಲ್ಲಿ ಇವುಗಳ ಉಲ್ಲೇಖ ದೊರೆಯುವುದು. ಮಾತ್ರವಲ್ಲ ಯಹೂದಿಯರ ಬಗ್ಗೆ ಉದ್ಧರಿಸುತ್ತಾ ನೀವು ಪೂರ್ವಜರನ್ನು ಬಹಳ ಜಂಭದಿಂದ ಹೇಳಿ ಕೊಳ್ಳುತ್ತೀರಿ. ಆದರೆ ಅವರು ಮಾಡಿದ ಮಹಾನ್ ಕಾರ್ಯಗಳನ್ನು ನಿರ್ಲಕ್ಷಿಸುತ್ತೀರಿ. ಅವರ ಜೀವನ ಪದ್ಧತಿಗೆ ಮಹತ್ವ ನೀಡಲಾರಿರಿ ಎಂದು ಪವಿತ್ರ ಕುರ್‌ಆನ್ ಖಂಡನೆ ಮಾಡಿದೆ.

ಪ್ರವಾದಿ ಇಬ್ರಾಹೀಮರು(ಅ) ಪುತ್ರ ಇಸ್‌ಹಾಕರನ್ನು(ಅ) ಹರಕೆಯೊಪ್ಪಿಸಿದರೆಂದು (ಉ. 22/1-2) ಬೈಬಲ್ ವಿವರಿಸುತ್ತದೆ. ಮತ್ತೊಂದು ಕಡೆ ಇಬ್ರಾಹೀಮರು ಏಕೈಕ ಮಗನನ್ನು ಹರಕೆಯೊಪ್ಪಿಸಿದರು ಎಂದಿದೆ. (ಉ. 16/1-4) ಇಬ್ರಾಹೀಮರು ಹರಕೆಯೊಪ್ಪಿಸುವ ಸಮಯದಲ್ಲಿ ಅವರಿಗೆ ಇಸ್ಮಾಈಲ್(ಅ) ಏಕೈಕ ಸಂತಾನವಾಗಿದ್ದರೇ ಹೊರತು ಇಸ್‌ಹಾಕರಲ್ಲ ವೆಂದು ಪವಿತ್ರ ಕುರ್‌ಆನ್ ವಿವರಿಸುವ ಮೂಲಕ ಬೈಬಲ್‌ನಲ್ಲಿರುವ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿದೆ.

## ಎಂಟನೆಯ ಉದಾಹರಣೆ

ಬೈಬಲ್ ಇಸ್ರಾಈಲೀ ಕುಟುಂಬದ ಕುರಿತು ಹೀಗೆ ವಿವರಿಸಿದೆ. ಅದು ಈಜಿಪ್ಟ್‌ನಿಂದ ಹೊರಡುವಾಗ ನೆರೆಯವರಿಂದ ಆಭರಣವನ್ನು ಕೇಳಿ ಪಡೆದಿತ್ತು. ಅದೊಂದು ಅವರಿಗೆ ಬರೇ ನೆಪ ಮಾತ್ರವಾಗಿತ್ತು. ದೋಚುವುದು ಅವರ ಉದ್ದೇಶವಾಗಿತ್ತು. ಅವರ ಪುರುಷರು-ಹೆಂಗಸರು ರಾತೋರಾತ್ರಿ ಅಲ್ಲಿಂದ ಪಲಾಯನ ಹೂಡಿದರು. ಸ್ವತಃ ಪ್ರವಾದಿ ಮೂಸಾರೇ(ಅ) ಅವರಿಗೆ ಈ ಕಾರ್ಯದಲ್ಲಿ ನೆರವು ನೀಡಿದ್ದರು. ಹೀಗೆ ಅವರು ದೇವನ ವತಿಯ ಶಿಕ್ಷಣ ದಂತೆ ಮಾಡಿರುವರೆಂದು ಬೈಬಲ್‌ನಲ್ಲಿ ವಿವರಿಸಲಾಗಿದೆ. (ಉ.3/13/22,11/2-3)

ಇದನ್ನು ಪವಿತ್ರ ಕುರ್‌ಆನ್ ನಿರಾಕರಿಸಿದೆ. ಪವಿತ್ರ ಕುರ್‌ಆನ್ ಪ್ರವಾದಿಗಳ ಚಾರಿತ್ರ್ಯವು ಉನ್ನತವಾದುದೆಂದು ಸೂಚಿಸಿದೆ. ನೀಚ ಕಾರ್ಯದ ಸಮೀಪವೂ ಅವರು ಸುಳಿಯುವವರಲ್ಲ. ಹೀಗಿರುವಾಗ ಬೈಬಲ್ ಪ್ರವಾದಿಗಳು ತಮ್ಮ ಅನುಯಾಯಿಗಳಿಗೆ ದೇವಾದೇಶದ ಪ್ರಕಾರ ದೋಚಲು ಹೇಳಿಕೊಡುತ್ತಾರೆ ಎಂದಿದೆ. ಇದು ಪ್ರವಾದಿ ಮತ್ತು ದೇವ ಘನತೆಗೆ ತದ್ವಿರುದ್ಧ ವಾಗಿರುವ ಬೈಬಲ್‌ನ ಉಲ್ಲೇಖವಾಗಿದೆ. ಈ ಎಲ್ಲ ಉಲ್ಲೇಖಗಳು ಸತ್ಯಕ್ಕೆ ವಿರುದ್ಧವಾಗಿದ್ದು ಪುರಾವೆಗಳ ಆಗತ್ಯವಿಲ್ಲ. ಬೈಬಲ್ ಒಂದೆಡೆ ಹೀಗೂ ಹೇಳಿದೆ. "ಆನಂತರ ಪ್ರಭು (ಮೂಸಾ ರೊಡನೆ) ಹೇಳಿದನು- ನಿಮ್ಮ ಕೈಯನ್ನು ಎದೆಗೊತ್ತಿರಿ. ಮೂಸಾ ಎದೆಗೆ ಕೈ ಇಟ್ಟರು. ಅಲ್ಲಿಂದ

ಕೈ ತೆಗೆದಾಗ ಕುಷ್ಟರೋಗಕ್ಕೆ ಸಮಾನವಾಗಿ ಅವರ ಕೈ ಬಿಳಿಚಿಕೊಂಡಿತ್ತು." (ನಿ. 4/6)

ಬೈಬಲಿನ ಈ ವಿಶ್ಲೇಷಣೆಯನ್ನು ಪವಿತ್ರ ಕುರ್‌ಆನ್ ಖಂಡಿಸುತ್ತದೆ. ಅದು ಮೂಸಾ
ದೇವನಿಂದ ನೀಡಲ್ಪಟ್ಟ ಪವಾಡ ಎಂದು ಪವಿತ್ರ ಕುರ್‌ಆನ್ ವರ್ಣಿಸಿದೆ.

ಪವಿತ್ರ ಕುರ್‌ಆನ್ ಹೇಳುವುದನ್ನು ನೋಡಿರಿ,

**"ನಿಮ್ಮ ಕೈಯನ್ನು ಬಗಲಿನಲ್ಲಿಡಿರಿ. ಏನೊಂದೂ ಪ್ರಯಾಸವಿಲ್ಲದೆ ಹೊಳೆಯುತ್ತ ಹೊ ಬರುವುದು. ಇದು ಎರಡನೆಯ ನಿದರ್ಶನ." (ಪವಿತ್ರ ಕುರ್‌ಆನ್, 20:22)**

ಹಾರೂನರು ಕರುವೊಂದನ್ನು ಮಾಡಿದರು ಮತ್ತು ಅದನ್ನು ಇಸ್ರಾಈಲರ ಆರಾ ವೆಂದು ಸೂಚಿದರೆಂದು ಬೈಬಲ್ ವರ್ಣಿಸಿದೆ. (ನಿ. 32/3-6) ಪವಿತ್ರ ಕುರ್‌ಆನ್ ಬೈಬಲ ಈ ಉಲ್ಲೇಖವನ್ನು ಅತ್ಯಂತ ಸ್ಪಷ್ಟವಾಗಿ ಖಂಡಿಸಿದೆ. ಹಾರೂನರನ್ನು ಬಹುದೇವತ್ವದ ಕೆಡ ನಿಂದ ಪರಿಶುದ್ಧವೆಂದು ಹೇಳಿದೆ. ಕರುವನ್ನು ಮಾಡಿರುವುದು ಸಾಮಿರಿ ಎಂಬ ಓ ಮಂತ್ರವಾದಿಯಾಗಿದ್ದ. ಅವನು ಅದನ್ನು ತಯಾರಿಸಿ ಇಸ್ರಾಈಲರಿಗೆ ಅದು ನಿಮ್ಮ ಇ ದೇವತೆಯೆಂದು ಹೇಳಿದ್ದನು. ಇಸ್ರಾಈಲರನ್ನು ಕರು ಪೂಜೆಯಿಂದ ತಡೆಯುತ್ತಾ ಪ್ರವಾ ಹಾರೂನರು(ಅ) ವಿನಂತಿಸಿರುವುದನ್ನು ಪವಿತ್ರ ಕುರ್‌ಆನ್ ಹೀಗೆ ಉಲ್ಲೇಖಿಸಿದೆ-

**"ಹೇ ಜನರೇ, ನೀವು ಇದರ ಕಾರಣದಿಂದಾಗಿ ಪರೀಕ್ಷೆಗೆ ಗುರಿಯಾಗಿರುತ್ತೀರಿ. ರಹ್ಮಾನ (ಪರಮ ದಯಾಳುವೇ) ನಿಮ್ಮ ಪ್ರಭು. ಆದುದರಿಂದ ನೀವು ನನ್ನನ್ನು ಅನುಸರಿಸಿರಿ ಮ ನನ್ನ ಆಜ್ಞೆಯನ್ನು ಪಾಲಿಸಿರಿ." (ಪವಿತ್ರ ಕುರ್‌ಆನ್, 20:87-91)**

## ಒಂಬತ್ತನೆಯ ಉದಾಹರಣೆ

ಒಂದು ದಿನ ಪ್ರವಾದಿ ಮೂಸಾರು(ಅ) ತನ್ನ ಮಾವನ ಕುರಿಗಳನ್ನು ಮೇಯಿಸು ಪರ್ವತದ ಸಮೀಪಕ್ಕೆ ಬಂದರು. ಆಗ ದೇವನು ಅವರನ್ನು ಸಂಬೋಧಿಸಿ ಪ್ರವಾದಿತ್ವವ ನೀಡುವನು ಮತ್ತು ಈಜಿಪ್ಟ್‌ಗೆ ಹೋಗಲು ಆದೇಶ ನೀಡುವನು. ಆನಂತರ ಮೂಸಾರು( ತನ್ನ ಮಾವನ ಅಪ್ಪಣೆ ಪಡೆದು ಅಲ್ಲಿಂದ ಹೊರಟರು ಎಂದು ಬೈಬಲಿನಲ್ಲಿ ವಿವರಿಸಲಾಗಿ
(ನಿ. 3/1-4;1

ಪವಿತ್ರ ಕುರ್‌ಆನ್ ಬೈಬಲ್‌ನ ಈ ವಿವರಣೆಯನ್ನು ಪರಿಷ್ಕರಿಸಿದ್ದು ಮಾವನೊ ಮಾಡಿರುವ ಒಪ್ಪಂದ ಪ್ರಕಾರ ನಿಶ್ಚಯಿಸಿರುವ ಕಾಲದ ವರೆಗೂ ಮೂಸಾರು(ಅ) ಅ ಬಳಿಯೇ ಇದ್ದರೆಂದು ತಿಳಿಸಿದೆ. ಆ ಅವಧಿ ಪೂರ್ಣವಾದ ಮೇಲೆ ಪತ್ನಿ ಮಕ್ಕಳನ್ನು ಕರೆ ಕೊಂಡು ಒಂದು ರಾತ್ರಿ ಅವರು ಪ್ರಯಾಣ ಹೊರಟರು. ಪ್ರಯಾಣದ ನಡುವೆ ಅವ ಉರಿಯುವ ಬೆಂಕಿ ಕಾಣಿಸಿತು. ಬೆಂಕಿಯನ್ನು ತರಬಹುದು ಅಥವಾ ಅಲ್ಲಿ ಯಾರನ್ನಾದ ಭೇಟಿಯಾಗಬಹುದು. ಮುಂದೆ ಹೋಗಲು ದಾರಿಯನ್ನು ತಿಳಿದುಕೊಳ್ಳಬಹುದು ಎಂ

ವರು ಪರ್ವತ(ಬೆಂಕಿಯಿದ್ದಲ್ಲಿಗೆ)ದ ಬಳಿಗೆ ಹೋದರೆಂದು ಪವಿತ್ರ ಕುರ್‌ಆನ್ ವಿವರಿಸಿದೆ. ಲ್ಲಿ ದೇವನು ಅವರನ್ನು ಸಂಬೋಧಿಸುತ್ತಾನೆ ಮತ್ತು ಪ್ರವಾದಿತ್ವ ಪದವಿಯನ್ನು ಕರುಣಿಸುತ್ತಾನೆ. ೋಡಿರಿ: ಪವಿತ್ರ ಕುರ್‌ಆನ್, 20:10-24)

## ತ್ತನೆಯ ಉದಾಹರಣೆ

ಪ್ರವಾದಿ ಝುಕರಿಯ್ಯಾರು(ಅ) ಪುತ್ರ ಸಂತಾನವಾಗುವ ವರೆಗೂ ಮೂಕರಾಗಿದ್ದರೆಂದು ಬಲ್ ವಿವರಿಸಿದೆ. ಅವರ ಯಾವುದೋ ತಪ್ಪಿಗಾಗಿ ದೊರಕಿದ್ದ ಶಿಕ್ಷೆಯಾಗಿತ್ತು ಅದು ಎಂದು ಬಲ್‌ನ ಲೂಕದಲ್ಲಿರುವ ವಿವರಣೆಯಾಗಿದೆ. ಇದನ್ನು ಪವಿತ್ರ ಕುರ್‌ಆನ್ ತಿದ್ದಿ ಝುಕರಿಯ್ಯಾ ೆ ಪುತ್ರ [ಯಹ್ಯಾ(ಅ)] ಸಂತಾನವಾಗುವ ಶುಭ ಸೂಚನೆ ನೀಡಲಾಯಿತು. ಅವರು ೂರು ದಿನ ಮೌನ ವ್ರತ ಆಚರಿಸುವಂತೆ ದೇವಾದೇಶವಾಗಿತ್ತು ಎಂದು ಸ್ಪಷ್ಟಪಡಿಸಿದೆ. ವನ ಗುಣಗಾನಕ್ಕೆ ಏಕಾಗ್ರತೆ ಲಭಿಸಲೆಂದು ಝುಕರಿಯ್ಯಾರಿಗೆ ಮೌನ ವ್ರತ ಆಚರಿಸಲು ಚಿಸಲಾಗಿತ್ತು ಮತ್ತು ಜನರಿಗೂ ಪ್ರಾತಃ ಕಾಲ ಮತ್ತು ಸಂಧ್ಯಾ ಕಾಲದಲ್ಲಿ ದೇವನ ಣಗಾನ ಮಾಡುವಂತೆಯೂ ದೇವಾದೇಶವಾಗಿತ್ತು ಎಂದು ಪವಿತ್ರ ಕುರ್‌ಆನ್ ವಿವರಿಸಿದೆ.

**(ಪವಿತ್ರ ಕುರ್‌ಆನ್, 19: 7-11)**

## ನ್ನೊಂದನೆಯ ಉದಾಹರಣೆ

ಪ್ರವಾದಿ ಅಯ್ಯೂಬ್‌ರನ್ನು(ಅ) ಬೈಬಲ್ ಓರ್ವ ಹೇಡಿ ವ್ಯಕ್ತಿಯಂತೆ ಚಿತ್ರಿಸಿದೆ. ವರಲ್ಲಿ ಕೇವಲ ದೂರುಗಳಿದ್ದವು. ಅವರು ತನ್ನ ಮೇಲೆರಗಿದ ಸಂಕಟಗಳ ಫಿರ್ಯಾದುದಾರ ಗಿದ್ದರು (ಅಯ್ಯೂಬ್ 19/1-22) ಎಂದು ಬೈಬಲ್ ಸೂಚಿಸಿದೆ.

ಈ ಉಲ್ಲೇಖಗಳನ್ನು ಪವಿತ್ರ ಕುರ್‌ಆನ್ ನಿರಾಕರಿಸಿದೆ. ಅಂದು ಪ್ರವಾದಿ ಅಯ್ಯೂಬ್(ಅ) ್ನ ಮೇಲಿರುವ ಕಷ್ಟಗಳನ್ನೇ ನಿವೇದಿಸಿಕೊಳ್ಳಲು ಹಿಂಜರಿದ ಓರ್ವ ಧೀಮಂತ ವ್ಯಕ್ತಿ ಎಂದು ವಿತ್ರ ಕುರ್‌ಆನ್ ವಿವರಿಸಿದೆ. **"ಮತ್ತು ಇವುಗಳನ್ನೇ (ವಿವೇಕ, ತೀರ್ಪುಶಕ್ತಿ ಮತ್ತು ಜ್ಞಾನದ ನುಗ್ರಹಗಳನ್ನೇ) ನಾವು ಅಯ್ಯೂಬರಿಗೂ ನೀಡಿದ್ದೆವು. ಅವರು, 'ನನಗೆ ರೋಗ ತಗಲಿ ೀಗಿದೆ. ನೀನು ಕರುಣಾಳು ಗಳಲ್ಲಿ ಅತ್ಯಂತ ಕರುಣಾಳು ಆಗಿರುತ್ತೀ' ಎಂದು ತಮ್ಮ ಭುವನ್ನು ಕೂಗಿ ಕರೆದ ಸಂದರ್ಭವನ್ನು ಸ್ಮರಿಸಿರಿ." (ಪವಿತ್ರ ಕುರ್‌ಆನ್, 21:83)**

ಅವರು ದೇವನಲ್ಲಿ ಕಷ್ಟದ ಕುರಿತು ಹೇಳಿದ್ದರೂ "ನೀನು ಕರುಣಾಳುಗಳಲ್ಲಿ ಅತ್ಯಂತ ರುಣಾಳು ಆಗಿರುತ್ತೀ" ಎಂದು ಅತ್ಯಂತ ಸಂಕ್ಷಿಪ್ತ ಶಬ್ದಗಳಲ್ಲಿ ಬಿನ್ನವಿಸಿದರು. ದೇವನಲ್ಲಿ ವರು ಇದಕ್ಕಿಂತ ಹೆಚ್ಚಿನ ಫಿರ್ಯಾದನ್ನು ನೀಡಿರಲಿಲ್ಲ. ಪ್ರವಾದಿ ಅಯ್ಯೂಬ್‌ರ(ಅ) ಈ ್ರಾರ್ಥನೆಯಿಂದ ನಮಗೆ ಅವರು ಎಷ್ಟು ಧೈರ್ಯಶಾಲಿಯಾಗಿದ್ದರೆಂದು ತಿಳಿಯುವುದು. ವರೋರ್ವ ಸಂತೃಪ್ತ, ಸಜ್ಜನ ವ್ಯಕ್ತಿಯಾಗಿದ್ದರು ಎಂದು ಪವಿತ್ರ ಕುರ್‌ಆನ್‌ನಿಂದ ನಮಗೆ

ಸ್ಪಷ್ಟವಾಗುವುದು.

## ಹನ್ನೆರಡನೆಯ ಉದಾಹರಣೆ

ಬೈಬಲ್‌ನಲ್ಲಿ ಪ್ರವಾದಿ ದಾವೂದ್‌ರ(ಅ) ಮೇಲೆಯೂ ಮಿಥ್ಯಾರೋಪಗಳಿವೆ. ಊರಿಯಾಹ್ ಹಿಟ್ಟಿ (Uriah the Hitti)ಯ ಪತ್ನಿಯೊಡನೆ ದಾವೂದ್‌ರು(ಅ) ವ್ಯಭಿಚಾ ನಡೆಸಿದರೆಂದು ಅದು ಹೇಳಿದೆ. ನಂತರ ದಾವೂದ್ ಊರಿಯಾಹ್‌ರನ್ನು ಯುದ್ಧದಲ್ಲಿ ಕೊ ಮಾಡಿಸಿದರು. ಆತನ ಪತ್ನಿಯನ್ನು ವಿವಾಹವಾದರೆಂಬ ಆರೋಪವನ್ನು ಹೊರಿಸ ಲಾಗಿದೆ. ಈ ಮಹಿಳೆಯನ್ನು ಪ್ರವಾದಿ ಸುಲೈಮಾನರ(ಅ) ತಾಯಿಯೆಂದೂ ಸಾರಲಾಗಿದೆ.

(ಸ್ಯಾಮುವೇಲ್ ಅಧ್ಯಾಯ 11, 12)

ಈ ಕೆಟ್ಟ ಆರೋಪಗಳೆಲ್ಲವೂ ಆಧಾರ ರಹಿತವಾದುದೆಂದು ಪವಿತ್ರ ಕುರ್‌ಆನ್ ಸ್ಪಷ್ಟವಾಗಿ ಘೋಷಿಸಿದೆ. ದಾವೂದ್(ಅ) ಓರ್ವ ಪ್ರವಾದಿಯಾಗಿದ್ದು ಪರಿಶುದ್ಧ ಚಾರಿತ್ರ್ಯ ವಿರುವ ವ್ಯಕ್ತಿಯೆಂದು ಅದು ಸ್ಪಷ್ಟಪಡಿಸಿದೆ. ಪ್ರವಾದಿ ಲೂತ್‌ರ(ಅ) ಮೇಲೆಯೂ ಬೈಬಲ್‌ನಲ್ಲಿ ವ್ಯಭಿಚಾರದ ಆರೋಪವಿದೆ (ಉ. 19/31-38) ಪವಿತ್ರ ಕುರ್‌ಆನ್ ಪ್ರವಾದಿಗಳನ್ನು ಇಂತಹ ನೀಚಾರೋಪಗಳಿಂದ ಮುಕ್ತಗೊಳಿಸಿ ಇವೆಲ್ಲವೂ ತಮ್ಮ ಪ್ರವಾದಿಗಳ ಮೇಲೆ ಇಸ್ರಾಈಲರು ಎರಚಿದ ಕಪ್ಪು ಕಲೆಗಳೆಂದು ಎತ್ತಿ ತೋರಿಸುವ ಮಹಾನ್ ಕಾರ್ಯವೆಸಗಿದೆ.

ಯಹೂದಿ ರಿಬ್ಬಿಗಳು ಪ್ರವಾದಿ ಸುಲೈಮಾನರು(ಅ) ಸಬಾದ ರಾಣಿಯೊಂದಿ ದುಷ್ಕಾರ್ಯವೆಸಗಿದ್ದಾರೆಂಬ ಕುಪ್ರಚಾರ ನಡೆಸಿರುವರು. ಬೈತುಲ್ ಮುಕದ್ದಿಸ್ ನಾಶ ಮಾಡಿರು ಸಾಮ್ರಾಟ ಬುಕ್ತ್ ಎಂಬವನು ಈ ಅನೈತಿಕ ಪರಂಪರೆಯಲ್ಲಿ ಹುಟ್ಟಿದವನೆಂದು ಅವರು ಬರೆದಿದ್ದಾರೆ. (Jewish Encyclopeadia Vol-II Page 443)

ಪ್ರವಾದಿ ಸುಲೈಮಾನ್‌ರ(ಅ) ವಿರೋಧಿಗಳಾಗಿದ್ದ ಯಹೂದಿ ಗುಂಪೊಂದು ನಡೆಸಿರು ಕೆಟ್ಟ ಅಪಪ್ರಚಾರವಿದು. ಈ ಗುಂಪು ಪ್ರವಾದಿ ಸುಲೈಮಾನರ(ಅ) ಮೇಲೆ ನಾನಾ ರೀತಿಯ ಮಿಥ್ಯಾರೋಪಗಳನ್ನು ಹೊರಿಸಿದೆ. ಸುಲೈಮಾನರು ಆಡಂಬರ ಪ್ರಿಯರು, ಅಧಿಕಾರ ಲಂಪಟ ಎಂದು ಈ ಗುಂಪು ಚಿತ್ರಿಸಿದೆ. ಪ್ರವಾದಿ ಸುಲೈಮಾನ್‌ರು(ಅ) ತೌರಾತ್‌ನ ಆದೇಶಗಳನ್ನೆ ಉಲ್ಲಂಘಿಸಿದರು. ಅವರು ಬಹುದೇವಾರಾಧನೆ, ಮೂರ್ತಿ ಪೂಜೆ ನಡೆಸಿ ದ್ದಾರೆಂದೂ ಈ ಗುಂಪು ಆರೋಪಿಸಿದೆ. (Jewish Encyclopeadia Vol-II Page 439-443)

ಇವಿಷ್ಟೇ ಅಲ್ಲ, ಬೈಬಲ್ ಸುಲೈಮಾನರನ್ನು ಓರ್ವ ಪ್ರವಾದಿಯೆನ್ನದೆ ಓರ್ವ ಸಾಮ್ರಾಟನೆಂದು ಚಿತ್ರಿಸಿದೆ. ಇಲ್ಲಿಯೂ ಸುಲೈಮಾನ್ ವಿರೋಧಿ ಯಹೂದಿ ಗುಂಪಿನ ಕೆ ಅಪಪ್ರಚಾರದ ಪ್ರಭಾವ ಕೆಲಸ ಮಾಡಿದೆ.

ಸುಲೈಮಾನರು ದೇವಾದೇಶವನ್ನು ಉಲ್ಲಂಘಿಸುವ ಓರ್ವ ಸಾಮ್ರಾಟ. ಬಹುದೇವ

ಬಿಕೆಯ ವ್ಯಕ್ತಿ, ಸ್ತ್ರೀಲೋಲುಪ ಎಂಬುದೆಲ್ಲ ಯಹೂದಿ ದುಷ್ಟಚಾರದ ಪರಿಣಾಮ ನ್ನುವುದು ನಿಸ್ಸಂದೇಹವಾಗಿದೆ.

ಆದರೆ ಪವಿತ್ರ ಕುರ್‌ಆನ್ ಪ್ರವಾದಿ ಸುಲೈಮಾನ್‌ರ ಮೇಲಿನ ಕಳಂಕವನ್ನು ತೊಡೆದು ಕಿತು. ಅವರು ಸತ್ಯ ನಿಷೇಧಿಯಲ್ಲ, (ಪವಿತ್ರ ಕುರ್‌ಆನ್, 2: 102), ಓರ್ವ ಸಜ್ಜನರು ಮತ್ತು ಚ್ಚಾರಿತ್ರ್ಯವಿರುವ ಪ್ರವಾದಿ (ಪವಿತ್ರ ಕುರ್‌ಆನ್, 4: 163) ಎಂದು ಅದು ವಿಶ್ಲೇಷಿಸಿದೆ.

ನಾವು ಸುಲೈಮಾನರು ಮತ್ತು ಅವರ ಪಿತರಿಗೆ ತೀರ್ಮಾನ ಶಕ್ತಿ ಮತ್ತು ಜ್ಞಾನಗಳನ್ನು ಯಪಾಲಿಸಿದ್ದೆವು. (ಪವಿತ್ರ ಕುರ್‌ಆನ್, 21:79), ಸುಲೈಮಾನರು ಓರ್ವ ದೊಡ್ಡ ದೇವಭಕ್ತ ಗಿದ್ದರು ಮತ್ತು ದೇವನೆಡೆಗೆ ಹೆಚ್ಚೆಚ್ಚು ಮರಳುವವರಾಗಿದ್ದರು. (ಪವಿತ್ರ ಕುರ್‌ಆನ್, 38:30)

# ದಿಮೂರನೆಯ ಉದಾಹರಣೆ

ಬೈಬಲ್ ಮತ್ತು ಪವಿತ್ರ ಕುರ್‌ಆನ್‌ಗಳೆರಡರಲ್ಲಿಯೂ ಪ್ರವಾದಿ ಯೂಸುಫ್‌ರ(ಅ) ವನ ಚರಿತ್ರೆಯ ಉಲ್ಲೇಖವಿದೆ. ಆದರೆ ಪವಿತ್ರ ಕುರ್‌ಆನ್ ಯೂಸುಫ್‌ರ(ಅ) ಜೀವನ ತ್ರೆಯನ್ನು ವಿಸ್ತಾರವಾಗಿ ವರ್ಣಿಸಲಾಗಿದ್ದು ಅದು ಬೈಬಲ್‌ನಲ್ಲಿರುವ ತಪ್ಪುಗಳನ್ನು ಷ್ಕರಿಸಿದೆ. ಪ್ರವಾದಿ ಯೂಸುಫ್‌ರ(ಅ) ಚರಿತ್ರೆಯು ಮಾನವರ ಜೀವನಕ್ಕೆ ಮಾರ್ಗದರ್ಶನ ಗಿದೆಯೆಂದು ಪವಿತ್ರ ಕುರ್‌ಆನ್‌ನಿಂದ ತಿಳಿದು ಬರುವುದು.

ಬೈಬಲಿನ ಪ್ರಕಾರ ಪ್ರವಾದಿ ಯೂಸುಫ್‌ರು(ಅ) ತನಗೆ ಬಿದ್ದ ಕನಸನ್ನು ತಂದೆಯವ ಡನೆ ಬಿನ್ನವಿಸಿದಾಗ ಅವರ ತಂದೆಯು ಕೋಪಗೊಂಡು ಗದರಿಸಿದರು.

ಪವಿತ್ರ ಕುರ್‌ಆನಿನ ಪ್ರಕಾರ ಯೂಸುಫ್‌ರ(ಅ) ಕನಸನ್ನು ವಿವರಿಸಿದಾಗ ತಂದೆಯು ಸಿದ್ದರು. ಈ ಸ್ವಪ್ನವೊಂದು ಶುಭ ಸೂಚನೆಯಾಗಿದ್ದು ಸಹೋದರರಿಗೆ ತಿಳಿಸಬಾರ ದೆಂದು ಊಸುಫ್‌ರಿಗೆ ತಂದೆ ಉಪದೇಶಿಸಿದ್ದರು. (ಪವಿತ್ರ ಕುರ್‌ಆನ್, 12:4-6)

ಈ ರೀತಿ ಪವಿತ್ರ ಕುರ್‌ಆನಿನ ವಿವರಣೆಯು ಬೈಬಲ್‌ಗಿಂತ ಭಿನ್ನವಾಗಿದೆ.

ಬೈಬಲ್ ಸೂಚಿಸುವಂತೆ ಯೂಸುಫ್‌ರ(ಅ) ಸಹೋದರರು ಪ್ರಾಣಿಗಳನ್ನು ಮೇಯಿಸುತ್ತಾ ಕೇಮ್ ನಗರಕ್ಕೆ ಹೋಗುವರು. ಅಲ್ಲಿಂದ ಅವರನ್ನು ಕರೆದುಕೊಂಡು ಬರಲು ಊಸುಫ್‌ರನ್ನು(ಅ) ತಂದೆಯು ಕಳಿಸುತ್ತಾರೆ. ತಲ್ಮೂದ್ ಗ್ರಂಥದಲ್ಲಿಯೂ ಇದೇ ರೀತಿ ರಿಸಲಾಗಿದೆ.

ಪವಿತ್ರ ಕುರ್‌ಆನ್ ವಿವರಿಸುವಂತೆ ಯೂಸುಫ್‌ರನ್ನು(ಅ) ತಮ್ಮೊಡನೆ ಕರೆದೊಯ್ಯಲು ರ ಸಹೋದರರು ತಂದೆಯ ವಿಶ್ವಾಸ ಗಳಿಸಬೇಕಾಯಿತು. ಹೀಗೆ ಯೂಸುಫ್‌ರನ್ನು(ಅ) ನೊಯ್ದು ಹೋಗಿ ಅವರೆಲ್ಲರೂ ಸೇರಿ ಪಾಳು ಬಾವಿಗೆ ತಳ್ಳಿದ್ದರು.

ಆದರೆ ಇಸ್ರಾಈಲಿ ನಂಬಿಕೆಯು ಬೈಬಲ್‌ನ ವಿವರಣೆಗಿಂತ ಭಿನ್ನವಾಗಿದೆ. ಯೂಸುಫ್ ನ್ನು(ಅ) ಸಹೋದರರು ಕರೆದೊಯ್ದು ವ್ಯಾಪಾರಿಗಳಿಗೆ ಮಾರಿದ್ದರು ಎಂದು ಇಸ್ರಾಈಲಿ

ನಂಬಿಕೆಯಾಗಿದೆ. ಪವಿತ್ರ ಕುರ್‌ಆನ್ ಈ ಎಲ್ಲ ಉಲ್ಲೇಖಗಳನ್ನು ಖಂಡಿಸಿದ್ದು ಸಹೋದರರ ಯೂಸುಫ್‌ರನ್ನು(ಅ) ಬಾವಿಗೆ ದೂಡಿ ಹಾಕಿರುವರೆಂದು ಪವಿತ್ರ ಕುರ್‌ಆನ್ ಸ್ಪಷ್ಟಪಡಿಸಿದ

ಈ ರೀತಿ ಬೈಬಲಿಗಿಂತ ಪವಿತ್ರ ಕುರ್‌ಆನಿನಲ್ಲಿರುವ ಅನೇಕ ವಿವರಣೆಗಳು ಭಿ ವಾಗಿದ್ದು 'ಯೂಸುಫ್' ಎಂಬ ಒಂದು ಅಧ್ಯಾಯವೇ ಅವತೀರ್ಣವಾಗಿದೆ. ಅದರ ಪ್ರವಾದಿ ಯೂಸುಫ್‌ರ(ಅ) ಚರಿತ್ರೆಯನ್ನು ವರ್ಣಿಸಲಾಗಿದೆ. ಆ ಮೂಲಕ ಅದು ಬೈಬಲ್ ಹೇಳಿಕೆಗಳನ್ನು ಪರಿಷ್ಕರಿಸಿದೆ. ಆದರೆ ಪವಿತ್ರ ಕುರ್‌ಆನಿನ ಈ ಎಲ್ಲ ಮಹಾತ್ಕಾರ್ಯಗಳನ್ನು ತಮ್ಮ ಪಕ್ಷಪಾತೀ ಮನೋಭಾವದಿಂದಾಗಿ ಯಹೂದಿಯರು ಮತ್ತು ಕ್ರೈಸ್ತರು ಗುರುತಿಸಿ ವೆನ್ನಬಹುದು.

## ಹದಿನಾಲ್ಕನೆಯ ಉದಾಹರಣೆ

ತಾಲೂತ್ ಮತ್ತು ಜಾಲೂತ್‌ರ ಘಟನೆಗಳನ್ನು ಪವಿತ್ರ ಕುರ್‌ಆನ್ ವಿವರಿಸಿದ್ದು **ಇ ಅಲ್ಲಾಹನ ವಚನಗಳಾಗಿವೆ. ಇವುಗಳನ್ನು ಇದ್ದಕ್ಕಿದ್ದಂತೆ ನಾವು ನಿಮಗೆ ಕೇಳಿಸುತ್ತಿದ್ದೇವೆ. (ಪವಿತ್ರ ಕುರ್‌ಆನ್, 2:252)** ಎಂದು. ಪವಿತ್ರ ಕುರ್‌ಆನ್ ದೇವವಾಣಿ ಯಾಗಿ ಆದುದರಿಂದ ಅದರಲ್ಲಿ ನಾವು ವಿಶ್ವಾಸವಿರಿಸುವುದು ಕಡ್ಡಾಯವಾಗಿದೆ. ಪವಿತ್ರ ಕುರ್‌ಆನಿನ ಈ ಕಥಾನಕ ಪ್ರಾರಂಭದಿಂದ ಕೊನೆಯವರೆಗೂ ಓದುವಾಗ ಎಲ್ಲಿಯೂ ವಿರೋಧಾಭಾಸಗಳ ಕಾಣಿಸಲಾರವು. ಯಾವುದೋ ಮಿಶ್ರಣಗಳಾಗಲಿ, ಲೋಪ ಗಳಾಗಲಿ ಇಲ್ಲ. ಜನರಿ ಮಾರ್ಗದರ್ಶನವಿದೆ. ಆದ್ದರಿಂದ ಜಾಲೂತ್, ತಾಲೂತ್‌ರ ಘಟನೆಯನ್ನು ಬೈಬಲ್ ಸಾಮುವೇಲ್ (Samvel) ಅಧ್ಯಾಯದಲ್ಲಿ ಅಭ್ಯಸಿಸಿದವರಿಗೆ ಪವಿತ್ರ ಕುರ್‌ಆನಿನ ಶ್ರೇಷ್ಠತೆಯ ಮನವರಿಕೆಯಾದೀತು. ಬೈಬಲಿನಲ್ಲಿ ಅನಾವಶ್ಯಕ ವಿಚಾರಗಳು, ವಿರೋಧಾಭಾಸದ ವಿವರಣೆಗಳ ತುಂಬಿದೆ. ಬೈಬಲ್‌ನಲ್ಲಿ ತಾಲೂತ್‌ರನ್ನು ಸಾವೂಲ್ (Saul) ಎಂದು ಹೆಸರಿಸಲಾಗಿ ಆದ್ದರಿಂದ ಗ್ರಂಥ ರಚನಕಾರರು ಈ ಘಟನೆ ಸಂಭವಿಸಿ ಬಹುದೀರ್ಘಕಾಲ ಕಳೆದ ನಂತ ಬರೆದು ಬೈಬಲಿನಲ್ಲಿ ಸೇರಿಸಿರಬೇಕು. ಆಗ ಗ್ರಂಥಕಾರರು ತಾಲೂತ್‌ರ ನಿಜ ನಾಮಧೇಯವನ್ನ ಮರೆತು ಬಿಟ್ಟಿದ್ದರು ಎಂದು ಅನ್ನಿಸುತ್ತಿದೆ.

ಬೈಬಲಿನಲ್ಲಿ ಜಾಲೂತ್ ಸತ್ತ ಮೇಲೆಯೇ ದಾವೂದ್‌ರಿಗೆ(ಅ) ಸಾವೂಲ್(ತಾಲೂತ್) ಪರಿಚಯವಾಯಿತೆಂದು ಒಂದು ಕಡೆ ಬರೆಯಲಾಗಿದೆ. ಇನ್ನೊಂದು ಕಡೆ ಮೊದ ಸಾವೂಲ್‌ರಿಗೆ (ತಾಲೂತ್‌ರಿಗೆ) ದಾವೂದ್‌ರ ಪರಿಚಯವಿತ್ತು ಮತ್ತು ಜಾಲೂತ್‌ರನ್ನು ವಧಿಸ ದಾವೂದ್‌ರೇ ಸಮರ್ಥರೆಂದು ಅವರು ತಿಳಿದರೆಂದು ಕೂಡಾ ವಿವರಿಸಲಾಗಿದೆ. ಅನಂತ ಸಾವೂಲ್(ತಾಲೂತ್) ಅಲ್ಲಾಹನ ಸಮೃದ್ಧ ಮತ್ತು ಅನಭಿಷಿಕ್ತ (Anolmted) ದಾಸನೆಂದ ಅವರಿಗೆ ಸಾಮುವೇಲ್ ಪ್ರವಾದಿ ವಿಶೇಷ ರೀತಿಯ ಬರ್ಕತ್ತನ್ನು ನೀಡಿ ಸಾವೂಲ್‌ರ

ತುಂಬಿಸಿದರೆಂದೂ ಅಲ್ಲಿ ಬರೆಯಲಾಗಿದೆ.

ಇನ್ನೊಂದು ಕಡೆ ದಾವೂದ್‌ರ ಮೇಲೆ ಸಾವೂಲ್‌ರಿಗೇ ಹೊಟ್ಟೆ ಕಿಚ್ಚುಂಟಾಯಿತು ಮತ್ತು ದಾವೂದ್‌ರು ಜಾಲೂತ್‌ರನ್ನು ವಧಿಸಿದಾಗ ಜನಪ್ರಿಯತೆ ಲಭಿಸಿತು ಎಂದು ಬರೆಯಲಾಗಿದೆ. ಸಾಮುವೇಲ್ ಅಧ್ಯಾಯದಲ್ಲಿ ಹೊಟ್ಟೆ ಕಿಚ್ಚಿನಿಂದ ಸಾವೂಲ್‌ರು (ತಾಲೂತ್‌ರು) ದಾವೂದ್‌ರನ್ನು ಕೊಲ್ಲಿಸಲು ನೋಡಿದರೆಂದೂ ಹೇಳಲಾಗಿದೆ.

ಜಾಲೂತ್‌ರನ್ನು ಕೊಂದ ದಾವೂದ್‌ರಿಗೆ ಸಾವೂಲ್‌ರು ತನ್ನ ಮಗಳನ್ನು ಕೊಟ್ಟು ವಿವಾಹ ನೆರವೇರಿಸಿದರೆಂದೂ ಆನಂತರ ಬರೆಯಲಾಗಿದೆ. ಒಂದು ಕಡೆ ದಾವೂದರನ್ನೇ ಕೊಲ್ಲಿಸಲು ಹೋದ ವ್ಯಕ್ತಿ, ಇನ್ನೊಂದು ಕಡೆ ಮಗಳನ್ನು ವಿವಾಹ ಮಾಡಿಕೊಡುವುದು ಇಂತಹ ಅಸಂಬದ್ಧ ವರ್ಣನೆಯನ್ನು ಬೈಬಲ್ ಪ್ರಸ್ತುತಪಡಿಸಿದೆ. ಇಂತಹ ವಿರೋಧಾ ಭಾಸಗಳು ಸಮ್ಮತಾರ್ಹವಲ್ಲ, ಅದೇ ರೀತಿ ಸಾವೂಲ್(ತಾಲೂತ್‌ರ)ರ ಮೇಲೆ ಹೊರಿಸಿರುವ ಆರೋಪವೂ ಸ್ವೀಕಾರಾರ್ಹವಲ್ಲ.

ಪ್ರವಾದಿ ಸಾಮುವೇಲ್‌ರು (Samvel) ಹೊಟ್ಟೆ ಕಿಚ್ಚು ಪಡುವಂಥ ವ್ಯಕ್ತಿ ತಾಲೂತ್‌ರನ್ನು ಆಡಳಿತಗಾರನಾಗಿ ನೇಮಿಸುವುದೆಂದರೆ ಮತ್ತು ಅದಕ್ಕೆ ದೇವನ ಅಪ್ಪಣೆಯಾಗಿತ್ತೆಂದರೆ ನಂಬಲರ್ಹವಲ್ಲ ಮತ್ತು ಬರೇ ಆರೋಪಗಳಾಗಿವೆ ಎಂದು ಯಾರಿಗೂ ಸ್ಪಷ್ಟವಾಗಬಹುದು.

## ಹದಿನೈದನೆಯ ಉದಾಹರಣೆ

ವಿರೋಧಿಗಳು ಹಝ್ರತ್ ಮಸೀಹರಿಗೆ [ಪ್ರವಾದಿ ಈಸಾ(ಅ)] ಯಾವುದೇ ಹಾನಿಯನ್ನುಂಟು ಮಾಡಿಲ್ಲವೆಂದು ಪವಿತ್ರ ಕುರ್‌ಆನ್ ಸ್ಪಷ್ಟಪಡಿಸಿದೆ. ಮಸೀಹರನ್ನು(ಅ) ವಿರೋಧಿಗಳು ಬಂಧಿಸಿಲ್ಲ, ಶಿಲುಬೆಗೇರಿಸಿಲ್ಲ, ಮಸೀಹರನ್ನು ಕೊಲ್ಲುವುದಕ್ಕಾಗಲಿ, ಅವರ ಕೈಕಾಲುಗಳಿಗೆ ಮೊಳೆ ಹೊಡೆಯುವುದಕ್ಕಾಗಲಿ ಸಾಧ್ಯವಾಗಿಲ್ಲವೆಂಬ ಸತ್ಯವನ್ನು ಪವಿತ್ರ ಕುರ್‌ಆನ್ ಬಹಿರಂಗಕ್ಕೆ ತಂದಿದೆ. ಆ ರೀತಿ ಮಾಡಲಾಗಿತ್ತೆಂಬ ಕಥೆ ಪ್ರಚಲಿತವಾಗಿತ್ತು. ತನ್ನ ಪ್ರವಾದಿಯ ಮೇಲೆ ಹೊರಿಸಿರುವ ಸುಳ್ಳು ಕಥಾನಕಗಳನ್ನು ಪವಿತ್ರ ಕುರ್‌ಆನಿನ ಮೂಲಕ ಅಲ್ಲಾಹನು ದೂರೀಕರಿಸಿದನು ಮತ್ತು ಪವಿತ್ರ ಕುರ್‌ಆನ್ ಮೂಲಕ ತನ್ನ ಪ್ರವಾದಿಯ ಚಾರಿತ್ರ್ಯದ ಶ್ರೇಷ್ಠತೆಯನ್ನು ಕಿಂಚಿತ್ತು ಹಾನಿಯಾಗದಂತೆ ಕಾಪಾಡಿರುವನು.

ಆದರೆ ಮಸೀಹರನ್ನು(ಅ) ವಿರೋಧಿಗಳು ಅಪಮಾನಿಸಿರುವರೆಂದು ಬೈಬಲ್‌ನಲ್ಲಿರುವ ವಿವರಣೆಯಾಗಿದೆ. ಅದು ಹೀಗೆ ವಿವರಿಸಿದೆ. ಮಸೀಹರನ್ನು ಬಹಿಷ್ಕೃತ ಸ್ಥಿತಿಯಲ್ಲಿ ಅವರು ಶಿಲುಬೆಗೇರಿಸಿದರು. ಮಸೀಹರ ಶವವನ್ನು ರಾತ್ರಿಯ ವೇಳೆ ಶಿಷ್ಯರು ಒಯ್ದರು. ಮಸೀಹರ(ಅ) ಸಂಕಷ್ಟದ ವೇಳೆ ಶಿಷ್ಯಂದಿರೇ ಬಿಟ್ಟು ಅಗಲುತ್ತಾರೆ ಎಂಬಿತ್ಯಾದಿ ವಿವರಣೆಗಳು ಬೈಬಲ್‌ನಲ್ಲಿವೆ. ಮಸೀಹರನ್ನು ವಿರೋಧಿಗಳು ಬಂಧಿಸಿದಂದು ಓರ್ವ ಶಿಷ್ಯನು ಅವರನ್ನು ಕೋಳಿ ಕೂಗುವ

ಮುಂಚೆ ಮೂರು ಬಾರಿ ನಿರಾಕರಿಸಿದನು. ಇಸ್ಕೋರ್ಯನು ಅವರನ್ನು ಶತ್ರುಗಳಿಗೆ ಹಿಡಿಸಿಕೊಡಲು ಲಂಚ ಪಡೆದು ಬೇಹುಗಾರಿಕೆ ನಡೆಸಿದ್ದನು ಎಂಬ ಆರೋಪವನ್ನು ಮಸೀಹರ(ಅ) ಅನುಯಾಯಿಗಳ ಮೇಲೆ ಹೊರಿಸಲಾಗಿದೆ. ಆದರೆ ಇವೆಲ್ಲ ಮಸೀಹರು ಮತ್ತು ಅವರ ಶಿಷ್ಯರ ಮೇಲಿರುವ ಮಿಥ್ಯಾರೋಪಗಳಾಗಿವೆ ಮತ್ತು ಯಹೂದಿಯರು ನಡೆಸಿರುವ ದುಷ್ಕೃತ್ಯಗಳೆಂದೂ ತಿಳಿದುಬರುವುದು.

ಸೈಂಟ್ ಪೌಲ್‌ರು, ಮಸೀಹರ ಅನುಯಾಯಿಗಳಲ್ಲಿದ್ದ ನೈಜ ಕ್ರೈಸ್ತವತೆಯನ್ನು ವಿಕೃತ ಗೊಳಿಸಿದರು. ಮಾತ್ರವಲ್ಲ ಒಂದರ್ಥದಲ್ಲಿ ಅವರನ್ನು ಕ್ರೈಸ್ತರು ಮತ್ತು ಯಹೂದಿಗಳ ವಿರೋಧಿಗಳೆಂದು ಸೈಂಟ್ ಪೌಲರನ್ನು ಕರೆಯಬಹುದಾಗಿದೆ. ಅವರ ದೆಸೆಯಿಂದ ಪ್ರವಾದಿ ಈಸಾ ಮಸೀಹರ(ಅ) (ಏಸುಕ್ರಿಸ್ತರ) ಅನುಯಾಯಿಗಳು ಮತ್ತು ಶಿಷ್ಯರು ಮೇಲೆ ಮಿಥ್ಯಾರೋಪ, ಅನುಚಿತ ಮಾತುಗಳು ಬೈಬಲಿನಲ್ಲಿ ಸೇರ್ಪಡೆಗೊಳ್ಳುವಷ್ಟು ಪ್ರಾಬಲ್ಯ ಪಡೆದಿತ್ತು. ಬೈಬಲ್‌ನ ಈ ಆರೋಪಗಳನ್ನು ಪವಿತ್ರ ಕುರ್‌ಆನ್ ನಿರಾಕರಿಸಿದೆ. ಹವಾರಿ ಗಳೆಂದರೆ ದೃಢವಿಶ್ವಾಸವಿದ್ದವರು, ಸಚ್ಚಾರಿತ್ರ್ಯ ಹೊಂದಿದವರೆಂದು ಪವಿತ್ರ ಕುರ್‌ಆನ್ ಸ್ಪಷ್ಟಪಡಿಸಿದೆ. ಅದು ಹವಾರಿಗಳ ದೃಢಸಂಕಲ್ಪದ ಶಕ್ತಿಯನ್ನು ಮುಸ್ಲಿಮರಿಗೆ ಆದರ್ಶಪ್ರಾಯ ವೆಂದು ಪವಿತ್ರ ಕುರ್‌ಆನ್ ಬಣ್ಣಿಸುತ್ತಿವೆ.

## ಪವಿತ್ರ ಕುರ್‌ಆನಿನ ಸೂಚನೆಗಳು

ಪ್ರವಾದಿಗಳ ಕುರಿತು ಬೈಬಲ್‌ನಲ್ಲಿಲ್ಲದ ಅನೇಕ ಮಹತ್ವಪೂರ್ಣ ಮಾಹಿತಿಗಳು ಪವಿತ್ರ ಕುರ್‌ಆನ್‌ನಲ್ಲಿದೆ.

1. ಪವಿತ್ರ ಕುರ್‌ಆನಿನಲ್ಲಿ ಪ್ರವಾದಿ ಮೂಸಾ(ಅ) ಮತ್ತು ಫಿರ್‌ಔನ್‌ರ ನಡುವೆ ನಡೆದಿರುವ ಸಂಭಾಷಣೆಯು ಉಲ್ಲೇಖಗೊಂಡಿದೆ. ದೇವನ ಏಕತೆ, ದೇವನ ಪ್ರಭುತ್ವ ಮತ್ತು ಪರಿಪಾಲಕತ್ವಗಳ ಬಗ್ಗೆ ಮೂಸಾ(ಅ) ಮತ್ತು ಫಿರ್‌ಔನ್‌ನ ನಡುವೆ ಸಂವಾದ ನಡೆದಿತ್ತು. ಸತ್ಯದ ಅಸ್ತಿತ್ವ ಮತ್ತು ಮಾರ್ಗದರ್ಶನದ ದೃಷ್ಟಿಯಿಂದ ಇದಕ್ಕೆ ಹೆಚ್ಚು ಮಹತ್ವ ಪ್ರಾಪ್ತವಾಗಿದೆ. **(ಪವಿತ್ರ ಕುರ್‌ಆನ್, 20:43-56)** ಆದರೆ ಪವಿತ್ರ ಕುರ್‌ಆನ್‌ನಲ್ಲಿರುವ ಈ ಮಹತ್ವಪೂರ್ಣ ಅಂಶಗಳು ಬೈಬಲ್‌ನಲ್ಲಿ ಉಲ್ಲೇಖಗೊಂಡಿಲ್ಲ.

2. ಪವಿತ್ರ ಕುರ್‌ಆನ್, ಪ್ರವಾದಿ ಮೂಸಾರು(ಅ) ಫಿರ್‌ಔನನ ಜಾದೂಗಾರರ ಮುಂದೆ ತೋರಿಸಿದ್ದ ಪವಾಡವನ್ನು ಪ್ರಸ್ತಾಪಿಸಿದೆ. ಫಿರ್‌ಔನನು ಮೂಸಾರೊಂದಿಗೆ ಸ್ಪರ್ಧಿಸಲು ಜಾದೂಗಾರರನ್ನು ಕರೆಸಿದ್ದನು. ಆದರೆ ಮೂಸಾರಿಂದ ಪ್ರಕಟಗೊಂಡ ಪವಾಡವನ್ನು ನೋಡಿದ ಜಾದೂಗಾರರು ಮೂಸಾರಲ್ಲೇ(ಅ) ವಿಶ್ವಾಸವಿರಿಸುತ್ತಾರೆ. ಇದರಿಂದ ಫಿರ್‌ಔನನು ಕುಪಿತನಾದನು. ನಿಮ್ಮನ್ನು ವಧಿಸುವೆನೆಂದು ಜಾದೂಗಾರರನ್ನು ಬೆದರಿಸಿದನು. ಅವನ ಬೆದರಿಕೆಗೆ

ಾದೂಗಾರರು ಮಣಿಯಲಿಲ್ಲ. ಮೂಸಾರ ಮೇಲಿರಿಸಿದ್ದ ತಮ್ಮ ವಿಶ್ವಾಸದಲ್ಲಿ ಅಚಲವಾಗಿ ಂತರೆಂದು ಪವಿತ್ರ ಕುರ್‌ಆನ್ ಉಲ್ಲೇಖಿಸಿದೆ. ಜಾದೂಗಾರರು ಫಿರ್‌ಔನನ ಪಾರಿತೋಷಕ ನ ಕನಕನ ಇತ್ಯಾದಿ)ದ ಆಸೆಯಿಂದ ಬಂದಿದ್ದರು. ಮೂಸಾರು(ಅ) ಪವಾಡ ತೋರಿಸಿದ ೇಲೆ ಅವರಿಗೆ ಜ್ಞಾನೋದಯವಾಗಿತ್ತು. ಆನಂತರ ಅವರು ಫಿರ್‌ಔನನಿಗೆ ಪ್ರಾಮುಖ್ಯತೆ ೀಡಲಿಲ್ಲ. ಪಾರಿತೋಷಕದ ಆಸೆಯನ್ನೇ ಕೈಬಿಟ್ಟರೆಂದು **(20:65-75)** ಪವಿತ್ರ ಕುರ್‌ಆನ್ ವರಿಸಿದೆ. ಇಂತಹ ವಿಶ್ವಾಸ (ಈಮಾನ್) ವರ್ಧಕ ಪ್ರಾಮುಖ್ಯ ಸಂಗತಿಗಳನ್ನು ಬೈಬಲ್ ಲ್ಲಿಯೂ ಉಲ್ಲೇಖಿಸಿಲ್ಲ. ಸತ್ಯದ ವಿಜಯದ ದೃಷ್ಟಿಯಿಂದ ಇದು ಒಂದು ಅಮರ ಟನೆಯಾಗಿದೆ.

3. ದೇವ ಶಿಕ್ಷೆಯಂತೆ ಫಿರ್‌ಔನನು ನೀರಲ್ಲಿ ಮುಳುಗುವ ವೇಳೆ ಮೂಸಾ ಮತ್ತು ಾರೂನರ ಪ್ರಭುವಿನಲ್ಲಿ ನಾನೂ ವಿಶ್ವಾಸವಿರಿಸಿದೆನು ಎಂದಿರುವುದನ್ನು ಪವಿತ್ರ ಕುರ್‌ಆನ್ ್ರಸ್ತಾಪಿಸಿದೆ. ಆದರೆ ಆಗ ತುಂಬ ವಿಳಂಬವಾಗಿತ್ತು. ಅವನು ಬಂಡಾಯ ಹಠಗಳನ್ನು ೊರೆದು ದೇವನಿಗೆ ಶಿರಬಾಗಲು ನೀಡಲಾದ ಅವನ ಕಾಲಾವಕಾಶವು ಮುಗಿದಿತ್ತು. ಆದುದರಿಂದ ೇವನ ಬಳಿ ಅವನ ಪ್ರಾರ್ಥನೆಯು ಸ್ವೀಕೃತವಾಗಲಿಲ್ಲ. ಈ ಹೃದಯ ಸ್ಪರ್ಶಿ ಘಟನೆ ಪವಿತ್ರ ುರ್‌ಆನಿನಲ್ಲಿದೆ. ಆದು ಬೈಬಲಿನಲ್ಲಿ ಉಲ್ಲೇಖಗೊಂಡಿಲ್ಲ. ಪವಿತ್ರ ಕುರ್‌ಆನಿನ ವಿವರಣೆಯನ್ನು ಲ್ಮೂದ್ ಗ್ರಂಥವು ಪುಷ್ಟೀಕರಿಸಿದೆ. ನೀರಿನಲ್ಲಿ ಫಿರ್‌ಔನನು ಮುಳುಗುವ ಸಂದರ್ಭವನ್ನು ಲ್ಮೂದ್ ಈ ರೀತಿ ವರ್ಣಿಸಿದೆ.

"ಓ ಪ್ರಭೂ! ನಾನು ನಿನ್ನಲ್ಲಿ ವಿಶ್ವಾಸವಿರಿಸಿದೆನು. ನೀನಲ್ಲದೆ ಬೇರೆ ದೇವನಿಲ್ಲ!"

4. ಪವಿತ್ರ ಕುರ್‌ಆನ್ ಪ್ರವಾದಿ ಮೂಸಾರ(ಅ) ಒಂದು ವಿಶೇಷ ಯಾತ್ರೆಯನ್ನು ವರಿಸಿದೆ. **(ಪವಿತ್ರ ಕುರ್‌ಆನ್, 18:60-82)** ಈ ಯಾತ್ರೆಯಲ್ಲಿ ಮೂಸಾರಿಗೆ(ಅ) ಅನೇಕ ಚಾರಗಳ ಅನುಭವವಾಗುವುದು. ಮಾನವ ಜೀವದ ಅನೇಕ ರಹಸ್ಯಗಳ ಮರ್ಮವನ್ನು ವರು ತಿಳಿಯುವರು. ಈ ವಿಚಾರ ತಲ್ಮೂದ್ ಗ್ರಂಥದಲ್ಲಿಯೂ ಉಲ್ಲೇಖಿಸಲ್ಪಟ್ಟಿದೆ. ೖಬಲ್‌ನಲ್ಲಿ ಈ ಚರಿತ್ರೆಯ ಉಲ್ಲೇಖವಿಲ್ಲ. ಆದರೆ ತಲ್ಮೂದ್‌ನಲ್ಲಿ ಮೂಸಾರ ಪ್ರಯಾಣವನ್ನು ೇರೆ ಯಾರೊಂದಿಗೋ ಜೋಡಿಸಲಾಗಿದೆ.

ಫಿರ್‌ಔನ್ ಮತ್ತು ಪ್ರವಾದಿ ಮೂಸಾರ(ಅ) ಘಟನೆ ವರದಿಯಾಗಿರುವಲ್ಲಿ "ಓರ್ವ ್ರಮಾಣಿಕ ಸತ್ಯವಿಶ್ವಾಸಿ ವ್ಯಕ್ತಿಯ ಬಗ್ಗೆಯೂ ಪವಿತ್ರ ಕುರ್‌ಆನ್ ಪ್ರಸ್ತಾಪಿಸಿದೆ. ಈ ತ್ಯವಿಶ್ವಾಸಿಯು ಅಕ್ರಮಿ ದೊರೆ ಫಿರ್‌ಔನನ ಮುಂದೆ ತನ್ನ ಸತ್ಯ ವಿಶ್ವಾಸವನ್ನು ನಿರ್ಭಯ ಾಗಿ ಘೋಷಿಸುತ್ತಾನೆ ಎಂದು ಪವಿತ್ರ ಕುರ್‌ಆನ್ ಸೂಚಿಸಿದೆ. ಅವನು ಫಿರ್‌ಔನ್‌ನೊಡನೆ ನ್ನ ಪ್ರಭು ಅಲ್ಲಾಹ್ ಎಂದು ಹೇಳಿದ ಕಾರಣಕ್ಕಾಗಿ ನೀನು ಆ ವ್ಯಕ್ತಿಯನ್ನು ಹತ್ಯೆ ನಡೆಸಲು ೊರಟಿರುವೆಯಾ? ವಾಸ್ತವದಲ್ಲಿ ಅವರು ಸುಸ್ಪಷ್ಟ ನಿದರ್ಶನಗಳೊಡನೆ ನಿನ್ನ ಸಮ್ಮುಖ ದಲ್ಲಿ

ಹಾಜರಾಗಿರುತ್ತಾರೆ" ಎಂದು ಪ್ರಶ್ನಿಸಿ ಸತ್ಯ ಘೋಷಣೆ ನಡೆಸಿರುವನೆಂದು ಪವಿತ್ರ ಕುರ್‌ಆನ್ ಉಲ್ಲೇಖಿಸಿದೆ. ಬೈಬಲ್‌ನಲ್ಲಿ ಈ ಘಟನೆ ಉಲ್ಲೇಖಿಸಿಲ್ಲ.

ಈ ಸತ್ಯವಿಶ್ವಾಸಿಯು ತನ್ನ ಜನಾಂಗ ಬಾಂಧವರಿಗೆ ಅಲ್ಲಾಹನ ಶಿಕ್ಷೆಗೆ ಹೆದರಿರಿ ಎಂದು ಹೇಳಿದನು ಮತ್ತು ಏಕದೇವನನ್ನು ಆರಾಧಿಸಿರಿ ಎಂಬ ಶಿಕ್ಷಣವನ್ನು ನೀಡಿದನು. ಅವನ ಭಾಷಣವು ಬಹಳ ಪ್ರಭಾವ ಪೂರ್ಣವಾಗಿತ್ತು. ನಾನು ಹೇಳುವುದನ್ನು ನೆನಪಿ ನಲ್ಲಿರಿಸಿರಿ. ನಾನು ನನ್ನ ವಿಷಯವನ್ನು ದೇವನಿಗೆ ಅರ್ಪಿಸಿರುವೆನು. ತನ್ನ ದಾಸರ ಮೇಲೆ ಅವನು ಮೇಲ್ನೋಟವಿರಿಸುತ್ತಾನೆ. **(ಪವಿತ್ರ ಕುರ್‌ಆನ್, 40:26-45)** ಸತ್ಯವಿಶ್ವಾಸಿಯ ಈ ಘೋಷಣೆ ಯನ್ನು ನಾವು ಪವಿತ್ರ ಕುರ್‌ಆನಿನಲ್ಲಿ ಸವಿಸ್ತಾರವಾಗಿ ಅವಲೋಕಿಸಬಹುದಾ ಗಿದೆ. ಬೈಬಲ್ ನಲ್ಲಿ ಈ ಸಾಹಸಿ ವ್ಯಕ್ತಿಯ ಚರಿತ್ರೆಯು ಲಭಿಸುವುದಿಲ್ಲ.

5. ಕಾರೂನ್ ಎಂಬ ವ್ಯಕ್ತಿಯನ್ನು ಬೈಬಲ್ ಪ್ರಸ್ತಾಪಿಸುವುದಿಲ್ಲ. ಪವಿತ್ರ ಕುರ್‌ಆನ್ ಆತನ ಬಗ್ಗೆ ಸವಿಸ್ತಾರವಾಗಿ ವಿವರಿಸಿದೆ. ಅವನು ಅಪಾರ ಹಣ ಸಂಪತ್ತುಗಳಿರುವ ಓರ್ವ ಕುಬೇರನಾಗಿದ್ದನೆಂದೂ ಅನೇಕ ಖಜಾನೆಗಳನ್ನು ಹೊಂದಿದ್ದನೆಂದೂ ಆದರೆ ದೇವನಿಂದ ವಿಮುಖನಾಗಿದ್ದಾನೆಂದೂ ಕಾರೂನ್‌ನ ಬಗ್ಗೆ ಪವಿತ್ರ ಕುರ್‌ಆನ್‌ನಿಂದ ತಿಳಿದು ಬರುತ್ತದೆ. ಅವನು ಪ್ರವಾದಿ ಮೂಸಾರನ್ನು(ಅ) ವಿರೋಧಿಸುತ್ತಿದ್ದನು. ದೇವಾದೇಶಗಳನ್ನು ಗೌರವಿಸುತ್ತಿ ರಲಿಲ್ಲ. ತನ್ನ ಅಪಾರ ಹಣ ಸಂಪತ್ತುಗಳೆಲ್ಲವನ್ನೂ ನನ್ನ ಬುದ್ಧಿ ಶಕ್ತಿ ಮತ್ತು ಪರಿಶ್ರಮದಿಂದ ಸಂಪಾದಿಸಿರುವೆನೆಂದು ಬಹಿರಂಗವಾಗಿ ಜಂಭಪಡುತ್ತಿದ್ದನು. ಅಂತಿಮವಾಗಿ ಈ ದೇವ ಧಿಕ್ಕಾರಿಯನ್ನು ದೇವನು ಜನರಿಗೆ ಪಾಠವಾಗುವ ರೀತಿಯಲ್ಲಿ ಭೂಮಿಯಲ್ಲಿ ಹೂತು ಹೋಗುವಂತೆ ಮಾಡಿ ಶಿಕ್ಷಿಸಿದನು. ಇದು ಜನರಿಗೆ ಪಾಠದಾಯಕವಾದ ನಿದರ್ಶನವೆನಿಸಿ ಕೊಂಡಿದೆ. ಆದರೆ ಬೈಬಲ್ ಮತ್ತು ತಲ್ಮೂದ್ ಎರಡೂ ಗ್ರಂಥಗಳಲ್ಲಿ ಕಾರೂನನ ಪ್ರಸಂಗವು ಉಲ್ಲೇಖವಾಗಿಲ್ಲ.

6. ಪ್ರವಾದಿ ಯಅ್‌ಕೂಬ್‌ರು(ಅ) ತಮ್ಮ ಪುತ್ರರಿಗೆ ನೀಡಿರುವ ಅಂತಿಮೋಪದೇಶವು ಪವಿತ್ರ ಕುರ್‌ಆನಿನಲ್ಲಿ ಬಲು ಪ್ರಭಾವಿಯಾಗಿ ವರ್ಣನೆಯಾಗಿದೆ.

"ನನ್ನ ನಂತರ ನೀವು ಯಾರ ದಾಸ್ಯಾರಾಧನೆಯನ್ನು ನಡೆಸುವಿರಿ" ಎಂದು ತಮ್ಮ ಪುತ್ರರನ್ನು ಪ್ರಶ್ನಿಸಿದರು. "ನೀವು ಮತ್ತು ನಿಮ್ಮ ಪಿತರಾದ ಇಬ್‌ರಾಹೀಮ್, ಇಸ್ಮಾಈಲ್, ಇಸ್‌ಹಾಕರು ಆರಾಧಿಸುವ ದೇವನ ದಾಸ್ಯಾರಾಧನೆ ಮಾಡುತ್ತೇವೆ" ಎಂದು ಅವರ ಮಕ್ಕಳು ಉತ್ತರಿಸಿದರು.

ದೇವಾಜ್ಞೆಯನ್ನು ಪಾಲಿಸುವ ಸ್ಥಿತಿಯಲ್ಲಿ ಹೊರತು ಬೇರೆ ಯಾವ ಸ್ಥಿತಿಯಲ್ಲಿಯೂ ನಿಮಗೆ ಮೃತ್ಯು ಬರದಿರಲಿ. ಜೀವನದ ಅಂತಿಮ ಕ್ಷಣದ ವರೆಗೂ ದೇವಾಜ್ಞೆಯನ್ನು

ಉಲ್ಲಂಘಿಸದಿರಿ ಎಂದು ಪ್ರವಾದಿ ಯಅ್‌ಕೂಬ್‌ರು(ಅ) ತನ್ನ ಪುತ್ರರನ್ನು ಎಚ್ಚರಿಸಿದರು. ಪ್ರವಾದಿ ಇಬ್‌ರಾಹೀಮರು(ಅ) ಕೂಡಾ ತಮ್ಮ ಪುತ್ರನಿಗೆ ಇದೇ ಉಪದೇಶ ನೀಡಿದರೆಂದು ಪವಿತ್ರ ಕುರ್‌ಆನ್ ವಿವರಿಸಿದೆ.

ಪವಿತ್ರ ಕುರ್‌ಆನ್‌ನಲ್ಲಿರುವ ಯಅ್‌ಕೂಬ್‌ರ ಅಂತಿಮೋಪದೇಶವನ್ನು ತಲ್ಮೂದ್ ಗ್ರಂಥವು ಪುಷ್ಟೀಕರಿಸಿದೆ. ಆದರೆ ಬೈಬಲಿನಲ್ಲಿ ಎಲ್ಲೂ ಉಲ್ಲೇಖಗೊಂಡಿಲ್ಲ.

7. ಈಜಿಪ್ಟ್‌ನ ಸೆರೆಮನೆಯಲ್ಲಿ ಇಬ್ಬರು ಯುವಕರಿಗೆ ಪ್ರವಾದಿ ಯೂಸುಫ್‌ರು(ಅ) ನೀಡಿರುವ ಮಹತ್ವಪೂರ್ಣ ಉಪದೇಶವನ್ನು ಪವಿತ್ರ ಕುರ್‌ಆನ್ ಉಲ್ಲೇಖಿಸಿದೆ. ಅಲ್ಲಿನ ಅರಸನು ಯೂಸುಫ್ ಮತ್ತು ಯುವಕರನ್ನು ಬಂಧಿಸಿ ಸೆರೆಮನೆಗೆ ತಳ್ಳಿದ್ದನು. ಈ ಸಂದರ್ಭದಲ್ಲಿ ಪ್ರವಾದಿ ಯೂಸುಫ್‌ರು(ಅ) ನೀಡಿರುವ ಪ್ರವಚನ ತರ್ಕ ಸಂಗತ ಮತ್ತು ಅರ್ಥ ಗರ್ಭಿತವಾಗಿತ್ತು. ಅದು ಏಕದೇವತ್ವದ ಅತ್ಯುನ್ನತ ಉಪನ್ಯಾಸವೆಂದು ಪವಿತ್ರ ಕುರ್‌ಆನ್ ವಿಶ್ಲೇಷಿಸಿದೆ. ಆದರೆ ಈ ವಿಚಾರ ಬೈಬಲ್‌ನಲ್ಲಿ ಉಲ್ಲೇಖವಾಗಿಲ್ಲ.

8. ಪ್ರವಾದಿ ಯೂಸುಫ್‌ರನ್ನು ಅಝೀಝುನ(ಈಜಿಪ್ಟ್ ಅಧಿಕಾರಿ) ಪತ್ನಿ ಓಲೈಸಲು ನೋಡಿ ವಿಫಲಳಾಗಿರುವ ಘಟನೆಯನ್ನು ಪವಿತ್ರ ಕುರ್‌ಆನ್ ವರ್ಣಿಸಿದೆ. ಆದರೆ ಬೈಬಲಿನಲ್ಲಿ ಈ ಘಟನೆಯು ವರದಿಯಾಗಿಲ್ಲ. ಅಝೀಝುನ ಪತ್ನಿಯು ಯೂಸುಫ್‌ರನ್ನು(ಅ) ಒಲಿಸಿ ಕೊಳ್ಳಲು ನಡೆಸಿದ ಯತ್ನವನ್ನೂ ಈಜಿಪ್ಟ್‌ನ ಮಹಿಳೆಯರನ್ನು ಪರೀಕ್ಷಿಸಲು ರಾಣಿ ಕರೆಸಿಕೊಂಡಿರುವುದನ್ನೂ ಪವಿತ್ರ ಕುರ್‌ಆನ್ ವಿವರಿಸಿದೆ.

ಪವಿತ್ರ ಕುರ್‌ಆನಿನ ಸತ್ಯಸಂಧತೆ ಪವಿತ್ರ ಕುರ್‌ಆನ್ ಮತ್ತು ಬೈಬಲನ್ನು ತುಲನಾತ್ಮಕ ದೃಷ್ಟಿಯಿಂದ ಅಧ್ಯಯನ ನಡೆಸಿದರೆ ಗೋಚರಿಸುವುದು. ಈ ರೀತಿ ಪವಿತ್ರ ಕುರ್‌ಆನ್ ಧಾರ್ಮಿಕ ಜಗತ್ತು ಮತ್ತು ಭೌತಿಕ ಜಗತ್ತಿಗೆ ಅವಿಸ್ಮರಣೀಯ ಉಪಕಾರ ಮಾಡಿದೆ. ಯಾಕೆಂದರೆ ಪವಿತ್ರ ಕುರ್‌ಆನಿನ ಅಧ್ಯಯನದಿಂದ ಪ್ರವಾದಿಗಳ ಮತ್ತು ಮಹಾಪುರುಷರ ಮೇಲೆ ನಡೆದಿರುವ ಅನ್ಯಾಯ ಮತ್ತು ಚಾರಿತ್ರ್ಯ ವಧೆಗಳ ಅರಿವಾಗುವುದು. ಅದರ ಮೂಲಕ ಸ್ವಾರ್ಥಿಗಳಿಂದಾದ ಕೆಟ್ಟ ಕಾರ್ಯವು ಬೆಳಕಿಗೆ ಬರುವುದು. ಇಂತಹ ಅಪಚಾರ ಭಾರತೀಯ ಪೌರಾಣಿಕ ಕಥೆಗಳಲ್ಲಿ ಕೂಡಾ ನಡೆದಿರುವ ಉದಾಹರಣೆಗಳಿವೆ.

✧ ✧ ✧

ಅಧ್ಯಾಯ-12

# ಪ್ರವಾದಿ ಮುಹಮ್ಮದ್‌ರ(ಸ) ಕುರಿತು ಧರ್ಮ ಗ್ರಂಥಗಳ ಭವಿಷ್ಯವಾಣಿಗಳ

ಪ್ರವಾದಿ ಮುಹಮ್ಮದರ(ಸ) ಕುರಿತು ಧರ್ಮ ಗ್ರಂಥಗಳು ಭವಿಷ್ಯವಾಣಿ ನುಡಿದಿ ಪ್ರವಾದಿ ಮುಹಮ್ಮದರ(ಸ) ಆಗಮನವು ಭವಿಷ್ಯವಾಣಿಯ ರೂಪದಲ್ಲಿ ಪ್ರಾಚೀನ ಗ್ರಂಥಗಳ ಉಲ್ಲೇಖಗೊಂಡಿದೆ. ಅಂತಿಮ ಸಮಯದಲ್ಲಿ ಭೂಮಿಗೆ ಮಾನವತೆಯ ಉನ್ನತ ಶಿಖ ವನ್ನೇರಿರುವ ಓರ್ವ ವ್ಯಕ್ತಿಯು ಆಗಮಿಸಲಿರುವನು ಎಂದು ಅವು ವಿವರಿಸಿವೆ.

ಆ ವ್ಯಕ್ತಿ ಹುಟ್ಟುವನು. ಅವನನ್ನು ಯಾವ ಹೆಸರಿನಿಂದ ಕರೆಯಲಾಗುವುದು. ಅವ ಎಂತಹ ಸ್ಥಾನದಲ್ಲಿ ಆಸೀನವಾಗುವನು ಎಂಬ ಭವಿಷ್ಯವಾಣಿಗಳಿವೆ. ಆ ವ್ಯಕ್ತಿಯ ಗು ವಿಶೇಷತೆ ಗಳಿಗೆ ಅದು ಪ್ರಾಮುಖ್ಯತೆ ನೀಡಿಲ್ಲ. ಆದರೆ ಈ ಭವಿಷ್ಯವಾಣಿಗಳಿಂದ ದೇ ಯೋಜನೆ ಯಂತೆ ಪ್ರವಾದಿ ಮುಹಮ್ಮದರ(ಸ) ಆಗಮನವಾಗಿದೆಯೆಂದು ಸ್ಪಷ್ಟವಾಗುವುದು ಆದುದರಿಂದ ಮಾನವ ಇತಿಹಾಸದಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ಆಗಮನ ಮತ ಅವರಿಂದಾಗಿರುವ ಮಹಾನ್ ಕಾರ್ಯಗಳು ಅತಿ ಮಹತ್ವಪೂರ್ಣ ಕಾರ್ಯಗಳಾಗಿವೆ.

ಜನರು ಪ್ರವಾದಿ ಮುಹಮ್ಮದರನ್ನು(ಸ) ಆರಂಭದಲ್ಲೇ ಗುರುತಿಸಿ ಅವ ಮಾರ್ಗದರ್ಶನದಿಂದ ಲಾಭ ಗಳಿಸಬೇಕೆಂಬ ಕಾರಣದಿಂದ ಅವರ ಆಗಮನಕ್ಕಿಂತ ಮುಂಚೆಯೆ ಭವಿಷ್ಯವಾಣಿಗಳ ಮೂಲಕ ಪೂರ್ವ ಸೂಚನೆಗಳನ್ನು ನೀಡಲಾಗಿತ್ತು. ಪ್ರವಾದಿ ಮುಹಮ್ಮದರ( ಮಾರ್ಗದರ್ಶನದಿಂದ ಮಾನವರ ಜೀವನ ಮಟ್ಟವು ಉನ್ನತವಾಗು ವುದಿತ್ತು. ಮಾನವ ಅವರ ಶಿಕ್ಷಣದಿಂದ ಉನ್ನತಿ ಪಡೆಯುವರು. ಆದುದರಿಂದ ಪ್ರವಾದಿ ಮುಹಮ್ಮದರ( ಆಗಮನದ ಶುಭ ಸೂಚನೆಗಳನ್ನು ಪ್ರಾಚೀನ ಗ್ರಂಥಗಳು ನೀಡಿವೆ.

## ಹಿಂದೂ ಧರ್ಮದ ಗ್ರಂಥಗಳ ಭವಿಷ್ಯವಾಣಿಗಳು

ವೇದವು ಭಾರತದ ಧಾರ್ಮಿಕ ಗ್ರಂಥದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಅದನ್ನು ಹಿಂದ ಧರ್ಮದ ಮೂಲಾಧಾರವೆಂದು ಕರೆಯಲಾಗುವುದು. ವೇದಗಳಲ್ಲಿ ಪ್ರವಾದಿ ಮುಹಮ್ಮದರ( ಆಗಮನ ಕುರಿತು ಭವಿಷ್ಯವಾಣಿಗಳಿವೆ. ಅಂತಿಮ ಸಮಯದಲ್ಲಿ 'ನರಾಶಂಸ' ಎಂಬ ವ್ಯ

ಆಗಮಿಸುತ್ತಾನೆಂದು ವೇದವು ಉಲ್ಲೇಖಿಸಿದ್ದು ಅದರಲ್ಲಿರುವ ನರಾಶಂಸನ ಗುಣಗಳು ಮಾನವ ಇತಿಹಾಸದಲ್ಲಿ ಪ್ರವಾದಿ ಮುಹಮ್ಮದರಿಗಲ್ಲದೆ(ಸ) ಇನ್ನಾರಿಗೂ ತಾಳೆಯಾಗಿಲ್ಲ ಎಂದು ಸ್ಪಷ್ಟವಾಗಿರುವುದು.

ಸಂಸ್ಕೃತ ವಿದ್ವಾಂಸ ಡಾ। ವೇದ ಪ್ರಕಾಶ್ ಉಪಾಧ್ಯಾಯರು[1] ಈ ಬಗ್ಗೆ ಶ್ಲಾಘನೀಯ ಸಂಶೋಧನೆಯನ್ನು ನಡೆಸಿರುವರು. ವೇದಗಳು ಉಲ್ಲೇಖಿಸಿರುವ ನರಾಶಂಸ ಮತ್ತು ಕಲ್ಕಿ ಅವತಾರ ಎಂಬ ಭವಿಷ್ಯವಾಣಿಗಳನ್ನು ಅವರು ಅಂತಿಮ ಪ್ರವಾದಿ ಮುಹಮ್ಮದರಿಂದ(ಸ) ನಿಜವಾಯಿತೆಂದು ಸಾಧಿಸಿರುತ್ತಾರೆ. ವೇದ ಪ್ರಕಾಶರು ಪ್ರವಾದಿ ಮುಹಮ್ಮದರ(ಸ) ಜೀವನ ಮತ್ತು ಶಿಕ್ಷಣಗಳನ್ನು ಆಳವಾಗಿ ಅಧ್ಯಯನ ನಡೆಸಿದರು ಮತ್ತು ಪ್ರವಾದಿ ಮುಹಮ್ಮದರು(ಸ) ಹಿಂದೂ ಧರ್ಮದಲ್ಲಿನ ನರಾಶಂಸ-ಕಲ್ಕಿ ಅವತಾರ ಎಂದು ಸ್ಪಷ್ಟಪಡಿಸಿದ್ದಾರೆ. ನರಾಶಂಸ್ ಔರ್ ಅಂತಿಮ್ ಋಷಿ, ಕಲ್ಕಿ ಅವತಾರ್ ಔರ್ ಮುಹಮ್ಮದ್ ಸಾಹಬ್ ಎಂಬ ಅವರ ಗ್ರಂಥಗಳನ್ನು ಈ ಕುರಿತು ಅವಲೋಕಿಸಬಹುದಾಗಿದೆ.

ಈ ಕೆಳಗೆ ಅವರ ಗ್ರಂಥಗಳ ಆಧಾರದಲ್ಲಿ ಕೆಲವು ವೇದ ಮಂತ್ರಗಳನ್ನು ಉಲ್ಲೇಖಿಸ ಲಾಗುವುದು.[2]

1. ಜನರೇ ಆಲಿಸಿರಿ! ನರಾಶಂಸ್‌ನ ಪ್ರಶಂಸೆ ನಡೆಯುತ್ತಲಿರುವುದು.
**(ಅಥರ್ವ: 20/127/1)**
2. ಅವನು ಒಂಟೆಯ ಸವಾರಿ ನಡೆಸುವನು. **(ಅಥರ್ವ: 20/127/2)**
3. ಅವನು 12 ಪತ್ನಿಯರನ್ನು ಹೊಂದುವನು. **(ಅಥರ್ವ: 20/127/2)**
4. ಅವನು ನೂರು ನಿಷ್ಕ (ಬಂಗಾರದ ನಾಣ್ಯಗಳನ್ನು ಹೊಂದಿರುವನು.)
**(ಅಥರ್ವ: 20/127/3)**
5. ಅವನಿಗೆ ಹತ್ತು ದಾರಗಳು ನೀಡಲ್ಪಡುವುದು. **(ಅಥರ್ವ: 20/127/3)**
6. ಮುನ್ನೂರು ಅರ್ವನ(ಕುದುರೆಗಳು)ಗಳನ್ನು ಹೊಂದಿರುವನು.
**(ಅಥರ್ವ: 20/127/3)**
7. ಅವನಲ್ಲಿ ಹತ್ತು ಸಾವಿರ ಗೋವುಗಳಿರುವುದು. **(ಅಥರ್ವ: 20/127/3)**
8. ತನ್ನ ಮಹತ್ವದಿಂದ ಮನೆ ಮನೆಗಳಲ್ಲಿ ಪ್ರಕಾಶವಾಗಿರುವನು. **(ಋಗ್ವೇದ: 2/3/2)**
9. ಪಾಪ ನಿವಾರಕನಾಗಿರುವನು. **(ಋಗ್ವೇದ: 1/106/4)**

ಈ ವೇದ ಮಂತ್ರಗಳನ್ನು ವಿವೇಚಿಸುವಾಗ ಮುಹಮ್ಮದರನ್ನು(ಸ) ನರಾಶಂಸಂದು

1. ವೇದ್‌ಪ್ರಕಾಶರು ಸಂಸ್ಕೃತದ ಮಹಾ ವಿದ್ವಾಂಸರಾಗಿದ್ದಾರೆ. ಅನೇಕ ಸಂಶೋಧನೆಗಳನ್ನು ನಡೆಸಿ ಗ್ರಂಥಗಳನ್ನು ರಚಿಸಿದ್ದಾರೆ. ಹಿಂದೂ ಧರ್ಮ ಶಾಸ್ತ್ರದಲ್ಲಿ ಅವರ ಸಂಶೋಧನೆ ಜನಪ್ರಿಯವಾಗಿದೆ. ಹಿಂದೂ ನಿಧಿ, ನರಾಶಂಸ್, ಅಂತಿಮ ಋಷಿ ಅವರ ಪ್ರಸಿದ್ಧ ಗ್ರಂಥಗಳಾಗಿರುವುದು.
2. ನೋಡಿರಿ, ನರಾಶಂಸ್ ಮತ್ತು ಅಂತಿಮ ಋಷಿ ಪುಟ 7-12.

ಸಂಬೋಧಿಸಿರುವುದು ತಿಳಿದು ಬರುವುದು. 'ಮುಹಮ್ಮದ್' ಶಬ್ದದ ಅರ್ಥ "ಶ್ಲಾಘಿಸಲ್ಪಡ ವವನು" "ಪ್ರಶಂಸೆಗೊಳಗಾಗುತ್ತಿರುವವನು" ಎಂದಾಗಿದೆ. ನರಾಶಂಸಗೂ ಇದೇ ಅರ್ಥವಿದೆ ಮಾನವರಲ್ಲಿ ಪ್ರಶಂಸೆಗೊಳಗಾಗುವವನು ಎಂದು ಅದರ ಅರ್ಥವಾಗಿದೆ. ನರಾಶಂಸ ಮತ್ತ ಮುಹಮ್ಮದ್ ಎರಡೂ ಸಮಾನಾರ್ಥದ ಶಬ್ದಗಳಾಗಿವೆ ಎಂದು ತಿಳಿದು ಬರುವುದು ಮಾನವರಲ್ಲಿ ಪ್ರಶಂಸಿಸಲ್ಪಡುವವನು ಎಂಬ ಉಲ್ಲೇಖದಿಂದ ಪ್ರಕಟಗೊಳ್ಳುತ್ತಿರುವ ಮಹ ಪುರುಷನು ಕೂಡಾ ಮಾನವನಾಗಿರುತ್ತಾನೆಂದು ಸ್ಪಷ್ಟವಾಗುವುದು. ಭವಿಷ್ಯವಾಣಿಗಳ ನರಾಶಂಸನ ಹೊರತು ಮಹಾಪುರುಷನೆಂದು ಇನ್ನಾರನ್ನೂ ಸೂಚಿಸಿಲ್ಲ. ಈ ರೀತಿ ಬರಲಿರು ಮಹಾ ಪುರುಷ ನರಾಶಂಸ ಎಂದು ಸ್ಪಷ್ಟಗೊಳ್ಳುವುದು.

"ನಿಮಗಾಗಿ ನಿಮ್ಮ ಖ್ಯಾತಿ ಪ್ರಸ್ತಾಪವನ್ನು ಎತ್ತರಕ್ಕೇರಿಸಲಿಲ್ಲವೇ" (ಪವಿತ್ರ ಕುರ್‌ಆನ್ **94:4)** ಎಂದು ಪವಿತ್ರ ಕುರ್‌ಆನ್ ಪ್ರಶ್ನಿಸಿದೆ. ಅಂದರೆ ದೇವನಿಂದ ಯಾರಿಗೂ ಸರಿಸಾ ಯಿಲ್ಲದ ಖ್ಯಾತಿ ಗೌರವಗಳನ್ನು ಪ್ರವಾದಿ ಮುಹಮ್ಮದರು(ಸ) ಪಡೆದಿರುವರೆಂದು ಈ ಮೂಲ ತಿಳಿಯುತ್ತದೆ.

ವೇದದ ಭವಿಷ್ಯವಾಣಿಗಳು ನರಾಶಂಸ 12 ಪತ್ನಿಯರನ್ನು ಹೊಂದಿರುತ್ತಾನೆಂದಿದ ಮತ್ತು ಪ್ರವಾದಿ ಮುಹಮ್ಮದರು(ಸ) 12 ಪತ್ನಿಯರನ್ನು ಹೊಂದಿರುವುದು ಸಮಾನ ಹೋಲಿ ಯಾಗಿದೆಯಷ್ಟೇ. ನರಾಶಂಸ ಒಂಟೆ ಸವಾರಿ ನಡೆಸುತ್ತಾನೆ ಎಂಬ ಭವಿಷ್ಯ ವಾಣಿಯಿಂ ನರಾಶಂಸ ಅರೇಬಿಯಾ ದೇಶದವನೆಂದು ಸ್ಪಷ್ಟವಾಗುವುದು. ಅರೇಬಿಯಾದಲ್ಲಿ ಅಂದ ಒಂಟೆಯು ಸವಾರಿಯ ಪ್ರಮುಖ ವಾಹನವಾಗಿತ್ತು. ಪ್ರವಾದಿ ಮುಹಮ್ಮದರು(ಸ) ಒಂ ಸವಾರಿ ನಡೆಸುತ್ತಿದ್ದರು. ಒಂಟೆ ಸವಾರಿಯಲ್ಲಿ ಮಕ್ಕಾದಿಂದ ಮದೀನಾಕ್ಕೆ ಪ್ರಯಾಣಿಸಿ ಅವರ ತಲುಪಿದ್ದರು.

ಸಂಸ್ಕೃತದಲ್ಲಿ ಮುಹಮ್ಮದರನ್ನು ಮಹಾಮದ್ ಎಂದು ಸೂಚಿಸಲಾಗಿದೆ. ಅದ ಮುಹಮ್ಮದ್ ಎಂಬ ಶಬ್ದದ ಸಂಸ್ಕೃತ ರೂಪವಾಗಿದೆ. ಮಹಾಮದ್ ಎಂಬ ಯಾ ಋಷಿಗಳೂ ಆಗಿಲ್ಲ. ಆ ಮೂಲಕ ಮುಹಮ್ಮದ್‌ರನ್ನೇ(ಸ) ಮಹಾಮದ್ ಎಂದ ಅಭಿಸಂಬೋಧಿಸಲಾಗಿದೆ ಯೆಂದು ತಿಳಿಯುವುದು.

ವೇದ ಮಂತ್ರವು ನರಾಶಂಸನು ಹತ್ತು ಹಾರಗಳನ್ನು ಧರಿಸಿರುವನೆಂದು ಸೂಚಿಸಿದ ಇದು ಅದ್ಭುತ ತ್ಯಾಗಗಳು ನಡೆಸಿರುವ ಪ್ರವಾದಿವರ್ಯರ(ಸ) ಹತ್ತು ಸಂಗಾತಿಗಳ ಉಲ್ಲೇ ವಾಗಿದೆ. ಇವರಿಗೆ ಸ್ವರ್ಗ ಪ್ರವೇಶದ ಸುವಾರ್ತೆಯನ್ನು ನೀಡಲಾಗಿದೆ.

ವೇದ ಮಂತ್ರವು ಮುನ್ನೂರು ಅರ್ವನವೆಂದು (ಕುದುರೆಗಳೆಂದು) ಬದ್ರ್ ಯುದ್ಧ ವೇಳೆ ಅಪ್ರತಿಮ ಶೌರ್ಯಗಳನ್ನು ಮೆರೆದಿರುವ ಮುನ್ನೂರಕ್ಕೂ ಅಧಿಕ ಸೈನಿಕ [ಪ್ರವಾ ವರ್ಯರ(ಸ) ಸಂಗಾತಿ]ರನ್ನು ಸೂಚಿಸಿದೆ. ಹತ್ತು ಸಾವಿರ ಗೋವುಗಳೆಂಬ ವೇದದ ಉಪಮೆಯ

ಕ್ಕಾ ವಿಜಯದ ವೇಳೆ ಪ್ರವಾದಿವರ್ಯರೊಡನೆ(ಸ) ಇದ್ದ ಸಂಗಾತಿಗಳನ್ನು ಸೂಚಿಸುತ್ತಿದೆ.

ವೇದವು ಪ್ರವಾದಿವರ್ಯರಿಗೆ(ಸ) ರಮ್ಯ್ ಎಂಬ ಮತ್ತೊಂದು ಹೆಸರನ್ನು ಬಳಸಿ ುತ್ತದೆ. ರಮ್ಯ್ ಎಂದರೂ ಪ್ರಶಂಸೆಗೆ ಪಾತ್ರನು ಎಂದಾಗುವುದು. ಇದು 'ಅಹ್ಮದ್' ಎಂಬ ್ರವಾದಿವರ್ಯರ(ಸ) ಇನ್ನೊಂದು ಅಭಿದಾನದ ಪರ್ಯಾಯ ಪದವಾಗಿದೆ.

ವೇದ ಮಂತ್ರಗಳ ಪ್ರಕಾರ ಪ್ರವಾದಿವರ್ಯರು(ಸ) ಸರ್ವೋತ್ತಮರು ಮತ್ತು ಜಗತ್ತಿನ ಾಯಕರು. ದೇವನಿಂದ ಅವರಿಗೆ ಸತ್ಯ ಪ್ರಚಾರ ನಡೆಸಬೇಕೆಂಬ ಆದೇಶ ನೀಡಲಾಗಿದೆ. ನ್ನ ಕರ್ತವ್ಯವನ್ನು ಅವರು ಚಾಚೂ ತಪ್ಪದೆ ನೆರವೇರಿಸಿದರು. ಪ್ರಪಂಚದ ಸಕಲ ಮಾನವರಿಗೂ ಅವರು ದೈವಿಕ ಸಂದೇಶ ನೀಡಿದರು ಮತ್ತು ಅವರು ಯಾವುದಾದರೊಂದು ಜನ ವಿಭಾಗಕ್ಕೆ ೀಮಿತವಾದ ಮಾರ್ಗದರ್ಶಕರಾಗಿರಲಿಲ್ಲ.

ಸಾಮವೇದವು ಪ್ರವಾದಿವರ್ಯರನ್ನು(ಸ) ಅಹ್ಮದ್ ಎಂದು ಸಂಬೋಧಿಸಿದರೂ ಜನರು ುರುತಿಸಲಿಲ್ಲ. ಆದರೆ ಪ್ರವಾದಿವರ್ಯರಿಗೆ(ಸ) ಪರಿಪೂರ್ಣ ಧರ್ಮ ವಿಧಾನವು (ಶರೀಅತ್) ವತೀರ್ಣವಾಗಿದೆ.

ಋಗ್ವೇದವು ನರಾಶಂಸನನ್ನು 'ಪ್ರಿಯ' ಎಂದು ಹೆಸರಿಸಿದೆ. ಮುಹಮ್ಮದ್‌ರಾದರೋ(ಸ) ರ್ವನಾಂ ಪ್ರಿಯರು ಮತ್ತು ಶಾಶ್ವತ ಪ್ರಿಯರು ಆಗಿರುತ್ತಾರೆ. ಪ್ರವಾದಿವರ್ಯರ(ಸ) ಕುರಿತು ೇವಲ ವೇದಗಳಲ್ಲಿ ಮಾತ್ರವಲ್ಲ, ಕಲ್ಕಿ ಪುರಾಣ ಮತ್ತು ಭವಿಷ್ಯ ಪುರಾಣಗಳಲ್ಲೂ ವಿಷ್ಯವಾಣಿಗಳಿವೆ.

ಕಲ್ಕಿ ಪುರಾಣ ಮತ್ತು ಭಾಗವತ ಪುರಾಣದಲ್ಲಿ ಉಲ್ಲೇಖವಾಗಿರುವ ಅಂತಿಮ್ ವತಾರ್‌ನ ವಿವರಣೆಯು ಪ್ರವಾದಿ ಮುಹಮ್ಮದರಿಗೆ(ಸ) ಹೋಲುವುದು. ಅಂತಿಮ ಅವತಾರವು ಷ್ಟ ಜನರನ್ನು ಸೋಲಿಸುವುದೆಂದು ಭಾಗವತ ಪುರಾಣವು ಉಲ್ಲೇಖಿಸಿದೆ. ಅಂತಿಮ್ ವತಾರ್ ಉತ್ತಮ ಗುಣವಿರುವ ಖಡ್ಗ ಪಾಣಿಯಾಗಿರುವ ಜಗದ್ರಕ್ಷಕನಾಗಿರು ವನೆಂದು ದು ವಿವರಿಸಿದೆ. **(ಭಾಗವತ ಪುರಾಣ: 12/2/89)**

ಅಂತಿಮ್ ಅವತಾರ್‌ನ ಜನನವು ಶುಕ್ಲ ಪಕ್ಷದ 12ನೇ ತಿಥಿಯಲ್ಲಿ ಬೈಶಾಖಿ(ವೈಶಾಖಿ) ುಲ್ಲಿ ನಡೆಯಿತೆಂದು ಕಲ್ಕಿ ಪುರಾಣದಲ್ಲಿ ಮತ್ತು ಅದು ಸಾಂಭಾಲದ ವಿಷ್ಣು ಯೇಶಾದಲ್ಲಿ ಂತಿಮ್ ಅವತಾರ್' ಜನಿಸಲಿದ್ದು ತಾಯಿಯ ಹೆಸರು ಸೋಮತಿಯೆಂದಿರುವುದೆಂಬ ುಲ್ಲೇಖ ಅದರಲ್ಲಿದೆ. **(ಕಲ್ಕಿ ಪುರಾಣ: 2/4/5)**

ಸಾಂಭಾಲವೆಂದರೆ ಶಾಂತಿಯ ಸ್ಥಳವೆಂದೂ ಅರ್ಥವಿದೆ. ಇದು ಮಕ್ಕಾ ನಗರದ ಅಭಿ ುಮಧೇಯವಾಗಿದೆ. ಪವಿತ್ರ ಕುರ್‌ಆನ್ ಮಕ್ಕಾವನ್ನು ಶಾಂತಿಯ ಸ್ಥಳವೆಂದು ಸೂಚಿಸಿದೆ. ್ಕಿ ಪುರಾಣವು ಯುದ್ಧದ ಸಂದರ್ಭದಲ್ಲಿ ಅಂತಿಮ್ ಅವತಾರ್‌ಗೆ ದೇವನ ನೆರವು ಲಭಿಸು ದೆಂದು ವಿವರಿಸಿದೆ. ಪವಿತ್ರ ಕುರ್‌ಆನ್ ಪ್ರವಾದಿ ಮುಹಮ್ಮದರಿಗೆ(ಸ) ದೇವಚರರಿಂದ

ನೆರವು ನೀಡಲಾಗಿದೆಯೆಂದು ವಿವರಿಸಿದೆ.[3] ಇವಿಷ್ಟೇ ಹೋಲಿಕೆಗಳಲ್ಲದೆ ಕಲ್ಕಿಯ ಜನ
ತಾರೀಕು ಮತ್ತು ಪ್ರವಾದಿವರ್ಯರ(ಸ) ಜನನ ತಾರೀಕು ತಾಳೆಯಾಗುವುದು.

## ಬೈಬಲಿನ ಭವಿಷ್ಯವಾಣಿಗಳು

ಇಂದು ಲಭಿಸುವ ಬೈಬಲ್‌ಗಳಲ್ಲಿ ಬಹಳಷ್ಟು ಬದಲಾವಣೆಗಳು ನಡೆದಿದ್ದರೂ ಪ್ರವಾ ವರ್ಯರ(ಸ) ಕುರಿತು ಭವಿಷ್ಯವಾಣಿಗಳನ್ನು ಇಂದಿಗೂ ಅದರಲ್ಲಿ ನೋಡಬಹುದಾಗಿದೆ.

1. ಪ್ರವಾದಿ ಮೂಸಾರು(ಸ) ತನ್ನ ಜನಾಂಗವನ್ನು ಸಂಬೋಧಿಸಿರುವುದನ್ನು ಬೈಬ ಈ ರೀತಿ ವಿವರಿಸಿದೆ.

"ನಿನ್ನ ಪ್ರಭು ಪರಮೇಶ್ವರನು ನಿನ್ನ ನಡುವೆ ಅರ್ಥಾತ್ ನಿನ್ನ ಸಹೋದರರಲ್ಲಿ ನಿನ ಸಮಾನವಾದ ಓರ್ವ ಪ್ರವಾದಿಯನ್ನು ಉತ್ಪನ್ನಗೊಳಿಸುವನು. ನೀನು ಅವನ ಮಾತನ ಆಲಿಸು. ಇದು ನೀನು ಹೊರೆಬ್ ಪರ್ವತದ ಬಳಿ ಸಭಾದ ದಿವಸ ತನ್ನ ಪ್ರಭು ಪರಮೇಶ್ವ ನೊಡನೆ ಮಾಡಿಕೊಂಡ ವಿನಂತಿಯಂತೆ ನಡೆಯುವುದು. ಆಗ ನಿನ್ನ ಪ್ರಭು ಪರಮೇಶ್ವರ ಶಬ್ದವು ಮತ್ತೆ ಆಲಿಸುವಂತಾಗಬಾರದು. ಎಲ್ಲಾದರೂ ಸತ್ತು ಹೋಗುವೆನೋ ಎಂದು ಹೆದರಿ ಯಾಗುತ್ತಿದೆ ಎಂಬ ನಿನ್ನ ವಿನಂತಿಯಂತೆ ನಡೆಯಲಿದೆ.

ಆಗ ಮೂಸಾ(ಅ) ಹೇಳಿದರು, ಪ್ರಭು ನನ್ನೊಡನೆ ಹೇಳಿದನು, ನಾನು ಹೇ ವುದನ್ನೆಲ್ಲ ಸರಿಯಾಗಿ ಹೇಳುವೆನು. ನಿನ್ನ ಸಹೋದರರ ನಡುವೆ ನಿನ್ನಂತಿರುವ ಓವ ಪ್ರವಾದಿಯನ್ನು ಉತ್ಪನ್ನಗೊಳಿಸುವೆನು. ಅವನ ನಾಲಗೆಯಲ್ಲಿ ನನ್ನ ವಚನಗಳನ್ನು ಹಾಕುವೆನ ನಿನಗೆ ನೀಡಿರುವ ಆಜ್ಞೆಯನ್ನು ಅವನಿಗೂ ಕೇಳಿಸುವೆನು. ನನ್ನ ಹೆಸರಿನಲ್ಲಿ ನನ್ನ ವಚ ಗಳನ್ನು ಸ್ವಯಂ ಅದನ್ನು ಅಳವಡಿಸದಿರುವವರ ಲೆಕ್ಕಾಚಾರವನ್ನು ಪಡೆಯುವೆನು.

**(ವ್ಯವಸ್ಥಾ ವಿವರಣ್: 18/15-1**

ದೇವನು ಮೂಸಾರ(ಅ) ಸಹೋದರ ಜನಾಂಗದಿಂದ ಓರ್ವ ಪ್ರವಾದಿಯನ ಉತ್ಪನ್ನಗೊಳಿಸುವನೆಂದು ಹೇಳಿರುವುದು ಬೈಬಲ್ ವಚನಗಳಿಂದ ತಿಳಿದು ಬರುತ್ತದೆ. ನಿ ಸಹೋದರರ ನಡುವೆ ಉತ್ಪನ್ನಗೊಳಿಸುವೆನು ಎಂಬುದು ಬನೀ ಇಸ್ರಾಯಿಲರ ಸಹೋದ ಸಮುದಾಯವಾಗಿರುವ ಬನೀ ಇಸ್ಮಾಈಲೀ ಸಮುದಾಯವಾಗಿರುವ ಸಾಧ್ಯತೆ ಹೆಚ್ಚಾಗಿ ಬನೀ ಇಸ್ಮಾಈಲಿ ಸಮುದಾಯದಲ್ಲಿ ಪ್ರವಾದಿ ಮುಹಮ್ಮದರು(ಸ) ಜನಿಸಿರುವುದು ನಿಟ್ಟಿನಿಂದ ಗಮನಾರ್ಹವಾಗಿದೆ. ಇದು ಬೈಬಲಿನ ಭವಿಷ್ಯವಾಣಿಯಾಗಿದೆ.

ಮುಂದೆ ಬನೀ ಇಸ್ರಾಈಲರಿಂದ ಓರ್ವ ಪ್ರವಾದಿ ಆಗಮಿಸುವನು ಎಂದಾ ನಿನಗಾಗಿ ನಿಮ್ಮಿಂದ ಓರ್ವ ಪ್ರವಾದಿಯನ್ನು ಉತ್ಪನ್ನಗೊಳಿಸುವೆನೆಂದು ದೇವನು ಮೂ ರೊಡನೆ(ಸ) ಹೇಳಬಹುದಿತ್ತು. ಬೈಬಲಿನ ಈ ಭವಿಷ್ಯವಾಣಿಯು ಮುಂಬರುವ ಪ್ರವಾದಿ

3. ವಿವರಗಳಿಗಾಗಿ ವೇದ ಪ್ರಕಾಶ್ ಉಪಾಧ್ಯಾಯರ ಕಲ್ಕಿ ಅವತಾರ್ ಔರ್ ಮುಹಮ್ಮದ್ ಸಾಹಬ್ ನೋಡಿ

ಸಮಾನವಾಗಿರುತ್ತಾನೆಂಬ ಸೂಚನೆಯನ್ನೂ ನೀಡುತ್ತದೆ. ಅಂದರೆ ಮೂಸಾರಿಗೆ ಧರ್ಮ ವಿಧಾನಗಳನ್ನು (ಶರೀಅತ್ತನ್ನು) ನೀಡಲಾಗಿದೆಯಷ್ಟೇ. ಅದೇ ರೀತಿ ಆ ಪ್ರವಾದಿಗೂ ಶರೀಅತ್ತನ್ನು ನೀಡುವುದು ದೇವೇಚ್ಛೆಯಾಗಿತ್ತು ಎಂದು ಬೈಬಲಿನ ಈ ಭವಿಷ್ಯವಾಣಿ ಸೂಚಿಸುತ್ತಿದೆ.

ಮಾತ್ರವಲ್ಲ ಪ್ರವಾದಿ ಮುಹಮ್ಮದರು(ಸ) ಸ್ಥಿರ ಶರೀಅತ್ತನ್ನು ಪಡೆದಿರುವರು. ಅದು ಅವರಿಗೆ ಮಾತ್ರ ಲಭಿಸಿದ ವಿಶೇಷತೆಯಾಗಿದೆ. ಆದರೆ ಇಸ್ರಾಈಲೀ ಸಮುದಾಯ ದಲ್ಲಾಗಿರುವ ಸಕಲ ಪ್ರವಾದಿಗಳು ಕೂಡಾ ಮೂಸಾರ ಶರೀಅತ್ತನ್ನು (ಧರ್ಮ ವಿಧಾನವನ್ನು) ಅನುಸರಿಸುತ್ತಿದ್ದರು.

2. ಇಂಜೀಲಿನ ಯೋಹಾನದಲ್ಲಿ ಹೀಗಿದೆ-

ಇದು ಯೂಹನ್ನಾರ [ಪ್ರವಾದಿ ಯಹ್ಯಾ(ಅ)] ಸಾಕ್ಷ್ಯವಾಗಿದೆ. ಆಗ ಯೂಹನ್ನಾ ರೊಡನೆ ಪ್ರಶ್ನಿಸುವುದಕ್ಕಾಗಿ ಯಹೂದಿಗಳು ಯೆರುಶಲೇಮ್‌ನಿಂದ ಯಾಜಕರು ಮತ್ತು ಲೇವಿಯರನ್ನು ಕಳುಹಿಸಿದರು.

"ನೀನು ಯಾರಾಗಿರುವೆ?" ಎಂದು ಪ್ರಶ್ನಿಸಿದಾಗ ಆಗ ಯೂಹನ್ನಾರು ನಿರಾಕರಿಸಲಿಲ್ಲ, ಆದರೆ ನಾನು ಮಸೀಹನಲ್ಲ ಎಂದರು. ಹಾಗಿದ್ದರೆ ನೀನು ಯಾರು? ಎಲಿಯಾಹ್ (ಪ್ರವಾದಿ ಇಲಿಯಾಸ್) ಆಗಿರುವೆಯಾ ಎಂದು ಪ್ರಶ್ನಿಸಿದಾಗ ಯೂಹನ್ನಾರು 'ಅಲ್ಲ' ಎಂದರು. ಹಾಗಿದ್ದರೆ ಆ ಪ್ರವಾದಿಯೇ?

ಯೂಹನ್ನಾ ಹೇಳಿದರು 'ಅಲ್ಲ' ಹಾಗಿದ್ದರೆ ನೀನು ಯಾರು? ನಮ್ಮನ್ನು ಕಳಿಸಿರುವವರಿಗೆ ಏನೆಂದು ಹೇಳಬೇಕಾಗಿದೆ. ನಿನ್ನ ವಿಷಯದಲ್ಲಿ ಹೇಳುವುದಕ್ಕೆ ಏನಿದೆ? ಆಗ ಯೂಹನ್ನಾರು ಹೇಳಿದರು, ಯಅ್‌ಶಾಹ್ ಪ್ರವಾದಿ ಹೇಳಿದಂತೆ ನಾನು ನಿರ್ಜನ ಪ್ರದೇಶದಲ್ಲಿ ಕರೆ ನೀಡುವಾತನ ಧ್ವನಿಯಾಗಿರುವೆನು. ನೀವು ಪ್ರಭುವಿನ ದಾರಿಯನ್ನು ನೇರಗೊಳಿಸಿರಿ.

ಯೂಹನ್ನಾರನ್ನು ಪ್ರಶ್ನಿಸಲು ಕೆಲವು ಪರೀಸಿಗಳು ಕೂಡಾ ಕಳುಹಿಸಲ್ಪಟ್ಟರು. ಯೂಹನ್ನಾ ರೊಡನೆ ಪರೀಸಿಗಳು ಕೇಳಿದರು. 'ಹಾಗಿದ್ದರೆ ನೀನು ಮಸೀಹನಲ್ಲ, ಎಲಿಯಾಹ್ ಅಲ್ಲ 'ಆ' ಪ್ರವಾದಿಯೂ ಅಲ್ಲ, ಹಾಗಿದ್ದರೆ ನೀನು ಯಾಕೆ ಬ್ಯಾಪ್ಟಿಸ್ಟ ನೀಡುತ್ತಿರುವೆ.

ಯೂಹನ್ನಾ ಹೇಳಿದರು- "ನಾನು ಬ್ಯಾಪಿಸ್ಟನ್ನು ನೀರಿಂದ ನೀಡುತ್ತಿರುವೆನು. ನೀವು ಮತ್ತು ನಮ್ಮ ನಡುವೆ ಓರ್ವ ವ್ಯಕ್ತಿಯಿರುವನು. ಅವನು ನನ್ನ ನಂತರದವನು. ನೀವು ಅವನನ್ನು ಅರಿತಿಲ್ಲ, ಅವನ ಪಾದರಕ್ಷೆಯ ದಾರವನ್ನು ಬಿಚ್ಚುವ ಯೋಗ್ಯತೆಯೂ ನನಗೆ ಇಲ್ಲ." **(ಯೂಹಾನ್ನಾ: 1: 19-28)**

ಬನೀ ಇಸ್ರಾಲರು ಈಸಾ ಮಸೀಹರ(ಅ) ಆಗಮನದ ಸಮಯ ಮೂವರು ವ್ಯಕ್ತಿಯನ್ನು ನಿರೀಕ್ಷಿಸುತ್ತಿದ್ದರು ಎಂದು ಇಂಜೀಲ್‌ನ ವಿವರಣೆಯಿಂದ ನಮಗೆ ತಿಳಿಯುತ್ತಿದೆ. ಅಂದರೆ ಈಸಾ ಮಸೀಹರು, ಎಲಿಯಾಹ್ ಮತ್ತು 'ಆ' ಪ್ರವಾದಿ ಎಂಬ ಮೂವರನ್ನು ಅವರು

ನಿರೀಕ್ಷಿಸುತ್ತಿದ್ದರು ಎಂದಾಗಿದೆ. ಆ ಪ್ರವಾದಿ ಎಂದರೆ 'ತೌರಾತ್'ನಲ್ಲಿ ಉಲ್ಲೇಖ ಗೊಂಡಿರುವ ಪ್ರವಾದಿಯೆಂದು ಅವರಿಗೆ ಪ್ರತ್ಯೇಕವಾಗಿ ವಿವರಿಸಬೇಕಾಗಿರಲಿಲ್ಲ. ನಾವು ನಿರೀಕ್ಷಿಸುವ ಮೂರನೇ ವ್ಯಕ್ತಿಯೆಂದು ಅವರು ತಕ್ಷಣ ಗುರುತಿಸಿ ಬಿಡುವಷ್ಟು ಅವರ ನಡುವೆ 'ಆ' ಪ್ರವಾದಿ ಎಂಬುದು ಓರ್ವ ಜನಜನಿತ ವ್ಯಕ್ತಿಯ ಪರಿಚಯವಾಗಿತ್ತು. ಯೂಹನ್ನಾರೂ ಆ ಪ್ರವಾದಿಯನ್ನು ನಿರಾಕರಿಸಿಲ್ಲ ಎಂಬ ಇಂಜೀಲ್‌ನ ವಿವರಣೆ ಗಮನಾರ್ಹವಾಗಿದೆ.

ಇಂಜೀಲ್‌ನಲ್ಲಿಯೇ (ಬೈಬಲ್‌ನಲ್ಲಿ) ಏಸುಕ್ರಿಸ್ತರು (ಈಸಾ ಮಸೀಹರು) ಕೂಡಾ ಪ್ರವಾದಿ ಮುಹಮ್ಮದರು ಆಗಮಿಸಲಿರುವ ಕುರಿತು ನೀಡಿರುವ ಸೂಚನೆಗಳು ಉಲ್ಲೇಖ ಗೊಂಡಿದೆ.

"ಮಸೀಹರು ಹೇಳಿದರು. ಇನ್ನಷ್ಟು ನಾನು ನಿಮ್ಮೊಡನೆ ಮಾತನಾಡಲಾರೆನು. ಈ ಪ್ರಪಂಚದ ಆಡಳಿತಗಾರ ಆಗಮಿಸುತ್ತಿದ್ದಾನೆ. ಅವನ ಯಾವ ಅಧಿಕಾರವೂ ನನ್ನಲ್ಲಿಲ್ಲ."

**(ಯೂಹಾನ್ನಾ: 14/30)**

ಇಂಜೀಲ್‌ನಲ್ಲಿ ಇನ್ನೊಂದು ಕಡೆ ಈ ರೀತಿ ವಿವರಿಸಲ್ಪಟ್ಟಿದೆ. ನನಗೆ ನಿಮ್ಮಲ್ಲಿ ಬಹು ಹೇಳಲಿಕ್ಕಿದೆ. ಈಗ ನೀವು ಅದನ್ನು ಸಹಿಸಲಾರಿರಿ. ಸತ್ಯಾತ್ಮನು ಬಂದಾಗ ಸತ್ಯದ ಪೂರ್ಣ ಮಾರ್ಗವನ್ನು ತಿಳಿಸುವನು. ಅವನು ತನ್ನ ವತಿಯಿಂದ ಏನೂ ಹೇಳಲಾರ. ತಾನು ಆಲಿಸುವುದನ್ನು ಮಾತ್ರವೇ ಹೇಳುವನು. ಮುಂದಾಗಲಿರುವ ಮಾತುಗಳನ್ನು ತಿಳಿಸುವನು. ನನ್ನ ಮಾತುಗಳನ್ನೂ ತಿಳಿಸುವನು. **(ಯೂಹಾನ್ನಾ: 16/12-4)**

ಪರಿವರ್ತನೆಗೊಳಗಾದರೂ ಅಂತಿಮ ಪ್ರವಾದಿಯ ಆಗಮನದ ಶುಭ ಸೂಚನೆಗಳು ಮತ್ತು ಭವಿಷ್ಯವಾಣಿಗಳನ್ನು ಬೈಬಲಿನಲ್ಲಿ ಕಾಣಬಹುದಾಗಿದೆ. ಮೇಲಿನ ವಚನದಲ್ಲಿ ಈಸಾ ಮಸೀಹರು(ಅ) ತನ್ನ ನಂತರ ಆಗಮಿಸಲಿರುವ ಪ್ರವಾದಿಯ ಬಗ್ಗೆ ಸ್ಪಷ್ಟ ಸೂಚನೆಯನ್ನು ನೀಡಿದ್ದಾರೆ. ಆ ವ್ಯಕ್ತಿ ಜಗತ್ತಿಗೆ ಸರದಾರನೂ ಒಳಿತಿನ ಮಾರ್ಗದರ್ಶನ ನೀಡುವವನೂ ಮತ್ತು ತನಗೆ (ಈಸಾ ಮಸೀಹ) ಸಾಕ್ಷಿಯಾಗಿರುವನೂಎಂದು ಮಸೀಹರು(ಅ) ತಿಳಿಸಿದ್ದಾರೆ.

ಮಸೀಹರ ಸೂಚನೆಯಲ್ಲಿರುವ ವಿಶೇಷ ವ್ಯಕ್ತಿ ಒಂದು ಆತ್ಮವಲ್ಲ, ಮನುಷ್ಯನಾಗಿರುವ ನೆಂದೂ ಅವನು ಜಗದ್ವ್ಯಾಪಿಯಾಗಿ ಹರಡುವ ಶಿಕ್ಷಣ ನೀಡಲಿರುವನೆಂದೂ ಸ್ಪಷ್ಟವಾಗುತ್ತದೆ

ಯೂಹನ್ನಾದಲ್ಲಿ ಒಂದೆಡೆ ಆಗಮಿಸುವವನನ್ನು 'ಸಹಾಯಕ' ಎಂದು ಉಲ್ಲೇಖಿಸ ಲಾಗಿದೆ **(ಯೂಹಾನ್ನಾ: 14/16)** ಗ್ರೀಕ್ ಭಾಷೆಯ ಮೂಲ ಗ್ರಂಥದಲ್ಲಿ Paracletos ಎಂಬ ಶಬ್ದವು ಬಳಕೆಯಾಗಿದೆ. ಅದು ಮುಹಮ್ಮದ್ ಶಬ್ದದ ಸಮಾನಾರ್ಥವಿರುವ ಗ್ರೀಕ್ ಭಾಷೆಯ ಪದವಾಗಿದೆ. ಪ್ರಶಂಸಿಸಲ್ಪಡುವವನು ಎಂದು ಈ ಶಬ್ದದ (ಮುಹಮ್ಮದ್ ಎಂದರು ಇದೇ ಅರ್ಥವಾಗಿದೆ. ಕ್ರೈಸ್ತರು Paracletos ಎಂಬ ಗ್ರೀಕ್ ಪದವನ್ನು Paraclet ಎಂದ ಅಂದಾಜಿಸಿರಬಹುದು. Paraclet ಎಂದರೆ ಯಾವುದೋ ಸ್ಥಳಕ್ಕೆ ಕರೆಯುವವನು ಮತ್ತು

ಸಹಾಯಕ್ಕೆ ಕರೆಯುವವನು. ಅದೇ ವೇಳೆ ಸ್ಪೈನ್ ಭಾಷೆಯಲ್ಲಿ Paraclet ಎಂದರೆ ಶಾಂತಿ ನೀಡು, ಧೈರ್ಯ ತುಂಬು ಎಂಬ ಅರ್ಥವಿದೆ. ಆದುದರಿಂದ ಈ ಶಬ್ದವನ್ನು ಹೇಗೆ ಬಳಸುವುದೆಂದು ಕ್ರೈಸ್ತರಿಗೆ ತೋಚಿರಲಿಲ್ಲ. ಆದುದರಿಂದ ಮೇಲಿನ ಯಾವ ಅರ್ಥವೂ ಬೈಬಲಿನ Paraclet ಶಬ್ದಕ್ಕೆ ಅನ್ವಯವಾಗುವುದಿಲ್ಲ. ಈ ಶಬ್ದ ಕಗ್ಗಂಟೆನಿಸಿ ರುವುದರಿಂದ ಅನುವಾದಕರ ನಡುವೆ ಭಿನ್ನಮತ ತಲೆದೋರಿರಬಹುದು.

ಗ್ರೀಕ್ ಭಾಷೆಯ ಮೂಲ ಇಂಜೀಲ್ ಲಭ್ಯವಿಲ್ಲದ ಕಾರಣ ಯೂಹನ್ನಾದಲ್ಲಿ Paracletos ಅಥವಾ Paraclet ಶಬ್ದ ಪ್ರಯೋಗವಾಗಿತ್ತೇ ಎಂದು ಪರಾಮರ್ಶಿಸಲು ಸಾಧ್ಯವಾಗಿಲ್ಲ. ಹಾಗಾಗಿ ಈ ಶಬ್ದ ಕಗ್ಗಂಟಾಗಿ ಉಳಿಯಿತು.

ಇನ್ನು ಗ್ರೀಕ್ ಭಾಷೆಯ ಇಂಜೀಲ್‌ನಲ್ಲಿರುವ ಶಬ್ದ ಮೂಲ ಶಬ್ದವಲ್ಲ. ಈಸಾ ಮಸೀಹರ ಭಾಷೆ ಸಿರಿಯನ್ ಆದುದರಿಂದ ಅದರ ಮೂಲ ಶಬ್ದವು ಆ ಭಾಷೆಯಲ್ಲಿರುವುದು. ಆದುದರಿಂದ ಗ್ರೀಕ್ ಭಾಷೆಯ ಶಬ್ದವು ಸಿರಿಯನ್ ಭಾಷೆಯ ಅನುವಾದವಾಗಿದೆ.

ಅದೃಷ್ಟವಶಾತ್ ಸೀರತ್ ಇಬ್ನು ಹಿಶಾಮ್ ಗ್ರಂಥದಲ್ಲಿ Paracletosನ ಮೂಲ ಸಿರಿಯನ್ ಶಬ್ದ ಅದರ ಜೊತೆ ಗ್ರೀಕ್ ಅನುವಾದವು ಕೂಡಾ ದೊರಕಿದೆ. ಇಂಜೀಲ್ ಯೊಹನ್ನಾದ 15ನೆಯ ಅಧ್ಯಾಯದ 23-27ನೆಯ ವಚನಗಳನ್ನು ಮತ್ತು 16ನೆಯ ಅಧ್ಯಾಯವನ್ನು ಇಬ್ನು ಹಿಶಾಮ್ ಅನುವಾದಿಸಿರುವರು. ಗ್ರೀಕ್ ಶಬ್ದ ಬರುವಲ್ಲಿ ಸಿರಿಯನ್ನಿನ 'ಮೂನಹಮನ್ನಾ' ಎಂಬ ಶಬ್ದ ಪ್ರಯೋಗಿಸಿದ್ದಾರೆ. ಮೂನಹಮನ್ನಾ ಎಂದರೆ ಮುಹಮ್ಮದ್ ಎಂದು ಅರ್ಥವಾಗಿದೆ. ಇದು ಗ್ರೀಕ್ ಭಾಷೆಯಲ್ಲಿ ಬರ್‌ಕಲೀಟಸ್ (ಮುಹಮ್ಮದ್) ಆಗುವುದೆಂದು ಕೂಡಾ ಅವರು ತಿಳಿಸಿದ್ದಾರೆ.

9ನೆಯ ಶತಮಾನದ ಕೊನೆವರೆಗೂ ಸಿರಿಯನ್ ಭಾಷೆಯನ್ನು ಫೆಲೆಸ್ತೀನಿಯರು ಮಾತನಾಡುತ್ತಿದ್ದರು ಎಂದು ಇತಿಹಾಸದಿಂದ ತಿಳಿದು ಬರುವುದು. ಈ ಪ್ರದೇಶವು 7ನೆಯ ಶತಮಾನದ ಪೂರ್ವಾರ್ಧದ ವರೆಗೂ ಇಸ್ಲಾಮಿನ ಆಳ್ವಿಕೆಗೊಳಗಾಗಿತ್ತು. ಕ್ರಿ.ಶ. 768ನೆಯ ಇಸವಿಯಲ್ಲಿ ಸೀರತ್ ಇಬ್ನು ಹಿಶಾಮ್ ಗ್ರಂಥದ ರಚನಕಾರನಾದ ಇಬ್ನು ಇಸ್‌ಹಾಕ್‌ರು ನಿಧನರಾಗಿದ್ದರು. ಕ್ರಿ.ಶ. 828ರಲ್ಲಿ ಅದರ ಇನ್ನೊಬ್ಬ ಕರ್ತೃ ಇಬ್ನು ಹಿಶಾಮ್ ನಿಧನರಾಗಿದ್ದರು. ಇವರಿಬ್ಬರ ಕಾಲದಲ್ಲಿ ಫೆಲೆಸ್ತೀನಿ ಜನರು ಸಿರಿಯನ್ ಭಾಷೆಯನ್ನಾಡುತ್ತಿದ್ದರು ಮತ್ತು ಅಂದಿನ ಇಸ್ಲಾಮೀ ಅಧೀನ ಪ್ರದೇಶದಲ್ಲಿ ಗ್ರೀಕ್ ಭಾಷೆಯಾಡುವ ಲಕ್ಷಾಂತರ ಕ್ರೈಸ್ತರೂ ವಾಸಿಸುತ್ತಿದ್ದರು. ಆದುದರಿಂದ ಸಿರಿಯನ್ನಿನ ಮುನಹಮನ್ನಾವನ್ನು ಗ್ರೀಕ್ ಭಾಷೆಯ ಬರ್‌ಕಲೀಟಸ್ ಆಗಿ ಅನುವಾದಿಸುವುದು ಅವರಿಗೆ ಸುಲಭವಿತ್ತು.

ಇಬ್ನು ಇಸ್‌ಹಾಕ್ ಮತ್ತು ಇಬ್ನು ಹಿಶಾಮ್‌ರು ಸಿರಿಯನ್ನಿನ ಮುನಹಾಮನ್ನಾ ಪದವನ್ನು ಬರೆದು ಇದು ಅರಬಿಯ ಮುಹಮ್ಮದ್ ಮತ್ತು ಗ್ರೀಕ್ ಭಾಷೆಯ ಬರಕಟಲೀಸ್

ಆಗುವುದೆಂದು ಸೂಚಿಸಿದ್ದಾರೆ. ವಾಸ್ತವದಲ್ಲಿ Paraclet ಅಲ್ಲ Paracletos (ಬರ್‌ಕಲೀಟಸ್) ಆಗಿದೆ ಎಂದೂ ಇದರ ಅರ್ಥ ನನ್ನ ನಂತರ ಪ್ರವಾದಿ ಮುಹಮ್ಮದರು(ಸ) ಆಗಮಿಸಲಿರುವರೆಂದೂ ವ್ಯಾಖ್ಯಾನಿಸಿದ್ದಾರೆ. ಇದು ನನ್ನ ನಂತರ ಪ್ರವಾದಿ ಮುಹಮ್ಮದರು(ಸ) ಆಗಮಿಸುವರೆಂದು ಈಸಾ ಮಸೀಹರ ಸ್ಪಷ್ಟ ಸೂಚನೆ ಯಾಗಿದೆಯೆಂದು ಅರಿವಾಗುವುದು. ಪವಿತ್ರ ಕುರ್‌ಆನ್‌ನಲ್ಲಿ ಹೀಗಿದೆ- "ಮತ್ತು ಮರ್ಯಮರ ಪುತ್ರ ಈಸಾ ಹೇಳಿದ ಮಾತನ್ನು ಸ್ಮರಿಸಿರಿ, ಬನೀಇಸ್ರಾಈಲರೇ, ನಾನು ನಿಮ್ಮ ಕಡೆಗೆ ಅಲ್ಲಾಹನಿಂದ ಕಳುಹಿಸಲ್ಪಟ್ಟ ಸಂದೇಶವಾಹಕನಾಗಿರುತ್ತೇನೆ. ನಾನು, ನನಗಿಂತ ಮೊದಲು ಬಂದಿರುವ ತೌರಾತನ್ನು ದೃಢೀಕರಿಸುವವನು ಮತ್ತು ನನ್ನ ಬಳಿಕ ಬರಲಿರುವ ಅಹ್ಮದ್ ಎಂಬ ಹೆಸರಿನ ರಸೂಲರ ಕುರಿತು ಸುವಾರ್ತೆ ನೀಡುವವನಾಗಿದ್ದೇನೆ..." (ಪವಿತ್ರ ಕುರ್‌ಆನ್, 61:6)

✧ ✧ ✧

ಅಧ್ಯಾಯ-13

# ಪ್ರವಾದಿ ಮುಹಮ್ಮದರ(ಸ) ಕುರಿತು ಮುಸ್ಲಿಮೇತರರ ಹೇಳಿಕೆಗಳು

ಹಝ್ರತ್ ಮುಹಮ್ಮದರಿಗೆ(ಸ) ಪ್ರವಾದಿತ್ವ ಲಭಿಸಿದ ಕೇವಲ 23 ವರ್ಷಗಳಲ್ಲಿ ಸರಿಸಾಟಿಯಿಲ್ಲದ ಮುಸ್ಲಿಮರ ಒಂದು ಸಂಘಟಿತ ಸಮಾಜ ಅಸ್ತಿತ್ವವನ್ನು ಪಡೆಯಿತು. ಅವರ ಮೂಲಕ ಸಮಾನತೆ ಮತ್ತು ಸಮಾನಾಧಿಕಾರವಿರುವ ಸಮಾಜವು ನಿರ್ಮಾಣ ವಾಯಿತು. ಆತ್ಮ ವಿಕಸನ ಹೊಂದುವ ಮತ್ತು ಆತ್ಮೋನ್ನತಿಗೇರುವಂತಹ ಸತ್ಯ ಧರ್ಮವನ್ನು ಅವರು ಸಂಸ್ಥಾಪಿಸಿದರು.

ಆ ಸಮಾಜದಲ್ಲಿ ನ್ಯಾಯ, ಸತ್ಯವು ಅಸ್ತಿತ್ವದಲ್ಲಿತ್ತು. ಅವರು ಸಕಲರಿಗೂ ಆದರ್ಶಪ್ರಾಯ ರಾಗಿ ಜೀವನ ವ್ಯಯಿಸಿದರು. ಅವರ ಜೀವನಕ್ಕಿಂತ ಉನ್ನತವಾಗಿರುವ ಬೇರೊಂದು ಆದರ್ಶವನ್ನೇ ಊಹಿಸಲು ಸಾಧ್ಯವಿಲ್ಲ. ಜನರ ಮೇಲಿದ್ದ ಎಲ್ಲ ರೀತಿಯ ಕಟ್ಟುಪಾಡುಗಳನ್ನು ಕಿತ್ತೊಗೆದರು. ಉಚ್ಚ ನೀಚತೆ, ಪುರೋಹಿತವಾದ ಇತ್ಯಾದಿ ಕೆಟ್ಟ ಪದ್ಧತಿಗಳನ್ನು ಅಳಿಸಿದರು. ಸಕಲ ಶಕ್ತಿ ಆಜ್ಞಾಧಿಕಾರಗಳನ್ನು ದೇವನಿಗೆ ಸಮರ್ಪಿಸಿದರು. ಮಾನವರೆಲ್ಲರೂ ಸಮಾನರೆಂದು ಘೋಷಿಸಿ ದರು. ಸಾಮಾಜಿಕ, ರಾಜಕೀಯ, ಆರ್ಥಿಕ ಇತ್ಯಾದಿ ಸಕಲ ಕ್ಷೇತ್ರ ದಲ್ಲಿದ್ದ ಅಸಮಾನತೆ-ಶೋಷಣೆ ಹಾಗೂ ಕೆಡುಕುಗಳನ್ನು ಮೂಲೋತ್ಪಾಟನೆ ಮಾಡಿದರು. ನೈತಿಕ ತಳಹದಿಯಲ್ಲಿರುವ ದೇವ ಭಯ ಆಧಾರಿತವಾದ ಪ್ರಬಲವಾದ ಒಂದು ಪ್ರಜಾ ತಂತ್ರವನ್ನು ಅವರು ಸ್ಥಾಪಿಸಿದರು.

ಆ ಸಮಾಜದಲ್ಲಿ ವಂಶ-ಬಣ್ಣ-ಹಣ ಸಂಪತ್ತುಗಳಿಗೆ ಮಹತ್ವವಿರಲಿಲ್ಲ, ಅದರಲ್ಲಿ ನೈತಿಕತೆಯು ಮಹತ್ವದ್ದಾಗಿತ್ತು.

ಆ ಸಮಾಜದಲ್ಲಿ ಏಕದೇವ ವಿಶ್ವಾಸಿ(ಸತ್ಯವಿಶ್ವಾಸಿ)ಯಲ್ಲದವರು ನಿಕಟ ಸಂಬಂಧಿಕ ನಾಗಿದ್ದರೂ ಅವನಿಗಿಂತ ಏಕದೇವ ವಿಶ್ವಾಸಿಯು ಹೆಚ್ಚು ಪ್ರೀತಿಸಲ್ಪಡುತ್ತಿದ್ದನು ಮತ್ತು ಗೌರವಿಸಲ್ಪಡುತ್ತಿದ್ದನು. ಆ ಸಮಾಜದಲ್ಲಿ ಪ್ರತಿಯೋರ್ವರಿಗೂ ನೈತಿಕತೆ ಮತ್ತು ಆಧ್ಯಾತ್ಮಿಕತೆಯ ಶಿಖರವನ್ನು ತಲುಪುವ ಅವಕಾಶವಿತ್ತು.

ಪ್ರವಾದಿವರ್ಯರು(ಸ) ಸಾಧಿಸಿದ ಈ ಮಹಾನ್ ಕಾರ್ಯಗಳನ್ನು ಅವರ ಜೀವನ,

ಕಾರ್ಯ ಶೈಲಿಯನ್ನು ಅಲ್ಪವಾದರೂ ಅರಿತಿರುವ ನ್ಯಾಯ ಪ್ರಿಯ ವ್ಯಕ್ತಿಯಿಂದ ಹೇಗೆ ನಿರಾಕ ಸಲು ಸಾಧ್ಯ? ಆದುದರಿಂದ ಕೆಲವು ವಿಚಾರವಂತರ ಉದ್ಗಾರಗಳನ್ನು ಇಲ್ಲಿ ನೀಡಲಾಗಿದೆ.

1. ಥಾಮಸ್ ಕಾರ್ಲೈಲ್ (Thomas Carlyle) ತನ್ನ ಹೀರೋಸ್ ಆಂಡ ಹೀರೋಸ್ ವರ್‌ಶಿಪ್ (Heros and Heros Worship) ಎಂಬ ಗ್ರಂಥದಲ್ಲಿ ಪ್ರವಾ ಮುಹಮ್ಮದರು(ಸ) ಜಗತ್ತನ್ನು ಪ್ರಕಾಶಮಾನಗೊಳಿಸಿದರು. ಮಾತ್ರವಲ್ಲ ಪ್ರಕಾಶಮಾನವಾ ಜಗತ್ತನ್ನು ನಿರ್ಮಿಸಿದ ಓರ್ವ ಶಾಂತ ಮತ್ತು ಮಹಾನ್ ಆತ್ಮವಾಗಿದ್ದಾರೆಂದು ಬಣ್ಣಿಸಿದ್ದಾ

2. ಡಾ। ಲಿವಾನ್‌ರು ಹೀಗೆ ಬರೆದಿರುತ್ತಾರೆ- "ಪ್ರವಾದಿ ಮುಹಮ್ಮದರು(ಸ) ಅತ್ಯಂ ಗಂಭೀರ ಸ್ವಭಾವದ ಮಿತ ಭಾಷಿಯೂ ದೃಢ ಸಂಕಲ್ಪವಿರುವ ವ್ಯಕ್ತಿಯೂ ಆಗಿದ್ದರು. ಅವರ ಎಷ್ಟು ಜಾಗ್ರತರೋ ಅಷ್ಟೇ ಧೈರ್ಯಶಾಲಿಯಾಗಿದ್ದರು ಮತ್ತು ಸಹನಾಮಯಿ ಯಾಗಿದ್ದರು. (ಇಸ್ಲಾಮಿಕ್ ಕಲ್ಚರ್)

3. ಡಾ। ಮೈಕಲ್ ಎಚ್. ಹಾರ್ಟ್ (Michel H. Hart) ತನ್ನ (The Hundred ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ. "He was the only man in the history wh was supremely successful on both religious and secular level"

ಅಂದರೆ "ಪ್ರವಾದಿ ಮುಹಮ್ಮದರು(ಸ) ಧಾರ್ಮಿಕ ಮತ್ತು ಭೌತಿಕ ಎರಡ ಸ್ಥಿತಿಯಲ್ಲಿಯೂ ಅದರ ಕೊನೆಯ ಬಿಂದುವರೆಗೂ ಯಶಸ್ವಿಯಾಗಿದ್ದಾರೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. (Dr. Michel- Hart the 100 Newyork 1978)

4. ಡಬ್ಲ್ಯೂ. ಸ್ಟುವರ್ಟ್‌ರು ಮುಹಮ್ಮದರ(ಸ) ಪ್ರಕಾಶವನ್ನು ಎಲ್ಲ ಕಡೆಯು ನೋಡಬಹುದು. ದೆಹಲಿ, ಅರೇಬಿಯಾ, ಇರಾನ್, ಕಾಬೂಲ್, ಈಜಿಪ್ಟ್, ಸಿರಿಯಾ ಹೀ ಜಗತ್ತಿನ ಪ್ರತಿಯೊಂದು ಭಾಗದಲ್ಲಿ ಮುಸ್ಲಿಮರು ಐದು ಬಾರಿ ನಮಾಝ್ ನಿರ್ವಹಿಸುತ್ತಿದ್ದ ಮುಹಮ್ಮದರು(ಸ) ತಂದಿರುವುದು ಸತ್ಯಧರ್ಮವೆಂದೂ ಅದು ಶಾಶ್ವತವಾ ಉಳಿಯುವುದೆಂದೂ ನಾವು ನಂಬಬೇಕಾಗುವುದು ಎಂದು ಹೇಳಿದ್ದಾರೆ. (Islam and i Founder)

5. ಕ್ರೈಸ್ತ ವೈದ್ಯ ಸ್ಪ್ರಿಂಗರ್ ಹೀಗೆ ಹೇಳುತ್ತಾರೆ- ಮುಹಮ್ಮದರ(ಸ) ದೇವ ವಿಶ್ವಾ ಪರಿಪೂರ್ಣವಾಗಿತ್ತು. ಅವರಿಗೆ ಸೂರ್ಯ, ನೀರು, ಹಸಿರು ಮುಂತಾದವುಗಳಲ್ಲಿ ದೇವ ಪ್ರಭಾವ ಗೋಚರಿಸಿತ್ತು. ಅವರು ನೀರಿನ ಸದ್ದು, ಗುಡುಗು, ಹಕ್ಕಿಗಳ ಹಾಡುಗಳಲ್ಲಿ ದೇ ವಚನಗಳನ್ನೂ ಕೇಳುತ್ತಿದ್ದರು. ನಿರ್ಜನ ಅರಣ್ಯ, ಹಳೆಯ ನಗರಗಳ ಅವಶೇಷಗಳಲ್ಲಿ ದೇ ಪ್ರಕೋಪದ ಸಂಕೇತಗಳನ್ನು ಅವರು ಕಾಣುತ್ತಿದ್ದರು.

6. ಸರ್ ಬರ್ನಾಡ್ ಶಾ (Sir Bernadsha)- ಇಸ್ಲಾಮ್‌ನ ಕುರಿತು ಹೀಗೆ ಹೇಳಿದ್ದಾ

"If any religion had the chance of ruling our England ney Euro

within the next hundred years it could be Islam"

"ಒಂದು ವೇಳೆ ಮುಂದಿನ ನೂರು ವರ್ಷದಲ್ಲಿ ಇಂಗ್ಲೆಂಡ್ ಸಹಿತ ಸಂಪೂರ್ಣ ಯುರೋಪ್‌ನಲ್ಲಿ ಯಾವುದೇ ಧರ್ಮವು ವಿಜಯವನ್ನು ಪಡೆಯುವುದಿದ್ದರೆ ಅದು ಇಸ್ಲಾಮ್ ಧರ್ಮವೇ ಆಗಿರುತ್ತದೆ" ಎಂದು ಬರ್ನಾಡ್ ಶಾ ಉದ್ಗರಿಸಿದ್ದಾರೆ.

ಪ್ರವಾದಿ ಮುಹಮ್ಮದರ(ಸ) ಕುರಿತು ಉದ್ಧರಿಸುತ್ತಾ ಬರ್ನಾಡ್ ಶಾ ಹೇಳಿದರು. "If man like a Holy Prophet was to assume the dictatorship of the solving its problem in a way that would bring it much needed peace and happiness"

"ಒಂದು ವೇಳೆ ಪ್ರವಾದಿ ಮುಹಮ್ಮದರಂತಹ(ಸ) ವ್ಯಕ್ತಿಗೆ ಪ್ರಚಲಿತ ಜಗತ್ತಿನ ಸಂಪೂರ್ಣ ಅಧಿಕಾರವು ಲಭಿಸಿದರೆ ಅವರು ಯಶಸ್ವಿಯಾಗಿ ಜಗತ್ತಿನ ಸಕಲ ಸಮಸ್ಯೆ ಗಳನ್ನು ಪರಿಹರಿಸುತ್ತಾರೆ. ಅವರ ಮೂಲಕ ನಮಗೆ ನಾವು ಬಯಸುತ್ತಿರುವ ಸುಖ ಶಾಂತಿ ನೆಮ್ಮದಿ ದೊರಕುವುದೆಂದು ನನಗೆ ವಿಶ್ವಾಸವಿದೆ."

7. ಗಾಂಧೀಜಿಯವರ ಪುತ್ರ ದೇವದಾಸ ಗಾಂಧಿ ಒಂದು ಪ್ರಬಂಧದಲ್ಲಿ ಈ ರೀತಿ ಬರೆದಿದ್ದಾರೆ-

ದೇವ ಸಂದೇಶವಾಹಕರಾದ ಮುಹಮ್ಮದರು(ಸ) ಜಗತ್ತು ಅಂಧಕಾರದಲ್ಲಿದ್ದ ಸಮಯದಲ್ಲಿ ಅರಬ್ ಮರುಭೂಮಿಯಲ್ಲಿ ಸೂರ್ಯನಂತೆ ಬೆಳಕು ಬೀರಿದರು. ಜಗತ್ತಿಗೆ ವಿದಾಯ ಹೇಳುವ ವೇಳೆ ಅವರು ತನ್ನ ಎಲ್ಲ ಕೆಲಸಗಳನ್ನು ಮಾಡಿ ಮುಗಿಸಿದ್ದರು. ಅವು ಜಗತ್ತಿಗೆ ಉಪಯುಕ್ತ ಕೆಲಸಗಳಾಗಿದ್ದವು. ಪ್ರವಾದಿ ಮುಹಮ್ಮದ್‌ರಂತಹ(ಸ) ಜನರು ಜಗತ್ತಿನಲ್ಲಿ ಬಹಳ ಕಡಿಮೆ ಮಂದಿ ಆಗಿದ್ದಾರೆ. ಇಂತಹ ಜನರ ನಡುವಿನ ಕಾಲವಧಿಯಲ್ಲಿ ಬಹುದೊಡ್ಡ ಅಂತರವಿರುತ್ತಿತ್ತು.

ಪ್ರವಾದಿ ಮುಹಮ್ಮದರ(ಸ) ಜೀವನ ಚರಿತ್ರೆಯನ್ನು ಅಧ್ಯಯನ ನಡೆಸಿದರೆ ಅವರು ಮಹಾನ್ ಧರ್ಮೋಪದೇಶಕರೆಂದು ಅರಿವಾಗುವುದು. ಅವರ ಗುರು ಸ್ಥಾನಮಾನಗಳು ಮತ್ತು ಮಹಾನತೆಗಳು ವಿಶಾಲವಾಗಿದೆ. ಪ್ರವಾದಿ ಮುಹಮ್ಮದರ(ಸ) ಕುರಿತು ಉಲ್ಲೇಖಿಸುವಾಗ ಅವರ ಕಾಲದಲ್ಲಿದ್ದ ಆಧ್ಯಾತ್ಮಿಕ ಮತ್ತು ನೈತಿಕ ಅಧಃಪತನಗಳತ್ತ ಗಮನ ಹರಿಸಬೇಕಾಗಿದೆ.

ಮುಹಮ್ಮದರು(ಸ) ಒಂದು ಕಲುಷಿತವಾದ ವಾತಾವರಣದಲ್ಲಿ ಜನಿಸಿದರು. ಅಂದು ಬ್ರಹ್ಮವಾದವನ್ನು ಅರಿತವರು ಅಲ್ಲಿ ಯಾರೂ ಇರಲಿಲ್ಲ. ಏಕದೇವತ್ವಕ್ಕೆ ಅರೇಬಿಯಾದಲ್ಲಿ ಅಂದು ಅವಕಾಶವಿರಲಿಲ್ಲ. ಅಂಧಕಾರಮಯ ಯುಗವದು. ಕೆಡುಕು ಮತ್ತು ಅಧಃಪತನ ತಾರಕಕ್ಕೇರಿದ್ದವು. ಇದೇ ಸಂದರ್ಭದಲ್ಲಿ ಪ್ರವಾದಿ ಮುಹಮ್ಮದರು(ಸ) ಜನಿಸಿದರು. ರಹ್ಮತುಲ್‌ಲಿಲ್ ಆಲಮೀನ್ (ಲೋಕಾನುಗ್ರಹಿಯ) ಪದವಿ ಅವರಿಗೆ ದೊರೆತಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ, ಅವರು ಜನರಿಗೆ ಉಪದೇಶ ಮತ್ತು ಸಂದೇಶ ಪ್ರಚಾರದ ಮೂಲಕ ಕಲಿಸಿರುವುದನ್ನು ತನ್ನ ಜೀವನದಲ್ಲಿ ಮೊದಲು ಕಾರ್ಯ ರೂಪಕ್ಕೆ ತರುತ್ತಿದ್ದರು.

ಜನರಿಗೆ ತಾನು ಮಾಡದಿರುವುದನ್ನು ಶಿಕ್ಷಣವಾಗಿ ಅವರು ಕಲಿಸಲಿಲ್ಲ. ಪ್ರವಾದಿತ್ವ ಲಭಿಸಿದ ಮೇಲೆಯೂ ಯಾವುದೇ ಬದಲಾವಣೆಯಾಗದ ಜೀವನ ಶೈಲಿ ಅವರದ್ದಾಗಿತ್ತು. ಅವರು ಸದಾ ಸತ್ಯಸಂಧರಾಗಿದ್ದು ಸರಳವಾಗಿ ಬದುಕಿದರು. ಸಾಮ್ರಾಜ್ಯದ ಅಧಿಕಾರ ಸಿಕ್ಕರೂ ಮುಹಮ್ಮದರು(ಸ) ಪ್ರಾಪಂಚಿಕ ಸುಖಭೋಗಗಳಿಗೆ ಮಾರು ಹೋಗಿಲ್ಲವೆಂಬುದು ಇತಿಹಾಸದಿಂದ ವ್ಯಕ್ತವಾಗಿದೆ. ಅವರ ಭೋಜನ ಸರಳವಾಗಿತ್ತು. ಬದುಕಿ ಉಳಿಯುವಷ್ಟೆ ಅವರು ಆಹಾರ ಸೇವಿಸುತ್ತಿದ್ದರು. ಅವರ ಮಲಗುವ ವಸ್ತುಗಳು ಚಾಪೆ ಥಾಟುಗಳಾಗಿದ್ದವು. ಅವರು ಸಾಮಾನ್ಯ ವಸ್ತ್ರವನ್ನು ಧರಿಸುತ್ತಿದ್ದರು. ವಿರೋಧಿಗಳ ಜೊತೆಯೂ ಕಟುವಾಗಿ ಮಾತಾಡಿದವರಲ್ಲ. ಯುದ್ಧದ ಸಂದರ್ಭದಲ್ಲಿಯೂ ವಿನಯದಿಂದ ಮಾತಾಡಿದರು. ಇಚ್ಛೆ-ಮನಸ್ಸಿನ ಮೇಲೆ ಹತೋಟಿ ಸಾಧಿಸಿದ್ದರು. ಗೀತೆಯು ವಿವರಿಸುವ ಕರ್ಮಯೋಗಿಯ ಸಂಪೂರ್ಣ ಲಕ್ಷಣವು ಅವರಲ್ಲಿ ಪ್ರಕಟವಾಗಿದೆ. ಯಾವುದಾದರೂ ಕರ್ತವ್ಯವೆಂದಾದರೆ ಅದು ಅಪ್ರಿಯವೆನಿಸುವಂತಿದ್ದರೂ ನೈಜ ಶೌರ್ಯ ವಿಶ್ವಾಸದಿಂದ ಅದನ್ನು ನಿರ್ವಹಿಸಿದರು. ಎಂದೂ ಸ್ವೇಚ್ಛೆ ಅಹಂಭಾವದಿಂದ ಹೆಜ್ಜೆಯಿರಿಸಿದವರಲ್ಲ. ಉತ್ತಮ ಕರ್ಮಗಳನ್ನು ಜಾರಿಗೆ ತರುವವರನ್ನು ಕರ್ಮ ಯೋಗಿಯೆಂದು ಗೀತೆಯು ಹೆಸರಿಸುತ್ತದೆ. ಪ್ರವಾದಿ ಮುಹಮ್ಮದರು(ಸ) ಇಂತಹ ವ್ಯಕ್ತಿಯಾಗಿದ್ದಾರೆ. ಅಲೌಕಿಕ ಗುಣ ಹೊಂದಿದ್ದ ನಶ್ವರ ವ್ಯಕ್ತಿಯಾಗಿದ್ದರು.

ಜೀವನದ ಸುಖ-ದುಃಖ-ಕ್ಷೋಭೆಗಳು ಸಾಮಾನ್ಯ ಜನರ ಮೇಲೆ ಪ್ರಭಾವ ಬೀರುತ್ತವೆ. ಆದರೆ ಮಹಾತ್ಮರ ಬದುಕಿನಲ್ಲಿ ಇವು ಕಿಂಚಿತ್ತೂ ಸೋಂಕಲಾರವು. ಪೈಗಂಬರ್ ಮುಹಮ್ಮದ್‌ರ(ಸ) ಪರಿಶ್ರಮದಿಂದ ಒಂದು ಆದರ್ಶ ಸಮಾಜ ಅಸ್ತಿತ್ವಕ್ಕೆ ಬಂದಿದೆ. ಸಮಾಜದ ಕಾರ್ಯ ಶೈಲಿಯನ್ನು ತಿದ್ದಿ ಉತ್ತಮ ಸಮಾಜವಾಗಿ ಇಂದು ರೂಪಿಸಲು ಬಯಸುವವರಿಗೆ ಆ ಸಮಾಜವು ಆದರ್ಶ ಸಮಾಜವಾಗಿದೆ.

ಪ್ರವಾದಿ ಮುಹಮ್ಮದರು(ಸ) ಮಾನವ ಹೃದಯದಾಳದಲ್ಲಿ ಗಾಢವಾದ ಪ್ರಭಾವ ಬೀರುವಂತಹ ಆದರ್ಶವನ್ನು ತನ್ನ ಸಮಾಜದಲ್ಲಿ ಜಾರಿಗೆ ತಂದಿದ್ದಾರೆ.

ಪ್ರವಾದಿಯ(ಸ) ಬದುಕು ಬಹಳ ಸರಳವಾಗಿತ್ತು. ತನ್ನ ಹರಿದಿರುವ ಬಟ್ಟೆಗಳನ್ನು ಸ್ವತಃ ತೇಪೆ ಹಚ್ಚಿ ಸಿದ್ಧಪಡಿಸುತ್ತಿದ್ದರು. ಮನೆ ಕೆಲಸದಲ್ಲಿ ನೆರವಾಗುತ್ತಿದ್ದರು. ಕಾರ್ಮಿಕರೊಂದಿಗೆ ಸೇರಿ ಮಸೀದಿ ಕಟ್ಟಿದರು. ಆಗ ಯಾರು ಪ್ರವಾದಿ, ಯಾರು ಕೆಲಸಗಾರನೆಂದು ಗುರುತಿಸಲು ಕಷ್ಟಪಡಬೇಕಾಗುತ್ತಿತ್ತು. ಮಕ್ಕಳ ಮೇಲೆ ಅಪಾರ ಮಮತೆಯನ್ನು ಹೊಂದಿದ್ದರು. ಅವರ ಗಂಡು ಮಕ್ಕಳು ಬದುಕಿ ಉಳಿದಿರಲಿಲ್ಲ. ಮಕ್ಕಳಿಗೆ ಅವರ ಸಾಂಗತ್ಯದಲ್ಲಿ ಸಿಗುತ್ತಿದ್ದ ಸಂತೋಷ ಆ ಮಕ್ಕಳ ಸ್ವಂತ ಮನೆಯಲ್ಲಿ ದೊರೆಯುತ್ತಿರಲಿಲ್ಲ. ಅವರಿಗೆ ಮಕ್ಕಳೊಡನೆ ಬೆರೆಯಲು ಬೇಸರವಾಗುತ್ತಿರಲಿಲ್ಲ. ಮಕ್ಕಳಿಗೆ ಉತ್ತಮ ಪಾಠಗಳನ್ನು ಮನ ಮುಟ್ಟುವಂತೆ ಕಲಿಸುತ್ತಿದ್ದರು. ಶಿಕ್ಷಣಕ್ಕೆ ಇದಕ್ಕಿಂತ ಸರಳವಾದ ಬೇರೆ ವಿಧಾನಗಳಿವೆಯೇ?

✧ ✧ ✧

ಅಧ್ಯಾಯ-14

# ಪವಿತ್ರ ಕುರ್‌ಆನಿನ ಕುರಿತು ಮುಸ್ಲಿಮೇತರರ ವಿಶ್ಲೇಷಣೆಗಳು

**1. ರೋಡ್‌ವೆಲ್:** ಪವಿತ್ರ ಕುರ್‌ಆನಿಗೆ ಸದಾ ಕೃತಜ್ಞರಾಗಿರುವುದಕ್ಕೆ ಯುರೋಪ್ ಮರೆಯಬಾರದು. ಯುರೋಪಿನ ಜ್ಞಾನ ವಿಜ್ಞಾನಗಳ ಉಗಮಕ್ಕೆ ಪವಿತ್ರ ಕುರ್‌ಆನ್ ಕಾರಣವಾಗಿದೆ.

**2. ಜರ್ಮನ್ ಕವಿ ಗೊಯತೆ (Goethe):** ಪವಿತ್ರ ಕುರ್‌ಆನ್ ವಾಚಕರನ್ನು ಪ್ರಥಮ ವೀಕ್ಷಣೆಯಲ್ಲಿಯೇ ಸ್ತಂಭೀಭೂತಗೊಳಿಸುತ್ತದೆ. ವಾಚಕರ ಗಮನವನ್ನು ತನ್ನ ಅಸಾಮಾನ್ಯ ಆಕರ್ಷಣಾ ಶಕ್ತಿಯಿಂದ ಶೀಘ್ರವಾಗಿ ಸೆಳೆಯುತ್ತದೆ. ವಾಚಕನು ಅಂತಿಮವಾಗಿ ಅದರಲ್ಲಿ ತಲ್ಲೀನಗೊಳ್ಳುವನು. ಪಾಶ್ಚಾತ್ಯ ವಿದ್ವಾಂಸರು ಬಹು ದೀರ್ಘ ಕಾಲದಿಂದಲೂ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದರನ್ನು(ಸ) ತಪ್ಪು ಕಲ್ಪನೆಗೆ ಗುರಿ ಮಾಡಿದ್ದಾರೆ. ಆದರೂ ನಾವು ಕ್ರಮೇಣ ಜ್ಞಾನವನ್ನು ಗಳಿಸಿಕೊಂಡಂತೆ ಸುತ್ತಮುತ್ತಲು ಹಬ್ಬಿದ ಪಕ್ಷಪಾತಿತ್ವದ ಆವರಣದ ಪೊರೆ ಕಳಚಿಕೊಂಡೆವು. ಹಾಗಾಗಿ ಪವಿತ್ರ ಕುರ್‌ಆನಿನ ಪಾವಿತ್ರ್ಯವು ನಮ್ಮನ್ನು ಚಕಿತಗೊಳಿಸಿತು. ಈ ಗ್ರಂಥ, ಸಂಪೂರ್ಣ ಜಗತ್ತಿನ ಗಮನ ಸೆಳೆದು ವ್ಯಾಪಕ ಪ್ರಭಾವ ಬೀರುವ ದಿನಗಳು ದೂರವಿಲ್ಲ.

**3. ಜಾರ್ಜ್ ಸೆಲ್:** ಪವಿತ್ರ ಕುರ್‌ಆನ್ ಜಗತ್ತಿನಲ್ಲಿ ಅತ್ಯಧಿಕ ವಿಶ್ವಾಸವಿರಿಸಬಹುದಾದ ಅತ್ಯುತ್ತಮ ಅರಬಿ ಗ್ರಂಥವಾಗಿದೆ. ಯಾವೊಬ್ಬ ಲೇಖಕನಿಗೂ ಇಂತಹ ಅದ್ಭುತ ಗ್ರಂಥವನ್ನು ರಚಿಸಲು ಸಾಧ್ಯವಿಲ್ಲ. ಇದೆಂದರೆ, ಹೆಣವನ್ನು ಬದುಕಿಸುವ ಪವಾಡವನ್ನು ಮೀರಿದ ಒಂದು ಪವಾಡವಾಗಿದೆ.

**4. ಡಾ। ಗಿಬ್ಬನ್ (Dr. Gibben):** "ಏಕದೇವತ್ವಕ್ಕೆ ಪವಿತ್ರ ಕುರ್‌ಆನ್ ಸರ್ವಶ್ರೇಷ್ಠ ಸಾಕ್ಷಿ. ಏಕದೇವತ್ವವಾದಿಯಾದ ದಾರ್ಶನಿಕನು ಯಾವುದಾದರೂ ಧರ್ಮವನ್ನು ಸ್ವೀಕರಿಸುವುದಾದರೆ ಅದು ಇಸ್ಲಾಮ್ ಆಗಿರುತ್ತದೆ. ಪವಿತ್ರ ಕುರ್‌ಆನ್ ಜಗತ್ತಿನ ಅಪ್ರತಿಮ ಗ್ರಂಥವಾಗಿದೆ.

**5. ಪ್ರೊ। ಕಾರ್ಲೈಲ್:** ನನ್ನ ದೃಷ್ಟಿಯಂತೆ, ಪವಿತ್ರ ಕುರ್‌ಆನಿನ ಪ್ರತಿಯೊಂದ ಕೋನವೂ ಒಳಿತಿನ ಗುಣದಿಂದ ಪರಿಶುದ್ಧವಾಗಿದೆ. ಜಗತ್ತಿನಲ್ಲಿ ವಿಶೇಷವೇನಾದರೂ ಸಂಭವಿಸ ವುದಾದರೆ ಅದು ಪವಿತ್ರ ಕುರ್‌ಆನ್‌ನಿಂದ ಸಂಭವಿಸಬಹುದು.

**6. ಮಾಕ್ಸ್‌ವೆಲ್ ಕಿಂಗ್:** ಪವಿತ್ರ ಕುರ್‌ಆನ್ ಇಲ್‌ಹಾಮ್‌ಗಳ (ವಹ್ಯ್ ಸಂಗ್ರಹವಾಗಿದೆ. ಇಸ್ಲಾಮೀ ಸಿದ್ಧಾಂತ, ಕಾನೂನು, ನೈತಿಕ ಶಿಕ್ಷಣ ಮತ್ತು ದೈನಂದಿನ ಬದುಕಿ ಆವಶ್ಯಕವಾದ ಶಿಕ್ಷಣಗಳು ಅದರಲ್ಲಿವೆ. ಕ್ರೈಸ್ತವತೆಯ ಮೇಲೆ ಇಸ್ಲಾಮಿಗೆ ಉನ್ನತಿಯು ಪ್ರಾಪ ವಾಗಿದೆ. ಪವಿತ್ರ ಕುರ್‌ಆನಿನಲ್ಲಿ ಕಾನೂನು ಮತ್ತು ಧಾರ್ಮಿಕ ಶಿಕ್ಷಣಗಳೆರಡೂ ಪ್ರತ್ಯೇ ಪ್ರತ್ಯೇಕವಲ್ಲ.

**7. ಎ.ಜಿ.ಆರ್‌ಬೆರಿ:** ಪವಿತ್ರ ಕುರ್‌ಆನ್ ಸಾಹಿತ್ಯಿಕ ಗುಣವನ್ನು ಹೊಂದಿರು ಸರಳ ಗ್ರಂಥವಾಗಿದೆ. ಜಗತ್ತಿನಲ್ಲಿ ಎಷ್ಟೋ ದೈವಿಕ ಗ್ರಂಥಗಳಿರುವುದು. ಆದರೆ ಪವಿತ ಕುರ್‌ಆನನ್ನು ಬಿಟ್ಟರೆ ಇನ್ನಾವುದೇ ಗ್ರಂಥಕ್ಕೆ ಸಂಗ್ರಾಹ್ಯ ಗುಣಗಳಿಲ್ಲ. ತೌರಾತ್, ವಿ ಜನಾಂಗಗಳ ಇತಿಹಾಸ ಇರುವ ಕಾನೂನು ಮತ್ತು ಆದೇಶಗಳ ಗ್ರಂಥವಾಗಿದೆ. ಬೈಬಲ್ ಅಯ್ಯೂಬ್‌ನಲ್ಲಿ ಬರೇ ವಿಶ್ವಾಸ ಸಮರ್ಪಣೆಗಳು ತುಂಬಿಕೊಂಡಿದೆ. ಸುಲೈಮಾನರ ನೀ ವಚನಗಳೆಂದರೆ (Proverb) ಕೇವಲ ಉಪದೇಶಗಳಾಗಿವೆ. ಇಂಜೀಲ್ (Gosphel) ಪ್ರವಾ ಈಸಾ ಮಸೀಹರ(ಅ) ಚರಿತ್ರೆ ಮತ್ತು ನೈತಿಕ ಶಿಕ್ಷಣಗಳ ಸಂಗ್ರಹವಾಗಿದೆ. ಇವೆಲ್ಲ ಪವಿತ ಕುರ್‌ಆನ್‌ನಲ್ಲಿಯೂ ಇವೆ. ಅದು ಇಂಜೀಲ್, ತೌರಾತ್ ಕೂಡಾ ಆಗಿದೆ. ಜನಾಂಗಗ ಇತಿಹಾಸ-ಉಪದೇಶ-ಪ್ರಾರ್ಥನೆಗಳು ಸೇರಿರುವ ಪರಿಪೂರ್ಣ ಧರ್ಮ ವಿಶ್ವಾಸ ಪವಿತ ಕುರ್‌ಆನ್‌ನಲ್ಲಿದೆ. ಪವಿತ್ರ ಕುರ್‌ಆನಿನಲ್ಲಿ ಘಟನೆಗಳು, ಆದೇಶಗಳು-ಉಪಾಸನೆಯ ವಿ ವಿಧಾನಗಳು ಮತ್ತು ಕಾನೂನುಗಳಿವೆ. ಆದುದರಿಂದ ಅದು ಸಂಗ್ರಹಿಸಿಡಬೇಕಾದ ಗ್ರಂ ವಾಗಿದೆ. ಮುಸ್ಲಿಮನೋರ್ವನ ಬದುಕಿನ ಸಾರ್ವಕಾಲಿಕ ಅಗತ್ಯವಾಗಿದೆ. ಅದರಲ್ಲಿ ಎ ವಿಭಾಗಗಳಿಗೆ ಸುಸ್ಪಷ್ಟ ಶಿಕ್ಷಣಗಳಿವೆ.

**8. ಆಚಾರ್ಯ ರಜನೀಶ್:** ಪವಿತ್ರ ಕುರ್‌ಆನಿನ ವ್ಯವಸ್ಥೆ(ರಚನಾ ಶೈಲಿ)ಯ ಬೈಬಲ್, ಉಪನಿಷತ್ತು, ಗೀತೆಗಳಿಗಿಲ್ಲ. ಪವಿತ್ರ ಕುರ್‌ಆನ್ ಒಂದರ್ಥದಲ್ಲಿ ಸರ್ವಾಂಗೀ ಗ್ರಂಥವಾಗಿದೆ. ಅದು ಬರೇ ಒಂದು ಧರ್ಮ ಗ್ರಂಥವಲ್ಲ. ಅದರೊಳಗೆ ಸಮಾಜ ಶಾಸ್ತ್ರವಿದ ರಾಜಕೀಯವಿದೆ, ಜೀವನದ ಅಧಃಪತನದ ವಿವರಣೆಯಿಂದ ವಿರಾಟ್ ಬ್ರಹ್ಮನವರೆಗೂ ಅದ ವಿವರಿಸುತ್ತಿದೆ. (ಧ್ಯಾನ ಮತ್ತು ಪ್ರೇಮ ಪುಟ: 76)

✧ ✧ ✧

# ಓದುಗರೊಡನೆ

ಓದುಗರಲ್ಲಿ ನಮ್ಮ ಒಂದು ವಿನಂತಿ- ನೀವೀಗ ಈ ಗ್ರಂಥವನ್ನು ಓದುವಿರಿ ಎಂದು ಾವಿಸುತ್ತೇವೆ. ಇದು ಯಾವುದೇ ಆರೋಗ್ಯಕ್ಕೆ ಸಂಬಂಧಿಸಿದ ಅಧ್ಯಯನವಲ್ಲದಿದ್ದರೂ ರೋಗ್ಯದ ಕುರಿತ ಅಧ್ಯಯನವಾಗಿಯೇ ಮಾರ್ಪಡುವುದು. ಈ ಗ್ರಂಥವನ್ನು ಅಭ್ಯಸಿಸುವ ಮೂಲಕ ನಮ್ಮ ಆರೋಗ್ಯವನ್ನೇ ತಿಳಿಯಬಹುದು. ಆಧ್ಯಾತ್ಮಿಕ-ಭೌತಿಕ ಸ್ವಾಸ್ಥ್ಯವನ್ನು ಾಪಾಡಬೇಕಾದರೆ ಯಾವ ನಿಯಮಗಳನ್ನು ಪಾಲಿಸಬೇಕೆಂದು ನೀವು ಇದರ ಅಧ್ಯಯನ ಂದ ಅರಿಯುವಿರಿ.

ಆರೋಗ್ಯ ಕೆಟ್ಟು ಹೋಗುವ ವಿಧಾನಗಳಿಂದ ದೂರ ನಿಂತು ನಮ್ಮ ಆರೋಗ್ಯವನ್ನು ಾಪಾಡಿಕೊಳ್ಳಲು ಸಾಧ್ಯವಿದೆಯಲ್ಲವೇ? ಹೌದು, ಆರೋಗ್ಯ ಕಾಪಾಡಿಕೊಳ್ಳುವುದು. ಮಾನವರ ರ್ತವ್ಯವಾಗಿದೆ. ಅದರ ಬಗ್ಗೆ ನಿಶ್ಚಿಂತನಾಗುವ ಮಾನವನಿಗೆ ಆರೋಗ್ಯವಿಲ್ಲ.

ಮಾನವನು ಕೇವಲ ಒಂದು ಶರೀರವಲ್ಲ. ಅವನಿಗೆ ನೈತಿಕ ಮತ್ತು ಆಧ್ಯಾತ್ಮಿಕ ್ಯಕ್ತಿತ್ವವಿದೆ. ಇದು ಪ್ರವಾದಿತ್ವದಿಂದ, ಪ್ರವಾದಿಗಳ ಮಾರ್ಗದರ್ಶನದಿಂದ ಸಾಬೀತಾಗಿದೆ. ೀವಲ ಶಾರೀರಿಕ ಆರೋಗ್ಯವಿದ್ದರೆ ಯಶಸ್ವೀ ಮಾನವನಾಗಲು ಸಾಧ್ಯವಿಲ್ಲ. ಆತ್ಮದ ರೋಗ್ಯವೂ ಆವಶ್ಯಕವಾಗಿದೆ. ಅದಕ್ಕಾಗಿ ತನ್ನ ಕರ್ತವ್ಯಗಳನ್ನು ಮಾನವನು ಪೂರೈಸ ೀಕಾಗುತ್ತದೆ. ಆ ಕರ್ತವ್ಯವೇನು ಮತ್ತು ಹೇಗೆ ನಿರ್ವಹಿಸಬಹುದೆಂದು ಪ್ರವಾದಿಗಳಿಂದ ಾರ್ಗದರ್ಶನ ದೊರೆಯುವುದು. ಈ ಉದ್ದೇಶಕ್ಕಾಗಿ ಪ್ರವಾದಿಗಳ ಸರಣಿ ಆರಂಭವಾಯಿತು. ದೀರ್ಘ ಕಾಲದಿಂದ ನಡೆದು ಬಂದ ಈ ಸರಣಿಯಲ್ಲಿ ಪ್ರವಾದಿ ಮುಹಮ್ಮದರು(ಸ) ಂತಿಮ ಕೊಂಡಿಯಾಗಿದ್ದಾರೆ. ಆದುದರಿಂದ ಅವರು ಸಕಲ ಪ್ರವಾದಿಗಳನ್ನು ಸಹಜವಾಗಿ ್ರತಿನಿಧಿಸುತ್ತಿದ್ದಾರೆ.

ಪ್ರಿಯ ಓದುಗರೇ ನಿಮ್ಮ ಜೀವನದಲ್ಲಿ ಯಶಸ್ಸನ್ನು ಬಯಸುತ್ತೀರಾ ಅಥವಾ ್ಫಲ್ಯವನ್ನೋ ಎಂಬುದು ನಿಮ್ಮ ವಿಚಾರಕ್ಕೆ ಬಿಟ್ಟದ್ದು. ಆದರೆ ದೇವ ಮಾರ್ಗದರ್ಶನದಂತೆ ೀವಿಸುವುದು ಮಾನವರ ಯಶಸ್ಸಿನ ಸೋಪಾನವಾಗಿದೆ. ನಿಮಗಿದು ಲಭಿಸಲೆಂದು ಾರೈಸುತ್ತೇವೆ.

ನಿಮಗೆ ನಮ್ಮ ಶುಭ ಕಾಮನೆಗಳು.